ಗೆಲುವಿನ ಸಂಭ್ರಮ

ಚೆನ್ನೈನಲ್ಲಿ ಮಹಿಳೆಯೊಬ್ಬರು, ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ಗೆಲುವನ್ನು ಸಂಭ್ರಮಿಸಿದರು

prajavani.net prajavani | ಮಂಗಳವಾರ, ಮೇ 5, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 124 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,269 | ನಿಫ್ಟಿ 24,119 | $/₹ 95.23

ಕಾಂಗ್ರೆಸ್ ಮುಡಿಗೆ ಕೇರಳಂ • ಎಡಪಕ್ಷಗಳು ದೂಳೀಪಟ • ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ • ಪುದುಚೆರಿಯಲ್ಲಿ ಅಧಿಕಾರ ಉಳಿಸಿಕೊಂಡ ಎನ್‌ಡಿಎ

ಇಲ್ಲಿ ಸೀಟಿ ಸದ್ದು, ಅಲ್ಲಿ ದೀದಿಗೆ ಗುದ್ದು

ಬದಲಾವಣೆಯ ಮಹಾ ಅಲೆ ಪಶ್ಚಿಮ ಬಂಗಾಳದ ಟಿಎಂಸಿ ಕೋಟೆಗೆ ಬಿಜೆಪಿ ಲಗ್ಗೆ, ತಮಿಳುನಾಡಿಗೆ ಹೊಸ ಜನನಾಯಕ



234 ತಮಿಳು ನಾಡು

ಪಕ್ಷ	ಸ್ಥಾನ
ಟಿವಿಕೆ	107
ಡಿಎಂಕೆ	60
ಎಡಿಎಂಕೆ	47
ಕಾಂಗ್ರೆಸ್	5
ಪಿಎಂಕೆ	4
ಎಡಪಕ್ಷಗಳು	4
ಇತರರು	7

294 ಪ. ಬಂಗಾಳ

ಪಕ್ಷ	ಸ್ಥಾನ
ಬಿಜೆಪಿ	206
ಟಿಎಂಸಿ	81
ಕಾಂಗ್ರೆಸ್	2
ಪಿಎಜೆಯುಪಿ	2
ಸಿಪಿಎಂ	1
ಎಐಎಸ್‌ಎಫ್	1

126 ಅಸ್ಸಾಂ

ಪಕ್ಷ	ಸ್ಥಾನ
ಬಿಜೆಪಿ	82
ಕಾಂಗ್ರೆಸ್	19
ಬಿಪಿಎಫ್	10
ಎಜಿಪಿ	10
ಎಐಯುಡಿಎಫ್	2
ಆರ್‌ಜೆಆರ್‌ಡಿ	2
ಟಿಎಂಸಿ	1

140 ಕೇರಳಂ

ಪಕ್ಷ	ಸ್ಥಾನ
ಕಾಂಗ್ರೆಸ್	63
ಸಿಪಿಎಂ	26
ಮುಸ್ಲಿಮ್ ಲೀಗ್	22
ಸಿಪಿಐ	8
ಕೆಇಸಿ	7
ಆರ್‌ಎಸ್‌ಪಿ	3
ಬಿಜೆಪಿ	3
ಇತರೆ	8

30 ಪುದುಚೆರಿ

ಪಕ್ಷ	ಸ್ಥಾನ
ಎಐಎನ್‌ಆರ್‌ಸಿ	11
ಡಿಎಂಕೆ	5
ಬಿಜೆಪಿ	4
ಟಿವಿಕೆ	3
ಕಾಂಗ್ರೆಸ್	1
ಎಲ್‌ಜೆಕೆ	1
ಇತರರು	5

ಗೆದ್ದ ಪ್ರಮುಖರು

1. ಹಿಮಂತ ಬಿಸ್ವಾ ಶರ್ಮಾ
2. ಪಿಣರಾಯಿ ವಿಜಯನ್
3. ವಿ.ಡಿ ಸತೀಶನ್
4. ಸುವೇಂದು ಅಧಿಕಾರಿ
5. ಎಡಪ್ಪಾಡಿ ಪಳನಿಸ್ವಾಮಿ
6. ಉದಯನಿಧಿ ಸ್ಟಾಲಿನ್
7. ವಿಜಯ್
8. ರಂಗಸ್ವಾಮಿ
9. ರಾಜೀವ್ ಚಂದ್ರಶೇಖರ್

• ಮಂಜುನಾಥ ಹೆಬ್ಬಾರ್

ನವದೆಹಲಿ: ಬಿಜೆಪಿಯ ನಾಗಾಲೋಟಕ್ಕೆ ಪಶ್ಚಿಮ ಬಂಗಾಳದಲ್ಲಿ 'ದೀದಿ' ಮಮತಾ ಬ್ಯಾನರ್ಜಿ ಅವರ ಕೋಟೆ ಛಿದ್ರಗೊಂಡಿದೆ. ಆರು ದಶಕಗಳಿಂದ ಡಿಎಂಕೆ–ಎಐಎಡಿಎಂಕೆ ಜಿದ್ದಾಜಿದ್ದಿಗೆ ಅಖಾಡವಾಗಿದ್ದ ತಮಿಳುನಾಡಿನಲ್ಲಿ ಹೊಸ 'ಜನನಾಯಕ'ನ ಉದಯವಾಗಿದೆ. ಕೇರಳಂನಲ್ಲಿ ಎಡಪಕ್ಷಗಳ ದಶಕದ ಆಡಳಿತ ಅಂತ್ಯಗೊಂಡಿದೆ. ಚಹಾತೋಟದ ನಾಡು ಅಸ್ಸಾಂನಲ್ಲಿ ಬಿಜೆಪಿ ಸತತ ಮೂರನೇ ಅವಧಿಗೆ ಗೆಲುವು ಸಾಧಿಸಿ ಬೀಗಿದೆ. ಪುದುಚೆರಿಯನ್ನು ಎನ್‌ಡಿಎ ಉಳಿಸಿಕೊಂಡಿದೆ.

ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶಕ್ಕೆ ನಡೆದ ಚುನಾವಣೆಯ ಜನಾದೇಶ ಸೋಮವಾರ ಪ್ರಕಟಗೊಂಡಿದೆ. ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿ ಬಿಜೆಪಿ ಪ್ರಚಂಡ ಗೆಲುವು ಸಾಧಿಸಿದೆ. ಐದು ರಾಜ್ಯಗಳ ಪೈಕಿ ಮೂರರಲ್ಲಿ ಸರ್ಕಾರ ರಚಿಸುವ ಹೊಸ್ತಿಲಲ್ಲಿ ಎನ್‌ಡಿಎ ಇದೆ. ಅಸ್ಸಾಂನಲ್ಲಿ ಹಿಮಂತ ಬಿಸ್ವ ಶರ್ಮಾ ಹಾಗೂ ಪುದುಚೆರಿಯಲ್ಲಿ ಎನ್.ರಂಗಸ್ವಾಮಿ ಅಧಿಕಾರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮೂರು ದೊಡ್ಡ ರಾಜ್ಯಗಳಲ್ಲಿ ಆಡಳಿತ ವಿರೋಧಿ ಅಲೆಗೆ ಆಡಳಿತಾರೂಢ ಪಕ್ಷಗಳು ಕೊಚ್ಚಿ ಹೋಗಿವೆ. 'ಗ್ಯಾರಂಟಿ'ಗಳು ಈ ಪಕ್ಷಗಳ ಕೈ ಹಿಡಿದಿಲ್ಲ. ಈ ರಾಜ್ಯಗಳಲ್ಲಿ ಘಟಾನುಘಟಿ ನಾಯಕರಿಗೆ ಮತದಾರರು ಸೋಲಿನ ರುಚಿ ತೋರಿಸಿದ್ದಾರೆ. ದಕ್ಷಿಣದ ರಾಜ್ಯಗಳನ್ನು ಗೆಲ್ಲುವ ಬಿಜೆಪಿಯ ಮಹದಾಸೆ ಈಡೇರಿಲ್ಲ. ಕೇರಳಂನಲ್ಲಿ ದಶಕದ ಬಳಿಕ ಖಾತೆ ತೆರೆದಿದ್ದೇ ಬಿಜೆಪಿ ಪಾಲಿಗೆ ಸಂತಸದ ಸಂಗತಿ.

ಸಿ.ಎಂ ಗಾದಿಗೆ ಸಂಭಾವ್ಯರು

- ಪಶ್ಚಿಮ ಬಂಗಾಳ: ಸುವೇಂದು ಅಧಿಕಾರಿ
- ಅಸ್ಸಾಂ: ಹಿಮಂತ ಬಿಸ್ವಾ ಶರ್ಮಾ ಅಥವಾ ಅಚ್ಚರಿ ಆಯ್ಕೆ
- ತಮಿಳುನಾಡು: ವಿಜಯ್
- ಕೇರಳ: ವಿ.ಡಿ.ಸತೀಶನ್, ರಮೇಶ್ ಚೆನ್ನಿತ್ತಲ
- ಪುದುಚೆರಿ: ಎನ್.ರಂಗಸ್ವಾಮಿ

ಆಡಳಿತ ವಿರೋಧಿ ಅಲೆಯನ್ನು ಅನುಕೂಲಕರವಾಗಿ ಪರಿವರ್ತಿಸಿಕೊಂಡ ಹಾಗೂ ಒಗ್ಗಟ್ಟಿನಿಂದ ಕಾದಾಡಿದ ಕಾಂಗ್ರೆಸ್ ಪಕ್ಷವು ಕೇರಳಂನಲ್ಲಿ ಗೆದ್ದಿದೆ. ಕಳೆದೆರಡು ವರ್ಷಗಳಿಂದ ಸತತ ಸೋಲುಗಳಿಂದ ಕಂಗೆಟ್ಟಿದ್ದ 'ಕೈ' ಪಾಳಯಕ್ಕೆ ಕೇರಳಂ ಗೆಲುವು ಜೀವ ಸೆಲೆಯಂತೆ ಒದಗಿಬಂದಿದೆ. ಈ ಮೂಲಕ, ದಕ್ಷಿಣದಲ್ಲಿ ಮೂರನೇ ರಾಜ್ಯವನ್ನು ಪಕ್ಷ ಮುಡಿಗೇರಿಸಿಕೊಂಡಿದೆ. ಈ ಫಲಿತಾಂಶದ ಮೂಲಕ, ಆರು ದಶಕದಲ್ಲೇ ಮೊತ್ತಮೊದಲ ಬಾರಿಗೆ ಎಡಪಕ್ಷಗಳು ಯಾವುದೇ ರಾಜ್ಯದಲ್ಲಿ ಅಧಿಕಾರದಲ್ಲಿ ಇಲ್ಲದಂತಹ ಸನ್ನಿವೇಶ ನಿರ್ಮಾಣವಾಗಿದೆ.

'ಇಂಡಿಯಾ' ಮೈತ್ರಿಕೂಟದ ಪ್ರಮುಖ ಪಕ್ಷಗಳಾದ ಟಿಎಂಸಿ ಹಾಗೂ ಡಿಎಂಕೆ ಹೀನಾಯವಾಗಿ ಸೋತಿವೆ. ತಮಿಳುನಾಡಿನಲ್ಲಿ ಮಿತ್ರ ಪಕ್ಷಗಳ ಆಯ್ಕೆಯ ಗೊಂದಲದಲ್ಲೇ ಕಾಲಹರಣ ಮಾಡಿದ ಕಾಂಗ್ರೆಸ್ ಪಕ್ಷವು ಡಿಎಂಕೆ ಜತೆಗೇ ಮುಳುಗಿದೆ.

ಎಲ್ಲ ರೀತಿಯಿಂದಲೂ ಎದುರಾಳಿಯನ್ನು ಕಟ್ಟಿ ಹಾಕುವ ಪ್ರಧಾನಿ ನರೇಂದ್ರ ಮೋದಿ–ಗೃಹ ಸಚಿವ ಅಮಿತ್ ಶಾ ಜೋಡಿಯ ಚಾಣಾಕ್ಷ ನೀತಿಯಿಂದಾಗಿ ಜನಸಂಘದ ಸ್ಥಾಪಕ ಶ್ಯಾಮಾಪ್ರಸಾದ್ ಮುಖರ್ಜಿ ಅವರ ನೆಲದಲ್ಲಿ ಕಮಲ ಅರಳಿದೆ. ರಾಜ್ಯದಲ್ಲಿ ದಶಕದ ಹಿಂದೆ ಬರೇ ಮೂರು ಶಾಸಕರನ್ನು ಹೊಂದಿದ್ದ ಕೇಸರಿ ಪಾಳಯವು ಈಗ ದ್ವಿಶತಕ ಬಾರಿಸಿ ಮುನ್ನಡೆದಿದೆ.

ಚುನಾವಣೆಗೆ ಮುನ್ನ ನಡೆದ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್), ಚುನಾವಣೆಗೆ ಕೇಂದ್ರ ಭದ್ರತಾ ಪಡೆಗಳ ನಿಯೋಜನೆ, ದಾಖಲೆ ಪ್ರಮಾಣದ ಮತದಾನ ಮತ್ತಿತರ ಅಂಶಗಳು ಬಿಜೆಪಿಗೆ ಉತ್ತಮ ಫಸಲನ್ನು ತಂದುಕೊಟ್ಟಿವೆ. ಕಮಲ ಪಾಳಯದ ಆಕ್ರಮಣಕಾರಿ ಪ್ರಚಾರ ಹಾಗೂ ರಣತಂತ್ರದ ಮುಂದೆ ಮಮತಾ ಬ್ಯಾನರ್ಜಿ ಏಕಾಂಗಿ ಹೋರಾಟ ಗೆಲುವಿನ ದಡ ಸೇರಿಸಲಿಲ್ಲ. 15 ವರ್ಷಗಳ ಆಡಳಿತ ವಿರೋಧಿ ಅಲೆಗೆ ದೀದಿ ಭಾರಿ ಬೆಲೆ ತೆತ್ತಿದ್ದಾರೆ. ಭ್ರಷ್ಟಾಚಾರ, ಅತ್ಯಾಚಾರ ಪ್ರಕರಣಗಳು, ನಿರುದ್ಯೋಗ, ಟಿಎಂಸಿ ಕಾರ್ಯಕರ್ತರ ದೌರ್ಜನ್ಯ, ಕಳೆದೆರಡು ಅವಧಿಗಳಿಂದ ಅಭಿವೃದ್ಧಿಗೆ ಒತ್ತು ಕೊಡದೆ ಇದ್ದುದು ಟಿಎಂಸಿಯ ಹಿನ್ನಡೆಗೆ ಕಾರಣವಾಗಿವೆ.

▶5

ಪ್ರಾದೇಶಿಕ ಪಕ್ಷಗಳ ಮಹಾ ಪತನ

2024ರ ಲೋಕಸಭಾ ಚುನಾವಣೆಯಲ್ಲಿ ಹಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಬಿಜೆಪಿಗೆ ಪ್ರಬಲ ಪೈಪೋಟಿ ನೀಡಿದ್ದವು. ಆ ಬಳಿಕ, ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಒಂದೊಂದೇ ಪ್ರಾದೇಶಿಕ ಪಕ್ಷಗಳನ್ನು ಬಿಜೆಪಿ ಮಟ್ಟ ಹಾಕುತ್ತಾ ಬಂದಿದೆ. ಈಗ ಈ ಪಟ್ಟಿಗೆ ಟಿಎಂಸಿ ಹೊಸ ಸೇರ್ಪಡೆ. ತಮಿಳುನಾಡಿನಲ್ಲಿ ವಿಜಯ್ ಸುನಾಮಿ ಎದುರು ಡಿಎಂಕೆ ಅಪ್ಪಚ್ಚಿಯಾಗಿದೆ. ಕೇರಳದಲ್ಲಿ ಯುಡಿಎಫ್ ಎದುರು ಎಡಪಕ್ಷಗಳು ಸೋತಿವೆ. 2024ರ ಲೋಕಸಭಾ ಚುನಾವಣೆ ಜತೆಗೆ ಆಂಧ್ರ ಪ್ರದೇಶ ಹಾಗೂ ಒಡಿಶಾ ವಿಧಾನಸಭೆಗಳಿಗೂ ಚುನಾವಣೆ ನಡೆದಿತ್ತು. ಒಡಿಶಾದಲ್ಲಿ ನವೀನ್ ಪಟ್ನಾಯಕ್ ಅವರ ಬಿಜೆಡಿಯು ಬಿಜೆಪಿ ಎದುರು ಸೋತಿತ್ತು. ಆಂಧ್ರ ಪ್ರದೇಶದಲ್ಲಿ ಎನ್‌ಡಿಎ ಮೈತ್ರಿಕೂಟವು ವೈಎಸ್‌ಆರ್ ಕಾಂಗ್ರೆಸ್ ಪಕ್ಷವನ್ನು ದೂಳೀಪಟ ಮಾಡಿತ್ತು.

- ಮಹಾರಾಷ್ಟ್ರ: ಎನ್‌ಸಿಪಿ (ಶರದ್ ಪವಾರ್), ಶಿವಸೇನಾ (ಉದ್ಧವ್ ಠಾಕ್ರೆ)
- ದೆಹಲಿ: ಎಎಪಿ (ಅರವಿಂದ ಕೇಜ್ರಿವಾಲ್)
- ಬಿಹಾರ: ಆರ್‌ಜೆಡಿ (ತೇಜಸ್ವಿ ಯಾದವ್)
- ಪಶ್ಚಿಮ ಬಂಗಾಳ: ಟಿಎಂಸಿ (ಮಮತಾ ಬ್ಯಾನರ್ಜಿ)
- ತಮಿಳುನಾಡು: ಡಿಎಂಕೆ (ಎಂ.ಕೆ.ಸ್ಟಾಲಿನ್)
- ಕೇರಳ: ಎಲ್‌ಡಿಎಫ್ (ಪಿಣರಾಯಿ ವಿಜಯನ್)



ಚಿತ್ರ: ಸಂತೋಷ್ ಸಸಿಹಿತ್ಲು

ಸೋತ ಪ್ರಮುಖರು

1. ಎಂ.ಕೆ ಸ್ಟಾಲಿನ್
2. ಮಮತಾ ಬ್ಯಾನರ್ಜಿ
3. ಅಧೀರ್ ರಂಜನ್ ಚೌಧರಿ
4. ತಮಿಳ್‌ಇಸೈ ಸೌಂದರರಾಜನ್
5. ಗೌರವ್ ಗೊಗೊಯ್
6. ವೀಣಾ ಜಾರ್ಜ್

ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿದೆ. ಜನರ ಶಕ್ತಿ ಮೇಲುಗೈ ಸಾಧಿಸಿದೆ ಮತ್ತು ಬಿಜೆಪಿಯ ಉತ್ತಮ ಆಡಳಿತವು ಜಯಭೇರಿ ಬಾರಿಸಿದೆ. ನಮ್ಮ ಮಂತ್ರ 'ನಾಗರಿಕ ದೇವೋಭವ'

ನರೇಂದ್ರ ಮೋದಿ, ಪ್ರಧಾನಿ

ಫಲಿತಾಂಶಗಳು ಮಿಶ್ರವಾಗಿವೆ. ಆದರೂ ನಮ್ಮ ಸೈದ್ಧಾಂತಿಕ ಹೋರಾಟವನ್ನು ನಾವು ನೆನಪಿನಲ್ಲಿಡಬೇಕು. ಅಂತಹ ಹಾದಿಯು ತಾಳ್ಮೆ, ಪರಿಶ್ರಮ ಹಾಗೂ ಅಚಲವಾದ ಸಂಕಲ್ಪವನ್ನು ಬಯಸುತ್ತದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಬಂಗಾಳದಲ್ಲಿ ಬಿಜೆಪಿಯ ಗೆಲುವು ಅನೈತಿಕವಾಗಿದ್ದು, 100ಕ್ಕೂ ಅಧಿಕ ಕ್ಷೇತ್ರಗಳಲ್ಲಿ ಜನಾದೇಶವನ್ನು ಲೂಟಿ ಮಾಡಲಾಗಿದೆ. ನಾವು ಮತ್ತೆ ಪುಟಿದೇಳುತ್ತೇವೆ

ಮಮತಾ ಬ್ಯಾನರ್ಜಿ, ಟಿಎಂಸಿ ಮುಖ್ಯಸ್ಥೆ

ಜನರ ತೀರ್ಪನ್ನು ಡಿಎಂಕೆ ಒಪ್ಪಿಕೊಂಡಿದ್ದು, ತಲೆಬಾಗುತ್ತದೆ. ಡಿಎಂಕೆ ಆಡಳಿತ ಪಕ್ಷವಾಗಿ ಉತ್ತಮ ರೀತಿಯಲ್ಲಿ ಕೆಲಸ ಮಾಡಿದೆ. ವಿರೋಧ ಪಕ್ಷವಾಗಿಯೂ ಸಮರ್ಥವಾಗಿ ಕಾರ್ಯ ನಿರ್ವಹಿಸಲಿದೆ

ಎಂ.ಕೆ.ಸ್ಟಾಲಿನ್, ಮುಖ್ಯಮಂತ್ರಿ

ಗೆದ್ದ ಕೈ: ಗೆಲ್ಲದ ಕಮಲ: ಪಾಠ ಯಾರಿಗೆ?

• ವೈ.ಗ.ಜಗದೀಶ್

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಸಹಜವಾಗಿಯೇ ವಿಜಯ ಸಾಧಿಸಿದೆ. ಸರ್ಕಾರಕ್ಕಿರುವ ಆಡಳಿತ ವಿರೋಧಿ ಅಲೆಯಲ್ಲಿ ತೇಲಿ ಬರಬಹುದಾದ ಗೆಲುವನ್ನು ಸಮರ್ಥ ಪೈಪೋಟಿ ಒಡ್ಡಿ ಕಿತ್ತುಕೊಳ್ಳುವ ಅವಕಾಶವನ್ನು ಬಿಜೆಪಿ ಬಿಟ್ಟುಕೊಟ್ಟಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮೂರು ವರ್ಷ ಪೂರೈಸುವ ಹೊಸ್ತಿಲಿನಲ್ಲಿದೆ. ಇನ್ನು ಒಂದು ವರ್ಷ ಕಳೆದರೆ ಚುನಾವಣೆಯ ಸನ್ನಿವೇಶಕ್ಕೆ ರಾಜ್ಯ ಅಣಿಗೊಳ್ಳಲಿದೆ. ಈ ಹೊತ್ತಿನೊಳಗೆ ನಡೆದ ಚುನಾವಣೆಯಲ್ಲಿ ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಪ್ರಯಾಸದ ಗೆಲುವು, ಬಿಜೆಪಿಗೆ ಒಲಿಯದ ವಿಜಯವು ಎರಡೂ ಪಕ್ಷಗಳಿಗೆ ಹಲವು ಪಾಠ ಹೇಳಿಕೊಟ್ಟಿದೆ. 2028ರಲ್ಲಿ ಚುಕ್ಕಾಣಿ ಹಿಡಿಯುವ ಇರಾದೆಯಲ್ಲಿರುವ ನಾಯಕರು ಆತ್ಮವಿಮರ್ಶೆ ಮಾಡಿಕೊಳ್ಳುವಂತೆ ಈ ಉಪ ಚುನಾವಣೆ ಫಲಿತಾಂಶ ಮಾಡಿದೆ.

ಶಾಮನೂರು ಶಿವಶಂಕರಪ್ಪ ಹಾಗೂ ಎಚ್.ವೈ. ಮೇಟಿ ನಿಧನದಿಂದಾಗಿ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳು ಖಾಲಿಯಾಗಿದ್ದವು. ಚುನಾವಣೆ ತಾಲೀಮು ಶುರುವಾದಾಗಲೇ, ಹಿಂದೆ ಪ್ರತಿನಿಧಿಸಿದ್ದವರ ಕುಟುಂಬಕ್ಕೆ ಟಿಕೆಟ್ ನೀಡಬೇಕೆಂಬ ಒತ್ತಾಯಗಳು ಅವರ ವಾರಸುದಾರರಿಂದ ಬಂದಿದ್ದವು. ಕರ್ನಾಟಕದಲ್ಲಿ ಇಂತಹ ಸನ್ನಿವೇಶಗಳಲ್ಲಿ ನಡೆದ ಚುನಾವಣೆಗಳಲ್ಲಿ ಕುಟುಂಬದವರಿಗೆ ಟಿಕೆಟ್ ಕೊಟ್ಟ ನಿದರ್ಶನಗಳನ್ನು ಉತ್ತರಾಧಿಕಾರಿಗಳು ತಮ್ಮ ಪಕ್ಷದ ಹೈಕಮಾಂಡ್ ಮುಂದಿಟ್ಟಿದ್ದರು. ಬಾಗಲಕೋಟೆಯಲ್ಲಿ ಈ ಬೇಡಿಕೆ ತೀವ್ರ ಸಮಸ್ಯೆಯನ್ನೇನೂ ತಂದೊಡ್ಡಲಿಲ್ಲ. ಆದರೆ, ದಾವಣಗೆರೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂಬ ಹಕ್ಕೊತ್ತಾಯ ಕಾಂಗ್ರೆಸ್‌ನಲ್ಲಿರುವ ಆ ಸಮುದಾಯದ ನಾಯಕರಿಂದ ಮೂಡಿಬಂತು. ಆದರೆ, ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಎಸ್.ಎಸ್. ಮಲ್ಲಿಕಾರ್ಜುನ ಪಟ್ಟು ಬಿಡದೇ, ತಮ್ಮ ಮಗ ಸಮರ್ಥ್ ಶಾಮನೂರು ಅವರಿಗೆ ಟಿಕೆಟ್ ಖಾತ್ರಿ ಮಾಡಿಸಿದರು.

▶9

ಚಿನಕುರುಳಿ

ಪ್ರಕಾಶ್ ಶೆಟ್ಟಿ

ವಿಚಾರಣೆ ಪ್ರಗತಿ ವರದಿ ಕೇಳಿದ 'ಸುಪ್ರೀಂ'

ನವದೆಹಲಿ: ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆಯ ಸ್ಥಿತಿಗತಿಯ ವರದಿ ಸಲ್ಲಿಸುವಂತೆ ಬೆಂಗಳೂರಿನ ವಿಚಾರಣಾ ನ್ಯಾಯಾಲಯಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ವಿವರ ▶11

ಬೆಳ್ಳಿ ದರ ₹6,800 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಬೆಳ್ಳಿ ದರವು ಏರಿಕೆಯಾಗಿದ್ದರೆ, ಚಿನ್ನದ ದರವು ಇಳಿದಿದೆ.

ವಿವರ ▶10

ಜಾಹೀರಾತು

ಅಲಿವಿಯೇಟ್ ಕ್ಲಿನಿಕ್‌ನಲ್ಲಿದೆ ನೋವಿಗೆ ಉಪಾಯ | ಸ್ಟಿರಾಯ್ಡ್ ಎಂಬ ಶಾರ್ಟ್‌ಕಟ್ ಬಳಕೆ ಇಲ್ಲ

ಮಂಡಿನೋವಿನ ಉಪಶಮನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

■ ವಿಶೇಷ ವರದಿ ಬೆಂಗಳೂರು

ಮೊಣಕಾಲಿನ ನೋವು ಇತ್ತೀಚಿನ ವರ್ಷಗಳಲ್ಲಿ ಅನೇಕ ಜನರ ಜೀವನ ನಿರ್ವಹಣೆಯನ್ನು ಕಷ್ಟಕರವಾಗಿಸಿದೆ. ಆದರೆ, ಇದರ ಬಗ್ಗೆ ಆತಂಕ ಬೇಡ. ಬೆಂಗಳೂರಿನ ಪ್ರಸಿದ್ಧ 'ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್'ನಲ್ಲಿ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'ಪಿಆರ್‌ಪಿ ಚಿಕಿತ್ಸೆ' ವರದಾನವಾಗಿದೆ.

ವಯಸ್ಸಾದವರು, ಕ್ರೀಡಾಪಟುಗಳಿಂದ ಹಿಡಿದು ಗೃಹಿಣಿಯರವರೆಗೆ ಬಹಳಷ್ಟು ಮಂದಿ ಕೀಲು ಸವೆತ ಮತ್ತು ಸಂಧಿವಾತ ದಂತಹ ನೋವಿನಿಂದ ನರಳುತ್ತಿದ್ದಾರೆ. ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟವಾಗಿದ್ದು, ಕುಳಿತಿದ್ದ ಜಾಗದಿಂದ ಏಳುವುದು ಕಷ್ಟಕರ. ಇವೆಲ್ಲವೂ ಅಸ್ಥಿ ಸಂಧಿವಾತದ ಲಕ್ಷಣಗಳಾಗಿದ್ದು, ಇದಕ್ಕಾಗಿ ನೋವು ನಿವಾರಕಗಳ ಮೇಲೆ ಅತಿಯಾದ ಅವಲಂಬನೆ ಹೊಂದುತ್ತಿದ್ದಾರೆ.

ಪಿಆರ್‌ಪಿ ಚಿಕಿತ್ಸೆಯ ಲಾಭಗಳು

- ಆಸ್ಪತ್ರೆ ವಾಸ ಇರುವುದಿಲ್ಲ
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಬಹುದು

ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ

- **ಮೂಲಕ್ಕೆ ಚಿಕಿತ್ಸೆ:** ನೋವಿಗೆ ಕಾರಣವಾದ ಅಂಗಾಂಶದ ಹಾನಿ ಸರಿಪಡಿಸಲಿದೆ. ಇದರಿಂದ ನೋವಿನ ಸಮಸ್ಯೆ ಬುಡದಿಂದಲೇ ಉಪಶಮನ ಸಾಧ್ಯವಾಗುತ್ತದೆ.
- **ನಿಮ್ಮದೇ ದೇಹದ ಶಕ್ತಿ ಬಳಕೆ:** ನಿಮ್ಮ ದೇಹದಿಂದ ತೆಗೆದ ರಕ್ತದಲ್ಲಿರುವ ಪ್ಲೇಟ್‌ಲೆಟ್‌ಗಳು (ಗುಣ ಮಾಡುವ ಶಕ್ತಿಯನ್ನು) ಪ್ರತ್ಯೇಕಿಸಿ, ಚುಚ್ಚುಮದ್ದಿನ ಮೂಲಕ ನೋವಿರುವ ಜಾಗಕ್ಕೆ ನೀಡಲಾಗುತ್ತದೆ.
- **ದೀರ್ಘಕಾಲೀನ ಉಪಶಮನ:** ಕೇವಲ ತಾತ್ಕಾಲಿಕ ಆರಾಮಕ್ಕಷ್ಟೇ ಸೀಮಿತವಾಗದೆ, ದೀರ್ಘಕಾಲದ ನೋವು ಮುಕ್ತ ಜೀವನಕ್ಕಾಗಿ ರೂಪಿಸಲಾದ ಸುರಕ್ಷಿತ ಮಾರ್ಗವಿದು.
- **ಆಪರೇಷನ್‌ಗೆ ಸೂಕ್ತ ಪರ್ಯಾಯ:** ಶಸ್ತ್ರಚಿಕಿತ್ಸೆ (ಆಪರೇಷನ್) ಬೇಡ ಎನ್ನುವವರಿಗೆ ಮತ್ತು ಆಪರೇಷನ್‌ಗೆ ಸೂಕ್ತವಲ್ಲದವರಿಗೆ ಈ ವರದಾನವಾಗಿದೆ.
- **ಡೇ ಕೇರ್ ಕಾರ್ಯವಿಧಾನ:** ಈ ಚಿಕಿತ್ಸೆಯು ಡೇ ಕೇರ್ ಕಾರ್ಯವಿಧಾನ ಹೊಂದಿದ್ದು, ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್ ಮಾಡಲಾಗುತ್ತದೆ.

ಈ ನೋವು ದೇಹದೊಳಗಿನ ಸಮಸ್ಯೆ ಸೂಚಿಸುವ ಒಂದು ಪ್ರಬಲವಾದ ಎಚ್ಚರಿಕೆ ಸಂದೇಶ ಅಷ್ಟೇ. ಅದಕ್ಕೆ ನೋವು ನಿವಾರಕಗಳ ಮೊರೆ ಹೋಗುವುದು, ಸ್ಟೀರಾಯ್ಡ್ ಚುಚ್ಚುಮದ್ದುಗಳನ್ನು ಹಾಕಿಸಿಕೊಳ್ಳುವುದರಿಂದ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಬಹುದು. ಆದರೆ ಪೂರ್ಣ ಗುಣ ಸಾಧ್ಯವಿಲ್ಲ. ಹಾಗಾಗಿ ಸಮಸ್ಯೆಯನ್ನು ಬುಡದಿಂದಲೇ ಪರಿಹರಿಸುವ ಅಗತ್ಯವಿದೆ. ಅದಕ್ಕಾಗಿ ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್‌ನಲ್ಲಿ ಪರಿಹಾರ ಲಭ್ಯವಿದೆ.

ಇತರ ಚಿಕಿತ್ಸೆ

ಮೊಣಕಾಲು ಮಾತ್ರವಲ್ಲದೆ ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ.

ವಿಳಾಸ: ಅಲಿವಿಯೇಟ್ ನೋವು ನಿವಾರಣಾ ಕೇಂದ್ರ,
ಬೆಂಗಳೂರು ಶಾಖೆಗಳು:
ಪೀಣ್ಯ ದಾಸರಹಳ್ಳಿ, ಸದಾಶಿವನಗರ, ಜಯನಗರ, ಇಂದಿರಾನಗರ, ವೈಟ್‌ಫೀಲ್ಡ್
ದೂ: 080 25256878; 080 23614888

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಸಹಿತ ತುಂತುರು ಮಳೆಯಾಗಲಿದೆ

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

3ನೇ ಹಂತ: ವಿಳಂಬದಿಂದ ಆರ್ಥಿಕ ಹೊರೆ

ಹಿಂದಿನ ಎಲ್ಲ ಯೋಜನೆಗಳಲ್ಲಿ ದುಪ್ಪಟ್ಟಾಗಿದ್ದ ಅಂದಾಜು ವೆಚ್ಚ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ 3ನೇ ಹಂತದ ಯೋಜನೆ ಕಾರ್ಯಗತಗೊಳ್ಳುವ ಅವಧಿಯನ್ನು 6 ತಿಂಗಳು ಹೆಚ್ಚಿಸಿರುವುದರಿಂದ ಅಂದಾಜು ವೆಚ್ಚ ಶೇ 5ರಷ್ಟು ಹೆಚ್ಚಳವಾಗಿ ಆರ್ಥಿಕ ಹೊರೆ ಬೀಳಲಿದೆ.

3ನೇ ಹಂತವು ಜೆ.ಪಿ.ನಗರ–ಕೆಂಪಾಪುರ ಮತ್ತು ಹೊಸಹಳ್ಳಿ–ಕಡಬಗೆರೆ ಕಾರಿಡಾರ್‌ಗಳನ್ನು ಹೊಂದಿದ್ದು, 2030ರ ಡಿಸೆಂಬರ್ ಒಳಗೆ ಕಾಮಗಾರಿ ಪೂರ್ಣಗೊಳಿಸುವ ಗುರಿ ನಿಗದಿಪಡಿಸಲಾಗಿತ್ತು. ಆ ನಂತರ ರಾಜ್ಯ ಸರ್ಕಾರವು ಡಬಲ್ ಡೆಕರ್ ಮೇಲ್ಸೇತುವೆ ರಸ್ತೆ ನಿರ್ಮಾಣ ಸೇರ್ಪಡೆ ಮಾಡಿದ್ದರಿಂದ ಹೊಸ ವಿಸ್ತೃತ ವರದಿ ತಯಾರಿಸಲಾಗಿತ್ತು. ಇದರಿಂದಾಗಿ ನಿರ್ಮಾಣದ ಅವಧಿಯನ್ನು 2031ರ ಮೇ ಒಳಗೆ ಪೂರ್ಣಗೊಳಿಸಲು ಗುರಿಯನ್ನು ಮರುನಿಗದಿ ಮಾಡಲಾಯಿತು.

ಮೆಟ್ರೊ ಮಾರ್ಗಗಳನ್ನು ನಿರ್ಮಿಸಲು ಯೋಜನಾ ವೆಚ್ಚ ₹15,611 ಕೋಟಿ ಎಂದು ಅಂದಾಜಿಸಲಾಗಿತ್ತು. ಆ ನಂತರ ಡಬಲ್ ಡೆಕರ್ ಸೇರ್ಪಡೆ ಮಾಡಿದ್ದು, ಅದಕ್ಕಾಗಿ ₹ 9,700 ಕೋಟಿ ನಿಗದಿಪಡಿಸಲಾಗಿದೆ. ಅವಧಿ ವಿಸ್ತರಣೆಗೊಂಡಿರುವುದರಿಂದ ಅದಕ್ಕೆ ಸರಿಯಾಗಿ ಯೋಜನಾ ವೆಚ್ಚವು ಹೆಚ್ಚಾಗಬಹುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯೋಜನೆಯ ವಿವರ: ಜೆ.ಪಿ ನಗರ 4ನೇ ಹಂತದಿಂದ ಕೆಂಪಾಪುರದವರೆಗೆ (ಕಿತ್ತಳೆ) ಹೊರ ವರ್ತುಲ ಮಾರ್ಗವು 32.3 ಕಿ.ಮೀ. ಹಾಗೂ ಹೊಸಹಳ್ಳಿಯಿಂದ ಕಡಬಗೆರೆಗೆ (ಬೆಳ್ಳಿ) ಮಾಗಡಿ ರಸ್ತೆಯಲ್ಲಿ ನಿರ್ಮಾಣಗೊಳ್ಳುವ 12.15 ಕಿ.ಮೀ ಮಾರ್ಗ ಸೇರಿ ಒಟ್ಟು 44.45 ಕಿ.ಮೀ. ಉದ್ದವಿದೆ. ಇದು ಎಂಟು ಪ್ಯಾಕೇಜ್‌ಗಳಲ್ಲಿ ನಿರ್ಮಾಣಗೊಳ್ಳಲಿದೆ. ನಮ್ಮ ಮೆಟ್ರೊ ಹಂತ ಮೂರರ ಕಾಮಗಾರಿಗಳು ಕೊನೆಗೊಂಡಾಗ ಅತಿ ಉದ್ದದ ಡಬಲ್ ಡೆಕರ್ ಹೊಂದಿರುವ ಮಾರ್ಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಒಂದನೇ ಕಾರಿಡಾರ್‌ನಲ್ಲಿ ಡೆಲ್ಮಿಯಾ ವೃತ್ತದಿಂದ ಹೆಬ್ಬಾಳದವರೆಗೆ 28.486 ಕಿ.ಮೀ ಡಬಲ್ ಡೆಕರ್ ಇರಲಿದೆ. ಇದು ನಗರದ ಅತಿ ಉದ್ದದ ಮೇಲ್ಸೇತುವೆ ರಸ್ತೆ ಆಗಿರಲಿದೆ. ಕಾರಿಡಾರ್ 2ರಲ್ಲಿ ಕೆಎಚ್‌ಬಿ ಕಾಲೊನಿಯಿಂದ ಕಡಬಗೆರೆಗೆ 8.635 ಕಿ.ಮೀ ಡಬಲ್ ಡೆಕರ್ ನಿರ್ಮಾಣಗೊಳ್ಳಲಿದೆ.

ಡಬಲ್ ಡೆಕರ್ ಐದು ಸ್ಥಳಗಳಲ್ಲಿ ಪ್ರವೇಶ/ನಿರ್ಗಮನ ರ‍್ಯಾಂಪ್‌ಗಳನ್ನು ಮತ್ತು ಒಂಬತ್ತು ಸ್ಥಳಗಳಲ್ಲಿ ಲೂಪ್‌ಗಳನ್ನು ಹೊಂದಿರುತ್ತದೆ. ಹೊಸಕೆರೆಹಳ್ಳಿ, ಮೈಸೂರು ರಸ್ತೆ, ನಾಗರಭಾವಿ ಮತ್ತು ಸುಮನಹಳ್ಳಿಯಲ್ಲಿ ಈಗಿರುವ ಫ್ಲೈಓವರ್‌ಗಳ ಮೇಲೆ ಅಥವಾ ಪಕ್ಕದಲ್ಲಿ ಡಬಲ್ ಡೆಕರ್ ಇರಲಿದೆ. ಡೆಲ್ಮಿಯಾ ಜಂಕ್ಷನ್‌ನಲ್ಲಿ (ಡಾಲರ್ಸ್ ಕಾಲೊನಿ) ಈಗಿರುವ ಫ್ಲೈಓವರ್ ಕೆಡವಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ನಮ್ಮ ಮೆಟ್ರೊ ಮೂರನೇ ಹಂತದ ಎರಡು ಕಾರಿಡಾರ್‌ಗಳು

ವಿಳಂಬದ ಭಾರ

- 2005ರಲ್ಲಿ ಒಂದನೇ ಹಂತದ (42 ಕಿ.ಮೀ.) ಮೆಟ್ರೊ ಕಾಮಗಾರಿಗೆ ₹ 6385 ಕೋಟಿ ಅಂದಾಜಿಸಲಾಗಿತ್ತು. ವಿಳಂಬದಿಂದಾಗಿ ಯೋಜನೆ ಮುಗಿದಾಗ ₹14,133 ಕೋಟಿ ವೆಚ್ಚವಾಗಿತ್ತು.
- 72 ಕಿ.ಮೀ. ಉದ್ದದ ಎರಡನೇ ಹಂತದ ಕಾಮಗಾರಿ ಆರಂಭವಾಗುವಾಗ ₹ 26,405 ಕೋಟಿ ಅಂದಾಜು ವೆಚ್ಚ ಇತ್ತು. ಕಾಮಗಾರಿ ಪೂರ್ಣಗೊಳ್ಳುವಾಗ ವೆಚ್ಚವು ₹40,614 ಕೋಟಿಗೆ ಏರಿಕೆಯಾಗಿತ್ತು.
- ಹಳದಿ ಮಾರ್ಗವು 2017ರಲ್ಲಿ ಯೋಜನೆ ರೂಪಿಸುವಾಗ ₹2,869 ಕೋಟಿ. 2024ರಲ್ಲಿ ಮುಕ್ತಾಯಗೊಂಡರೂ ರೈಲು ಇಲ್ಲದೇ ಒಂದು ವರ್ಷ ತಡವಾಗಿ ಸಂಚಾರ ಆರಂಭವಾದಾಗ ವೆಚ್ಚವು ₹7160 ಕೋಟಿಗೆ ಹೆಚ್ಚಳವಾಗಿತ್ತು.
- ಹಂತ 3ಎ ಸರ್ಜಾಪುರ–ಹೆಬ್ಬಾಳ ಮಾರ್ಗಕ್ಕೆ ವೆಚ್ಚ ₹ 28,405 ಕೋಟಿ ಬೇಕು ಎಂದು ಡಿಪಿಆರ್‌ನಲ್ಲಿ ಪ್ರಸ್ತಾವಿಸಿ ವರ್ಷ ಎರಡು ಕಳೆದಿದೆ. ರಾಜ್ಯ ಸರ್ಕಾರ ಈ ಯೋಜನೆಗೆ ಅನುಮೋದನೆ ನೀಡಿ ಒಂದೂವರೆ ವರ್ಷ ಆಗಿದೆ. ಕೇಂದ್ರದಿಂದ ಇನ್ನೂ ಅನುಮೋದನೆ ಸಿಕ್ಕಿಲ್ಲ.
- ಗುಲಾಬಿ ಮಾರ್ಗ ಮತ್ತು ನೀಲಿ ಮಾರ್ಗಗಳು ಎರಡು ವರ್ಷ ವಿಳಂಬವಾಗಿದ್ದು, ಇನ್ನೂ ಸಂಚಾರ ಆರಂಭಗೊಂಡಿಲ್ಲ.

ಘೋಷಣೆಗೆ ಸೀಮಿತವಾಗಬೇಡಿ

ನಮ್ಮ ಮೆಟ್ರೊವನ್ನು ತುಮಕೂರಿಗೆ ವಿಸ್ತರಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವುದಾಗಿ ಗೃಹ ಸಚಿವ ಜಿ. ಪರಮೇಶ್ವರ ಹೇಳಿಕೆ ನೀಡಿದ್ದಾರೆ. ಮೆಟ್ರೊ ಇರುವುದು ನಗರದ ಒಳಗೆ ಸಂಚರಿಸಲು. ಮೊದಲು ಇಲ್ಲಿನ ಯೋಜನೆಗಳನ್ನು ಕಾರ್ಯಗತಗೊಳಿಸಿ. ಘೋಷಣೆಗೆ ಸೀಮಿತಗೊಳ್ಳಬೇಡಿ ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ ರಾಜ್‌ಕುಮಾರ್ ದುಗಾರ್ ತಿಳಿಸಿದ್ದಾರೆ.

ಹಂತ ಮೂರು ಕಾರ್ಯಗತಗೊಂಡರೆ ಪಶ್ಚಿಮ ಬೆಂಗಳೂರನ್ನು ಉತ್ತರ ಮತ್ತು ದಕ್ಷಿಣ ಬೆಂಗಳೂರು ಜತೆ ಬೆಸೆಯಲಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗವನ್ನು ಕಿತ್ತಳೆ ಮಾರ್ಗ ಸಂಧಿಸುವುದರಿಂದ ಪಶ್ಚಿಮ ಬೆಂಗಳೂರಿನ ನಿವಾಸಿಗಳಿಗೆ ವಿಮಾನ ನಿಲ್ದಾಣದ ಸಂಪರ್ಕ ಸುಲಭವಾಗಲಿದೆ. ವಿಳಂಬ ಮಾಡಿದರೆ ವೆಚ್ಚ ಹೆಚ್ಚಳವಾಗಲಿದ್ದು, ನೀವು ಸಾಲ ಎಲ್ಲಿಂದಾದರೂ ತರುತ್ತೀರಿ. ಅದನ್ನು ಪಾವತಿಸಲು ಜನರ ಜೇಬಿಗೆ ಕತ್ತರಿ ಹಾಕುತ್ತೀರಿ ಎಂದು ಟೀಕಿಸಿದ್ದಾರೆ.

ಗುರಿ ನಿಗದಿಯ ಜೊತೆಗೆ ಇಷ್ಟು ಸಮಯದ ಒಳಗೆ ಇಷ್ಟು ಕೆಲಸ ಮುಗಿಯಬೇಕು ಎಂದು ಮಧ್ಯಂತರ ಗುರಿಗಳನ್ನು ನಿಗದಿ ಮಾಡಬೇಕು. ಬೆನ್ನತ್ತಿ ಕೆಲಸ ಮಾಡಿಸಬೇಕು. ಇಲ್ಲದೇ ಇದ್ದರೆ ಕೆಲಸ ಬೇಗ ಆಗುವುದಿಲ್ಲ ಎಂದಿದ್ದಾರೆ.

ಕಿತ್ತಳೆ ಮೆಟ್ರೊ (ಸಾಂದರ್ಭಿಕ ಚಿತ್ರ)

ಹಂಪನಾ ಸ್ಪಷ್ಟನೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಚುನಾವಣೆಯ ವಿಷಯದಲ್ಲಿ ನಾನು ತಟಸ್ಥ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಸ್ಪಷ್ಟಪಡಿಸಿದ್ದಾರೆ.

'ಕನ್ನಡವನ್ನು ಕಟ್ಟಿ ಬೆಳೆಸಿದ ಮಹಾನ್ ಪರಂಪರೆಯೇ ನಮ್ಮಲ್ಲಿದೆ. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ನಾನು, ಗೊರುಚ ಕೆಲಸ ಮಾಡಿದೆವು. ಪರಿಷತ್ತಿನ ಮೂಲಕ ಕನ್ನಡದ ಕೆಲಸ ಆಗಲು ಸಿ. ಸೋಮಶೇಖರ್ ಮುಂದಿನ ಅಧ್ಯಕ್ಷರಾಗಬೇಕು ಎಂದು ಶರಣ ಮುಕುಟ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನಾನು ಆಶಿಸಿರುವುದಾಗಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದೆ. ಕಡೆಯ ವಾಕ್ಯವನ್ನು ನಾನು ಹೇಳಲಿಲ್ಲ. ಇದು ತುಂಬ ಗಂಭೀರವಾದ ವಿಷಯ' ಎಂದು ಅವರು ತಿಳಿಸಿದ್ದಾರೆ.

ಕೈಕೊಟ್ಟ ವಿದ್ಯುತ್: ಮೆಟ್ರೊ ನಿಲ್ದಾಣದಲ್ಲಿ ಕವಿದ ಕತ್ತಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರ ಬೆಳಿಗ್ಗೆ ವಿದ್ಯುತ್ ವ್ಯತ್ಯಯ ಉಂಟಾದ ಕಾರಣ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ಒಮ್ಮೆಲೇ ಕತ್ತಲು ಕವಿಯಿತು. ನಿಲ್ದಾಣವನ್ನು ಸುಮಾರು ನಾಲ್ಕು ತಾಸು ಮುಚ್ಚಲಾಯಿತು.

ಬೆಳಿಗ್ಗೆ 7 ಗಂಟೆಯ ಹೊತ್ತಿಗೆ ಕಬ್ಬನ್ ಪಾರ್ಕ್ ನಿಲ್ದಾಣದ ವಿದ್ಯುತ್ ಸಂಪರ್ಕ ಕಡಿತಗೊಂಡಿತು. ಸುರಂಗ ಮಾರ್ಗದ ನಿಲ್ದಾಣ ಇದಾಗಿದ್ದರಿಂದ ಬೆಳಕು ಇಲ್ಲದಂತಾಯಿತು. ಪ್ರಯಾಣಿಕರು ಮೊಬೈಲ್ ಫೋನ್ ಟಾರ್ಚ್‌ಗಳನ್ನು ಬಳಸಿ ನಿಲ್ದಾಣದ ಆವರಣದಲ್ಲಿ ಸಂಚರಿಸಬೇಕಾಯಿತು.

ಸಮಸ್ಯೆ ಸರಿಯಾಗುವವರೆಗೆ ಮೆಟ್ರೊ ರೈಲು ನಿಲುಗಡೆಯನ್ನು ಈ ನಿಲ್ದಾಣದಲ್ಲಿ ರದ್ದು ಮಾಡಲಾಯಿತು. ನಿಲ್ದಾಣವನ್ನು ತಾತ್ಕಾಲಿಕವಾಗಿ ಮುಚ್ಚಲಾಯಿತು. ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ಇಳಿಯಬೇಕಾದವರು ಮತ್ತು ಹತ್ತಬೇಕಾದವರು ಡಾ. ಬಿ.ಆರ್. ಅಂಬೇಡ್ಕರ್ ನಿಲ್ದಾಣ ವಿಧಾನಸೌಧ ಇಲ್ಲವೇ ಮಹಾತ್ಮ ಗಾಂಧಿ ರಸ್ತೆ ನಿಲ್ದಾಣವನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು.

ಸಮಸ್ಯೆ ಸರಿಪಡಿಸಿದ ಬಳಿಕ ಬೆಳಿಗ್ಗೆ 11 ಗಂಟೆಗೆ ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ರೈಲು ನಿಲುಗಡೆ ಮತ್ತೆ ಆರಂಭಿಸಲಾಯಿತು.

ಈ ಅಡಚಣೆಯು ಪ್ರಯಾಣಿಕರಲ್ಲಿ ಹತಾಶೆಯನ್ನು ಉಂಟುಮಾಡಿತ್ತು. ಹಲವರು ಮೆಟ್ರೊ ನಿರ್ವಹಣೆಯ ವೈಫಲ್ಯವನ್ನು ಟೀಕಿಸಿದರು. ಕಬ್ಬನ್ ಪಾರ್ಕ್ ನಿಲ್ದಾಣವು ನಗರದ ಪ್ರಮುಖ ಪ್ರವೇಶ ಬಿಂದುವಾಗಿದ್ದು, ವಿದ್ಯುತ್ ವೈಫಲ್ಯವು ಬಿಎಂಆರ್‌ಸಿಎಲ್‌ನ ಕಳಪೆ ನಿರ್ವಹಣೆಯ ಸಂಕೇತ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಅಡಚಣೆಗೆ ಬಿಎಂಆರ್‌ಸಿಎಲ್ ಅಧಿಕಾರಿಗಳು ವಿಷಾದ ವ್ಯಕ್ತಪಡಿಸಿದ್ದಾರೆ.

ಯಶವಂತಪುರ ಕ್ಷೇತ್ರ: ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ 90ಕ್ಕಿಂತಲೂ ಹೆಚ್ಚು ಅಂಕ ಪಡೆದ ಯಶವಂತಪುರ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಮತ್ತು ಖಾಸಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ, ಪ್ರತಿಭಾ ಪುರಸ್ಕಾರ ಮತ್ತು ಉಡುಗೊರೆ ನೀಡಲಾಗುವುದು' ಎಂದು ಶಾಸಕ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಎಸ್.ಟಿ. ಸೋಮಶೇಖರ್

ಮಾಗಡಿ ರಸ್ತೆಯ ಅಂಜನಾನಗರ ಬಳಿಯ ಶಾಸಕರ ಕಚೇರಿಯಲ್ಲಿ ನಡೆದ 17 ಗ್ರಾಮ ಪಂಚಾಯಿತಿ ಮತ್ತು 11 ವಾರ್ಡ್ ವ್ಯಾಪ್ತಿಯ ಬ್ಲಾಕ್, ವಾರ್ಡ್ ಕಾಂಗ್ರೆಸ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಮಾಜಿ ಸದಸ್ಯರು , ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

'ಮೇ 15ರಂದು ಹೇರೋಹಳ್ಳಿಯ ಭರತ್ ನಗರದ ಕೆಂಪೇಗೌಡ ಕ್ರೀಡಾಂಗಣದಲ್ಲಿ ಪ್ರತಿಭಾ ಪುರಸ್ಕಾರ, ಬಸವ ಜಯಂತಿ, ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ನಡೆಯಲಿದೆ. ಶಿವರಾತ್ರಿ ದೇಶೀಕೇಂದ್ರ ಸ್ವಾಮಿಜಿ, ನಿರ್ಮಲಾನಂದ ಸ್ವಾಮೀಜಿ, ಸಿದ್ದಲಿಂಗ ಸ್ವಾಮೀಜಿ ಭಾಗವಹಿಸುವರು' ಎಂದು ಹೇಳಿದರು.

'ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ 10 ಸಾವಿರ ಹೆಣ್ಣುಮಕ್ಕಳಿಗೆ ಬಹುಮಾನ ನೀಡುವ ಕಾರ್ಯಕ್ರಮವನ್ನು ಮೇ 17 ರಂದು ಹಮ್ಮಿಕೊಳ್ಳಲಾಗಿದೆ' ಎಂದರು.

ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚಿಕ್ಕರಾಜು, ಮೈಲಸಂದ್ರ ನಾಗರಾಜು, ರೇವಣ್ಣಸಿದ್ದಯ್ಯ, ಎಚ್. ಶ್ರೀಧರ್, ಕೆ.ಎಸ್.ಪರ್ವೀಜ್, ಕಾಂಗ್ರೆಸ್ ಮುಖಂಡ ಆರ್.ಶಿವಮಾದಯ್ಯ, ಪಾಲಿಕೆ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್, ಅಮೃತ್‌ಗೌಡ, ಅಂಜನಾನಗರ ಎಂ.ಗಂಗರಾಜು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

112ನೇ ಸಂಸ್ಥಾಪನಾ ದಿನಾಚರಣೆ, ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಕೆ.ಎ. ದಯಾನಂದ, ಅತಿಥಿಗಳು: ಆರ್.ಕೆ. ನಲ್ಲೂರು ಪ್ರಸಾದ್, ಮನು ಬಳಿಗಾರ್, ಉಪನ್ಯಾಸ: ಜಗನ್ನಾಥ ಹೇಮಾದ್ರಿ, ಉಪಸ್ಥಿತಿ: ಎಂ.ಜಿ. ನಾಗರಾಜ್, ಎಂ. ಪ್ರಕಾಶಮೂರ್ತಿ, ಪ್ರಶಸ್ತಿ ಸ್ವೀಕರಿಸುವವರು: ಕೆ.ಸಿ. ಶಿವಸ್ವಾಮಿ, ಎಂ. ಜಿತೇಂದ್ರ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4



ಹಂ.ಪ. ನಾಗರಾಜಯ್ಯ

ಪ್ರೊ.ಕ.ವೆಂ. ರಾಘವಾಚಾರ್, ಡಿ.ವಿ. ಜಿ., ಪ್ರೊ. ಬಿ.ಎಸ್. ಸಣ್ಣಯ್ಯ, ಡಾ.ಎಂ. ಎಲ್. ಲಲಿತಮ್ಮ ದತ್ತಿ ಉಪನ್ಯಾಸ: ಕುಮಾರಸ್ವಾಮಿ ಬೆಜ್ಜಿಹಳ್ಳಿ, ಅಧ್ಯಕ್ಷತೆ: ಜಿ. ಅಶ್ವತ್ಥನಾರಾಯಣ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಭಜನೆ: ವಿಜಯ ವಿಠಲ ಭಜನಾ ಮಂಡಳಿ, ಧಾರ್ಮಿಕ ಪ್ರವಚನ: ಪ್ರಶಾಂತ ಭಾರ್ಗವಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಈಜುಕೊಳದ ಬಡಾವಣೆ, ಸಂಜೆ 6

***

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ– ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಿಧನ ವಾರ್ತೆ

ಆರ್.ಜೆ. ಲಕ್ಷ್ಮಮ್ಮ

ಬೆಂಗಳೂರು: ನಿವೃತ್ತ ಕೆ.ಎ.ಎಸ್ ಅಧಿಕಾರಿ ಈ ಚೆನ್ನಗಂಗಪ್ಪ ಅವರ ತಾಯಿ ಆರ್.ಜೆ. ಲಕ್ಷ್ಮಮ್ಮ (86) ವಯೋಸಹಜ ಅನಾರೋಗ್ಯದಿಂದಾಗಿ ಸೋಮವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಕುಣಿಗಲ್ ತಾಲ್ಲೂಕು ಕೆಂಕೆರೆ ಗ್ರಾಮದ ಫಾರ್ಮ್‌ಹೌಸ್‌ನಲ್ಲಿ ಮಂಗಳವಾರ ಮಧ್ಯಾಹ್ನ 12ಕ್ಕೆ ನಡೆಯಲಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ಆರ್.ಜೆ. ಲಕ್ಷ್ಮಮ್ಮ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ.
ದೂರವಾಣಿ : 08156–295427 ಫ್ಯಾಕ್ಸ್ – 08156–295427 ಇ-ಮೇಲ್ – eemidcbpura@gmail.com

ಸಂಖ್ಯೆ : ಕಾಸಬ/ತಾಂಶಾ/ತಾಂಸ/ಮೀ.ಪಾ.ಇಟೆಂಡರ್/1126/2026–27, ದಿನಾಂಕ : 02/05/2026

ಮರು ಟೆಂಡರ್ ಅಧಿಸೂಚನೆ

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 27/2025–26, ದಿನಾಂಕ: 20/02/2026. ರಲ್ಲಿ ಕೆಟಿಪಿಪಿ ನಿಯಮಾವಳಿ ಅನ್ವಯ ಆಕ್ಷನ್ ಟೆಂಡರ್ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ, ಗೌರಿಬಿದನೂರು, ಶಿಡ್ಲಘಟ್ಟ, ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ 2026–27ನೇ ಸಾಲಿನಿಂದ 2030–31 ರವರೆಗೆ ಮೀನುಗಾರಿಕೆ ನಡೆಸಲು ಗುತ್ತಿಗೆ ಆಧಾರದ ಮೇಲೆ ಮೀನು ಪಾಶುವಾರು ಹಕ್ಕನ್ನು ಇ–ಆಕ್ಷನ್ ಮೂಲಕ ವಿಲೇವಾರಿ ಮಾಡಲು ಆಹ್ವಾನಿಸಲಾಗಿದ್ದ ಕೆರೆಗಳ ಪೈಕಿ 02 ಕೆರೆಗಳಿಗೆ ಯಾವುದೇ ಬಿಡ್ದುದಾರರು ಭಾಗವಹಿಸದೇ ಇರುವುದರಿಂದ ಮತ್ತು 09 ಕೆರೆಗಳಲ್ಲಿ ಸಿಂಗಲ್ ಬಿಡ್ ಆಗಿರುವುದರಿಂದ ಮತ್ತು 01 ಕೆರೆ ತಾಂತ್ರಿಕ ಕಾರಣಗಳಿಂದ ಮರು ಇ–ಆಕ್ಷನ್ ಕರೆಯಲಾಗಿರುತ್ತದೆ. ಆಕ್ಷನ್ ದಾಸ್ತಾವೇಜುಗಳನ್ನು ದಿನಾಂಕ : 02/05/2026 ರ ಸಂಜೆ 4.30 ಗಂಟೆಯಿಂದ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕಗಳು ಈ ಕೆಳಕಂಡಂತೆ ಇರುತ್ತದೆ.

ಇ–ಟೆಂಡರ್ ವೇಳಾಪಟ್ಟಿ :

1	ಇ ಆಕ್ಷನ್‌ಗೆ ಸಂಬಂಧಿಸಿದ Queries ಸಲ್ಲಿಸಲು ಕೊನೆಯ ದಿನಾಂಕ :	21/05/2026 ಸಂಜೆ : 5.30 ಗಂಟೆಯವರೆಗೆ
2	ಇ ಆಕ್ಷನ್‌ನಲ್ಲಿ ಭಾಗವಹಿಸಿ, ಇ.ಎಂ.ಡಿ ಮತ್ತು ಟೆಂಡರ್ ಪ್ರೋಸೆಸಿಂಗ್ ಫೀ ಸಲ್ಲಿಸಲು ಕೊನೆಯ ದಿನಾಂಕ :	22/05/2026 ಸಂಜೆ : 4.30 ಗಂಟೆಯವರೆಗೆ.
3	ಇ ಆಕ್ಷನ್ ನಲ್ಲಿ ಭಾಗವಹಿಸಿ, ಇ.ಎಂ.ಡಿ ಮತ್ತು ಟೆಂಡರ್ ಪ್ರೋಸೆಸಿಂಗ್ ಫೀ ಸಲ್ಲಿಸಿ ಲೈವ್ ಬಿಡ್ ಆಕ್ಷನ್‌ನಲ್ಲಿ ಭಾಗವಹಿಸುವ ದಿನಾಂಕ :	25/05/2026 ಬೆಳಗ್ಗೆ 11.00 ಗಂಟೆಯಿಂದ 30/05/2026 ಸಂಜೆ 4.30 ಗಂಟೆಯವರೆಗೆ.

ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಅಧಿಸೂಚನೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಂಪೂರ್ಣ ವಿನ್ಯಾಸ, ತಯಾರಿಕೆ, ಪರೀಕ್ಷೆಗಳನ್ನೊಳಗೊಂಡಂತೆ ಬಿಡ್‌ಗಳನ್ನು ಆಹ್ವಾನಿಸಿದೆ:

1) ಸಂ.:ಮುಇಂವಿ/ಪ್ರ(ಕಾ)ವಬೆ/ಅಇಂ(ಕ)/ಸಇಂ-2/ಕ-458(1)/220V Battery Charger Set/2026-27/987-88 ದಿನಾಂಕ: 04.05.2026

ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇಂವಿ/ಪ್ರ(ಕಾ)ವ/ಬೆಂಕಾವ/2026-27/09/ 220ವೋ ಬ್ಯಾಟರಿ ಚಾರ್ಜರ್ ಸೆಟ್ ರನ್ವಯ, ಬೆಂಗಳೂರಿನ ಪ್ರಸರಣ (ಕಾರ್ಯಾಚರಣೆ) ವಲಯದ ವ್ಯಾಪ್ತಿಯಲ್ಲಿರುವ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಬ್ಯೆಯಾಲ್ ಬೇಗೂರು ಕಾರ್ಯಾಚರಣೆ ವಿಭಾಗ, ಕವಿಪ್ರನಿನಿ 220/66/11ಕೆ.ವಿ ಬ್ಯೆಯಾಲ್ ಬೇಗೂರು ಸ್ವೀಕರಣಾ ಕೇಂದ್ರಕ್ಕೆ 1 ಸೆಟ್ 2X220ವೋ, 300ಎ.ಹೆಚ್ (with 02 no's. of float and 02 no's. of boost ನೊಂದಿಗೆ) ಬ್ಯಾಟರಿ ಚಾರ್ಜರ್ ಸೆಟ್‌ಗಳನ್ನು ಸರಬರಾಜು ಮಾಡುವುದು.

2) ಸಂ.:ಮುಇಂವಿ/ಪ್ರ(ಕಾ)ವಬೆ/ಅಇಂ(ಕ)/ಸಇಂ-2/ಕ-483(1)/ಬ್ಯಾಟರಿ ಸೆಟ್/2026-27/ 1015-16 ದಿನಾಂಕ: 04.05.2026

ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇಂವಿ/ಪ್ರ(ಕಾ)ವ/ಬೆಂವ/2025-26/04/ ಬ್ಯಾಟರಿ ಸೆಟ್ಸ್/CALL-3 ರ ಅನ್ವಯ ಬೆಂಗಳೂರಿನ ಪ್ರಸರಣ (ಕಾರ್ಯಾಚರಣೆ) ವಲಯದ ಅಡಿಯಲ್ಲಿ ಬರುವ ನೆಲಮಂಗಲ ಕಾರ್ಯಾಚರಣೆ ವಿಭಾಗಕ್ಕೆ ಎರಡು ಸೆಟ್‌ಗಳ 220V, 600AH Plante/Grid type Battery sets ಗಳನ್ನು ಮರಳಿ ಖರೀದಿ ಯೋಜನೆಯಡಿಯಲ್ಲಿ ಸರಬರಾಜು ಮಾಡುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆಯನ್ನು ದಿನಾಂಕ: 05.05.2026 ರಂದು ಅಥವಾ ನಂತರ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು

ಸಹಿ/-, ಮುಖ್ಯ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವಲಯ,
ಕ.ವಿ.ಪ್ರ.ನಿ.ನಿ. ಆನಂದರಾವ್ ವೃತ್ತ, ಬೆಂಗಳೂರು–09.

ಮೇಲ್ಮನವಿ ನ್ಯಾಯಮಂಡಳಿ,
ಕಂದಾಯ ಇಲಾಖೆ
ಹಣಕಾಸು ಸಚಿವಾಲಯ
ಭಾರತ ಸರ್ಕಾರ
4ನೇ ಮಹಡಿ, ಲೋಕ ನಾಯಕ್ ಭವನ, ಖಾನ್ ಮಾರುಕಟ್ಟೆ, ನವದೆಹಲಿ–110003.
ಸ್ಥಿರ ದೂರವಾಣಿ ಸಂಖ್ಯೆ. 011–20819916, ಇಮೇಲ್: registry-atfp@gov.in

(ಮೇಲ್ಮನವಿದಾರರ ಮೂಲಕ ತಲುಪಿಸಬೇಕು.)
FPA-PMLA-4797/BNG/2022

ಶಾಖೆ ವ್ಯವಸ್ಥಾಪಕರು, ಕೆನರಾ ಬ್ಯಾಂಕ್ .... ಮೇಲ್ಮನವಿದಾರರು
ವಿರುದ್ಧ
ಉಪ ನಿರ್ದೇಶಕರು, ಇಡಿ, ಬೆಂಗಳೂರು ಮತ್ತು ಇತರರು ....ಪ್ರತಿವಾದಿಗಳು

ನಿಯಮ 20 ಸಿಪಿಸಿ ಯ ಆದೇಶ 5 ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ ಸೂಚನೆ

1. ಪ್ರತಿವಾದಿ–2
ಶ್ರೀ ವಿಜಯ್ ಆಕಾಶ್ @ ಬಿ ರಾಜೇಂದ್ರನ್ ಬಿನ್ ಲೇಟ್ ಬಾಲಕೃಷ್ಣನ್, ನಂ. ಎ–302, ಗ್ರ್ಯಾಂಡ್ ಹೆರಿಟೇಜ್ ಅಪಾರ್ಟ್‌ಮೆಂಟ್, ಕುಂದ್ರತ್ತೂರ್ ಮುಖ್ಯ ರಸ್ತೆ, ಕೋವೂರ್, ಚೆನ್ನೈ.
2. ಪ್ರತಿವಾದಿ–3
ಶ್ರೀ ಮೊಹಮ್ಮದ್ ಮುಸ್ತಫಾ, ಬಿನ್ ಉಸ್ಮಾನ್ ಮಾಲೀಕರು: ಮೆಸರ್ಸ್. ಆಚ್ಯೂ ಇಂಟರ್‌ನ್ಯಾಷನಲ್, ಫ್ಲಾಟ್ ಸಂಖ್ಯೆ 204, 2 ನೇ ಮಹಡಿ, ನಾರ್ತ್ ಟೌನ್ ಅಪಾರ್ಟ್‌ಮೆಂಟ್ಸ್, 27 ನೇ ಟವರ್, ಒಟ್ಟೇರಿ, ಚೆನ್ನೈ–600012.
3. ಪ್ರತಿವಾದಿ–4
ಶ್ರೀ ಎಂ ಡಿ ಜೈರಾಮ್, ಬಿನ್ ಲೇಟ್ ಎಂಪಿ ದಾಸಪ್ಪ, ಆರ್/ಓ 11/3, ಮೊದಲ ಕ್ರಾಸ್, ಎಚ್‌ಎಂಎಸ್ ಲೇಔಟ್, ಚಿಕ್ಕಕಲ್ಲಸಂದ್ರ, ಬೆಂಗಳೂರು–560071.
4. ಪ್ರತಿವಾದಿ–5
ಶ್ರೀ ನಾಗಾರ್ಜುನ @ ರಾಜು, ಬಿನ್ ಲೇಟ್ ರಮೇಶ್, ನಂ. ನಿಲ್, ಮೇಟಗಳ್ಳಿ, ಕೆಆರ್‌ಆರ್ ರಸ್ತೆ, ಲೋಕನಾಯಕ ನಗರ, ಹೆಬ್ಬಾಳ ಮುಖ್ಯ ರಸ್ತೆ, ಮೈಸೂರು–570016.
5. ಪ್ರತಿವಾದಿ–6
ಶ್ರೀ ಜಿ.ರೇವಣ್ಣ, ಬಿನ್ ಗಣೇಶಪ್ಪ, ವಾಸ: ನಂ. 19, 13ನೇ 'ಡಿ' ಕ್ರಾಸ್, ಅಗ್ರಹಾರ ದಾಸರಹಳ್ಳಿ, ಬೆಂಗಳೂರು–560079.
6. ಪ್ರತಿವಾದಿ–7
ಶ್ರೀ ಶೇಖ್ ಇಕ್ಬಾಲ್ @ ಸಲೀಮ್, ಬಿನ್ ಎ.ಆರ್. ಶೇಖ್, ವಾಸ: ಸಂಖ್ಯೆ 5/9, 1ನೇ ಮಹಡಿ, 38ನೇ ಬೀದಿ, ಅಶೋಕ್ ನಗರ, ಚೆನ್ನೈ–600083.
7. ಪ್ರತಿವಾದಿ–10
ಶ್ರೀ ಭರತ್ ಎಂ.ಬಿ. ಬಿನ್ ಲೇಟ್ ಮಲ್ಲಿಕಾರ್ಜುನ, ವಾಸ: ನಂ. 424, 8ನೇ ಮುಖ್ಯ ಟಿ. ತಿಮ್ಮಯ್ಯ ರಸ್ತೆ, ಪದ್ಮನಾಭ ನಗರ, ಬೆಂಗಳೂರು–560070.
8. ಪ್ರತಿವಾದಿ–11
ಶ್ರೀ ಕೃಷ್ಣ ಕುಮಾರ್, ಬಿನ್ ಶ್ರೀ ಗುಣಶೇಖರನ್ ವಾಸ: ಫ್ಲಾಟ್ ಸಂಖ್ಯೆ ಸಿ–2, 2ನೇ ಮಹಡಿ, ಚಿದಂಬರಂ ಎನ್‌ಕ್ಲೇವ್, 21 ಸಿಐಟಿ ಕಾಲೋನಿ, 1ನೇ ಅಡ್ಡ ರಸ್ತೆ, ಮೈಲಾಪುರ, ಚೆನ್ನೈ.
9. ಪ್ರತಿವಾದಿ–12
ಶ್ರೀ ಸುಮತಿ ಎ.ಚಲನಿ, ಬಿನ್ ಆರ್.ಜೆ. ಆನಂದಮುಲ್, ವಾಸ: ನಂ. 2 ರಿಥರ್ಡನ್ ಅವೆನ್ಯೂ, ರಿಥರ್ಡನ್ ರಸ್ತೆ, ವೆಪೆರಿ ರಸ್ತೆ, ಚೆನ್ನೈ–600007.
10. ಪ್ರತಿವಾದಿ–13
ಶ್ರೀ ಸಿರಿಲ್ ಮೊಂಟೆರಿಯೊ, ಬಿನ್ ಫ್ರಾನ್ಸಿಸ್ ಮೊಂಟೆರಿಯೊ, ವಾಸ: ಫ್ಲಾಟ್ ನಂ. 10, ಸುಪರ್ನಾ ದುರ್ಗಾ ಬ್ಲಿಸ್, ಸೈಟ್ ನಂ. 12, 4ನೇ ಮುಖ್ಯ ಅಯ್ಯಪ್ಪ ರೆಡ್ಡಿ ಗಾರ್ಡನ್, ಯಶವಂತಪುರ, ಬೆಂಗಳೂರು.
11. ಪ್ರತಿವಾದಿ–14
ಶ್ರೀ ಶಿವಕುಮಾರ್, ಬಿನ್ ಸಂಶೆಟ್ಟಿಹಳ್ಳಿ ಪುಟ್ಟರಂಗನಾಥ್, ವಾಸ: ನಂ. 100/42, 13ನೇ ಮೇನ್, 4ನೇ ಬ್ಲಾಕ್ ನಂದಿನಿ ಲೇಔಟ್, ಬೆಂಗಳೂರು –560096.
12. ಪ್ರತಿವಾದಿ–16
ಶ್ರೀ ಅಶ್ಫಾಕ್ ಹುಸೇನ್ ಎ, ಬಿನ್ ಲೇಟ್ ಅಲ್ತಾಫ್ ಹುಸೇನ್, ವಾಸ: ನಂ. 24/36, ಟಿಪ್ಪು ಸಾಹಿಬ್ ಸ್ಟ್ರೀಟ್, ರಾಯಪೆಟ್ಟಾ, ಚೆನ್ನೈ–600014
13. ಪ್ರತಿವಾದಿ–17
ಮೆಸರ್ಸ್. ಡ್ಯಾನಿಶ್ ಎಂಟರ್‌ಪ್ರೈಸಸ್, ವಾಸ: ನಂ. 15/2, ವೀರಸ್ವಾಮಿ ಸ್ಟ್ರೀಟ್, ಪೆರಿಯಮೆಂಟ್, ಚೆನ್ನೈ–600003.
14. ಪ್ರತಿವಾದಿ–18
ಮೆಸರ್ಸ್. ಎಸ್‌ಎನ್ ಗ್ಲೋಬಲ್ ಇಂಪೆಕ್ಸ್, ನಂ. 35/37, ವುತುಕಟ್ಟನ್ ಸ್ಟ್ರೀಟ್, ಪೆರಿಯಮೆಂಟ್, ಚೆನ್ನೈ–600003.
15. ಪ್ರತಿವಾದಿ–19
ಮೆಸರ್ಸ್. ಅಮೃತ್ ಸೈಕಲ್ ಮತ್ತು ಕಂಪನಿ, ನಂ. 28, ಬ್ಯಾರಕ್ಸ್ ಗೇಟ್ ರಸ್ತೆ, ಪಟ್ಟಲಂ, ಚೆನ್ನೈ–6000012.
16. ಪ್ರತಿವಾದಿ–20
ಮೆಸರ್ಸ್. ಜೈನಾಬ್ ಎಂಟರ್‌ಪ್ರೈಸಸ್, ನಂ. 58/59, ಮೀರ್ ಬಕ್ಷಿ ಅಲಿ ಸ್ಟ್ರೀಟ್. ರಾಯಪೆಟ್ಟಾ, ಚೆನ್ನೈ–600014.
17. ಪ್ರತಿವಾದಿ–21
ಮೆಸರ್ಸ್. ರಾಧಿಕಾ ಎಂಟರ್‌ಪ್ರೈಸಸ್, ನಂ. 1/104, ಡೋರ್ ನಂ. 06, ಪೆರುಮಾಳ್ ಕೆವಿನ್ ಸ್ಟ್ರೀಟ್, ಗುರುಗಂಪಕ್ಕಂ, ಚೆನ್ನೈ.
18. ಪ್ರತಿವಾದಿ–22
ಮೆಸರ್ಸ್. ಕೆ.ಎಫ್ ಎಂಟರ್‌ಪ್ರೈಸಸ್, ನಂ. 2/1, ಖಾನಾ ಬಾಗ್ ಸ್ಟ್ರೀಟ್, ಚೆಪಾಕ್, ಚೆನ್ನೈ–600005.
19. ಪ್ರತಿವಾದಿ–23
ಮೆಸರ್ಸ್. ಎಸ್ ಎಂ .ಇಂಡಸ್ಟ್ರೀಸ್, ನಂ. 41/8, ವಂದಿಕರನ್ ಸ್ಟ್ರೀಟ್, ಮಧುವನ್ನೈ, ಗಿಂಡಿ, ಚೆನ್ನೈ–600032.
20. ಪ್ರತಿವಾದಿ–24
ಮೆಸರ್ಸ್. ಲಿಯಾಕತ್ ಅಗರಬತ್ತಿ ಕಂಪನಿ, ನಂ. 237, ಪೇಪರ್ ಮಿಲ್ಸ್ ರಸ್ತೆ, ಪೆರುಂಬೂರ್, ಚೆನ್ನೈ–600011.
21. ಪ್ರತಿವಾದಿ–25
ಮೆಸರ್ಸ್. ಯೂನಿಕ್ ಏಜೆನ್ಸಿಸ್, ನಂ.28/81, ಮಿಲ್ಲರ್ಸ್ ರಸ್ತೆ, ಕಿಲ್ಪಾಕ್, ಚೆನ್ನೈ–600010.
22. ಪ್ರತಿವಾದಿ–26
ಮೆಸರ್ಸ್. ಎ ಎಸ್ ಏರ್ ಕಂಡಿಷನರ್‌ಸ್, ನಂ.ಎ–2, ಸಂಖ್ಯೆ 10/15, ಮೊದಲ ಮಹಡಿ, ಸಿಟಿ ವಿನಾಯಕ, ಪಳನಿ ಅಪ್ಪಾ ಬೀದಿ, ಪೆರಿಯಾರ್ ನಗರ, ಪಲ್ಲವರಂ, ಚೆನ್ನೈ–600043.
23. ಪ್ರತಿವಾದಿ–27
ಮೆಸರ್ಸ್. ಅಸಿಮ್ ಇಂಟರ್‌ನ್ಯಾಷನಲ್ಸ್, ನಂ. 43/38, 29ನೇ ಶಿವಾಜಿ ಬೀದಿ, ಜಿಕೆಎಂ ಕಾಲೋನಿ, ಜವಾಹರ್ ನಗರ, ಚೆನ್ನೈ–600082.
24. ಪ್ರತಿವಾದಿ–29
ಮೆಸರ್ಸ್. ಬಾಲಿ ಕನೆಂಜಿನಿಯರಿಂಗ್ ಅಂಡ್ ಟೆಕ್ ಪ್ರೈ. ಲಿಮಿಟೆಡ್. ಹಳೆಯ ನಂ.250, ಹೊಸ ನಂ. 341, ರೀಜೆನ್ಸಿ ಹೌಸ್, 9ನೇ ಮಹಡಿ, ಕಾಂಗ್ರೆಸ್ ಮೈದಾನ ಎದುರು, ಅಣ್ಣಾ ಸಲೈ, ಚೆನ್ನೈ–600006.

ಮೇಲ್ಮನವಿ ನಂ. FPA-PMLA-4797/BNG/2022 ಅನ್ನು ಮೇಲ್ಮನವಿ ನ್ಯಾಯಮಂಡಳಿ, 4ನೇ ಮಹಡಿ, ಸಿ–ವಿಂಗ್, ಲೋಕನಾಯಕ್ ಭವನ, ಖಾನ್ ಮಾರ್ಕೆಟ್, ನವದೆಹಲಿಯಲ್ಲಿರುವ ಗೌರವಾನ್ವಿತ ಪೀಠದ ನಿರ್ದೇಶನದ ಮೇರೆಗೆ ನೀಡಲಾಗಿದೆ. ಅದಾಗ್ಯೂ, ಮೇಲೆ ಹೆಸರಿಸಲಾದ ಪ್ರತಿವಾದಿಗಳಿಗೆ ಸಾಮಾನ್ಯ ಸೇವೆ ಸಲ್ಲಿಸಲು ಸಾಧ್ಯವಿಲ್ಲ ಎಂದು ಗೌರವಾನ್ವಿತ ಪೀಠದ ತೃಪ್ತಿಗೆ ತಕ್ಕಂತೆ ಸಾಬೀತಾಗಿದೆ. ಆದ್ದರಿಂದ, ಸಿಪಿಸಿ ಯ ಆದೇಶ 5 ನಿಯಮ 20 ರ ಅಡಿಯಲ್ಲಿ ಈ ಘೋಷಣೆಯನ್ನು ಅವರ ವಿರುದ್ಧ ಹೊರಡಿಸಲಾಗಿದೆ ಮತ್ತು ದಿನಾಂಕ: 06.05.2026 ರಂದು ಬೆಳಿಗ್ಗೆ 11:00 ಗಂಟೆಗೆ ಮೇಲ್ಮನವಿ ನ್ಯಾಯಮಂಡಳಿಯ ಮುಂದೆ ವೈಯಕ್ತಿಕವಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಬೇಕು.

ಒಂದು ವೇಳೆ ನೀವು ಗೈರು ಹಾಜರಾದಲ್ಲಿಯೂ ಸಹ ಈ ಅರ್ಜಿಯನ್ನು ವಿಚಾರಣೆಗೆ ಕರೆದು ತೀರ್ಮಾನಿಸಲಾಗುವುದೆಂದು ಸೂಚನೆ ನೀಡಲಾಗಿದೆ.

ಆದೇಶದ ಮೇರೆಗೆ
ಸಹಿ/–
ರಿಜಿಸ್ಟ್ರಾರ್

ಸ್ಥಳ: ನವದೆಹಲಿ
ದಿನಾಂಕ:13.04.2026

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-556/453/2026–27(E-210912) ದಿನಾಂಕ: 02.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	BIAAPA ಮಹಾಯೋಜನೆ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಎಚ್.ಎ. ನಾಗರಾಜು ಮತ್ತು ನಾಗಮ್ಮ	ಯಲಹಂಕ	ಜಾಲ	ಬಾಗಲೂರು	401/11	0–20	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಭೂಉಪಯೋಗ ಬದಲಾವಣೆ ಆದ ನಂತರ ವಿನ್ಯಾಸ ಅನುಮೋದನೆ ಪಡೆದು, ಸದರಿ ಜಮೀನನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಪ್ರಶ್ನಿತ ಜಾಗದಲ್ಲಿ ಬಹುಮಹಡಿಗಳ ವಸತಿ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನಿನಲ್ಲಿ ಅಭಿವೃದ್ಧಿ ಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮುಖ್ಯ ನಗರ ಯೋಜಕರು ರವರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು–560002

ಸಂಖ್ಯೆ: ಮು.ನ.ಯೋ/ಜಿಬಿಎ/ಪಿಆರ್/692/CLU–05/25–26/E–205374 ದಿನಾಂಕ: 04–05–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಸಾರಿಗೆ ಸಂಪರ್ಕ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂ ಉಪಯೋಗ ಮರು ನಿಗದಿಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಮರು ನಿಗದಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಮರು ನಿಗದಿಪಡಿಸುವ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರುರವರ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ. ನಂ.	ವಿಸ್ತೀರ್ಣ (ಎ–ಗುಂ)	ಪರಿಷ್ಕೃತ ಮಹಾಯೋಜನೆ –2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ. ಅಮರ್ ನಾಥ್ .ಸಿ ಬಿನ್ ಚಿನ್ನಪ್ಪ ರೆಡ್ಡಿ .ಎ	ಬೆಂಗಳೂರು ಪೂರ್ವ	ಬಿದರಹಳ್ಳಿ	ಕುಂಬೇನ ಅಗ್ರಹಾರ	39/3	01ಎ–20ಗುಂ	ಸಾರಿಗೆ ಮತ್ತು ಸಂಪರ್ಕ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳು ವ್ಯವಸಾಯಕ್ಕೆ ಬಳಸಲು ಸಾಧ್ಯವಿರುವಿದಿಲ್ಲ ಹಾಗಾಗಿ ಅಭಿವೃದ್ಧಿಪಡಿಸುವ ಆಗತ್ಯವಿರುತ್ತದೆ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನೀವೇಶನ/ ಅಪಾರ್ಟ್‌ಮೆಂಟ್ ಲಭ್ಯವಾಗುತ್ತದೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಠಿಯಾಗುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ಸಾರಿಗೆ ಮತ್ತು ಸಂಪರ್ಕ"** ವಲಯದಿಂದ **"ವಸತಿ"** ಉಪಯೋಗಕ್ಕೆ ಭೂ ಉಪಯೋಗ ಮರು ನಿಗದಿಪಡಿಸಲು ಕೋರಿರುತ್ತಾರೆ.

ಸಹಿ/– ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ, ಹಣಕಾಸು ಸಂಸ್ಥೆಗಳಿಗೆ, ಸರ್ಕಾರ ಮತ್ತು ಅಧೀನ ಇಲಾಖೆಗಳಿಗೆ ತಿಳಿಯಪಡಿಸುವುದೇನೆಂದರೆ ಬೆಂಗಳೂರು ಉತ್ತರ ತಾಲೂಕಿನ ದಾಸಾನುಪುರ ಹೋಬಳಿಯ ಕರೆಕಲ್ ಪಾಳ್ಯದ ವಾಸಿ ಹಾಲಿ ಸುಮಾರು 72 ವರ್ಷದ ವಾಸಿ, ಗಂಗಾರಾಮಯ್ಯ ಬಿನ್ ಲೇಟ್ ರಾಮಯ್ಯ ಅವರು ಈ ತಿಳುವಳಿಕೆಯ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನನ್ನು ತಾನು ದಿನಾಂಕ 12.10.2009 ರಂದು ಜಾರಿಯಾಗಿರುವ ನೊಂದಾಯಿತ ಕ್ರಯ ಪತ್ರದಲ್ಲಿ ಸ್ವಯಾರ್ಜಿತವಾಗಿ ಖರೀದಿಸಿ ಖಾತೆ ಪಹಣೆ ಮಾಡಿಕೊಂಡು ವ್ಯಾಜ್ಯಾ ಮತ್ತು ಋಣ ಭಾರ ರಹಿತವಾಗಿ ಅನುಭವಿಸಿಕೊಂಡು ಬಂದದ್ದು ಹಾಲಿ ಸದರಿ ಜಮೀನನ್ನು ಮಾರಾಟಕ್ಕೆ ಇಟ್ಟಿದ್ದು ಈ ಕೆಳಕ್ಕೆ ಜಾಹೀರಾತು ನೀಡಿರುವ ವ್ಯಕ್ತಿಗಳು ಶೆಡ್ಯೂಲ್ ಸ್ವತ್ತನ್ನು ಖರೀದಿಸಲು ಆಸಕ್ತರಾಗಿದ್ದು ಈ ಬಗ್ಗೆ ಸಾರ್ವಜನಿಕರ ಮತ್ತು ಇತರರ ಯಾವುದೇ ರೀತಿಯ ಆಸಕ್ತಿ ಹಕ್ಕು ಸ್ವಾಧೀನ ಶೆಡ್ಯೂಲ್ ಸ್ವತ್ತಿನ ಮೇಲೆ ಇಲ್ಲ ಎಂದು ಖಾತರಿ ಪಡಿಸಿಕೊಳ್ಳುವ ಉದ್ದೇಶಕ್ಕೆ ಈ ಜಾಹಿರಾತು ನಡೆಯುತ್ತಿದ್ದು ಮೇಲ್ಕಂಡ ಮಾಲೀಕರ ವಾರಸುದಾರರು ಸೇರಿದಂತೆ ಮೇಲೆ ಯಾವುದೇ ರೀತಿ ಹಕ್ಕು ಸ್ವಾಧೀನ ಇದ್ದಲ್ಲಿ ಕೆಳಕಂಡ ಜಾಹೀರಾತುದಾರರಿಗೆ ಸೂಕ್ತ ದಾಖಲೆಗಳೊಂದಿಗೆ ಇಂದಿನ 15 ದಿವಸಗಳ ಒಳಗಾಗಿ ಲಿಖಿತವಾಗಿ ತಮ್ಮ ಹಕ್ಕನ್ನು ಪ್ರತಿಪಾದಿಸತಕ್ಕದ್ದು. ಒಂದು ವೇಳೆ ಯಾವುದೇ ಅಹವಾಲು ಬರದಿದ್ದ ಪಕ್ಷದಲ್ಲಿ ಶೆಡ್ಯೂಲ್ ಸ್ವತ್ತನ್ನು ಸ್ವಚ್ಛ ಆಸ್ತಿಯೆಂದು ಪರಿಗಣಿಸಿ ಜಾಹೀರಾತುದಾರರು ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ್ದಲ್ಲಿ, ನಂತರ ಬರುವ ಅಹವಾಲು ದಾರರು ಶೆಡ್ಯೂಲ್ ಸ್ವತ್ತಿನ ಮೇಲೆ ತಮಗೆ ಇರಬಹುದಾದ ಯಾವುದೇ ರೀತಿ ಹಕ್ಕನ್ನು ಬಿಟ್ಟುಕೊಟ್ಟಂತೆ ಎಂದು ಪರಿಗಣಿಸತಕ್ಕದ್ದು ಎಂದು ನೀಡುತ್ತಿರುವ ಸಾರ್ವಜನಿಕ ತಿಳುವಳಿಕೆ.

ಶೆಡ್ಯೂಲ್ ಸ್ವತ್ತಿನ ವಿವರ

ತುಮಕೂರು ತಾಲೂಕು ಕಸಬಾ ಹೋಬಳಿ ಮರಳೇನಹಳ್ಳಿ ಗ್ರಾಮದ ಸರ್ವೆ ನಂಬರ್ 51/1a ರಲ್ಲಿನ ಕರಾಬು ರಹಿತ ಒಂದು ಎಕರೆ ಮೂವತ್ತೆಂಟು ಗುಂಟೆ (01–38) ಜಮೀನಿಗೆ ಚಕ್ಕುಬಂದಿ
ಪೂರ್ವಕ್ಕೆ:– ಚಿಕ್ಕಮ್ಮನವರ ಸರ್ವೆ ನಂಬರ್ 51/1 ಬಿ ರಲ್ಲಿನ ಜಮೀನು,
ಪಶ್ಚಿಮಕ್ಕೆ:– ಹೇಮಾವತಿ ನಾಲೆ ಜಮೀನು,
ಉತ್ತರಕ್ಕೆ:– ಗವಿ ರಂಗಯ್ಯನವರ ಜಮೀನು
ದಕ್ಷಿಣಕ್ಕೆ:– ನರಸಿಂಹಯ್ಯನವರ ಜಮೀನು.

ಖಾತೆದಾರರು: ಗಂಗಾರಾಮಯ್ಯ ಬಿನ್ ರಾಮಯ್ಯ
ಜಾಹೀರಾತುದಾರರು: ಪಾವನ ಬಿನ್ ಎಂ.ವಿ.ಬಿ.ಚೌದರಿ, ಮನೆ ನಂಬರ್ #8, ನಾರಾಯಣಪ್ಪ ಲೇಔಟ್, ನಾಗಾರ್ಜುನ ಪಿಯು ಕಾಲೇಜ್ ಬಳಿ, ರಾಮಗೊಂಡನಹಳ್ಳಿ, ಯಲಹಂಕ, ಬೆಂಗಳೂರು ಉತ್ತರ ಜಿಲ್ಲೆ–560064
ಫೋನ್:– 7349311003, 7892389065
ಇ–ಮೇಲ್: pavanametla93@gmail.com
ದಿನಾಂಕ: 5–5–2026 ಸ್ಥಳ : ತುಮಕೂರು

SOBHA
SOBHA LIMITED
CIN : L45201KA1995PLC018475
Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000, Email: investors@sobha.com, Website: www.sobha.com

AUDITED STANDALONE AND CONSOLIDATED FINANCIAL RESULTS
FOR THE QUARTER AND FINANCIAL YEAR ENDED MARCH 31, 2026

The Audited Standalone and Consolidated Financial Results of Sobha Limited ("the Company") along with the Auditors Reports of the Statutory Auditors of the Company for the Quarter and Financial Year ended March 31, 2026 have been reviewed by the Audit Committee and approved by Board of Directors of the Company at their Meeting held on May 04, 2026, in terms of Regulation 33 of SEBI (Listing Obligations and Disclosure Requirements) Regulations, 2015.

The aforementioned Financial Results along with the Auditors Reports of the Statutory Auditors thereon are available on the website of BSE Limited (BSE) (www.bseindia.com) and National Stock Exchange of India Limited (NSE) (www.nseindia.com) and on the Company's website at https://www.sobha.com/investor-relations/. The same can also be accessed by scanning the QR Code provided below:

For Sobha Limited
On Behalf of the Board of Directors
Sd/-
Bijan Kumar Dash
Company Secretary & Compliance Officer

Date : May 04, 2026
Place : Bangalore

ಹೋಟೆಲ್‌ಗಳಲ್ಲಿ ತಿಂಡಿ, ಊಟ ತುಟ್ಟಿ

ವಾಣಿಜ್ಯ ಬಳಕೆ ಸಿಲಿಂಡರ್ ದರ ಹೆಚ್ಚಳ: ಗ್ರಾಹಕರ ಕಿಸೆಗೆ ಕತ್ತರಿ

• ಕೆ.ಎಸ್.ಸುನಿಲ್

ಬೆಂಗಳೂರು: ವಾಣಿಜ್ಯ ಬಳಕೆ ಎಲ್‌ಪಿಜಿ ಬೆಲೆ ಏರಿಕೆ ಬೆನ್ನಲ್ಲೇ ನಗರದ ಹಲವು ಹೋಟೆಲ್, ರೆಸ್ಟೋರೆಂಟ್‌ಗಳು ತಿಂಡಿ, ಊಟದ ದರವನ್ನೂ ಹೆಚ್ಚಿಸಿವೆ. ನಷ್ಟ ಸರಿದೂಗಿಸಲು ಹಲವು ಹೋಟೆಲ್‌ಗಳಲ್ಲಿ (ತಿನಿಸುಗಳ ಬೆಲೆಯಲ್ಲಿ ಕನಿಷ್ಠ ₹5ರಿಂದ ₹10 ಹೆಚ್ಚಳ) ಹೊಸ ದರ ಜಾರಿಗೆ ಬಂದಿದ್ದು, ಇದರಿಂದ ಗ್ರಾಹಕರ ಕಿಸೆಗೆ ಕತ್ತರಿ ಬಿದ್ದಿದೆ.

ಕೇಂದ್ರ ಸರ್ಕಾರ 60 ದಿನದಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ದರವನ್ನು ₹1,308 ಏರಿಕೆ ಮಾಡಿದೆ. ಅನಿಲ ಪೂರೈಕೆ ಸಮಸ್ಯೆಯಾದ ಬಳಿಕ ಹೋಟೆಲ್ ಉದ್ಯಮ ಸಂಕಷ್ಟದಲ್ಲಿದೆ.

ಒಂದೆಡೆ ತಿನಿಸುಗಳ ದರವನ್ನು ಹೆಚ್ಚಿಸಿದರೆ ಗ್ರಾಹಕರು ಬರುವುದಿಲ್ಲ. ಮತ್ತೊಂದೆಡೆ ದರ ಏರಿಸದಿದ್ದರೆ ಮಾಲೀಕರಿಗೆ ನಷ್ಟ. ಈ ಇಕ್ಕಟ್ಟಿನ ಪರಿಸ್ಥಿತಿಯಿಂದಾಗಿ ಅನೇಕ ಹೋಟೆಲ್ ಮಾಲೀಕರು ಕಂಗಾಲಾಗಿದ್ದು, ನಷ್ಟದಲ್ಲಿರುವ ಕೆಲ ಹೋಟೆಲ್‌ಗಳು ಮುಚ್ಚುವ ಹಂತದಲ್ಲಿವೆ.

ನಗರದಲ್ಲಿ ವಾಣಿಜ್ಯ ಸಿಲಿಂಡರ್ ದರ ₹3,152. ಎಲ್‌ಪಿಜಿ ದರ ಭಾರಿ ಏರಿಕೆಯಿಂದ ಹೋಟೆಲ್, ರೆಸ್ಟೋರೆಂಟ್, ರಸ್ತೆ ಬದಿ ತಿಂಡಿ ಮಳಿಗೆ, ಕೇಟರಿಂಗ್ ವಲಯಗಳಿಗೆ ಹೊಡೆತ ಬಿದ್ದಿದೆ. ಈ ಹೊರೆಯನ್ನು ಬೆಲೆ ಹೆಚ್ಚಳದ ಮೂಲಕ ಗ್ರಾಹಕರಿಗೆ ವರ್ಗಾಯಿಸಲಾಗಿದೆ.

ಮೊದಲು ಎಲ್‌ಪಿಜಿ ಅಭಾವದ ಕಾರಣ ತಿನಿಸುಗಳ ಬೆಲೆ ಏರಿಕೆ ಮಾಡಿದ್ದ ಹೋಟೆಲ್‌ಗಳು ಇದೀಗ ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆ ಪರಿಣಾಮ ಖಾದ್ಯಗಳ ದರವನ್ನು ಜಾಸ್ತಿ ಮಾಡಿವೆ. ಕಾಫಿ ಮತ್ತು ತಿಂಡಿಯ ದರವನ್ನು ₹3ರಿಂದ ₹5 ಏರಿಸಿವೆ. ಇಡ್ಲಿ ₹20ರಿಂದ ₹40ರವರೆಗೂ ಏರಿಕೆಯಾಗಿದೆ. ಊಟದ ದರವನ್ನು ₹10ರಿಂದ ₹20 ರವರೆಗೆ ಹೆಚ್ಚಿಸಲಾಗಿದೆ. ಎರಡು ಪೂರಿ ₹100, ಪುಳಿಯೋಗರೆ ₹80, ಎರಡು ಚಪಾತಿಗೆ ₹70 ಪಡೆಯಲಾಗುತ್ತಿದೆ.

ಮಸಾಲೆ ದೋಸೆ ದರ ₹100 ತಲುಪಿದೆ. ಕಾಫಿ, ಟೀಗೆ ಕೆಲವೆಡೆ ₹15 ರಿಂದ ₹18, ಮತ್ತೆ ಕೆಲವೆಡೆ 20 ರವರೆಗೂ ಹೆಚ್ಚಿಸಲಾಗಿದೆ. ದರ್ಶನಿ, ಫಾಸ್ಟ್‌ಫುಡ್‌ಗಳಲ್ಲಿ ಊಟವನ್ನು ₹90ಕ್ಕೆ ಏರಿಕೆ ಮಾಡಲಾಗಿದೆ.

ಅಲ್ಲದೇ ಮಾಂಸಾಹಾರ ಖಾದ್ಯಗಳ ದರದಲ್ಲೂ ಏರಿಕೆಯಾಗಿದ್ದು, ಚಿಕನ್ ಬಿರಿಯಾನಿ ದರವು ಬೀದಿಬದಿ ಹೋಟೆಲ್‌ಗಳಲ್ಲಿ ₹130 ರಿಂದ ₹150ಕ್ಕೆ ಹೆಚ್ಚಿಸಲಾಗಿದೆ. ಪಾರ್ಸೆಲ್ ಪ್ರತಿ ಐಟಂಗೆ ₹10ಕ್ಕೆ ಏರಿಕೆಯಾಗಿದೆ.

ಹವಾ ನಿಯಂತ್ರಿತ ಸೌಲಭ್ಯ ಹೊಂದಿರುವ ಹೋಟೆಲ್‌ಗಳು ಕಾಫಿ, ಟೀ ದರವನ್ನು ₹10 ಹಾಗೂ ಊಟ, ಉಪಾಹಾರದ ಮೇಲೆ ₹20ರಿಂದ ₹30 ಹೆಚ್ಚಳ ಮಾಡಿವೆ. ಮಧ್ಯಮ ಪ್ರಮಾಣದ ಕೆಲ ಹೋಟೆಲ್‌ಗಳು ಗ್ರಾಹಕರ ಸಂಖ್ಯೆಯಲ್ಲಿ ಇಳಿಕೆಯಾಗುವ ಭಯದಿಂದ ದರ ಹೆಚ್ಚಳಕ್ಕೆ ಹಿಂದೇಟು ಹಾಕುತ್ತಿವೆ.

'ಪಶ್ಚಿಮ ಏಷ್ಯಾ ಬಿಕ್ಕಟ್ಟು ಆರಂಭವಾದಾಗಿನಿಂದ ಹೋಟೆಲ್ ಉದ್ಯಮ ಸಂಕಷ್ಟದಲ್ಲಿದೆ. ಇದನ್ನೇ ನಂಬಿಕೊಂಡು ನಿತ್ಯ ಲಕ್ಷಾಂತರ ಗ್ರಾಹಕರು ನಗರದಲ್ಲಿ ಜೀವನ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರ ಸಿಲಿಂಡರ್ ದರವನ್ನು ಇಷ್ಟೊಂದು ಪ್ರಮಾಣದಲ್ಲಿ ಹೆಚ್ಚಿಸುವ ಬದಲು ಗ್ರಾಹಕರು, ಹೋಟೆಲ್ ಉದ್ಯಮವನ್ನು ಗಮನದಲ್ಲಿಟ್ಟುಕೊಂಡು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸಬೇಕಿತ್ತು. ಅಗತ್ಯವಿರುವಷ್ಟು ಸಿಲಿಂಡರ್ ಸಿಗುತ್ತಿಲ್ಲ. ಇದರಿಂದಾಗಿ ಅನಿವಾರ್ಯವಾಗಿ ಕಾಳಸಂತೆಯಲ್ಲಿ ಸಿಲಿಂಡರ್‌ಗೆ ₹5 ಸಾವಿರ ಕೊಟ್ಟು ಖರೀದಿಸಬೇಕಿದೆ' ಎನ್ನುತ್ತಾರೆ ಹೋಟೆಲ್ ಮಾಲೀಕರು.

'ಸಣ್ಣ ಹೋಟೆಲ್‌ಗಳು ಮತ್ತು ಬೀದಿ ಬದಿಯ ವ್ಯಾಪಾರಿಗಳು ನಷ್ಟ ಅನುಭವಿಸುತ್ತಿದ್ದು, ಮುಚ್ಚುವ ಭೀತಿಯಲ್ಲಿದ್ದಾರೆ. ಆಹಾರದ ದರಗಳು ಹೆಚ್ಚಾಗುವುದರಿಂದ ಪ್ರವಾಸಿಗರಿಗೂ ಹೊರೆಯಾಗಲಿದೆ ಮತ್ತು ವ್ಯಾಪಾರ ಕುಂಠಿತ ಗೊಳ್ಳಲಿದೆ. ಇದೇ ರೀತಿ ಸಿಲಿಂಡರ್ ದರ ಹೆಚ್ಚಳವಾದರೆ ಹೋಟೆಲ್ ನಡೆಸುವುದು ಹೇಗೆ' ಎಂದು ಫಾಸ್ಟ್‌ಫುಡ್ ವ್ಯಾಪಾರಿ ರಮೇಶ್ ಬೇಸರ ವ್ಯಕ್ತಪಡಿಸಿದರು.

> **ವಾಣಿಜ್ಯ ಬಳಕೆಯ 19 ಕೆ.ಜಿ. ಸಿಲಿಂಡರ್ ಮೇಲಿನ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ)ಯನ್ನು ಶೇಕಡ 18 ರಿಂದ ಶೇಕಡ 5ಕ್ಕೆ ಇಳಿಸುವ ಮೂಲಕ ಹೋಟೆಲ್ ಉದ್ಯಮ ರಕ್ಷಿಸಬೇಕು**
> **ಜಿ.ಕೆ.ಶೆಟ್ಟಿ,** ರಾಜ್ಯ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ

> **ಸಿಲಿಂಡರ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಸೇರಿ ಹಲವು ಕಾರಣಗಳಿಂದ ಹೋಟೆಲ್ ಉದ್ಯಮಕ್ಕೆ ತೀವ್ರ ಸವಾಲು ಎದುರಾಗಿದೆ. ಆಹಾರ ಬೆಲೆ ಏರಿಕೆ ಅನಿವಾರ್ಯವಾಗಿದೆ**
> **ನಾಗೇಶ್,** ಹೋಟೆಲ್ ಮಾಲೀಕ

ನಗರದ ನೃಪತುಂಗ ರಸ್ತೆಯಲ್ಲಿರುವ ನಿಸರ್ಗ ಹೋಟೆಲ್‌ನಲ್ಲಿ ಗ್ರಾಹಕರು ಆಹಾರ ಸೇವಿಸಿದರು —ಚಿತ್ರ: ಪ್ರಶಾಂತ್ ಎಚ್‌.ಜಿ.

ಹೋಟೆಲ್ ನಡೆಸುವುದೇ ಕಷ್ಟ..

'ಮೊದಲು ಯುದ್ಧದ ನೆಪ ಹೇಳಿ ಸಿಲಿಂಡರ್ ದರ ಹೆಚ್ಚಳ ಮಾಡಲಾಯಿತು. ಈಗ ಯಾವ ಕಾರಣಕ್ಕೆ ಹೆಚ್ಚಿಸಲಾಗಿದೆ. ಚುನಾವಣೆಗೂ ಮುನ್ನ ಸಿಲಿಂಡರ್ ದರ ಹೆಚ್ಚಳ ಮಾಡುವುದಿಲ್ಲ ಎಂದು ಹೇಳಿದ್ದ ಕೇಂದ್ರ ಸರ್ಕಾರ, ಪಂಚ ರಾಜ್ಯಗಳ ಚುನಾವಣೆ ಮುಗಿಯುತ್ತಿದ್ದಂತೆ ದಿಢೀರ್ ₹993 ಹೆಚ್ಚಳ ಮಾಡಿದೆ. ಈ ರೀತಿಯಾದರೆ ಹೋಟೆಲ್ ನಡೆಸುವುದು ಕಷ್ಟವಾಗುತ್ತದೆ. ವಿದ್ಯುತ್ ಬಿಲ್, ಕಾರ್ಮಿಕರ ಸಂಬಳ, ಬಾಡಿಗೆಗೆ ಸಾಕಷ್ಟು ಖರ್ಚಾಗುತ್ತದೆ' ಎಂದು ಮಹಾಲಕ್ಷ್ಮೀ ದರ್ಶಿನಿ ಮಾಲೀಕ ಕೃಷ್ಣ ಅಳಲು ತೋಡಿಕೊಂಡರು.

AMITY UNIVERSITY BENGALURU

MBA

Future Leaders Meet Here

THE AMITY BENGALURU ADVANTAGE

- **Several marquee companies** visited the campus for placements, including Capgemini, SBI Mutual Fund, Sheenlac Paints, Axis Bank, ICICI Lombard, Jio BP, Café Coffee Day, Policy Bazaar, Mojo Hunt, Magic Pin…
- **CEO Dinner Series,** Conversation Programs, Industry Mentorship & Foreign Languages
- **3-Tier Mentorship Model** including Corporate Leaders, Alumni & Faculty
- **Extensive SBW (Skill Building Workshops),** ICT enabled PPM (Pre-Placement Mock Sessions), Student Centric PMM (Profile Mapping Matrix)...
- **Optional Study Abroad Program** at Amity Campuses in New York, London, Singapore & Dubai
- **Amity Innovation Incubator** has incubated several student start-ups at Amity Bengaluru
- **Career networking opportunities** with 7,00,000+ well-heeled alumni

MANAGEMENT
- **MBA (Specialisations offered) -** Marketing & Sales / Finance / Business Analytics / HR
- **MBA (Standalone progs)**
  - Business Analytics and AI
  - Real Estate & Urban Infrastructure
  - Construction Project Mgmt
- **BBA (Specialisations offered) -** Artificial Intelligence / Business Analytics / Digital Mktg & Analytics / Financial Services & Financial Technology / Logistics & Supply Chain Mgmt / Family Business & Entrep
- **BBA** - Real Estate & Urban Infra

COMMERCE
- **B.Com** (Hons)

To apply visit:
amity.edu/bengaluru
by: 9th May 2026
7303-399-000

Amity University Bengaluru, NH 648, Devanahalli–Doddaballapur Rd, Bengaluru | **E:** admissions.blr@amity.edu

ವಿಶೇಷ ಭತ್ಯೆ ಸ್ಥಗಿತ: ಪ್ರತಿಭಟನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಭತ್ಯೆ (ನಾನ್ ಪ್ರಾಕ್ಟಿಸಿಂಗ್ ಅಲೋವೆನ್ಸ್) ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ (ಕೆವಿಎಎಫ್‌ಎಸ್‌ಯು) ಶಿಕ್ಷಕರ ಸಂಘ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ವಿಶೇಷ ಭತ್ಯೆಯು 7ನೇ ವೇತನ ಆಯೋಗ, ಐಸಿಎಆರ್ ಮತ್ತು ಯುಜಿಸಿ ಮಾರ್ಗಸೂಚಿಗಳ ಅನ್ವಯ 2019ರಿಂದ ಜಾರಿಯಲ್ಲಿದೆ. ಸರ್ಕಾರದ ವಿವಿಧ ಇಲಾಖೆಗಳ ಅನುಮೋದನೆಯೊಂದಿಗೆ ಇದನ್ನು ಜಾರಿಗೆ ತರಲಾಗಿದೆ. ಭತ್ಯೆ ಸ್ಥಗಿತಗೊಳಿಸಿರುವುದು ಬೋಧಕ ವರ್ಗದ ಆರ್ಥಿಕ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಸಂಘ ಆಕ್ಷೇಪ ವ್ಯಕ್ತಪಡಿಸಿದೆ.

ಪಶುವೈದ್ಯಕೀಯ ಶಿಕ್ಷಕರು ಖಾಸಗಿ ವೃತ್ತಿಯಿಂದ ದೂರವಿದ್ದು, ಕೇವಲ ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಈ ಭತ್ಯೆ ಅತ್ಯಗತ್ಯವಾಗಿದೆ. ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಬೋಧಕರ ಕೊರತೆಯಿದ್ದು, ಈ ಭತ್ಯೆ ಸ್ಥಗಿತಗೊಂಡಿರುವುದರಿಂದ ಭವಿಷ್ಯದಲ್ಲಿ ಪ್ರತಿಭಾವಂತರು ಈ ಕ್ಷೇತ್ರಕ್ಕೆ ಬರಲು ಹಿಂದೇಟು ಹಾಕಬಹುದು. ಹಾಗಾಗಿ, ಏಪ್ರಿಲ್ 21ರ ಆದೇಶ ಹಿಂಪಡೆದು, ಬಾಕಿ ಇರುವ ಎರಡು ತಿಂಗಳ ವೇತನವನ್ನು ತಕ್ಷಣವೇ ಪಾವತಿಸದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘ ಎಚ್ಚರಿಕೆ ನೀಡಿದೆ.

ಯಲಹಂಕ: ಕರಗ ಮಹೋತ್ಸವಕ್ಕೆ ಚಾಲನೆ

ಯಲಹಂಕ: ತಾಲ್ಲೂಕಿನ ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವಕ್ಕೆ ಹಸಿ ಕರಗ ನೆರವೇರಿಸುವ ಮೂಲಕ ಭಾನುವಾರ ಚಾಲನೆ ದೊರೆತಿದೆ.

ಮಂಗಳವಾರ ರಾತ್ರಿ 10 ಗಂಟೆಗೆ ನೂರಾರು ಮಹಿಳೆಯರು ಮಹೇಶ್ವರಮ್ಮನವರ ದೇವಾಲಯಕ್ಕೆ ಆಗಮಿಸಿ, ದೇವಿಗೆ ವಿಶೇಷ ಆರತಿ ಬೆಳಗಿದ ನಂತರ ಅಗ್ನಿಕುಂಡ ತುಳಿಯುವ ಕಾರ್ಯ ನೆರವೇರಲಿದೆ. 'ಬುಧವಾರ ಮಧ್ಯರಾತ್ರಿ ಮಹೇಶ್ವರಮ್ಮನವರ ಕರಗ ಮಹೋತ್ಸವ, ಸುತ್ತಮುತ್ತಲ ಗ್ರಾಮಗಳ 24 ದೇವರ ಹೂವಿನ ಪಲ್ಲಕ್ಕಿ ಉತ್ಸವ ನಡೆಯಲಿದೆ' ಎಂದು ರಾಜ್ಯ ತಿಗಳರ(ವಹ್ನಿಕುಲ ಕ್ಷತ್ರಿಯ)ಸಂಘದ ಅಧ್ಯಕ್ಷ ಮು.ಕೃಷ್ಣಮೂರ್ತಿ ತಿಳಿಸಿದ್ದಾರೆ.

ಬೆಂಗಳೂರು–ಸಿಂಧನೂರು ಎಕ್ಸ್‌ಪ್ರೆಸ್ ವೇಳಾಪಟ್ಟಿ ಪರಿಷ್ಕರಣೆ

ಬೆಂಗಳೂರು: ಕಾರ್ಯಾಚರಣೆಯ ವೇಗವನ್ನು ಸುಧಾರಿಸಲು ಮತ್ತು ಪ್ರಯಾಣಿಕರ ಅನುಕೂಲಕ್ಕಾಗಿ ನೈರುತ್ಯ ರೈಲ್ವೆಯು ಕೆಎಸ್‌ಆರ್ ಬೆಂಗಳೂರು–ಸಿಂಧನೂರು ಡೈಲಿ ಎಕ್ಸ್‌ಪ್ರೆಸ್ ರೈಲಿನ ವೇಳಾಪಟ್ಟಿಯನ್ನು ಜೂನ್ 20ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿದೆ.

ಈ ರೈಲು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಮಧ್ಯರಾತ್ರಿ 12.15ರ ಬದಲಾಗಿ ರಾತ್ರಿ 11.40ಕ್ಕೆ ಹೊರಡಲಿದೆ. ಈ ಪರಿಷ್ಕರಣೆಯ ಕಾರಣದಿಂದಾಗಿ ಜೂನ್ 19ರಂದು ವಿಶೇಷವಾಗಿ ಎರಡು ರೈಲುಗಳು ಸಂಚರಿಸಲಿವೆ. ಹೊಸ ವೇಳಾಪಟ್ಟಿಯಂತೆ 11.40ಕ್ಕೆ ಒಂದು ರೈಲು, ಹಳೇ ವೇಳಾಪಟ್ಟಿಯ ಕೊನೇ ರೈಲು ರಾತ್ರಿ 12.15ಕ್ಕೆ ಹೊರಡಲಿದೆ. ಜೂನ್ 20ರಿಂದ ಒಂದು ರೈಲು ಮಾತ್ರ ಸಂಚರಿಸಲಿದೆ.

ರೈಲು ಮಲ್ಲೇಶ್ವರ ನಿಲ್ದಾಣಕ್ಕೆ ರಾತ್ರಿ 12.20ರ ಬದಲು ರಾತ್ರಿ 11.46ಕ್ಕೆ, ಯಶವಂತಪುರಕ್ಕೆ ರಾತ್ರಿ 12.26ರ ಬದಲಾಗಿ 11.52ಕ್ಕೆ, ಚಿಕ್ಕಬಾಣಾವರಕ್ಕೆ ರಾತ್ರಿ 12.37ರ ಬದಲಾಗಿ 12.04ಕ್ಕೆ ದೊಡ್ಡಬೆಲೆಗೆ 12.54ರ ಬದಲಾಗಿ 12.21ಕ್ಕೆ ಕ್ಯಾತಸಂದ್ರಕ್ಕೆ ರಾತ್ರಿ 1.14ರ ಬದಲಾಗಿ 12.41ಕ್ಕೆ, ತುಮಕೂರಿಗೆ ರಾತ್ರಿ 1.22 ಬದಲಾಗಿ 12.48ಕ್ಕೆ ಮತ್ತು ಗುಬ್ಬಿ ನಿಲ್ದಾಣಕ್ಕೆ ರಾತ್ರಿ 1.37ರ ಬದಲು 1.03ಕ್ಕೆ ತಲುಪಿ ನಿರ್ಗಮಿಸಲಿದೆ. ಉಳಿದ ನಿಲ್ದಾಣಗಳ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

'ತಾಂತ್ರಿಕ ಜಗತ್ತಿನಲ್ಲಿ ಸಂಸ್ಕೃತ ಚಳವಳಿ ಅನಿವಾರ್ಯ'

ಬೆಂಗಳೂರು: 'ಪಾಶ್ಚಿಮಾತ್ಯ ಜಗತ್ತಿನ ಪ್ರಭಾವವನ್ನು ತಿರಸ್ಕರಿಸಬೇಕು. ನಮ್ಮ ಪೂರ್ವಜರ ಸಂಸ್ಕೃತಿ ಆಸ್ತಿಯನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು' ಎಂದು ಎಸ್. ವ್ಯಾಸ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿ ಸದಸ್ಯ ಅರವಿಂದ್ ಚಿಂಜೇರಿ ಹೇಳಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಬೆಂಗಳೂರು ನಗರದ ಘಟಕ ಆಯೋಜಿಸಿದ್ದ 13ನೇ ಆವೃತ್ತಿಯ ಬೆಂಗಳೂರು ವಿದ್ಯಾರ್ಥಿ ಸಂಸ್ಕೃತಿ ಚಳುವಳಿ- 2026ರನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಹುಮಾನ ವಿತರಣೆ: ಭಾಷಣ, ಭಾವಗೀತೆ, ಚಿತ್ರಕಲೆ ಮತ್ತು ರಿಲ್ಸ್ ತಯಾರಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಪ್ರಥಮ ₹5,000, ದ್ವಿತೀಯ ₹3,000 ಹಾಗೂ ತೃತೀಯ ₹1,000 ಬಹುಮಾನಗಳನ್ನು ನೀಡಲಾಯಿತು.

ಕೆ.ಆರ್. ಮಾರುಕಟ್ಟೆಯಿಂದ ಚಾಮರಾಜಪೇಟೆಗೆ ತೆರಳುವ ಮೇಲ್ಸೇತುವೆಯ ಪಕ್ಕದಲ್ಲಿ ಇರುವ ಸಿಮೆಂಟ್‌ನ ಗೋಡೆ ವಾಲಿಕೊಂಡಿದೆ

ಪ್ರಜಾವಾಣಿ

ಅಪಾಯದ ಸ್ಥಳಗಳಿವೆಯೇ?

96060 38256

ಮಳೆಯಿಂದ ಸಮಸ್ಯೆಯಾಗುವ ಪ್ರದೇಶಗಳು, ಶಿಥಿಲವಾದ ಗೋಡೆ, ಕಟ್ಟಡಗಳು ನಿಮ್ಮ ಸಮೀಪದ ಸ್ಥಳಗಳಲ್ಲಿ ಇದ್ದರೆ, ಯಾವುದಾದರೂ ಪ್ರದೇಶದಲ್ಲಿ ಮಳೆಯಿಂದ ಸಮಸ್ಯೆ ಆಗುತ್ತಿರುವ ಮಾಹಿತಿ ಇದ್ದರೆ, ಚಿತ್ರ ಸಹಿತ 'ಪ್ರಜಾವಾಣಿ'ಗೆ ಕಳುಹಿಸಿ ಕೊಡಿ.

ಕರ್ನಾಟಕ ಸರ್ಕಾರ
KARNATAKA BHOVI DEVELOPMENT CORPORATION

ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

"ಮಣ್ಣು ಹೊತ್ತು ದುಡಿಯುವ ಕೈ
ಮಹಾದೇವನ ಕೈಗಿಂತ ಕಡಿಮೆಯಲ್ಲ."

ನಾಡಿನ
ಸಮಸ್ತ ಜನತೆಗೆ
ಶ್ರೀ ಶಿವಯೋಗಿ
ಸಿದ್ದರಾಮೇಶ್ವರ
ಜಯಂತಿಯ ಶುಭಾಶಯಗಳು

ದಿನಾಂಕ 06-05-2026 ಬುಧವಾರ
ಬೆಳಿಗ್ಗೆ 10.30 ಗಂಟೆಗೆ

ಸ್ಥಳ : ಕರ್ನಾಟಕ ಕಲಾಮಂದಿರ,
ವಿನೋಬಾ ರಸ್ತೆ, ಮೈಸೂರು.

ಸರ್ವರಿಗೂ
ಆದರದ ಸುಸ್ವಾಗತ

ನಿಗಮದಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಯೋಜನೆಗಳ ವ್ಯಾಪಕ ಪ್ರಚಾರಕ್ಕಾಗಿ ಕ್ಯಾಲೆಂಡರ್‌ಅನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಬಿಡುಗಡೆಗೊಳಿಸುತ್ತಿರುವ ಸಂದರ್ಭದಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ರಾಮಪ್ಪ ಎಂ ರವರು ಉಪಸ್ಥಿತರಿದ್ದರು.

ಶ್ರೀ ರಾಮಪ್ಪ ಎಂ. M.A., B.Ed., Hon. Doc. (D.Lit)
ಮಾನ್ಯ ಅಧ್ಯಕ್ಷರು, (ರಾಜ್ಯ ಸಚಿವರ ಸ್ಥಾನಮಾನ)
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ರವರು ಸ್ವಾವಲಂಬಿ ಸಾರಥಿ ಯೋಜನೆಯಡಿ ಫಲಾನುಭವಿಗೆ ವಾಹನ ವಿತರಿಸುತ್ತಿರುವುದು.

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಬೆಂಗಳೂರು.

ಕಾರಾಗೃಹ: 'ಅಕ್ರಮ'ಕ್ಕಿಲ್ಲ ಕಡಿವಾಣ

ಸುಧಾರಣೆಗೆ ಉನ್ನತ ಮಟ್ಟದ ಸಮಿತಿ ವರದಿ ಸಲ್ಲಿಸಿದರೂ ಜಾರಿಯಾಗದ ಕ್ರಮ

● ಆದಿತ್ಯ ಕೆ.ಎ.

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸುಧಾರಣೆಗೆ ಕಾರಾಗೃಹ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಅಲ್ಲಿ ನಡೆಯುತ್ತಿರುವ 'ಅಕ್ರಮ'ಗಳಿಗೆ ಕಡಿವಾಣ ಬಿದ್ದಿಲ್ಲ.

ಕಾರಾಗೃಹದೊಳಗೆ ಡ್ರಗ್ಸ್ ಪೂರೈಕೆ, ಮೊಬೈಲ್ ಫೋನ್‌ಗಳನ್ನು ಕದ್ದುಮುಚ್ಚಿ ಸಾಗಣೆ ಮಾಡುತ್ತಿರುವ ಪ್ರಕರಣಗಳು ವರದಿ ಆಗುತ್ತಲೇ ಇವೆ. ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳು ಜೈಲಿನ ವಿವಿಧ ಬ್ಯಾರಕ್‌ಗಳಲ್ಲಿ ವಿಡಿಯೊ ಕರೆ ಮಾಡುತ್ತಿರುವ, ಜೈಲಿನ ಒಳಗಿಂದ ಹೊರಗಿದ್ದವರಿಗೆ ಬೆದರಿಕೆ ಹಾಕುವ, ಜೈಲಿನ ಸಿಬ್ಬಂದಿಗೆ ನಿಂದನೆಯಂತಹ ಪ್ರಕರಣಗಳು ಸಾಮಾನ್ಯವಾಗಿವೆ. ಕಳೆದ ಆರು ತಿಂಗಳಲ್ಲಿ ಪರಪ್ಪನ ಅಗ್ರಹಾರ ಜೈಲಿನ ಸಿಬ್ಬಂದಿ, ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳ ವಿರುದ್ಧ 44 ಪ್ರಕರಣಗಳು ದಾಖಲಾಗಿವೆ.

ಮೊಬೈಲ್ ಹಾಗೂ ಸಿಮ್ ಪೂರೈಸಿದ್ದವರ ವಿರುದ್ಧ 32, ಡ್ರಗ್ಸ್ ಪೂರೈಸಿದ್ದವರ ವಿರುದ್ಧ ನಾಲ್ಕು, ರೌಡಿಗಳ ನಡುವೆ ಜೈಲಿನ ಒಳಗೆ ಗಲಾಟೆ ನಡೆದ ಸಂಬಂಧ 3, ಜೈಲಿನ ಒಳಗೆ ಹಣ ಸಿಕ್ಕಿದ್ದ ಪ್ರಕರಣದಲ್ಲಿ ನಾಲ್ಕು ಹಾಗೂ ಪೆರೋಲ್ ಮೇಲೆ ಹೊರಬಂದು ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಮನೆಯಲ್ಲಿ ಕಳ್ಳತನ ಮಾಡಿ, ಮತ್ತೆ ಜೈಲು ಸೇರಿದ್ದ ವಿಚಾರವಾಗಿ ಪ್ರಕರಣಗಳು ದಾಖಲಾಗಿವೆ.

ಅತ್ಯಾಚಾರ, ಸರಣಿ ಕೊಲೆ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಕಳೆದ ನವೆಂಬರ್‌ನಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ, ಜೈಲಿನಲ್ಲಿ ವಿಚಾರಣಾ ಕೈದಿಗಳು ನೃತ್ಯ ಮಾಡುತ್ತಿರುವ ವಿಡಿಯೊವೊಂದು ಜಾಲತಾಣದಲ್ಲಿ ಹರಿದಾಡಿತ್ತು.

ಬ್ಯಾರಕ್‌ಗಳಲ್ಲಿ ನೃತ್ಯ ಮಾಡಲು ಅವಕಾಶ ಕಲ್ಪಿಸಿದ ಆರೋಪದ ಮೇಲೆ ಜೈಲಿನ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು. ಸೂಪರಿಂಟೆಂಡೆಂಟ್ ಅವರನ್ನು ಬೇರೆ ಜಿಲ್ಲೆಗೆ ಎತ್ತಂಗಡಿ ಮಾಡಲಾಗಿತ್ತು. ಈ ಪ್ರಕರಣವು ಸಾಕಷ್ಟು ಸದ್ದು ಮಾಡಿದ ನಂತರ ತನಿಖೆಗೆ ಕಾನೂನು ಸುವ್ಯವಸ್ಥೆಯ ಎಡಿಜಿಪಿ ಹಿತೇಂದ್ರ ಅವರ ನೇತೃತ್ವದ ಉನ್ನತಮಟ್ಟದ ಸಮಿತಿ ರಚಿಸಲಾಗಿತ್ತು.

ಸಮಿತಿ ತನಿಖೆ ನಡೆಸಿ, ಇತ್ತೀಚೆಗೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಕಾರಾಗೃಹದ ಸುಧಾರಣೆಗೆ ವರದಿಯಲ್ಲಿ ಇರುವ ಕೆಲವು ಅಂಶಗಳನ್ನು ಹಂತ ಹಂತವಾಗಿ ಜಾರಿಗೆ ತರಲಾಗುತ್ತಿದ್ದರೂ 'ಅಕ್ರಮ'ಗಳಿಗೆ ಪೂರ್ಣ ಪ್ರಮಾಣದಲ್ಲಿ ಕಡಿವಾಣ ಬಿದ್ದಿಲ್ಲ ಎಂಬ ಆರೋಪವಿದೆ.

70ಕ್ಕೂ ಅಧಿಕ ಮೊಬೈಲ್ ಪತ್ತೆ: ಜೈಲಿನ ಬ್ಯಾರಕ್‌ಗಳಲ್ಲಿ ಮೊಬೈಲ್ ಫೋನ್‌ಗಳು ಪತ್ತೆಯಾಗುವುದು ಸಾಮಾನ್ಯ ಸಂಗತಿಯಾಗಿದೆ. ಅಲೋಕ್‌ಕುಮಾರ್ ಅವರು ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ಡಿಜಿಪಿಯಾದ ಮೇಲೆ ನಿರಂತರ ಕಾರ್ಯಾಚರಣೆಗೆ ಸೂಚನೆ ನೀಡಿದ್ದಾರೆ. ಕಾರ್ಯಾಚರಣೆ ವೇಳೆ 70ಕ್ಕೂ ಹೆಚ್ಚು ಮೊಬೈಲ್ ಫೋನ್‌ಗಳು, ಚಾರ್ಜರ್‌ಗಳು, ನಗದು, ಸಿಗರೇಟ್ ಪ್ಯಾಕ್‌ಗಳು ಸಿಕ್ಕಿದ್ದವು. ಅದಾದ ಮೇಲೂ ಜೈಲಿಗೆ ಮೊಬೈಲ್ ಪೂರೈಕೆ ನಿಂತಿಲ್ಲ. ಜೈಲಿನ ಸಿಬ್ಬಂದಿ ಹಾಗೂ ಜೈಲಿನ ಒಳಗಿರುವ ಆಸ್ಪತ್ರೆಯ ಸಿಬ್ಬಂದಿಯೇ ಕೈದಿಗಳಿಗೆ ಮೊಬೈಲ್ ಪೂರೈಸುತ್ತಿದ್ದಾರೆ ಎಂಬ ಆರೋಪವಿದೆ.

'ಕೈದಿಗಳಿಗೆ ಸಿಗರೇಟ್ ಹಾಗೂ ಡ್ರಗ್ಸ್ ಪೂರೈಸುತ್ತಿದ್ದ ಪ್ರಕರಣದಲ್ಲಿ ಎರಡು ತಿಂಗಳ ಹಿಂದೆ ಜೈಲಿನ ಇಬ್ಬರು ವೀಕ್ಷಕರನ್ನು ಬಂಧಿಸಲಾಗಿತ್ತು. ಆ ಪ್ರಕರಣದ ತನಿಖೆ ಮುಂದುವರಿದಿದ್ದು, ಇನ್ನೂ ಕೆಲವರ ಪಾತ್ರವಿರುವುದು ಕಂಡುಬಂದಿದೆ. ಅವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಜೈಲಿನ ಮೂಲಗಳು ಹೇಳಿವೆ.

ವಿಡಿಯೊ ಕರೆ

ವಿಚಾರಣಾಧೀನ ಕೈದಿಯೊಬ್ಬ ಜೈಲಿನಲ್ಲಿದ್ದಾಗ ಪತ್ನಿಗೆ ವಿಡಿಯೊ ಕರೆ ಮಾಡಿ ಮಾತನಾಡಿರುವ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಕಳೆದ ವಾರವಷ್ಟೇ ಹರಿದಾಡಿತ್ತು.

'ಇನ್‌ಸ್ಟಾಗ್ರಾಂ ಖಾತೆಯಿಂದ ವಿಡಿಯೊ ಡಿಲೀಟ್ ಮಾಡಲಾಗಿದೆ. ಅದು ಪರಪ್ಪನ ಅಗ್ರಹಾರದಲ್ಲಿದ್ದ ಕೈದಿಯೇ ವಿಡಿಯೊ ಕರೆ ಮಾಡಿದ್ದು ಹೌದೊ ಅಲ್ಲವೇ ಎಂಬುದನ್ನು ಪರಿಶೀಲನೆ ನಡೆಸಲಾಗುತ್ತಿದೆ. ತನಿಖೆಗೆ ಸೂಚನೆ ನೀಡಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಬಟ್ಟೆಯಲ್ಲಿ ಬಚ್ಚಿಟ್ಟು ಡ್ರಗ್ಸ್ ಸಾಗಣೆ

ವಿಚಾರಣಾಧೀನ ಕೈದಿ ಪರ್ಹಾನ್ ಖಾನ್ ಎಂಬಾತನನ್ನು ಮಾರ್ಚ್ 26ರಂದು ಭೇಟಿಯಾಗಲು ಮಹಿಳೆ ಬಂದಿದ್ದರು. ಸಂದರ್ಶಕರ ಕೊಠಡಿ ಬಳಿ ಆಕೆಯನ್ನು ಕೈಗಾರಿಕಾ ಭದ್ರತಾ ಪಡೆಯ ಸಿಬ್ಬಂದಿ ತಪಾಸಣೆಗೆ ಒಳಪಡಿಸಿದಾಗ ಮಹಿಳೆ ಧರಿಸಿದ್ದ ಬಟ್ಟೆಯ ಒಳಗೆ ಡ್ರಗ್ಸ್ ಇರುವುದು ಪತ್ತೆ ಆಗಿತ್ತು. ಅಲ್ಲದೇ ಕವರ್‌ನಲ್ಲಿ ಮೂರು ಸಿಮ್ ಕಾರ್ಡ್ ಇರುವುದೂ ಕಂಡುಬಂದಿತ್ತು. ಅಷ್ಟಲ್ಲದೇ 6ನೇ ಬ್ಯಾರಕ್‌ನಲ್ಲಿ ದಿಢೀರ್ ದಾಳಿ ಮಾಡಿ, ಪರಿಶೀಲನೆ ನಡೆಸಿದಾಗ ಕೈದಿಗಳು ಶೌಚಗುಂಡಿಯಲ್ಲಿ ಮೊಬೈಲ್‌ಗಳನ್ನು ಬಚ್ಚಿಟ್ಟಿರುವುದೂ ಪತ್ತೆಯಾಗಿತ್ತು. ಹೀಗೆ ಸಾಲು ಸಾಲು ಅಕ್ರಮಗಳು ಪತ್ತೆ ಆಗುತ್ತಲೇ ಇವೆ.

ಎಂಜಿನಿಯರಿಂಗ್ ಕಾಲೇಜು, ಇಲಾಖೆ ನಡುವೆ ಒಪ್ಪಂದ

ಕೈದಿಗಳಿಗೆ ವಿವಿಧ ಮಾದರಿಯ ತರಬೇತಿ ನೀಡಲು ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆ ಹಾಗೂ ಆರ್.ವಿ. ಕಾಲೇಜು ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಸನ್ನಡತೆ ಅಥವಾ ಶಿಕ್ಷೆಯ ಅವಧಿ ಮುಕ್ತಾಯವಾದ ಮೇಲೆ ಜೈಲಿನಿಂದ ಬಿಡುಗಡೆ ಆದವರು ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಬೇಕೆಂಬ ನಿಟ್ಟಿನಲ್ಲಿ ಜೈಲಿನಲ್ಲಿ ಇದ್ದವರಿಗೆ ತರಬೇತಿ ನೀಡಲಾಗುವುದು. ಡಿಜಿಟಲ್ ಸಾಕ್ಷರತೆ, ತಂತ್ರಜ್ಞಾನ ಆಧಾರಿತ ತರಬೇತಿ ನೀಡಲಾಗುವುದು. ಈ ತರಬೇತಿಯ ಮೂಲಕ ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಜೈಲಿನ ಮೂಲಗಳು ತಿಳಿಸಿವೆ.

ಅಪರಾಧ ಕೃತ್ಯದಲ್ಲಿ ಭಾಗಿಯಾಗಿ ಕೆಲವರು ಶಿಕ್ಷೆ ಅನುಭವಿಸುತ್ತಿದ್ದರೂ, ಜೈಲಿನ ಒಳಗೂ ಅಕ್ರಮ ನಡೆಸುವುದನ್ನು ಬಿಟ್ಟಿಲ್ಲ. ಅಂತಹವರನ್ನು ಉತ್ತಮ ದಾರಿಗೆ ತರುವ ನಿಟ್ಟಿನಲ್ಲೂ ಈ ತರಬೇತಿ ಆರಂಭಿಸಲಾಗಿದೆ ಎಂದು ಹೇಳಿವೆ. ಇಲಾಖೆಯ ಡಿ.ಜಿ ಅಲೋಕ್ ಕುಮಾರ್ ಹಾಗೂ ಆರ್.ವಿ ಕಾಲೇಜು ಪ್ರಾಂಶುಪಾಲ ಕೆ.ಎನ್.ಸುಬ್ರಹ್ಮಣ್ಯ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ದ್ವಿಚಕ್ರ ವಾಹನ ಸವಾರ ಸೆರೆ, ಪ್ರಕರಣ ದಾಖಲು

ಬಸ್ ನಿರ್ವಾಹಕಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್ ನಿರ್ವಾಹಕಿಯ ಮೇಲೆ ಹಲ್ಲೆ ನಡೆಸಿದ್ದ ದ್ವಿಚಕ್ರ ವಾಹನ ಸವಾರನನ್ನು ಕೆಂಗೇರಿ ಠಾಣೆಯ ಪೊಲೀಸರು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಕುಮಾರ್ (38) ಹಲ್ಲೆ ನಡೆಸಿದ ಆರೋಪಿ. ಆರ್.ಆರ್ ನಗರ ಬಿಎಂಟಿಸಿ ಘಟಕ–21ರ ನಿರ್ವಾಹಕಿ ಮಂಗಳಾ ಅವರ ಮೇಲೆ ಆರೋಪಿ ಹಲ್ಲೆ ನಡೆಸಿದ್ದ. ನಿರ್ವಾಹಕಿ ನೀಡಿದ ದೂರಿನ ಮೇರೆಗೆ ಬಿಎಂಟಿಸಿ ಬಸ್‌ನಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಭಾನುವಾರ ಸಂಜೆ 5.30ರ ಸುಮಾರಿಗೆ ಘಟನೆ ನಡೆದಿದೆ.

ಬಾಪೂಜಿನಗರದ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಪ್ರಯಾಣಿಕರನ್ನು ಹತ್ತಿಸಿಕೊಂಡು ಮೈಸೂರು ರಸ್ತೆಯಲ್ಲಿ ಬಿಎಂಟಿಸಿ ಬಸ್ ಸಾಗುತ್ತಿತ್ತು. ಮಾರ್ಗದ ಮಧ್ಯೆ, ಕೆಂಗೇರಿಯ ಪೆಟ್ರೋಲ್ ಬಂಕ್ ಬಳಿ ವಾಹನ ದಟ್ಟಣೆ ಉಂಟಾಗಿತ್ತು. ಸಾಲುಗಟ್ಟಿ ವಾಹನಗಳು ನಿಂತಿದ್ದವು. ಅದೇ ವೇಳೆ ಆಂಬುಲೆನ್ಸ್‌ವೊಂದು ವಾಹನ ದಟ್ಟಣೆಯ ನಡುವೆ ಸಿಲುಕಿ ಮುಂದಕ್ಕೆ ಚಲಿಸಲು ಸಾಧ್ಯವಾಗುತ್ತಿರಲಿಲ್ಲ. ಈ ನಡುವೆ ದ್ವಿಚಕ್ರ ವಾಹನ ಸವಾರ ಕುಮಾರ್, ಬಿಎಂಟಿಸಿ ಬಸ್ ಹತ್ತಿ ಗಲಾಟೆ ಆರಂಭಿಸಿದ್ದ. ಬಸ್‌ನಿಂದ ಇಳಿಯುವಂತೆ ಮಂಗಳಾ ಸೂಚನೆ ನೀಡಿದ್ದರು. ಅದರಿಂದ ಕೋಪಗೊಂಡಿದ್ದ ಆರೋಪಿ, ನಿರ್ವಾಹಕಿಯ ಮೇಲೆ ಹಲ್ಲೆ ನಡೆಸಿದ್ದ. ಮಂಗಳಾ ತಲೆಗೆ ಗಾಯವಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಮನೆಗೆ ತೆರಳಿದ್ದಾರೆ ಎಂದು ಪೊಲೀಸರು ಹೇಳಿದರು.

ಬಿಯರ್ ಬಾಟಲಿಯಿಂದ ಚುಚ್ಚಿ ಕೊಲೆ

ಬೆಂಗಳೂರು: ಬಾರ್‌ವೊಂದರಲ್ಲಿ ಯುವಕರ ಮಧ್ಯೆ ನಡೆಯುತ್ತಿದ್ದ ಗಲಾಟೆ ಬಿಡಿಸಲು ತೆರಳಿದ್ದ ವ್ಯಕ್ತಿಗೆ ಬಿಯರ್ ಬಾಟಲಿಯಿಂದ ಚುಚ್ಚಿ ಕೊಲೆ ಮಾಡಿರುವ ಘಟನೆ ಆರ್.ಟಿ.ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಭುವನೇಶ್ವರಿನಗರ ನಿವಾಸಿ ಪುಟ್ಟಸ್ವಾಮಿ (45) ಕೊಲೆ ಆದವರು. ಚಾಮುಂಡಿನಗರದ ಬಾರ್‌ವೊಂದರಲ್ಲಿ ಭಾನುವಾರ ರಾತ್ರಿ ಈ ಘಟನೆ ನಡೆದಿದೆ.

ಕೃತ್ಯ ಎಸಗಿದ ಆರೋಪದಡಿ ನಾಲ್ವರು ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪುಟ್ಟಸ್ವಾಮಿ ಅವರು ಭುವನೇಶ್ವರಿ ನಗರದಲ್ಲಿ ಅಣ್ಣ ಮಹಾದೇವ ಜತೆಗೆ ವಾಸವಾಗಿದ್ದರು. ಮಹಾದೇವ ನಡೆಸುತ್ತಿದ್ದ ಹೋಟೆಲ್‌ನಲ್ಲೇ ಪುಟ್ಟಸ್ವಾಮಿ ಕೆಲಸ ಮಾಡುತ್ತಿದ್ದರು. ಮದ್ಯ ಸೇವಿಸಲು ಚಾಮುಂಡಿ ನಗರದ ಬಾರ್‌ವೊಂದಕ್ಕೆ ಭಾನುವಾರ ಹೋಗಿದ್ದರು.

ಪುಟ್ಟಸ್ವಾಮಿ ಕುಳಿತಿದ್ದ ಟೇಬಲ್ ಎದುರೇ ನಾಲ್ವರು ಕುಳಿತು ಮದ್ಯ ಸೇವಿಸುತ್ತಿದ್ದರು. ಅವರ ನಡುವೆಯೇ ಮಾತಿಗೆ ಮಾತು ಬೆಳೆದು ನಾಲ್ವರು ಹೊಡೆದಾಟ ಮಾಡಿಕೊಳ್ಳುತ್ತಿದ್ದರು. ಪುಟ್ಟಸ್ವಾಮಿ ಗಲಾಟೆ ಬಿಡಿಸಲು ಮುಂದಾಗಿದ್ದರು. ಆಗ ಒಬ್ಬ ವ್ಯಕ್ತಿ, ಬಿಯರ್ ಬಾಟಲಿಯಿಂದ ಪುಟ್ಟಸ್ವಾಮಿಯ ಹೊಟ್ಟೆ ಹಾಗೂ ಕಾಲಿಗೆ ಚುಚ್ಚಿದ್ದ. ತೀವ್ರ ರಕ್ತಸ್ರಾವ ಉಂಟಾಗಿದ್ದರಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಸೋಮವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ವಶಕ್ಕೆ ಪಡೆದವರನ್ನು ವಿಚಾರಣೆ ನಡೆಸಲಾಗುತ್ತಿದೆ. ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮದ್ಯಪಾನ ಮಾಡಿ ವಾಹನ ಚಾಲನೆ: 633 ಪ್ರಕರಣ

ಬೆಂಗಳೂರು: ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು, ಒಟ್ಟು 633 ಪ್ರಕರಣ ದಾಖಲಿಸಿದ್ದಾರೆ.

ಏಪ್ರಿಲ್ 27ರಿಂದ ಮೇ 3ರ ವರೆಗೆ ನಗರದ 53 ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಈ ಅವಧಿಯಲ್ಲಿ 46,103 ವಾಹನಗಳನ್ನು ತಪಾಸಣೆ ಮಾಡಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು. ಅತಿವೇಗದಿಂದ ವಾಹನ ಚಾಲನೆ ಮಾಡುತ್ತಿದ್ದ 119 ಮಂದಿಯ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ₹1.19 ಲಕ್ಷ ದಂಡ ಸಂಗ್ರಹಿಸಲಾಗಿದೆ.

ಕರಗ ಉತ್ಸವ

ಕಲಾಸಿಪಾಳ್ಯದ ಧರ್ಮರಾಯ ಸ್ವಾಮಿ ಪೆರುಮಾಳ್ ದೇವಸ್ಥಾನ ಟ್ರಸ್ಟ್ ವತಿಯಿಂದ ಅಗ್ನಿಕುಂಡ ಹಾಗೂ ಕರಗ ಉತ್ಸವ ನಡೆಯಿತು

ವೇಶ್ಯಾವಾಟಿಕೆ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆಗೆ ಮನೆ ಪಡೆದು ವೇಶ್ಯಾವಾಟಿಕೆ ನಡೆಸುತ್ತಿದ್ದ ಇಬ್ಬರು ಮಹಿಳೆಯರೂ ಸೇರಿದಂತೆ ನಾಲ್ವರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ನಾಲ್ವರು ಮಹಿಳೆಯರನ್ನು ರಕ್ಷಿಸಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಸುಬ್ರಹ್ಮಣ್ಯಪುರ ಠಾಣೆಯ ಪದ್ಮನಾಭ ನಗರ, ಆರ್‌ಕೆ ಲೇಔಟ್ ಹಾಗೂ ಜಾಲಹಳ್ಳಿ ಠಾಣಾ ವ್ಯಾಪ್ತಿಯ ಪೂರ್ಣಪುರ, ಗೋಕುಲ, ಸುಂದರ ನಗರ ಹಾಗೂ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ಎನ್‌ಜಿಇಎಫ್ ಲೇಔಟ್ ಬಾಡಿಗೆ ಮನೆಗಳಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ವಶಕ್ಕೆ ಪಡೆದು ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಯಿತು. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ವೇಶ್ಯಾವಾಟಿಕೆ ದಂಧೆ ನಡೆಸುತ್ತಿರುವುದಾಗಿ ಹೇಳಿದ್ದಾರೆ. ಸುಬ್ರಹ್ಮಣ್ಯಪುರ, ಜಾಲಹಳ್ಳಿ ಹಾಗೂ ಜ್ಞಾನಭಾರತಿ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಪುತ್ರಿಗೆ ಲೈಂಗಿಕ ಕಿರುಕುಳ ನೀಡಿದ ವ್ಯಕ್ತಿಯನ್ನು ಕೊಲೆ ಮಾಡಿದ್ದ ಪ್ರಕರಣ

ಮೃತದೇಹ ಎಸೆದಿದ್ದ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಈರಯ್ಯ

ಚೇತನ್

ಚೆನ್ನಯ್ಯ

ವಿನಾಯಕ

ಬೆಂಗಳೂರು: ಪುತ್ರಿಗೆ ಲೈಂಗಿಕ ಕಿರುಕುಳ ನೀಡಿದ ವ್ಯಕ್ತಿಯನ್ನು ಕೊಲೆ ಮಾಡಿ ಮೃತದೇಹವನ್ನು ರಾಜಕಾಲುವೆಗೆ ಎಸೆದಿದ್ದ ತಂದೆ ಹಾಗೂ ಅವರ ಸಂಬಂಧಿಕರನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಚಿಮ್ಮಡ ಗ್ರಾಮದ ಈರಯ್ಯ ದುಂಡಯ್ಯ ಮಠಪತಿ (44), ಅದೇ ಜಿಲ್ಲೆಯ ಅಂತಾಪುರ ಗ್ರಾಮದ ಚೆನ್ನಯ್ಯ ಮಠಪತಿ (29), ಚೇತನ್ ಮಾದರ (26) ಹಾಗೂ ವಿನಾಯಕ ಗುರುವ (19) ಬಂಧಿತರು.

ಆರೋಪಿಗಳು ಏ.27ರಂದು ರಮೇಶ್ ಪಟ್ಟದಕಲ್ಲು(28) ಅವರನ್ನು ಕೊಲೆ ಮಾಡಿ ಮೃತದೇಹವನ್ನು ಎಸೆದು ಪರಾರಿ ಆಗಿದ್ದರು. ರಮೇಶ್ ಪಟ್ಟದಕಲ್ಲು ಅವರ ಸಂಬಂಧಿಕರು ನೀಡಿದ ದೂರಿನ ಮೇಲೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿ ಈರಯ್ಯ ದುಂಡಯ್ಯ ಮಠಪತಿಗೆ ಮಗಳಿದ್ದು, ಮುಧೋಳದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು. ಈರಯ್ಯ ಅವರ ಪುತ್ರಿಯನ್ನು ಮದುವೆ ಆಗುವಂತೆ ರಮೇಶ್ ಪಟ್ಟದಕಲ್ಲು ದುಂಬಾಲು ಬಿದ್ದಿದ್ದರು. ಆದರೆ, ಆಕೆ ನಿರಾಕರಿಸಿದ್ದಳು. ಅದರಿಂದ ಕೋಪಗೊಂಡಿದ್ದ ರಮೇಶ್ ಅಸಭ್ಯವಾಗಿ ವರ್ತಿಸಿದ್ದರು. ಹೀಗಾಗಿ ರಮೇಶ್ ವಿರುದ್ಧ 2020ರಲ್ಲಿ ಈರಯ್ಯ ದೂರು ನೀಡಿದ್ದರು. ದೂರಿನ ಮೇರೆಗೆ ಬಾಗಲಕೋಟೆ ಪೊಲೀಸರು ರಮೇಶನನ್ನು ಪೋಕ್ಸೊ ಪ್ರಕರಣದ ಅಡಿ ಜೈಲಿಗೆ ಕಳುಹಿಸಿದ್ದರು. ಜೈಲಿನಿಂದ ಹೊರಬಂದಿದ್ದ ರಮೇಶ್, ಮತ್ತೊಮ್ಮೆ ಯುವತಿಗೆ ಕಿರುಕುಳ ನೀಡಲು ಆರಂಭಿಸಿದ್ದರು ಎನ್ನಲಾಗಿದೆ. ಹೀಗಾಗಿ, 2024ರಲ್ಲಿ ಮತ್ತೆ ಆತನ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿತ್ತು. ಬಳಿಕವೂ ಜೈಲಿನಿಂದ ಬಿಡುಗಡೆಯಾಗಿದ್ದ ರಮೇಶ್, ಬೆಂಗಳೂರಿಗೆ ಬಂದು ಸ್ವಿಗ್ಗಿ, ಜೊಮ್ಯಾಟೊದಲ್ಲಿ ಆಹಾರ ಪದಾರ್ಥಗಳ ಡೆಲಿವರಿ ಬಾಯ್ ಆಗಿ ಕೆಲಸ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

ಮದ್ಯ ಸೇವಿಸಲು ಕರೆದೊಯ್ದು ಕೊಲೆ: ಈ ನಡುವೆ ಈರಯ್ಯ ದುಂಡಯ್ಯ ಮಠಪತಿ, ಮಗಳನ್ನು ಬೆಂಗಳೂರಿನ ಕಾಲೇಜೊಂದಕ್ಕೆ ಸೇರಿಸಿದ್ದರು. ಈ ವಿಷಯ ತಿಳಿದಿದ್ದ ರಮೇಶ್, ಆಕೆಯನ್ನು ಭೇಟಿ ಮಾಡಿದ್ದರು. ಅಲ್ಲದೇ ಕಿರುಕುಳ ಸಹ ನೀಡಿದ್ದರು ಎನ್ನಲಾಗಿದೆ. ವಿಷಯ ತಿಳಿದು ಈರಯ್ಯ ತನ್ನ ಸಂಬಂಧಿಕರನ್ನು ಬೆಂಗಳೂರಿಗೆ ಕರೆಸಿಕೊಂಡಿಸಿದ್ದರು ಎಂದು ಪೊಲೀಸರು ಹೇಳಿದರು.

ಏ.27ರಂದು, ರಮೇಶ್‌ನನ್ನು ಪತ್ತೆ ಹಚ್ಚಿ, 'ಊಟಕ್ಕೆ ಹೋಗೋಣ' ಎಂದು ತಮ್ಮ ಕಾರಿನಲ್ಲಿ ಬಾರ್‌ಗೆ ಕರೆದೊಯ್ದು ಕಂಠಪೂರ್ತಿ ಮದ್ಯ ಕುಡಿಸಿದ್ದರು. ಬಳಿಕ ಅಲ್ಲಾಳಸಂದ್ರದ ರಾಜಕಾಲುವೆ ಬಳಿ ಕರೆದೊಯ್ದು ಕುತ್ತಿಗೆ ಬಿಗಿದು ಕೊಲೆ ಮಾಡಿ ರಾಜಕಾಲುವೆಯಲ್ಲಿ ಮೃತದೇಹ ಎಸೆದು ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ಬಿಸಿಲ ಝಳಕ್ಕೆ ಉದುರುತ್ತಿವೆ ಮಾವಿನ ಕಾಯಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಬಿಸಿಲ ಝಳ ಹೆಚ್ಚಾದಂತೆ ನೆಲಮಂಗಲ ತಾಲ್ಲೂಕಿನ ಉದ್ದಕ್ಕೂ ಮಾವಿನ ಮರಗಳಲ್ಲಿ ಕಾಯಿಗಳು ಉದುರುತ್ತಿದ್ದು, ಫಸಲು ಕಡಿಮೆಯಾಗುವ ಆತಂಕ ರೈತರನ್ನು ಕಾಡುತ್ತಿದೆ.

ತಾಲ್ಲೂಕಿನಲ್ಲಿ 1,250 ಹೆಕ್ಟೇರ್ ಪ್ರದೇಶದಲ್ಲಿ ಮಾವಿನ ಮರಗಳಿವೆ. ಈ ಬಾರಿ ಉತ್ತಮ ಹೂ ಬಿಟ್ಟು 6,500 ಟನ್ ಮಾವಿನ ನಿರೀಕ್ಷೆ ಇತ್ತು. ಬಿಸಿಲ ತಾಪ ಹೆಚ್ಚಾದ್ದರಿಂದ ಕಾಯಿಗಳು ಉದುರಲು ಆರಂಭಿಸಿವೆ. ಈ ವರ್ಷ ಬಿಸಿಲ ತಾಪ ಅಧಿಕವಾಗಿದ್ದು, ಕಾಯಿಗಳು ಬತ್ತಿ ನೆಲಕ್ಕೆ ಉದುರುತ್ತೀವಿ ಎಂದು ರೈತ ತ್ಯಾಗರಾಜು ಕಳವಳ ವ್ಯಕ್ತಪಡಿಸಿದರು.

ಐದಾರು ತಿಂಗಳಿನಿಂದ ಮಳೆ ಇಲ್ಲದೆ ಬಿರು ಬಿಸಿಲಿನಿಂದ ಮಾವಿನ ಕಾಯಿ ಸಣ್ಣದಾಗಿವೆ. ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಸಿಗುತ್ತದೋ ಇಲ್ಲವೋ ಎಂಬ ಆತಂಕವಿದೆ ಎಂದು ಮಾವಿನ ಬೆಳೆಗಾರ ರಾಮಯ್ಯ ಹೇಳಿದರು.

'ವಾರ್ಷಿಕ ಆದಾಯದ ಮೂಲವಾಗಿದ್ದ ಮಾವಿನ ಬೆಳೆ ಬಿಸಿಲಿಗೆ ನೆಲಕ್ಕೆ ಬೀಳುತ್ತಿದ್ದು, ತೋಟದ ಫಸಲಿನ ಗುತ್ತಿಗೆ ವಹಿಸಿಕೊಂಡಿದ್ದ ವ್ಯಾಪಾರಸ್ಥರು ಫಸಲು ಕಡಿಮೆ, ಕಾಯಿ ಸಣ್ಣ ಎಂಬ ಕಾರಣಕ್ಕಾಗಿ ವ್ಯಾಪಾರ ಆದ ಬೆಲೆ ಕೊಡಲು ಹಿಂದೆ ಮುಂದೆ ನೋಡುತ್ತಿದ್ದಾರೆ' ಎಂದು ರೈತ ಮಂಜುನಾಥ್ ಅಳಲು ತೋಡಿಕೊಂಡರು.

'ಮಾವಿನ ಬೆಳೆಗೆ 25ರಿಂದ 28 ಡಿಗ್ರಿ ತಾಪಮಾನ ಇದ್ದರೆ ಸೂಕ್ತ. ಆದರೆ ಈ ಬಾರಿ ತಾಲ್ಲೂಕಿನಲ್ಲಿ 32ರಿಂದ 35 ಡಿಗ್ರಿ ಮೇಲೆ ತಾಪಮಾನ ಇದೆ. ಇದು ಮಾವಿನ ಇಳುವರಿ ಮೇಲೆ ಪರಿಣಾಮ ಬೀರಿದೆ' ಎಂದು ತೋಟಗಾರಿಕಾ ಅಧಿಕಾರಿಗಳು ತಿಳಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನ ಆಯೋಜಿಸಿದ್ದ ಸಮಾರಂಭದಲ್ಲಿ ಸಾಹಿತಿ ಎಲ್.ವಿ. ಶಾಂತಕುಮಾರಿ ಅವರಿಗೆ 'ಡಾ. ವಿಜಯಾ ಸುಬ್ಬರಾಜ್ ಗಣ್ಯಲೇಖಕಿ ಪ್ರಶಸ್ತಿ' ಹಾಗೂ ಅಂಕಣಕಾರ ಎಸ್. ದಿವಾಕರ್ ಅವರಿಗೆ 'ಸೂ.ವೆಂ. ಆರಗ ವಿಮರ್ಶಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಚಂದ್ರಶೇಖರ ನಾದೂರ್, ಶಾಂತರಾಜು, ಆರ್. ಲಕ್ಷ್ಮೀನಾರಾಯಣ, ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಪಘಾತ: 15 ಮಂದಿಗೆ ಗಾಯ

ಶಿರಾ: ರಾಷ್ಟ್ರೀಯ ಹೆದ್ದಾರಿ 48ರ ಚಿಕ್ಕನಹಳ್ಳಿ ಸಮೀಪ ಸೋಮವಾರ ಮುಂಜಾನೆ ಕಂಟೈನರ್ ಲಾರಿಗೆ ಹಿಂದಿನಿಂದ ಖಾಸಗಿ ಬಸ್ ಡಿಕ್ಕಿ ಹೊಡೆದು 15 ಮಂದಿ ಗಾಯಗೊಂಡಿದ್ದಾರೆ. ದಾಂಡೇಲಿಯಿಂದ ಬೆಂಗಳೂರಿಗೆ ಹೋಗುತ್ತಿದ್ದ ಖಾಸಗಿ ಬಸ್ ಚಿಕ್ಕನಹಳ್ಳಿ ಗ್ರಾಮದ ಮೇಲುಸೇತುವೆಯಲ್ಲಿ ಮುಂದೆ ಹೋಗುತ್ತಿದ್ದ ಕಂಟೈನರ್ ಲಾರಿಗೆ ಹಿಂದಿನಿಂದ ವೇಗವಾಗಿ ಬಂದು ಚಾಲಕನ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಾಗ ಬಸ್ ಚಾಲಕ ಸೇರಿದಂತೆ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

CHANGE OF NAME
I, **UMANATHA** and **UMANATH SHETTY,** R/at No. 1/34, Hadimane, Vaddarse Village, Bannady Post, Brahmavara Taluk, Udupi Dist-576225, declare that the above names pertain to me only & henceforth I shall be known as **UMANATH SHETTY** vide affidavit dated 02-05-2026 before notary Amaranarayana Reddy, Anekal Bengaluru.

CHANGE OF NAME
I, **TOUHEEDULLAH MOHEMAD BAHADUR** (old name), residing at # 50/A, 9th Cross, HBR Layout 2nd Block, Kalyan Nagar, Bengaluru-560043, have changed my name to **TOUHEEDULLAH BAHADUR,** (New name), vide affidavit dated 2-4-2026 before XXXVIII Addi. Chief Judicial Magistrate, Bengaluru City. Henceforth I shall be called **TOUHEEDULLAH BAHADUR** only

CHANGE OF NAME
I, **SADIYA MOHAMMED YUSUF SHAIKH** (old name), residing at # 50/A, 9th Cross, HBR Layout 2nd Block, Kalyan Nagar, Bengaluru- 560043, have changed my name to **SADIYA SHAIKH** (New name), vide affidavit dated 27-04-2026 before XXXVIII Addi. Chief Judicial Magistrate, Bengaluru City. Henceforth I shall be called **SADIYA SHAIKH** only.

I, MEGHA SARTHAK ADAVI, presently residing at Flat F, 2nd Floor, Susheel Chandra Apartment, 17th A Cross, 10th A Main, Malleswaram, Bangalore-560055, have changed my name from MEGHA SARTHAK ADAVI to MEGHA WADAPPI, vide affidavit dated 26/04/2026, sworn before B.R.Shashikala, Notary, Bangalore.

CHANGE OF NAME
I, **VINAYA ANAND** and **VINAYA YASHODHARAN,** residing at # 601, H Block, Akme Ballet Apartment, Outer Ring Road, Doddanekkundi, Bengaluru-560037, declare that the above names pertain to me only. Henceforth I shall be known as **VINAYA ANAND,** vide affidavit dated 04-05-2026 before notary K V Mani, Bengaluru.

I, PRATIK KUMAR PRAKASH MEHTA R/a #.13, 1st cross road, Gavipuram Extension, Sunkenahalli Bengaluru-560019, have changed my name from PRATIK KUMAR PRAKASH MEHTA To PRATIK KUMAR MEHTA vide affidavit dated 29/04/2026 before notary Muhammad Hussain .K. Bangalore.

I, BASAWARAJ S/o. Sri. Yamunappa Residing at: #46, 1st Main,2nd Cross, Marappa Layout, Rajarajeshwari Nagar, Bangalore- 560098 have changed my name to BASAVARAJ vide affidavit dated 22.01.2026 sworn before notary S R Tulasikrishna, Bangalore

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಅಕ್ರಮವಾಗಿ ಮರ ಕಟಾವು: ದೂರು

ಕೆ.ಆರ್.ಪುರ: ರಾಷ್ಟ್ರೀಯ ಹೆದ್ದಾರಿ 75ರ ಸರ್ವಿಸ್ ರಸ್ತೆಯಲ್ಲಿ ಜಾಹೀರಾತು ಫಲಕಕ್ಕೆ ಅಡ್ಡವಾಗಿದ್ದ 50ಕ್ಕೂ ಹೆಚ್ಚು ಮರಗಳ ರೆಂಬೆ ಕೊಂಬೆಗಳನ್ನು ರಾತ್ರೋರಾತ್ರಿ ಅಕ್ರಮವಾಗಿ ಕಡಿದು ಹಾಕಲಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಆವಲಹಳ್ಳಿಯಲ್ಲಿ ಮರ ಕಡಿದ ಕಿತ್ತಗನೂರಿನ ಶ್ರೀನಿವಾಸ್, ಚಿನ್ನಾಗೇನಹಳ್ಳಿಯ ಮುನಿರಾಮ ಹಾಗೂ ಹೊಸಕೋಟೆಯ ನಬೀದ್ ವಿರುದ್ಧ ಈ ಕುರಿತು ಪ್ರಕರಣ ದಾಖಲಾಗಿದೆ. ಮರ ಕತ್ತರಿಸಿದ ಆರೋಪಿಗಳ ವಿರುದ್ಧ ಆವಲಹಳ್ಳಿ ಗ್ರಾಮ ಪಂಚಾಯತಿ ಪಿಡಿಒ ನವಿತಾ ಅವರು ಕೆ.ಆರ್.ಪುರ ವಲಯ ಅರಣ್ಯಾಧಿಕಾರಿಗಳಿಗೆ ದೂರು ನೀಡಿದ್ದರು. ವಲಯ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸುಮಾರು ಎರಡು ಟನ್ ಸೌದೆಯನ್ನು ವಶಕ್ಕೆ ಪಡೆದಿದ್ದಾರೆ.

ಆವಲಹಳ್ಳಿಯಲ್ಲಿ ಮರ ಕಟಾವು ಮಾಡಿರುವುದು

ಅಗರಬತ್ತಿ, ಸುಗಂಧ ದ್ರವ್ಯ ಪ್ರದರ್ಶನ 9ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 9ರಿಂದ 11ರವರೆಗೆ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) 12ನೇ ಅಂತರ ರಾಷ್ಟ್ರೀಯ ಅಗರಬತ್ತಿ ಮತ್ತು ಸುಗಂಧ ದ್ರವ್ಯ ಪ್ರದರ್ಶನ ಮೇಳ ನಡೆಯಲಿದೆ.

'ಸುಗಂಧ ದ್ರವ್ಯ ಮತ್ತು ಧೂಪದ್ರವ್ಯ ಉದ್ಯಮಗಳಿಗೆ ಈ ಮೇಳವು ವೇದಿಕೆ ಆಗಲಿದೆ. ಮೂರು ದಿನಗಳ ಈ ಮೇಳದಲ್ಲಿ ಜಮೈಕಾ, ಶ್ರೀಲಂಕಾ ಮತ್ತು ಮಲೇಷ್ಯಾದಿಂದ ಬಿ2ಬಿ ಮತ್ತು ಜಾಗತಿಕ ಖರೀದಿದಾರರು ಆಗಮಿಸಲಿದ್ದಾರೆ' ಎಂದು ಇನ್ಸೆನ್ಸ್ ಮೀಡಿಯಾದ ಸಂಸ್ಥಾಪಕ ದೀಪಕ್ ಗೋಯಲ್ ತಿಳಿಸಿದರು.

'ಅಗರಬತ್ತಿ, ಧೂಪ, ಕೋನ್‌ಗಳು, ಸಾಂಬ್ರಾಣಿ, ಪೂಜಾ ಕಿಟ್‌ಗಳು ಮತ್ತು ಕರ್ಪೂರ, ಸುಗಂಧ ದ್ರವ್ಯ ತಯಾರಕರು ಭಾಗವಹಿಸಲಿದ್ದು, ಇದರ ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳು ಪಾಲ್ಗೊಳ್ಳಲಿದ್ದಾರೆ' ಎಂದರು.

'ಮೇಳದಲ್ಲಿ ಧೂಪದ್ರವ್ಯದ ಯಂತ್ರೋಪಕರಣಗಳು, ಆರೊಮ್ಯಾಟಿಕ್ ರಾಸಾಯನಿಕಗಳು, ಕಚ್ಚಾ ವಸ್ತುಗಳು, ಮುದ್ರಣ ಮತ್ತು ಪ್ಯಾಕೇಜಿಂಗ್‌ಗೆ ಸಂಬಂಧಿಸಿದ ಪ್ರದರ್ಶನ ಇರಲಿದೆ' ಎಂದು ಹೇಳಿದರು.

ಆಸಕ್ತರು www.incensemedia.in ವೆಬ್‌ಸೈಟ್‌ಗೆ ಭೇಟಿ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ: 95494 04000, 99503 60444 ಸಂಪರ್ಕಿಸಬಹುದು.

ಬೌರಿಂಗ್ ದುರಂತ: ತನಿಖೆಗೆ ಲೋಕಾಯುಕ್ತ ತಂಡ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು 7 ಮಂದಿ ಮೃತಪಟ್ಟ ಪ್ರಕರಣದ ತನಿಖೆಗೆ ಲೋಕಾಯುಕ್ತವು ತನಿಖಾ ತಂಡ ರಚಿಸಿದೆ.

ಏಪ್ರಿಲ್ 29ರ ಸಂಜೆ ದುರಂತ ಸಂಭವಿಸಿತ್ತು. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಏಪ್ರಿಲ್ 30ರಂದು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದರು. ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲು ಸೂಚಿಸಿದ್ದರು.

ಲೋಕಾಯುಕ್ತ ಎಸ್‌ಪಿ, ಜಿಲ್ಲಾ ನ್ಯಾಯಾಧೀಶ ಮತ್ತು ಲೋಕಾಯುಕ್ತದ ತಾಂತ್ರಿಕ ವಿಭಾಗದ ಮುಖ್ಯ ಎಂಜಿನಿಯರ್ ಹಾಗೂ ಅಧಿಕಾರಿಗಳನ್ನು ಒಳಗೊಂಡ ತನಿಖಾ ತಂಡವನ್ನು ರಚಿಸಿ ಲೋಕಾಯುಕ್ತರು ಆದೇಶಿಸಿದ್ದಾರೆ. ಮೇ 16ರ ಒಳಗೆ ತನಿಖಾ ವರದಿಯನ್ನು ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ. ತನಿಖಾ ತಂಡವು ಸೋಮವಾರ ಮಧ್ಯಾಹ್ನವೇ ಘಟನಾ ಸ್ಥಳಕ್ಕೆ ತೆರಳಿ, ಪ್ರಾಥಮಿಕ ಸಾಕ್ಷ್ಯಗಳನ್ನು ಸಂಗ್ರಹಿಸಿದೆ. ಕಾಂಪೌಂಡ್ ಕುರಿತಾಗಿ ಮಾಹಿತಿ ಒದಗಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಾಲಿಕೆಯ ಅಧಿಕಾರಿಗಳಿಗೆ ನೋಟಿಸ್ ನೀಡಿದೆ.

ಹಜ್ ಯಾತ್ರಿಕರ ವಿಮಾನಯಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

'ಮಾನವೀಯತೆಯೇ ನಿಜವಾದ ಧರ್ಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಧರ್ಮ ಹಿಂಸೆಯನ್ನು ಬೋಧಿಸುವುದಿಲ್ಲ. ಆದರೆ, ಮನುಷ್ಯ ಪರಸ್ಪರ ದ್ವೇಷ ಸಾಧಿಸುತ್ತಾನೆ. ಮಾನವೀಯತೆಯೇ ನಿಜವಾದ ಧರ್ಮ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಹಜ್ ಸಮಿತಿ ವತಿಯಿಂದ ಸೋಮವಾರ ಹಜ್ ಯಾತ್ರಿಕರ ವಿಮಾನಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು .

ಪರರ ಒಳಿತನ್ನು ಬಯಸುವವರನ್ನು ದೇವರು ರಕ್ಷಿಸುತ್ತಾನೆ. ತನ್ನ ಧರ್ಮವನ್ನು ಪ್ರೀತಿಸಿ, ಆದರೆ, ಇತರೆ ಧರ್ಮದ ಬಗ್ಗೆ ಸಹಿಷ್ಣುತೆ ಬೆಳೆಸಿಕೊಳ್ಳಬೇಕು. ಭ್ರಾತೃತ್ವ, ಸಮಾನತೆ ಮತ್ತು ಸೌಹಾರ್ದ ಸಂವಿಧಾನದ ಮೂಲತತ್ವವಾಗಿದೆ ಎಂದರು.

ಇಸ್ಲಾಂ ಧರ್ಮದ ಪ್ರಮುಖ ಐದು ಆಧಾರ ಸ್ತಂಭಗಳಲ್ಲಿ ಹಜ್ ಆಚರಣೆಯೂ ಒಂದಾಗಿದ್ದು, ಪ್ರತಿಯೊಬ್ಬ ಮುಸಲ್ಮಾನನೂ ತನ್ನ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಹಜ್ ಯಾತ್ರೆ ಕೈಗೊಳ್ಳಲೇಬೇಕಾಗಿದೆ. ಹಜ್ ಯಾತ್ರೆ ಮಾಡುವುದರಿಂದ ಮನುಷ್ಯನ ಹಿಂದಿನ ಎಲ್ಲಾ ಪಾಪಗಳು ಕ್ಷಮಿಸಲ್ಪಡುತ್ತವೆ ಮತ್ತು ಆತ ಮರುಜನ್ಮ ಪಡೆದ ಮಗುವಿನಂತೆ ಪರಿಶುದ್ಧನಾಗುತ್ತಾನೆ ಎಂಬ ನಂಬಿಕೆಯಿದೆ ಎಂದು ಹೇಳಿದರು.

ಯಾರಾದರೂ ಒಬ್ಬ ಮನುಷ್ಯನನ್ನು (ಅಪರಾಧ ಮಾಡದಿದ್ದರೂ) ಕೊಂದರೆ, ಅವನು ಇಡೀ ಮಾನವಕುಲವನ್ನೇ ಕೊಂದಂತೆ. ಯಾರಾದರೂ ಒಂದು ಜೀವವನ್ನು ಉಳಿಸಿದರೆ, ಅವನು ಇಡೀ ಮಾನವಕುಲವನ್ನೇ ಉಳಿಸಿದಂತೆ ಎಂದು ಜೀವದ ಬೆಲೆಯ ಬಗ್ಗೆ ಕುರಾನ್ ನೀಡುವ ಅತ್ಯುನ್ನತ ಸಂದೇಶವಾಗಿದೆ ಎಂದು ತಿಳಿಸಿದರು.

ಪ್ರತಿಯೊಬ್ಬ ಹಜ್ ಯಾತ್ರಿಕ ನಿಷ್ಕಲ್ಮಶ ಮನದಿಂದ ಯಾತ್ರೆ ಕೈಗೊಳ್ಳಬೇಕು. ಯಾತ್ರೆಯ ಸಂದರ್ಭದಲ್ಲಿ ಮಾಡುವ ಪ್ರಾರ್ಥನೆಯಲ್ಲಿ ಸರ್ಕಾರದ ಒಳಿತನ್ನೂ ಬಯಸಿರಿ ಎಂದು ಯಾತ್ರಿಕರಿಗೆ ಕೋರಿದರು.

ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಒತ್ತು: 2026-27ನೇ ಸಾಲಿನ ಬಜೆಟ್‌ನಲ್ಲಿ ಕಲಬುರಗಿ ಮತ್ತು ಹುಬ್ಬಳ್ಳಿಯಲ್ಲಿ ಹಜ್ ಯಾತ್ರಾರ್ಥಿಗಳು ಹಾಗೂ ಅವರ ಸಂಬಂಧಿಕರಿಗೆ ಸೌಲಭ್ಯ ಮತ್ತು ಸೌಕರ್ಯಗಳನ್ನು ನೀಡಲು ಅನುಕೂಲವಾಗುವಂತೆ ಹಜ್ ಭವನಗಳ ನಿರ್ಮಾಣ ಮಾಡಲಾಗುವುದು. ಸರ್ಕಾರ ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತದೆ ಎಂದರು.

ಸಚಿವರಾದ ರಹೀಂ ಖಾನ್, ಕೃಷ್ಣ ಬೈರೇಗೌಡ, ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕರಾದ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ನಸೀರ್ ಅಹಮದ್, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಲ್ತಾಫ್ ಖಾನ್, ಹಜ್ ಸಮಿತಿ ಅಧ್ಯಕ್ಷ ಜುಲ್ಫಿಕರ್ ಅಲಿ ಖಾನ್ ಹಾಗೂ ಮುಸ್ಲಿಂ ಧರ್ಮ ಗುರುಗಳು ಹಾಜರಿದ್ದರು.

ಹಜ್ ಸಮಿತಿ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹಜ್ ಯಾತ್ರಿಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಸ್‌ಪೋರ್ಟ್‌ಗಳನ್ನು ವಿತರಿಸಿದರು. ಸಲೀಂ ಅಹಮದ್, ರಹೀಂ ಖಾನ್, ನಾಸೀರ್ ಅಹಮದ್, ಜುಲ್ಫಿಕರ್ ಅಲಿ ಖಾನ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬಹುಮಹಡಿಯ ‘ವಿಕ್ಟೋರಿಯಾ’ ಕಟ್ಟಡ ಚಿಕಿತ್ಸೆಗೆ ಸಜ್ಜು

ಹತ್ತು ಅಂತಸ್ತಿನ ನೂತನ ‘ಕ್ಯೂ ಬ್ಲಾಕ್’ನಲ್ಲಿ 650 ಹಾಸಿಗೆಗಳು ಲಭ್ಯ

• ರೋಗಿಗಳ ದಟ್ಟಣೆ ನಿವಾರಣೆಗೆ ಸಹಕಾರಿ

• ವರುಣ ಹೆಗಡೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆಯ ಮೇಲ್ಸೇತುವೆ ಮೇಲೆ ಸಾಗುವ ವಾಹನ ಸವಾರರಿಗೆ ಬಹುಮಹಡಿಯ ಕಟ್ಟಡವೊಂದು ಕಾಣದೆ ಇರದು. ಇದರ ಮೇಲಿರುವ ಹೆಲಿಪ್ಯಾಡ್ ನೋಡಿದಾಗ ಇದಾವುದೋ ಕಾರ್ಪೊರೇಟ್ ಕಚೇರಿ ಇರಬೇಕೆಂದು ಭಾವಿಸುವುದು ಸಾಮಾನ್ಯ. ಆದರೆ, ಇದು ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಒಳಗೊಂಡಿರುವ ಸರ್ಕಾರಿ ಆಸ್ಪತ್ರೆಯ ಕಟ್ಟಡ.

ಹೌದು, ವಿಕ್ಟೋರಿಯಾ ಆಸ್ಪತ್ರೆಗೆ ಸೇರಿರುವ 10 ಮಹಡಿಗಳ ‘ಕ್ಯೂ ಬ್ಲಾಕ್’ ಚಿಕಿತ್ಸೆಗೆ ಸಜ್ಜಾಗಿದೆ. ಕಟ್ಟಡದ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಇದೇ ತಿಂಗಳು ಅಲ್ಲಿ ವೈದ್ಯಕೀಯ ಸೇವೆ ಪ್ರಾರಂಭವಾಗುವ ಸಾಧ್ಯತೆಯಿದೆ. ವಿಕ್ಟೋರಿಯಾ ಆಸ್ಪತ್ರೆಯ 125 ವರ್ಷಗಳ ಸೇವೆಯ ಸ್ಮರಣಾರ್ಥ ಈ ಕಟ್ಟಡಕ್ಕೆ ‘ಕ್ವಾಸ್ಕ್ವೆ ಸೆಂಟೆನಿಯಲ್’ (ಕ್ಯೂ ಬ್ಲಾಕ್) ಎಂದು ಹೆಸರಿಡಲಾಗಿದೆ. 2019ರಲ್ಲಿ ಪ್ರಾರಂಭವಾಗಿದ್ದ ಕಟ್ಟಡ ನಿರ್ಮಾಣ ಕಾಮಗಾರಿ, ಕೋವಿಡ್ ಸೇರಿ ವಿವಿಧ ಕಾರಣಗಳಿಂದ ವಿಳಂಬವಾಗಿ ಏಳು ವರ್ಷಗಳ ಬಳಿಕ ಪೂರ್ಣಗೊಂಡಿದೆ.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯನಿರ್ವಹಿಸುವ ವಿಕ್ಟೋರಿಯಾ ಆಸ್ಪತ್ರೆಯು, ದೇಶದ ಅತ್ಯಂತ ಹಳೆಯ ಆಸ್ಪತ್ರೆಗಳಲ್ಲಿ ಒಂದಾಗಿದೆ. ಈ ಆಸ್ಪತ್ರೆಗೆ ಹೊರರಾಜ್ಯಗಳಿಂದಲೂ ರೋಗಿಗಳು ಬರುತ್ತಿದ್ದು, ಪ್ರತಿನಿತ್ಯ ಸಾವಿರಕ್ಕೂ ಅಧಿಕ ಮಂದಿ ಹೊರರೋಗಿಗಳಾಗಿ ತಪಾಸಣೆಗೆ ಒಳಪಡುತ್ತಿದ್ದಾರೆ. ಸದಾ 500ಕ್ಕೂ ಅಧಿಕ ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಾರೆ. ಗುಣಮಟ್ಟದ ವೈದ್ಯಕೀಯ ಸೇವೆಗೆ ಆಸ್ಪತ್ರೆ ಹೆಸರಾಗಿರುವುದರಿಂದ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ.

ರೋಗಿಗಳ ದಟ್ಟಣೆ, ಹಾಸಿಗೆಗಳ ಕೊರತೆಯ ಕಾರಣ ಆಸ್ಪತ್ರೆ ಆವರಣದಲ್ಲಿ 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ನೂತನ ಕಟ್ಟಡ ನಿರ್ಮಿಸಲಾಗಿದೆ. ₹68.53 ಕೋಟಿ ವೆಚ್ಚದಲ್ಲಿ ಈ ಕಟ್ಟಡದ ನಿರ್ಮಾಣ ಕಾಮಗಾರಿಗೆ 2019ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶಂಕುಸ್ಥಾಪನೆ ನೆರವೇರಿಸಿದ್ದರು. ಕಾಮಗಾರಿ ವಿಳಂಬ ಗೊಂಡಿರುವುದರಿಂದ ನಿರ್ಮಾಣ ವೆಚ್ಚ ಅಧಿಕಗೊಂಡಿದೆ.

ಹಾಸಿಗೆ ಹೆಚ್ಚಳ: ‘ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತದೆ. ಆದರೆ, ವೈದ್ಯರ ಭೇಟಿ ಹಾಗೂ ದಾಖಲಾತಿಗೆ ದಿನವಿಡೀ ಕಾಯಬೇಕಿದೆ. ದೂರದ ಊರುಗಳಿಂದ ಬಂದವರಿಗೆ ಸಮಸ್ಯೆ ಆಗುತ್ತಿದೆ’ ಎಂಬ ರೋಗಿಗಳ ಅಳಲು ಇಲ್ಲಿ ಸಾಮಾನ್ಯವಾಗಿತ್ತು. ಇದಕ್ಕೆ ಪರಿಹಾರ ಎಂಬಂತೆ ಹಾಸಿಗೆಗಳ ಸಂಖ್ಯೆಯನ್ನು ಈಗ ಹೆಚ್ಚಿಸಲಾಗಿದ್ದು, ನೂತನ ಕಟ್ಟಡ ನಿರ್ಮಾಣದಿಂದ ಒಟ್ಟು ಹಾಸಿಗೆಗಳ ಸಂಖ್ಯೆ ಒಂದೂವರೆ ಸಾವಿರದ ಗಡಿ ದಾಟಲಿದೆ. ಇದರಿಂದಾಗಿ ಆಸ್ಪತ್ರೆ ಮೇಲಿನ ರೋಗಿಗಳ ಭಾರ ಇಳಿಯುವ ಸಾಧ್ಯತೆಯಿದೆ.

ನೂತನ ಕಟ್ಟಡವು ವಿಶೇಷ ವಾರ್ಡ್‌ಗಳನ್ನು ಒಳಗೊಂಡಿದೆ. ಈ ವಾರ್ಡ್‌ಗಳಲ್ಲಿ ಖಾಸಗಿ ವಿಮೆಯಡಿ ಚಿಕಿತ್ಸೆ ಒದಗಿಸಲಾಗುತ್ತದೆ. ಈ ಸಂಬಂಧ ನಿಗದಿತ ವಿಮಾ ಕಂಪನಿಗಳ ಜತೆಗೆ ಒಡಂಬಡಿಕೆ ಮಾಡಿಕೊಂಡು, ಹಾಸಿಗೆಗಳನ್ನು ಮೀಸಲಿಡಲು ಆಸ್ಪತ್ರೆ ಯೋಜನೆ ರೂಪಿಸಿದೆ. ಈಗಾಗಲೇ ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಜಯದೇವ ಹೃದ್ರೋಗ ಸಂಸ್ಥೆ ಸೇರಿ ವಿವಿಧ ಸರ್ಕಾರಿ ಆಸ್ಪತ್ರೆಗಳು ಖಾಸಗಿ ವಿಮೆಯಡಿ ಚಿಕಿತ್ಸೆ ಒದಗಿಸುತ್ತಿವೆ.

ವಿಕ್ಟೋರಿಯಾ ಆಸ್ಪತ್ರೆಯ ಚಿತ್ರಣ

910	650	9,441	41,952
ಹಳೆ ಕಟ್ಟಡ ಒಳಗೊಂಡಿರುವ ಹಾಸಿಗೆಗಳು	‘ಕ್ಯೂ ಬ್ಲಾಕ್’ ಹೊಂದಿರುವ ಹಾಸಿಗೆಗಳು	ಕಳೆದ ವರ್ಷ ನಡೆಸಲಾದ ಪ್ರಮುಖ (ಮೇಜರ್) ಶಸ್ತ್ರಚಿಕಿತ್ಸೆಗಳು	ಕಳೆದ ವರ್ಷ ನಡೆಸಲಾದ ಸಣ್ಣ (ಮೈನರ್) ಶಸ್ತ್ರಚಿಕಿತ್ಸೆಗಳು

1,100-1,200 ದಿನವೊಂದಕ್ಕೆ ಭೇಟಿ ನೀಡುವ ಹೊರರೋಗಿಗಳು

500-600 ಚಿಕಿತ್ಸೆ ಪಡೆಯುವ ಸರಾಸರಿ ಒಳರೋಗಿಗಳು

ವಿಕ್ಟೋರಿಯಾ ಆಸ್ಪತ್ರೆ ನಡೆಸಿದ ವರ್ಷವಾರು ಶಸ್ತ್ರಚಿಕಿತ್ಸೆ

ವರ್ಷ	ಶಸ್ತ್ರಚಿಕಿತ್ಸೆ
2021	16,386
2022	47,622
2023	52,186
2024	51,096
2025	51,393

ಉದ್ಘಾಟನೆಗೆ ಸಜ್ಜಾಗಿರುವ ಹತ್ತು ಮಹಡಿಗಳ ಕಟ್ಟಡ

ರೋಗಿಗಳ ನಿರ್ವಹಣೆಗೆ ನೂತನ ಕಟ್ಟಡ ಸಹಕಾರಿಯಾಗಲಿದ್ದು, ಶೀಘ್ರದಲ್ಲಿಯೇ ಉದ್ಘಾಟನೆಯಾಗಲಿದೆ. ಸಿಬ್ಬಂದಿ ನೇಮಕಾತಿ ಹಾಗೂ ಉಪಕರಣ ಅಳವಡಿಕೆ ಪ್ರಕ್ರಿಯೆ ನಡೆಯುತ್ತಿದೆ

ಡಾ. ದೀಪಕ್ ಎಸ್., ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ

ನೂತನ ಕಟ್ಟಡದಲ್ಲಿ ಏನೆಲ್ಲ ಇದೆ?

‘ಕ್ಯೂ ಬ್ಲಾಕ್’ ಕಟ್ಟಡದ ಮೊದಲ ಐದು ಮಹಡಿಗಳಲ್ಲಿ ಸಾಮಾನ್ಯ ವಾರ್ಡ್‌ಗಳಿವೆ. ನಂತರದ ಎರಡು ಮಹಡಿಗಳು 40 ವಿಶೇಷ ವಾರ್ಡ್‌ಗಳನ್ನು ಒಳಗೊಂಡಿವೆ. ಇಲ್ಲಿ ವಿವಿಐಪಿ ವಾರ್ಡ್‌ಗಳನ್ನೂ ನಿರ್ಮಿಸಲಾಗಿದೆ. ಒಂದು ಮಹಡಿಯನ್ನು ಆಡಳಿತ ವಿಭಾಗಕ್ಕೆ ಮೀಸಲಿಡಲಾಗಿದೆ. ಇನ್ನೆರಡು ಮಹಡಿಗಳನ್ನು ಅತ್ಯಾಧುನಿಕ ಶಸ್ತ್ರ ಚಿಕಿತ್ಸಾ ಸಂಕೀರ್ಣಕ್ಕೆ ಒದಗಿಸಲಾಗಿದೆ. ಔಷಧ ವಿಭಾಗ, ಎಂಟು ಶಸ್ತ್ರ ಚಿಕಿತ್ಸಾ ಕೊಠಡಿ, ವಿಶ್ರಾಂತಿ ಸ್ಥಳ, ಪಾರ್ಕಿಂಗ್ ವ್ಯವಸ್ಥೆ ಸೇರಿ ವಿವಿಧ ಸೌಲಭ್ಯವನ್ನು ಕಟ್ಟಡ ಒಳಗೊಂಡಿದೆ. ಮೂಳೆ ಚಿಕಿತ್ಸಾ ವಿಭಾಗವು ಈ ಹೊಸ ಕಟ್ಟಡಕ್ಕೆ ಸ್ಥಳಾಂತರವಾಗಲಿದೆ. ಈ ಕಟ್ಟಡ ಹೆಲಿಪ್ಯಾಡ್ ಕೂಡ ಒಳಗೊಂಡಿದ್ದು, ಭವಿಷ್ಯದಲ್ಲಿ ಅಂಗಾಂಗ ರವಾನೆ ಹಾಗೂ ಸ್ವೀಕೃತಿಗೆ ಬಳಸಿಕೊಳ್ಳಲಾಗುತ್ತದೆ.

ಕೆ.ಆರ್.ಮಾರುಕಟ್ಟೆ ಬಳಿಯ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯಲ್ಲಿ ಸಾಗುವಾಗ ಕಂಡುಬರುವ ವಿಕ್ಟೋರಿಯಾ ಆಸ್ಪತ್ರೆಯ ‘ಕ್ಯೂ ಬ್ಲಾಕ್’ ಕಟ್ಟಡದ ಹೊರ ನೋಟ– ಪ್ರಜಾವಾಣಿ ಚಿತ್ರಗಳು:ರಂಜು ಪಿ

ಡಾ. ರಾಜ್‌ಕುಮಾರ್ ರಸ್ತೆ: ಮಂದಗತಿಯಲ್ಲಿ ಸಾಗಿದ ವೈಟ್ ಟಾಪಿಂಗ್ ಕಾಮಗಾರಿ

ಅಗೆದ ರಸ್ತೆಯಲ್ಲಿ ತೆವಳುವ ವಾಹನಗಳು

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಈ ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದ್ದು, ಪಾದಚಾರಿಗಳ ಓಡಾಟಕ್ಕೂ ಸಮಸ್ಯೆಯಾಗಿದೆ.

ರಾಜಾಜಿನಗರದ ಒರಾಯನ್ ಮಾಲ್‌ವರೆಗಿನ ಡಾ. ರಾಜ್‌ಕುಮಾರ್ ರಸ್ತೆಯ ಒಂದು ಬದಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದೆ. ಒರಾಯನ್ ಮಾಲ್‌ನಿಂದ ಮೆಜೆಸ್ಟಿಕ್‌ಗೆ ತೆರಳುವ ಮಾರ್ಗದಲ್ಲಿ ವೈಟ್ ಕಾಮಗಾರಿ ನಿಧಾನ ಗತಿಯಲ್ಲಿ ನಡೆಯುತ್ತಿದೆ. ಇಲ್ಲಿ ಬೆಳಗಿನ ಜಾವ ಹಾಗೂ ರಾತ್ರಿ ಸಮಯದಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆಯನ್ನು ಅಗೆದು ಹಾಕಿ ವರ್ಷವಾದರೂ ಮುಚ್ಚಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ.

ವಿವಿಧ ಜಿಲ್ಲೆಗಳಿಂದ ರಾಜಧಾನಿ ಪ್ರವೇಶಿಸುವ ವಾಹನಗಳು ಮೆಜೆಸ್ಟಿಕ್‌ಗೆ ಸಂಪರ್ಕಿಸುವ ಪ್ರಮುಖ ಮಾರ್ಗ ಇದಾಗಿದೆ. ಈ ಮಾರ್ಗದ ಮೂಲಕ ಮೆಜೆಸ್ಟಿಕ್‌ಗೆ ತೆರಳುವ ವಾಹನಗಳು ಸುತ್ತಿ ಬಳಸಿಕೊಂಡು ಹೋಗುವ ಪರಿಸ್ಥಿತಿ ಎದುರಾಗಿದೆ. ಒರಾಯನ್ ಮಾಲ್‌ನಿಂದ ನವರಂಗ್‌ವರೆಗಿನ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಮುಗಿದಿದೆ. ಆದರೂ ವಾಹನ ಸಂಚಾರಕ್ಕೆ ಮುಕ್ತವಾಗದ ಕಾರಣ ಪಶ್ಚಿಮ ಕಾರ್ಡ್ ರಸ್ತೆಯ ಮೂಲಕ ಮೆಜೆಸ್ಟಿಕ್‌ಗೆ ತೆರಳುತ್ತಿವೆ.

‘ಈ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಆರಂಭವಾಗಿದೆ. ಇದಕ್ಕಾಗಿ ಬೆಸ್ಕಾಂನವರು ಭೂಗತ ಕೇಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು ಒಂದು ಬದಿಯ ಪಾದಚಾರಿ ಮಾರ್ಗಗಳಲ್ಲಿ ಚರಂಡಿ ಮೇಲಿನ ಕಾಂಕ್ರೀಟ್ ಸ್ಲ್ಯಾಬ್‌ಗಳು ಹಾಗೂ ಪೇವರ್ಸ್‌ಗಳನ್ನು ತೆಗೆದಿದ್ದಾರೆ. ಕೆಲವು ಕಡೆ ಗುಂಡಿಗಳನ್ನು ತೆಗೆಯಲಾಗಿದೆ. ಇದರಿಂದ ಸಾರ್ವಜನಿಕರ ಓಡಾಟಕ್ಕೂ ತೊಂದರೆ ಆಗಿದೆ’ ಎಂದು ಸಾರ್ವಜನಿಕರು ದೂರಿದರು.

ಈ ರಸ್ತೆಯಲ್ಲಿ ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದನ್ನು ಲೆಕ್ಕಿಸದ ದ್ವಿಚಕ್ರ ವಾಹನ ಸವಾರರು, ಆಟೊ ಚಾಲಕರು ಇದೇ ರಸ್ತೆಯಲ್ಲಿ ಬರುತ್ತಾರೆ. ಸಂಚಾರ ದಟ್ಟಣೆಗೆ ಇದೇ ಮುಖ್ಯ ಕಾರಣ’ ಎಂದರು.

‘ಕೆಲವು ಒಳ ರಸ್ತೆಗಳಿಂದ ಈ ರಸ್ತೆಯನ್ನು ಸಂಪರ್ಕಿಸುವ ಜಾಗದಲ್ಲಿ ಅಗೆದಿರುವುದರಿಂದ ಅಲ್ಲಲ್ಲ ವಾಹನಗಳು ಸುತ್ತಿ ಬಳಸಿ ಹೋಗಬೇಕಿದೆ. ಪ್ರಕಾಶನಗರ, ಗಾಯತ್ರಿನಗರ, ಸುಬ್ರಹ್ಮಣ್ಯ ನಗರ, ಮಂಜುನಾಥನಗರದ ಜನರು ದೂಳಿನಿಂದ ತೊಂದರೆ ಅನುಭವಿಸುತ್ತಿದ್ದಾರೆ. ಕೆಲ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಅಗೆದು ಹಾಗೆಯೇ ಬಿಡಲಾಗಿದೆ’ ಎಂದು ರಾಜಾಜಿನಗರದ ರಮೇಶ್ ಆಕ್ರೋಶ ವ್ಯಕ್ತಪಡಿಸಿದರು.

‘ಪಾದಚಾರಿ ಮಾರ್ಗವನ್ನು ಅಗೆದು ಚರಂಡಿ ಕಾಮಗಾರಿ ಕೈಗೊಂಡಿದ್ದು, ಅಂಗಡಿಗೆ ಹೋಗಲು ಯಾವುದೇ ರೀತಿಯ ವ್ಯವಸ್ಥೆ ಮಾಡಿಲ್ಲ. ಇದರಿಂದ ಗ್ರಾಹಕರೇ ಬರುತ್ತಿಲ್ಲ. ವ್ಯಾಪಾರ–ವಹಿವಾಟಿಗೆ ಧಕ್ಕೆಯಾಗಿದೆ’ ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡರು.

‘ಮೆಜೆಸ್ಟಿಕ್‌ನಿಂದ ಡಾ. ರಾಜ್‌ಕುಮಾರ್ ರಸ್ತೆಯ ಮೂಲಕ ಒರಾಯನ್ ಮಾಲ್‌ವರೆಗಿನ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಮುಗಿದಿದೆ. ಸದ್ಯ ಪಾದಚಾರಿ ಮಾರ್ಗದ ಕಾಮಗಾರಿ ನಡೆಯುತ್ತಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ’ ಎಂದು ಪಶ್ಚಿಮ ನಗರ ಪಾಲಿಕೆಯ ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ರಸ್ತೆಯೆಲ್ಲ ದೂಳುಮಯ, ಹೆಚ್ಚಿದ ಸಂಚಾರ ದಟ್ಟಣೆ
- ಕುಸಿದ ವ್ಯಾಪಾರ–ವಹಿವಾಟು
- ಅಗೆದಿರುವ ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕರ ಓಡಾಟ

ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಾಗಿ ರಸ್ತೆ ಅಗೆಯಲಾಗಿದೆ —ಪ್ರಜಾವಾಣಿ ಚಿತ್ರ: ರಂಜು ಪಿ.

ಸಾರ್ವಜನಿಕರು ಏನಂತಾರೆ?

ಅಭಿವೃದ್ಧಿ ಹೆಸರಿನಲ್ಲಿ ಚೆನ್ನಾಗಿರುವ ರಸ್ತೆಯನ್ನು ಅಗೆದು ಹಾಕಿದ್ದಾರೆ. ಕಳೆದ ಒಂದು ವರ್ಷದಿಂದ ದೂಳುಮಯ ವಾತಾವರಣ ಇದೆ. ಇದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಇದರ ಜೊತೆಗೆ ನಮ್ಮ ವ್ಯಾಪಾರ–ವಹಿವಾಟಿಗೂ ತೊಂದರೆ ಆಗಿದ್ದು, ನಮ್ಮ ಶೋರೂಂಗೆ ಬರುವ ವಾಹನಗಳನ್ನು ಇಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಕೂಡಲೇ ರಸ್ತೆ ಕಾಮಗಾರಿ ಪೂರ್ಣಗೊಳಿಸಬೇಕು.

ಧನುಷ್, ನ್ಯೂಮರ್ಸ್ ಶೋರೂಂನ ಸಿಬ್ಬಂದಿ

ಅಂಗಡಿ, ಹೋಟೆಲ್, ಬೇಕರಿಗಳಿಗೆ ಹೋಗುವಂತಿಲ್ಲ. ಎಲ್ಲ ಕಡೆ ದೂಳು ತುಂಬಿದೆ. ಈಗ ಮಳೆ ಬರುತ್ತಿರುವುದರಿಂದ ದೂಳು ಕಡಿಮೆಯಾಗಿದೆ. ಆದರೆ, ಮಳೆ ಹೆಚ್ಚಾದರೆ ಕೆಸರಲ್ಲಿ ಕಾಲು ಇಡುವ ಪರಿಸ್ಥಿತಿ ನಿರ್ಮಾಣವಾಗಲಿದೆ. ನಮ್ಮ ಮನೆಗಳಿಗೆ ತೆರಳುವ ಮಾರ್ಗದಲ್ಲೂ ಕೊಳವೆಗಳನ್ನು ಜೋಡಿಸಿ ಇಡಲಾಗಿದ್ದು, ಅದನ್ನು ದಾಟಿ ಹೋಗಬೇಕಾದ ಪರಿಸ್ಥಿತಿ ಇದೆ.

ವೇಲು, ರಾಜಾಜಿನಗರ

ಮಾರ್ಥಾಸ್ ಆಸ್ಪತ್ರೆಗೆ ನೋಟಿಸ್

ಹೆತ್ತವರ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಹೆತ್ತವರ ಬಗ್ಗೆ ಮಾಹಿತಿ ನೀಡಲು ನಗರದ ಸೇಂಟ್ ಮಾರ್ಥಾಸ್ ಆಸ್ಪತ್ರೆ ನಿರಾಕರಿಸಿದೆ. ಇದು ನನ್ನಲ್ಲಿ ಭಾವನಾತ್ಮಕ ಒತ್ತಡ ಸೃಷ್ಟಿಸಿದೆ’ ಎಂದು ಆಕ್ಷೇಪಿಸಿ ಜರ್ಮನಿಯ ಮಹಿಳೆಯೊಬ್ಬರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪಶ್ಚಿಮ ಜರ್ಮನಿಯ ವೈಸ್‌ಬೇಡನ್ ನಗರದ ನಿವಾಸಿಯಾಗಿರುವ ಅನಿತಾ ವೈಸೆಂಟ್ (48) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರಕರಣ: ‘ನಾನು ಭಾರತದಲ್ಲಿ ಜನಿಸಿದ್ದು ನನ್ನನ್ನು ಜರ್ಮನ್ ದಂಪತಿ ದತ್ತು ಸ್ವೀಕರಿಸಿದ್ದರು. ಈ ಸಂಬಂಧ ನಾನು ಹಲವು ಬಾರಿ ಭಾರತಕ್ಕೆ ಬಂದು ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಕೋರಿದ್ದೇನೆ. ಆದರೆ, ಪ್ರಯೋಜನವಾಗಿಲ್ಲ. ಜೀವನಪೂರ್ತಿ ನನ್ನ ಗುರುತು ಪತ್ತೆಯಲ್ಲೇ ಸಾಕಷ್ಟು ಸಮಯ ವ್ಯಯಿಸುವಂತಾಗಿದೆ. ಆದ್ದರಿಂದ, ನನ್ನ ಹೆತ್ತವರನ್ನು ಪತ್ತೆ ಮಾಡಲು ನಿರ್ದೇಶನ ನೀಡಬೇಕು’ ಎಂದು ಅರ್ಜಿದಾರ ಮಹಿಳೆ ಕೋರಿದ್ದಾರೆ.

ದತ್ತು: ಅನಿತಾ ಅವರನ್ನು ಜರ್ಮನಿಯ ದಂಪತಿಗಳಾದ ಲುಟ್ಜ್ ಜೋಕಿಮ್ ವೈಸೆಂಡ್ ಮತ್ತು ಸಿಗ್ರಿಡ್ ವೈಸೆಂಡ್ 1978ರಲ್ಲಿ ಸೇಂಟ್ ಮಾರ್ಥಾಸ್ ಆಸ್ಪತ್ರೆ ಮೂಲಕ ದತ್ತು ಪಡೆದಿದ್ದರು. ಬೆಂಗಳೂರಿನ ಸೆಷನ್ಸ್ ನ್ಯಾಯಾಲಯ 1978ರ ಆಗಸ್ಟ್ 9ರಂದು ಈ ದಂಪತಿಗೆ; ಸಂರಕ್ಷಕರು ಮತ್ತು ಆಶ್ರಿತರ ಕಾಯ್ದೆ–1890ರ ಕಲಂ 7, 10 ಮತ್ತು 26ರ ಅಡಿ ಅನಿತಾ ಅವರ ಪೋಷಕತ್ವ ಒದಗಿಸಿತ್ತು.

ಆಕ್ಷೇಪ: ‘ದಾಖಲೆಗಳ ಪ್ರಕಾರ 1978ರ ಮಾರ್ಚ್ 3ರಂದು ನಾನು ಜನಿಸಿದ್ದೇನೆ. ನನ್ನನ್ನು ಹೆತ್ತ ತಾಯಿ 1978ರ ಮಾರ್ಚ್ 26ರಂದು ಆರೋಗ್ಯ ಸಮಸ್ಯೆಯಿಂದ ಸಾವನ್ನಪ್ಪಿದ್ದಾರೆ. ಮಗುವನ್ನು ಬೆಳೆಸಲು ಕಷ್ಟವಾಗುತ್ತದೆ ಎಂದು ನನ್ನ ತಂದೆ ನನ್ನನ್ನು ಆಸ್ಪತ್ರೆಯ ಸುಪರ್ದಿಗೆ ನೀಡಿದ್ದರು ಎಂದು ದಾಖಲೆಗಳು ವಿವರಿಸುತ್ತವೆ. ಆದರೆ, ತಂದೆ–ತಾಯಿಯ ಬಗ್ಗೆ ಉಲ್ಲೇಖವಿಲ್ಲ. ಯಾರು ಮಗುವನ್ನು ಆಸ್ಪತ್ರೆಗೆ ತಂದರು ಎಂಬ ಮಾಹಿತಿಯೂ ಇಲ್ಲ’ ಎಂದು ಅನಿತಾ ಅರ್ಜಿಯಲ್ಲಿ ವಿವರಿಸಿದ್ದಾರೆ.

‘ದತ್ತು ಪ್ರಕ್ರಿಯೆಯಲ್ಲಿ ವಾಸ್ತವಾಂಶಗಳನ್ನು ಮರೆಮಾಚಲಾಗಿದೆ. ಮಗುವನ್ನು ನೀಡುವುದಕ್ಕೆ ಸಂಬಂಧಿಸಿದ ಪತ್ರ, ಪೋಷಕರ ಒಪ್ಪಿಗೆ, ವೈದ್ಯಕೀಯ ದಾಖಲೆಗಳನ್ನು ಬಹಿರಂಗಪಡಿಸಿಲ್ಲ. ಸಂಬಂಧಿತರು ದಾಖಲೆಗಳನ್ನು ಕಾಪಿಡಲು ಸಂಬಂಧಿಸಿದವರು ವಿಫಲವಾಗಿದ್ದಾರೆ. ದತ್ತು ಪ್ರಕ್ರಿಯೆಯಲ್ಲಿ; ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ–1956ರ ನಿಬಂಧನೆಗಳನ್ನು ಉಲ್ಲಂಘಿಸಿರುವ ಸಾಧ್ಯತೆ ಇದೆ’ ಎಂದು ಅರ್ಜಿಯಲ್ಲಿ ದೂರಲಾಗಿದೆ.

ದಾಖಲೆ ಇಲ್ಲ: ‘ಅನಿತಾ ಅವರ ಹೆತ್ತವರಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಐದು ವರ್ಷದ ದಾಖಲೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ದಾಖಲೆಗಳನ್ನು ನಾಶಪಡಿಸಲಾಗಿದೆ. ಹೀಗಾಗಿ, ಯಾವುದೇ ಮಾಹಿತಿ ಲಭ್ಯವಿಲ್ಲ ಎಂದು ಹಲಸೂರು ಗೇಟ್ ಠಾಣೆಯ ಪೊಲೀಸರು ತನಿಖೆ ನಡೆಸಿ ಆಸ್ಪತ್ರೆಯ ಆಡಳಿತ ಮಂಡಳಿಗೆ ಮಾಹಿತಿ ನೀಡಿದ್ದಾರೆ’ ಎಂಬ ಅಂಶವನ್ನು ರಾಜ್ಯ ಸರ್ಕಾರದ ವಕೀಲರು ನ್ಯಾಯಪೀಠದ ಗಮನಕ್ಕೆ ತಂದಿದ್ದಾರೆ.

‘7 ವಾರ್ಡ್‌ಗಳ ಪಾದಚಾರಿ ಮಾರ್ಗ ಅವ್ಯವಸ್ಥೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಏಳು ವಾರ್ಡ್‌ಗಳಲ್ಲಿ ಪಾದಚಾರಿ ಮಾರ್ಗಗಳು ಬಳಕೆಗೆ ಸೂಕ್ತವಾಗಿಲ್ಲ, ಈ ಪ್ರದೇಶಗಳಲ್ಲಿ ಪಾದಚಾರಿಗಳು ಅನಿವಾರ್ಯವಾಗಿ ರಸ್ತೆಗಳ ಮೇಲೆ ನಡೆದಾಡುವಂತಾಗಿದೆ ಎಂದು ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ) ಹೇಳಿದೆ.

‘ಸಮಗ್ರ ಪಾದಚಾರಿ ರಸ್ತೆ ಮೌಲ್ಯಮಾಪನ ವರದಿ’ಯಲ್ಲಿ ಬಿಎನ್‌ಪಿ ಈ ವಿಷಯವನ್ನು ತಿಳಿಸಿದೆ. ಎಚ್‌ಎಸ್‌ಆರ್ ಲೇಔಟ್, ಕಲ್ಯಾಣ ನಗರ, ಬಿಳೇಕಹಳ್ಳಿ, ಯಲೇನಹಳ್ಳಿ, ದೊಡ್ಡಕಮ್ಮನಹಳ್ಳಿ, ಶಾಕಂಬರಿನಗರ ಮತ್ತು ಸಾರಕ್ಕಿ ವಾರ್ಡ್‌ಗಳ ‘ಏರಿಯಾ ಸಭಾಗಳು’ ನಡೆಸಿದ ಸುಮಾರು 5.25 ಕಿ.ಮೀ. ರಸ್ತೆ ಜಾಲದ ಏಳು ವ್ಯವಸ್ಥಿತ ಸಮೀಕ್ಷೆಗಳನ್ನು ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.

‘ಮುಖ್ಯ ರಸ್ತೆ ಹಾಗೂ ವಸತಿ ಪ್ರದೇಶದ ರಸ್ತೆಗಳ ವಾಸ್ತವ ಸ್ಥಿತಿ ಮತ್ತು ಜಿಯೋಟ್ಯಾಗಿಂಗ್ ಮೂಲಕ ನಡೆಸಿದ ಈ ತಪಾಸಣೆಯಲ್ಲಿ, ಸಮೀಕ್ಷೆ ಮಾಡಲಾದ ಶೇ 100ರಷ್ಟು ಪಾದಚಾರಿ ಮಾರ್ಗಗಳು ಕನಿಷ್ಠ ದರ್ಜೆಯ ಮಾನದಂಡಗಳನ್ನು ಪೂರೈಸುವಲ್ಲಿ ವಿಫಲವಾಗಿರುವುದು ಕಂಡುಬಂದಿದೆ’ ಎಂದು ಬಿಎನ್‌ಪಿ ಸಂಸ್ಥಾಪಕ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ತಿಳಿಸಿದ್ದಾರೆ.

‘ಸಮೀಕ್ಷೆ ನಡೆಸಿದ ಶೇ 83ರಷ್ಟು ಭಾಗಗಳಲ್ಲಿ ಪಾದಚಾರಿ ಮಾರ್ಗಗಳಿದ್ದರೂ ಬಳಕೆಗೆ ಯೋಗ್ಯವಾಗಿಲ್ಲ. ಇನ್ನು ಶೇ 67ರಷ್ಟು ಪ್ರದೇಶಗಳಲ್ಲಿ ನೀರು ನಿಂತಿರುವುದು, ಬೆಳಕಿಲ್ಲದಿರುವುದು ಅಥವಾ ಬೀದಿ ದೀಪಗಳೇ ಇಲ್ಲದಿರುವುದು ಕಂಡುಬಂದಿದೆ. ವೀಲ್ ಚೇರ್ ಮೂಲಕ ಸಂಚಾರಕ್ಕೆ ಅಥವಾ ರ್‍ಯಾಂಪ್‌ಗಳ ವ್ಯವಸ್ಥೆ ಎಲ್ಲಿಯೂ ಇಲ್ಲ. ಶೇ 83ರಷ್ಟು ಪಾದಚಾರಿ ಮಾರ್ಗಗಳು ಪಾರ್ಕಿಂಗ್ ಮತ್ತು ಕಟ್ಟಡ ತ್ಯಾಜ್ಯಗಳಿಂದಲೇ ತುಂಬಿಕೊಂಡಿವೆ’ ಎಂದು ತಿಳಿಸಿದ್ದಾರೆ.

ಮಂಡ್ಯ ವಿ.ವಿ ಭವಿಷ್ಯ: ಸಂಪುಟದಲ್ಲಿ ತೀರ್ಮಾನ

ರಾಮನಗರ: ‘ಮಂಡ್ಯ ವಿಶ್ವವಿದ್ಯಾಲಯ ಮುಚ್ಚುವ ಕುರಿತು ಯಾವುದೇ ಸ್ಪಷ್ಟತೆ ಇಲ್ಲ. ಈ ಬಗ್ಗೆ ಅಧ್ಯಯನ ಮಾಡಲು ಡಿಸಿಎಂ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಿ ಚರ್ಚಿಸಲಾಗಿದೆ. ಸಮಿತಿಯ ಅಂತಿಮ ವರದಿ ಕುರಿತು ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಹೇಳಿದರು.

‘ಹಿಂದಿನ ಬಿಜೆಪಿ ಸರ್ಕಾರ ಅವೈಜ್ಞಾನಿಕವಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ರಾಜಕೀಯ ಸೇರಿದಂತೆ ವಿವಿಧ ಕಾರಣಗಳಿಗಾಗಿ ವಿಶ್ವವಿದ್ಯಾಲಯಗಳನ್ನು ವಿಭಜಿಸಲಾಗಿದೆ. ಹಳೆಯದಾದ ಮೈಸೂರಿನ ಮಾನಸ ಗಂಗೋತ್ರಿ, ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯ ಗಳಿಗೆ ತನ್ನದೇ ಆದ ಗೌರವ ಇತ್ತು. ಇವತ್ತು ಪ್ರತಿ ಜಿಲ್ಲೆಗಳಲ್ಲಿ ಆರಂಭಗೊಂಡ ವಿಶ್ವವಿದ್ಯಾಲಯಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ’ ಎಂದರು.

‘ಮಂಡ್ಯ ವಿಶ್ವವಿದ್ಯಾಲಯ ಮುಚ್ಚಿದರೆ ಬೆಂಕಿ ಹಾಕುತ್ತೇವೆ’ ಎಂದು ಶಾಸಕ ಗಣಿಗ ರವಿ ಹೇಳಿಕೆ ಕುರಿತು ನಗರದಲ್ಲಿ ಸೋಮವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಊಹಾಪೋಹದ ಮೇಲೆ ಏನೇನೊ ಮಾತನಾಡುವುದು ಸರಿಯಲ್ಲ. ಆ ಬಗ್ಗೆ ಸಂಪುಟದಲ್ಲಿ ಅಂತಿಮ ನಿರ್ಧಾರವಾಗಲಿದೆ. ಮಂಡ್ಯ ಎಂಎಲ್‌ಎ ಸ್ಥಳೀಯರ ಮುಂದೆ ಏನು ಹೇಳಬೇಕೋ ಹೇಳುತ್ತಾರೆ’ ಎಂದರು.

‘ವಿಶೇಷ ವಿವಾಹ ಕಾಯ್ದೆ ನಿಬಂಧನೆಗಳಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿದವರು ವಿವಾಹ ನೋಂದಣಿ ಮಾಡಿಸಿಲ್ಲ ಎಂಬಂತಹ ಸಂದರ್ಭಗಳಲ್ಲಿ ಅಂತಹವರ ವಿಚ್ಛೇದನ ಅರ್ಜಿಯನ್ನು, ಹಿಂದೂ ವಿವಾಹ ಕಾಯ್ದೆಯಡಿ ನಿರ್ವಹಿಸುವುದಕ್ಕೆ, ವಿಶೇಷ ವಿವಾಹ ಕಾಯ್ದೆ ವ್ಯಾಪ್ತಿಯಲ್ಲಿ ಯಾವುದೇ ನಿರ್ದಿಷ್ಟ ನಿಬಂಧನೆಗಳು ಉಲ್ಲೇಖವಾಗಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

‘ಮೇದ’ ಜನಾಂಗಕ್ಕೆ ಸೇರಿದ ದಂಪತಿಯ ಪ್ರಕರಣವೊಂದರಲ್ಲಿ; ವಿಶೇಷ ವಿವಾಹ ಕಾಯ್ದೆ ಅಡಿ ವಿಚ್ಛೇದನ ಕೋರಿ ಪತಿ ಸಲ್ಲಿಸಿರುವ ಅರ್ಜಿ ವಿಚಾರಣೆ ಮುಂದುವರಿಸುವ ಕೌಟುಂಬಿಕ ನ್ಯಾಯಾಲಯದ ನಿರ್ಧಾರ ಪ್ರಶ್ನಿಸಿ ಪತ್ನಿ (44) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಮನ್ಮಥರಾವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ವಿಚ್ಛೇದನ ಅರ್ಜಿಯನ್ನು ನಿರ್ವಹಿಸಲು, ವಿಶೇಷ ವಿವಾಹ ಕಾಯ್ದೆ–1954ರ ಅಡಿಯಲ್ಲಿ ಪೂರ್ವಾಪೇಕ್ಷಿತವಾಗಿ ವಿವಾಹವನ್ನು ನೋಂದಾಯಿಸುವ ಅಗತ್ಯವಿಲ್ಲ’ ಎಂದು ತಿಳಿಸಿರುವ ನ್ಯಾಯಪೀಠ, ಈ ಕುರಿತಂತೆ ಕನಕಪುರ ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ಎತ್ತಿಹಿಡಿದಿದೆ.

‘ವಿಶೇಷ ವಿವಾಹ ಕಾಯ್ದೆಯಡಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಲು, ಮದುವೆ ಆಗಿರುವುದಕ್ಕೆ ಸಂಬಂಧಿಸಿದ ನೋಂದಣಿ ಕಡ್ಡಾಯ ಎಂಬುದಕ್ಕೆ ಸ್ಪಷ್ಟತೆ ಇಲ್ಲ. ವಿಶೇಷ ವಿವಾಹ ಕಾಯ್ದೆಯ ಕಲಂ 15 ಮದುವೆ ನೋಂದಣಿಗೆ ಅಗತ್ಯವಾದ ಷರತ್ತುಗಳನ್ನು ಮಾತ್ರ ವಿವರಿಸುತ್ತದೆಯೇ ಹೊರತು, ಮದುವೆಯ ನೋಂದಣಿ ಆಗಿಲ್ಲ ಎಂದರೆ ವಿಚ್ಛೇದನ ಅರ್ಜಿ ಸಲ್ಲಿಸಲಾಗದು ಎಂದು ಎಲ್ಲೂ ಸ್ಪಷ್ಟಪಡಿಸುವುದಿಲ್ಲ’ ಎಂದು ಉಲ್ಲೇಖಿಸಿದೆ.

ಪ್ರಕರಣವೇನು?: ಬುಡಕಟ್ಟು ವ್ಯಾಪ್ತಿಯ ‘ಮೇದ’ ಪಂಗಡಕ್ಕೆ ಸೇರಿದ ದಂಪತಿ 2006ರ ಏಪ್ರಿಲ್ 30ರಂದು ಕನಕಪುರ ತಾಲ್ಲೂಕಿನ ಕಬ್ಬಾಳು ಗ್ರಾಮದಲ್ಲಿ ಮೇದ ಜನಾಂಗದ ಪದ್ಧತಿ, ಸಂಪ್ರದಾಯಗಳಿಗೆ ಅನಗುಣವಾಗಿ ಮದುವೆಯಾಗಿದ್ದರು. ಇವರಿಗೆ ಒಂದು ಹೆಣ್ಣು ಮಗು ಜನಿಸಿದ್ದು ಸದ್ಯ ತಾಯಿಯ ಜೊತೆಗಿದೆ. ಮನಸ್ತಾಪಗಳ ಕಾರಣ ಪತಿ–ಪತ್ನಿ 2009ರ ಫೆಬ್ರುವರಿ 18ರಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ.

ಏತನ್ಮಧ್ಯೆ ಪತಿ, ಹಿಂದೂ ವಿವಾಹ ಕಾಯ್ದೆ–1955ರ ಕಲಂ 13ರ ಅಡಿಯಲ್ಲಿ (ವ್ಯಭಿಚಾರ, ಕ್ರೌರ್ಯ, ಮತಾಂತರ, ಮಾನಸಿಕ ಅಸ್ವಸ್ಥತೆ, ಮತ್ತು ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಬೇರೆಯಾಗಿದ್ದರೆ, ಈ ಕಾಯ್ದೆಯ ಕಲಂ 13ಬಿ ಪರಸ್ಪರ ಸಮ್ಮತಿಯಿಂದ ವಿಚ್ಛೇದನಕ್ಕೆ ಅವಕಾಶ ನೀಡುತ್ತದೆ) ವಿಚ್ಛೇದನ ಕೋರಿ ಕನಕಪುರ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

‘ವಿಚ್ಛೇದನ ಕೋರಿಕೆಯ ಈ ಅರ್ಜಿ; ಹಿಂದೂ ವಿವಾಹ ಕಾಯ್ದೆಯ ಕಲಂ 2 (2)ರಿಂದ (ಹಿಂದೂ ವಿವಾಹ ಕಾಯ್ದೆ ಹಿಂದೂಗಳು, ಬೌದ್ಧರು, ಜೈನರು ಮತ್ತು ಸಿಖ್ಖರಿಗೆ ಅನ್ವಯಿಸಿದರೂ, ಪರಿಶಿಷ್ಟ ಪಂಗಡದ ವ್ಯಕ್ತಿಗಳಿಗೆ ಅನ್ವಯಿಸುವುದಿಲ್ಲ. ಕಲಂ 2(2) ಕಾಯ್ದೆಯ ಅನ್ವಯಿಕತೆಗೆ ಸಂಬಂಧಿಸಿದ ಒಂದು ಪ್ರಮುಖ ವಿನಾಯಿತಿಯನ್ನು ವಿವರಿಸುತ್ತದೆ) ಹೊರಗಿದೆ’ ಎಂಬ ಕಾರಣಕ್ಕೆ ತಿರಸ್ಕೃತಗೊಂಡಿತ್ತು.

ನಂತರ ಪತಿ, ವಿಶೇಷ ವಿವಾಹ ಕಾಯ್ದೆ–1954ರ ಕಲಂ 27(ಬಿ) ಅಡಿಯಲ್ಲಿ ಹೊಸ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಆಕ್ಷೇಪಿಸಿದ್ದ ಪತ್ನಿ ಪರ ವಕೀಲರು ‘ಮದುವೆಯನ್ನು ವಿಶೇಷ ವಿವಾಹ ಕಾಯ್ದೆ ಅಡಿಯಲ್ಲಿ ನೋಂದಾಯಿಸಿಲ್ಲ’ ಎಂಬ ವಾದಾಂಶ ಮುಂದಿಟ್ಟಿದ್ದರು. ಆದರೆ, ಕನಕಪುರದ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ಕೋರ್ಟ್ 2025ರ ಜೂನ್ 26ರಂದು ಈ ವಾದವನ್ನು ತಿರಸ್ಕರಿಸಿ ಆದೇಶಿಸಿತ್ತು. ‘ಈ ಕುರಿತ ಆದೇಶವನ್ನು ರದ್ದುಪಡಿಸಬೇಕು’ ಎಂದು ಕೋರಿ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮುಖ್ಯಾಂಶಗಳು

- ‘ಮೇದ’ ಜನಾಂಗಕ್ಕೆ ಸೇರಿದ ದಂಪತಿಯ ಪ್ರಕರಣ
- ಕೆ.ಮನ್ಮಥರಾವ್ ಅವರಿದ್ದ ಏಕಸದಸ್ಯ ನ್ಯಾಯಪೀಠದಿಂದ ವಜಾ

ಮುಂಜಾಗ್ರತೆಗೆ ಸೂಚನೆ

ಬೆಂಗಳೂರು: ಜೂನ್‌ನಲ್ಲಿ ಮುಂಗಾರು ಆರಂಭವಾಗುವುದಕ್ಕೂ ಮುನ್ನ ಎಲ್ಲ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳ ಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಎಲ್ಲ ಮುಖ್ಯ, ಉಪ ಮುಖ್ಯರಸ್ತೆ ಮತ್ತು ಇತರೇ ಪ್ರಮುಖ ರಸ್ತೆಗಳಲ್ಲಿ ಮಳೆ ನೀರು ಚರಂಡಿ ಹೂಳು ತಗೆಯುವುದು, ಶೋಲ್ಡರ್ ಡ್ರೈನ್ಸ್ ಹಾಗೂ ಗ್ರೇಟಿಂಗ್ಸ್ ಸ್ವಚ್ಛತೆಯನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ತಂಡಗಳನ್ನು ರಚಿಸಿ, ರಸ್ತೆಗಳಲ್ಲಿನ ಮಳೆ ನೀರು ಚರಂಡಿಗಳಲ್ಲಿ ಸರಾಗವಾಗಿ ಹರಿಯಲು ಅವಕಾಶವಿದೆಯೇ ಅಥವಾ ಹೂಳು ತುಂಬಿದೆಯೇ ಎಂಬುದನ್ನು ಪರಿಶೀಲಿಸಿ, ಕ್ರಮ ವಹಿಸಲು ಸೂಚಿಸ ಬೇಕು. ರಾಜಕಾಲುವೆಗಳಲ್ಲಿ ಹೂಳು ತೆಗೆದಿರುವುದನ್ನು ಖಾತರಿಪಡಿಸಿಕೊಳ್ಳ ಬೇಕು. ಈ ಬಗ್ಗೆ ಕೈಗೊಂಡಿರುವ ಕ್ರಮ ಗಳ ಕುರಿತು ಮೇ 8ರೊಳಗೆ ಚಿತ್ರ ಸಹಿತ ವರದಿ ನೀಡಬೇಕು ಎಂದರು.

ಮರ ತೆರವಿಗೆ ಸೂಚನೆ: ಏ. 29ರಂದು ಆಲಿಕಲ್ಲು ಸಹಿತ ಸುರಿದ ಭಾರಿ ಮಳೆಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮರಗಳು, ರೆಂಬೆ-ಕೊಂಬೆ ಗಳು ಬಿದ್ದು ಸಾರ್ವಜನಿಕರ ಸಂಚಾರಕ್ಕೆ ಸಾಕಷ್ಟು ಅಡಚಣೆಯಾಗಿದೆ. ಪಾಲಿಕೆಯ ಅರಣ್ಯ ಘಟಕದ ವತಿಯಿಂದ ಮಳೆ-ಗಾಳಿಗೆ ಬಿದ್ದ ಮರ ಹಾಗೂ ರೆಂಬೆ ಗಳನ್ನು ತೆರವುಗೊಳಿಸಲು ಅಭಿವೃದ್ಧಿಯ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೃತಕ ಬುದ್ಧಿಮತ್ತೆ ಪ್ರಯೋಗಾಲಯ ಸ್ಥಾಪನೆ

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ತಂತ್ರಜ್ಞಾನ ಕೌಶಲ ಮೇಳದಲ್ಲಿ ಕುಲಪತಿ ರಮೇಶ್ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಗಣ್ಯರು ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವ ವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸದ್ಯದಲ್ಲೇ ಕೃತಕ ಬುದ್ಧಿಮತ್ತೆ ಪ್ರಯೋಗಾಲಯ ಪ್ರಾರಂಭಿಸಲಾಗುವುದು ಎಂದು ಕುಲಪತಿ ಪ್ರೊ.ಬಿ.ರಮೇಶ್ ಹೇಳಿದರು.

ಸೆಂಟ್ರಲ್ ಕಾಲೇಜಿನ ಆವರಣ ದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಗಣಕ ವಿಜ್ಞಾನ ವಿಭಾಗದ ವತಿಯಿಂದ ಏರ್ಪಡಿಸಿದ್ದ ‘ಇನ್ನೋವೆಕ್ಸ್-2.0’ ತಂತ್ರಜ್ಞಾನ ಕೌಶಲ ಮೇಳದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೈಬರ್ ಭದ್ರತೆ ಮತ್ತು ಬಯೋ ಇನ್ಫರ್ಮೆಟಿಕ್ಸ್ ವಿಷಯಗಳಲ್ಲಿ ಡಿಪ್ಲೊಮಾ ಕೋರ್ಸ್ ಆರಂಭಿಸಲಾಗುವುದು ಎಂದರು.

ಅತಿಥಿಗಳಾದ ವರದರಾಜನ್ ಕೃಷ್ಣ, ಡಾ.ಜ್ಞಾನವೇಲ್ ಮುತ್ತರಸು, ಪವನ್ ಕುಮಾರ್ ಮತ್ತು ಡಾ.ಬಿ.ಆರ್.ಸುಪ್ರೀತ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಅನ್ವೇಷಣಾತ್ಮಕ ಮತ್ತು ಸೃಜನಶೀಲ ಮನೋಭಾವವನ್ನು ಬೆಳೆಸಿಕೊಳ್ಳುವಂತೆ ಪ್ರೇರೇಪಿಸಿದರು.

ಶಿಕ್ಷಣವನ್ನು ಕೇವಲ ಪದವಿ ಗಳಿಕೆಗೆ ಸೀಮಿತಗೊಳಿಸದೆ ತರಗತಿ ಕೋಣೆಗಳನ್ನು ತಾಂತ್ರಿಕ ಕೌಶಲ ತರಬೇತಿಯ ಪ್ರಯೋಗಾಲಯವಾಗಿ ಪರಿವರ್ತಿಸಿಕೊಳ್ಳಬೇಕು. ಸ್ಟಾರ್ಟ್‌ಅಪ್ ಉದ್ಯಮಗಳ ಆರಂಭಕ್ಕೆ ಅಗತ್ಯವಾದ ಅನುಭವ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಮೇಧಾ ಇಟಗಿ ಹುಯಿಲಗೋಳ ಅವರು ಮೇಳದ ಉದ್ದೇಶವನ್ನು ವಿವರಿಸಿದರು. ಉಪನ್ಯಾಸಕಿ ನಿಖಿತಾ ನಿರೂಪಿಸಿದರು. ಜ್ಞಾನಾಕ್ಷಿ ಕತ್ತಿ ಸ್ವಾಗತಿಸಿ, ಸುಷ್ಮಾ ವಂದಿಸಿದರು.

ಎರಡು ದಿನಗಳ 'ಇನ್ನೋವೆಕ್ಸ್ -2.0' ಕೌಶಲ ಮೇಳದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ವೆಬ್ ವಿನ್ಯಾಸ, ರಸಪ್ರಶ್ನೆ, ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ, ಕಿರುಚಿತ್ರ ನಿರ್ಮಾಣ, ಸ್ಟಾರ್ಟ್ ಅಪ್ ಪಿಚ್, ಗೇಮಿಂಗ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

'ನಾಯಕ'ನಿಂದ 'ಸಾರಥಿ'ಯಾದ ವಿಜಯ್

ಚೊಚ್ಚಲ ಯತ್ನದಲ್ಲೇ ಅಭೂತಪೂರ್ವ ಗೆಲುವು ರಾಜಕೀಯ ನವೋದ್ಯಮದಲ್ಲಿ ಹೊಸ ಪರಿಭಾಷೆ

ಚೆನ್ನೈ (ಪಿಟಿಐ): 2026ರ ತಮಿಳುನಾಡು ವಿಧಾನಸಭಾ ಚುನಾವಣೆಯು ಆಡಳಿತಾರೂಢ ಡಿಎಂಕೆ ಹಾಗೂ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ನಡುವೆಯೇ ಹೋರಾಟ ನಡೆಯಲಿದೆ ಎಂದು ಪಕ್ಷದ ಸಂಸ್ಥಾಪಕ, ನಟ ವಿಜಯ್ ಪದೇ ಪದೇ ಹೇಳಿದಾಗ ಆ ವಾದವನ್ನು ಯಾರೂ ಕೂಡ ಒಪ್ಪಲು ತಯಾರಿರಲಿಲ್ಲ.

ಆದರೆ, ಚುನಾವಣೆ ಫಲಿತಾಂಶ ವಿಜಯ್ ಮಾತಿಗೆ ಬಲತಂದಿದೆ. ಸಿನಿಮಾ ಪರದೆಯಲ್ಲಿ ನಾಯಕನಾಗಿ ಮಿಂಚಿದ ಮೆಚ್ಚಿನ ನಟನಿಗೆ ರಾಜ್ಯದ ಸಾರಥ್ಯದ ಜವಾಬ್ದಾರಿ ವಹಿಸಿದ್ದಾರೆ.

ವಿಜಯ್ ಅವರ ಗೆಲುವಿಗೆ ಹಲವಾರು ಕಾರಣಗಳು ಇವೆ. ವಿಜಯ್ ಅವರು ಮುಖ್ಯವಾಹಿನಿಯಲ್ಲಿರುವ ರಾಜಕೀಯ ಪಕ್ಷಗಳಿಂದ ಭಿನ್ನವಾಗಿ ಮತದಾರರನ್ನು ತಲುಪಿ, ಮತ ಯಾಚಿಸಿದರು.

ಎಲ್ಲಾ ಕ್ಷೇತ್ರಗಳಿಗೆ ಸ್ವತಃ ತಾವೇ ಅಭ್ಯರ್ಥಿಗಳನ್ನು ಪರಿಚಯಿಸಲಿಲ್ಲ, ಎಲ್ಲ ವಿಭಾಗಗಳಿಗೂ ತೆರಳಿ ಪ್ರವಾಸ ಮಾಡಲಿಲ್ಲ. ಉಳಿದ ರಾಜಕೀಯ ಪಕ್ಷಗಳಂತೆ ಬೃಹತ್ ರ್ಯಾಲಿಗಳನ್ನು ನಡೆಸಲಿಲ್ಲ. ಅದರ ಬದಲಾಗಿ ಸಾಮಾಜಿಕ ಜಾಲತಾಣದ ಮೂಲಕ ಪದೇ ಪದೇ ಅಭ್ಯರ್ಥಿಗಳ ಹೆಸರನ್ನು ಜನಮಾನಸಕ್ಕೆ ತಲುಪಿಸಿದರು. ಅಧಿಕಾರಿಗಳು ಹಾಗೂ ಬೆಂಬಲಿಗರ ಮೂಲಕ ಪಕ್ಷದ ಅಭ್ಯರ್ಥಿಗಳ ಹೆಸರನ್ನು ಕ್ಷೇತ್ರಗಳಲ್ಲಿ ಮನನಮಾಡುವಂತೆ ಮಾಡಿದರು.

ವಿಶೇಷವೆಂದರೆ, ಚುನಾವಣೆ ಕಣಕ್ಕಿಳಿದ ನಂತರ ಯಾವುದೇ ಮಾಧ್ಯಮಗಳಿಗೂ ಅವರು ಸಂದರ್ಶನಗಳನ್ನು ನೀಡಲಿಲ್ಲ, ಸಾಮಾಜಿಕ ಜಾಲತಾಣಗಳಲ್ಲಿಯೂ ನೇರವಾಗಿ ಮುಖಾಮುಖಿಯಾಗಲಿಲ್ಲ. ಇದಕ್ಕೆ ಭಿನ್ನವಾಗಿ ಯುವ ಮತದಾರರ ಮೂಲಕ ಅವರ ಪೋಷಕರ ಮತಗಳು ಟಿವಿಕೆ ಪರ ಮತ ಚಲಾಯಿಸುವಂತೆ, ಮನ ಒಲಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ವಿಧಾನಸಭೆಯಲ್ಲಿ ಶೇಕಡ 85ರಷ್ಟು ಮತದಾನ ನಡೆದ ತಕ್ಷಣವೇ, 'ವಿಜಯ್ ಮಾಮಾ' ಎಂದು ತನ್ನನ್ನು ಕರೆದುಕೊಂಡ ಅವರು, ಕುಟುಂಬಕ್ಕೆ ಮಾರ್ಗದರ್ಶನ ಮಾಡಿದ ಮಕ್ಕಳಿಗೆ 'ಕುಟ್ಟಿ', 'ನಂಬಾ', 'ನಂಬೀಸ್' (ಚಿಕ್ಕ ಮಕ್ಕಳು) ಎಂದು ವಿಶೇಷವಾಗಿ ಧನ್ಯವಾದ ಸಲ್ಲಿಸಿದರು. ಅದೇ ರೀತಿ, ದ್ರಾವಿಡ ಸಿದ್ಧಾಂತ, ತಮಿಳು ರಾಷ್ಟ್ರೀಯತೆ ವಿಚಾರವನ್ನೇ ಪಕ್ಷದ ಸಿದ್ಧಾಂತವಾಗಿಸಿಕೊಂಡು, ರಾಜ್ಯದ ಮೂಲೆ ಮೂಲೆಗೂ ತಲುಪಿದರು.

ವಿಜಯ್ ಪ್ರಚಾರದಲ್ಲೂ ಭಿನ್ನತೆ ಕಾಯ್ದುಕೊಂಡರು. ಬೀದಿಯಲ್ಲಿ ಸಾಮಾನ್ಯರಂತೆ ನಡೆದುಕೊಂಡು, ಕ್ಷಣಮಾತ್ರದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ತನ್ನ ಸುತ್ತಲೂ ಸೇರುವಂತೆ ಮಾಡುತ್ತಿದ್ದರು. ಅದೇ ರೀತಿ, ಚಲನಚಿತ್ರ ಶೈಲಿಯ ಮೇಲೆ ನಿಂತು ರಾಜ್ಯದ ಜ್ವಲಂತ ಸಮಸ್ಯೆಗಳನ್ನು ಸರಳವಾದ ಕಥೆ ಮೂಲಕ ವಿವರಿಸಿ, ಆಡಳಿತ ಪಕ್ಷದ ವೈಫಲ್ಯಗಳನ್ನು ಎತ್ತಿತೋರಿಸಿ, ಜನರನ್ನು ಭಾವನಾತ್ಮಕವಾಗಿ ತಲುಪಿದರು.

25–30 ವಯಸ್ಸು ಆಗಿದ್ದಾಗ ನಟ ವಿಜಯ್ ಪರಿಸ್ಥಿತಿ ಹೀಗಿರಲಿಲ್ಲ. ಸುದೀರ್ಘ, ನಾಚಿಕೆ, ಸೌಮ್ಯಸ್ವಭಾವದ ನಟನೊಬ್ಬ ಸ್ವತಃ ಪಕ್ಷವೊಂದನ್ನು ಸ್ಥಾಪಿಸಿ, ಚೊಚ್ಚಲ ಪ್ರಯತ್ನದಲ್ಲಿಯೇ ಮುಖ್ಯಮಂತ್ರಿಯಾಗಬಹುದು ಎಂದು ಯಾರೂ ಊಹಿಸಿರಲಿಲ್ಲ.

ವಿಜಯ್ ಅವರ 'ಪೂವೆ ಉನಕ್ಕಾಗ' ಸಿನಿಮಾ ನಿರ್ದೇಶಿಸಿದ್ದ 'ವಿಕ್ರಮನ್' ಕೂಡ 'ಪಿಟಿಐ'ಗೆ ಇತ್ತೀಚೆಗೆ ನೀಡಿದ ಸಂದರ್ಶನದಲ್ಲಿ ಇದೇ ವಿಷಯ ಪ್ರಸ್ತಾಪಿಸಿದ್ದಾರೆ.

'ಆಗಲೇ ಅವರು ತಮಿಳು ಸಿನಿಮಾ ಕ್ಷೇತ್ರವನ್ನೇ ಆಳಲಿದ್ದಾರೆ ಎಂದು ಊಹಿಸಿದ್ದೆ. ಅವರಲ್ಲಿಯೇ ಆ ವಿಶೇಷತೆ ಇತ್ತು. ಹೀಗಾಗಿಯೇ ಜನರು ಕೂಡ ಅವರ ಬಗ್ಗೆ ಒಲವು ಹೊಂದಿದ್ದರು' ಎಂದು ನೆನಪಿಸಿಕೊಂಡರು.

ಈ ಸಿನಿಮಾವೇ ಅವರಿಗೆ ಸಿನಿಕ್ಷೇತ್ರದಲ್ಲಿ ದೊಡ್ಡ ಯಶಸ್ಸು ತಂದು ಕೊಟ್ಟಿತು. ಆದಾದ ನಂತರ, ಗಟ್ಟಿಯಾದ ಭಾವನೆಗಳು, ಕೌಟುಂಬಿಕ ಆಧಾರಿತ ಕಥೆಗಳು, ಹಿಟ್ ಹಾಡು, ಹೈ ಆಕ್ಷನ್ ಹೊಂದಿದ ಆಕ್ಷನ್‌ಗೆ ಒತ್ತು ನೀಡುವ ಮೂಲಕ ತಮಿಳು ಸಿನಿಮಾರಂಗದಲ್ಲಿ ಮೆಗಾಸ್ಟಾರ್ ಆಗಿ ರೂಪಾಂತರಗೊಂಡರು.

ತಮ್ಮ ಮೂರನೇ ಸಿನಿಮಾ 'ಇಳಯ ದಳಪತಿ'ಯ ಮೂಲಕ (ಯುವ ಕಮಾಂಡರ್) ಆಗಿ ಗುರುತಿಸಿಕೊಂಡ ಅವರು, 'ರಾಸಿಗನ್ (1994) ಸಿನಿಮಾದಿಂದ ತನ್ನನ್ನು ತಾನು ಬ್ರ್ಯಾಂಡಿಂಗ್ ಮಾಡಿಕೊಳ್ಳುವ ಪ್ರಾಮುಖ್ಯತೆಯನ್ನು ಕಲಿತುಕೊಂಡರು. ಇದಾದ ದಶಕಗಳ ಕಾಲಿವುಡ್‌ನಲ್ಲಿ ಪ್ರಶ್ನಾತೀತ 'ದಳಪತಿ'ಯಾಗಿ ಮಿಂಚಿದರು.

ವಿಜಯ್ ಅವರ ರಾಜಕೀಯ ಪ್ರವೇಶಕ್ಕೂ ಮುನ್ನ ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದರು. 2021ರಲ್ಲಿ 'ವಿಜಯ್ ಮಕ್ಕಳ್ ಇಯಕ್ಕಂ' (ವಿಎಂಐ) (ಜನರಿಗಾಗಿ ವಿಜಯ್ ವೇದಿಕೆ) ಮೂಲಕ ಅಭಿಮಾನಿಗಳು ಸ್ಥಳೀಯ ಚುನಾವಣೆಗೆ ಸ್ಪರ್ಧಿಸಿ ಗೆದ್ದಾಗ ಹಲವರು ಹುಬ್ಬೇರಿಸಿದ್ದರು. ಅಂದು ವಿಎಂಐನಲ್ಲಿ ಗುರುತಿಸಿಕೊಂಡ ಹಲವು ಮಂದಿ ಈಗ ವಿಜಯ್ ಅವರ ಟಿವಿಕೆ ಪಕ್ಷದಲ್ಲಿ ಪದಾಧಿಕಾರಿಗಳಾಗಿದ್ದಾರೆ.

ತಲೈವಾ (2013) ಸಿನಿಮಾದ ಮೂಲಕ ತಮ್ಮ ರಾಜಕೀಯ ಮಹತ್ವಾಕಾಂಕ್ಷೆಯನ್ನು ಜನರ ಮುಂದಿಟ್ಟಿದ್ದರು. ಸಿನಿಮಾ ವಿವಾದ ಉಂಟಾಗಿ ಎರಡು ವಾರಗಳ ಕಾಲ ತಡವಾಗಿ ತೆರೆಕಂಡಿತು, ಕೊನೆಗೆ ಸಿನಿಮಾ ಟ್ಯಾಗ್‌ಲೈನ್ ತೆಗೆದುಹಾಕಿ ಬಿಡುಗಡೆ ಮಾಡಲಾಗಿತ್ತು. ಆಗ ರಾಜ್ಯದಲ್ಲಿ ಎಐಎಡಿಎಂಕೆ ಸರ್ಕಾರ ಆಡಳಿತದಲ್ಲಿತ್ತು. ಸಿನಿಮಾ ಬಿಡುಗಡೆಗೆ ಎರಡು ವರ್ಷಗಳ ಹಿಂದೆ ನವದೆಹಲಿಯಲ್ಲಿ ನಡೆದಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ, ಅಣ್ಣಾ ಹಜಾರೆಗೆ ಬೆಂಬಲ ಸೂಚಿಸಿದ್ದರು.

2014ರಲ್ಲಿ ಬಂದ 'ಕತ್ತಿ' ಸಿನಿಮಾ ರೈತರು ಎದುರಿಸುವ ಬವಣೆಗಳನ್ನು ಪರದೆ ಮೂಲಕ ತೋರಿಸಿದಾಗ ಅಭಿಮಾನಿಗಳು ಬಿಗಿದಪ್ಪಿಕೊಂಡರು. ಅಟ್ಲಿ ನಿರ್ದೇಶನದ 'ಮರ್ಸೆಲ್' (2017) ಸಿನಿಮಾದ ಡೈಲಾಗ್‌ನಲ್ಲಿ ಜಿಎಸ್‌ಟಿ ಖಂಡಿಸಿದಾಗ ಬಿಜೆಪಿಯಿಂದ ಟೀಕೆಗೊಳಗಾದರು. ಅದರೂ ವಿಚಲಿತರಾಗದೇ, 2018ರಲ್ಲಿ 'ಸರ್ಕಾರ್' ಸಿನಿಮಾದಲ್ಲಿ ಚುನಾವಣೆಯ ಅಕ್ರಮಗಳನ್ನು ಬೆಳ್ಳಿ ಪರದೆ ಮೂಲಕ ತೆರೆದಿಟ್ಟಾಗ, ಅವರ ರಾಜಕೀಯ ಮಹತ್ವಾಕಾಂಕ್ಷೆ ಕುರಿತು ಊಹಾಪೋಹಗಳು ತೀವ್ರಗೊಂಡವು. ತೂತ್ತುಕುಡಿಯಲ್ಲಿ ಗುಂಡಿನ ದಾಳಿಯಿಂದ ಹಲವರು ಮೃತಪಟ್ಟ ವೇಳೆ ಆ ಕುಟುಂಬಸ್ಥರನ್ನು ಭೇಟಿಯಾಗಿ ವೈಯಕ್ತಿಕವಾಗಿ ತಲಾ ₹1 ಲಕ್ಷ ನೆರವು ನೀಡಿದ್ದರು. ಇದಾದ ನಂತರ ಅವರ ರಾಜಕೀಯ ಪ್ರವೇಶದ ಕುರಿತು ಜನರಿಗೆ ಸ್ಪಷ್ಟ ಸಂದೇಶ ರವಾನೆಯಾಗಿತ್ತು.

ನಿಸ್ಸಂಶಯವಾಗಿ ತಮ್ಮ ವರ್ಚಸ್ಸು, ಸುದೀರ್ಘ ದೃಢನಿಶ್ಚಯದಿಂದ ತಲೈವರ್ (ನಾಯಕ)ನಾಗಿ ಮುದಲವನ್ (ಮುಖ್ಯಮಂತ್ರಿಯಾಗಿ) ಅಧಿಕಾರಕ್ಕೇರಲು ಸಿದ್ಧರಾಗಿದ್ದಾರೆ.

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಗೆಲುವು ದಾಖಲಿಸುತ್ತಿದ್ದಂತೆಯೇ ಚೆನ್ನೈನಲ್ಲಿ ಪಕ್ಷದ ಕಾರ್ಯಕರ್ತರು, ನಟ ವಿಜಯ್ ಅಭಿಮಾನಿಗಳು ಸೀಟಿ ಊದಿ ಸಂಭ್ರಮಿಸಿದರು —ಪಿಟಿಐ ಚಿತ್ರ

ದ್ರಾವಿಡ ಮಾದರಿ ಸರ್ಕಾರ 2.0: ನನಸಾಗದ ಸ್ಟಾಲಿನ್ ಕನಸು

ಚೆನ್ನೈ (ಪಿಟಿಐ): ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರು 'ದ್ರಾವಿಡ ಮಾದರಿ ಸರ್ಕಾರ 2.0' ರಚಿಸಲು ಕಂಡಿದ್ದ ಕನಸು ನನಸಾಗಲಿಲ್ಲ. ಹೊಸ ಪಕ್ಷ ಟಿವಿಕೆ ವಿರುದ್ಧ ಡಿಎಂಕೆ ಸೋತಿದ್ದು, ಸ್ಟಾಲಿನ್ ಅವರ ದಶಕಗಳಷ್ಟು ಹಳೆಯ ರಾಜಕೀಯ ಜೀವನದಲ್ಲಿ ಹಿನ್ನಡೆ ಉಂಟು ಮಾಡಿದೆ.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬಂಧನಕ್ಕೆ ಒಳಗಾಗಿದ್ದ ಸ್ಟಾಲಿನ್ ಅವರು ನಂತರ ಪಕ್ಷದಲ್ಲಿ ವಿವಿಧ ಹಂತಗಳಲ್ಲಿ ಬೆಳೆದು ಬಂದರು. ತಳಮಟ್ಟದಲ್ಲಿ ಹಲವು ದಶಕಗಳ ಕಾಲ ದುಡಿದ ಅವರು, ಡಿಎಂಕೆಯ ಯುವ ಘಟಕವನ್ನು ರಾಜಕೀಯ ಶಕ್ತಿಯಾಗಿ ಪರಿವರ್ತಿಸಿದರು.

ಮೊದಲ ಬಾರಿಗೆ, 1989ರಲ್ಲಿ ಚೆನ್ನೈನ ಥೌಸಂಡ್ ಲೈಟ್ಸ್ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ ಅವರು, 1996ರಲ್ಲಿ ಅದೇ ಕ್ಷೇತ್ರದಿಂದ ಮತ್ತೆ ಆಯ್ಕೆಯಾದರು. 2001 ಮತ್ತು 2006ರಲ್ಲೂ ಪುನರಾಯ್ಕೆಯಾದರು. 1996–2002ರವರೆಗೆ ಸ್ಟಾಲಿನ್ ಚೆನ್ನೈನ ಮೇಯರ್ ಆಗಿ ಆಯ್ಕೆಯಾಗಿ, ಉತ್ತಮ ಕೆಲಸ ಮಾಡಿ ಜನರ ಪ್ರೀತಿಗಳಿಸಿದರು. 2011ರಲ್ಲಿ ಕೊಲತ್ತೂರು ಕ್ಷೇತ್ರದಿಂದ, 2016ರಲ್ಲಿ ನಗರ ವಿಭಾಗದಿಂದ ಮರು ಆಯ್ಕೆಯಾದರು. 2021ರಲ್ಲಿ ಮತ್ತೆ ಕೊಲತ್ತೂರು ಕ್ಷೇತ್ರದಿಂದ 75,000ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದು, ಸರ್ಕಾರ ರಚಿಸಿದರು. ಸ್ಟಾಲಿನ್ ಅವರು ಒಟ್ಟು ಏಳು ಬಾರಿ ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. 2018ರಲ್ಲಿ ತಂದೆ, ದ್ರಾವಿಡ ನಾಯಕ ಎಂ. ಕರುಣಾನಿಧಿ ಅವರು ನಿಧನರಾದ ಬಳಿಕ ಪಕ್ಷದ ನಾಯಕತ್ವ ವಹಿಸಿಕೊಂಡಿದ್ದರು.

ಶಬರಿನಾಥನ್

ವಿಜಯ್ ಕಾರು ಚಾಲಕನ ಪುತ್ರ ಈಗ ಶಾಸಕ

ಚೆನ್ನೈ (ಪಿಟಿಐ): ನಟ ವಿಜಯ್ ಅವರ ಬಹುಕಾಲದ ಕಾರು ಚಾಲಕ ರಾಜೇಂದ್ರನ್ ಅವರ ಪುತ್ರ ಶಬರಿನಾಥನ್ ಅವರು ವಿರುಗಮ್‌ಪಾಕಮ್ ಕ್ಷೇತ್ರದಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದಾರೆ.

ಆರ್. ಶಬರಿನಾಥನ್ ಅವರಿಗೆ 30 ವರ್ಷ. ಡಿಎಂಕೆ ಅಭ್ಯರ್ಥಿ ಪ್ರಭಾಕರ ರಾಜ ಅವರನ್ನು 27,086 ಮತಗಳ ಅಂತರದಿಂದ ಮಣಿಸಿ ಮೊದಲ ಬಾರಿ ಶಬರಿನಾಥನ್ ವಿಧಾನಸಭೆ ಪ್ರವೇಶಿಸುತ್ತಿದ್ದಾರೆ.

ವಿಜಯ್ 'ನಾಳೈಯ ತೀರ್ಪು' (1992) ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದರು. ಆಗ ವಿಜಯ್ ಅವರ ಕಾರು ಚಾಲಕರಾಗಿದ್ದ ರಾಜೇಂದ್ರನ್ ಮುಂದೆ ಆಪ್ತ ಸಹಾಯಕರೂ ಆದರು.

ಟಿವಿಕೆ ಅಭ್ಯರ್ಥಿಗಳ ಪಟ್ಟಿಯಲ್ಲಿ ತನ್ನ ಹೆಸರು ಘೋಷಣೆ ಆಗುತ್ತಿದ್ದಂತೆ ಕಾರ್ಯಕ್ರಮದ ವೇದಿಕೆಯಲ್ಲೇ ಶಬರಿನಾಥನ್ ಸಂತೋಷ ತಡೆಯಲಾರದೇ ಕಣ್ಣೀರು ಹಾಕಿದ್ದರು. ಈ ಭಾವನಾತ್ಮಕ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಚೆನ್ನೈ ಜಿಲ್ಲೆಯ ವಿರುಗಮ್‌ಪಾಕಮ್ ಕ್ಷೇತ್ರ ಕಳೆದ ಐದು ಚುನಾವಣೆಗಳಲ್ಲಿ ಮೂರು ಪಕ್ಷಗಳ ಅಭ್ಯರ್ಥಿಗಳನ್ನು ಕಂಡಿತ್ತು. ಇದೀಗ ಟಿವಿಕೆ ಗೆಲುವಿನ ಮೂಲಕ ಮತ್ತೊಂದು ಪಕ್ಷವನ್ನು ಅಪ್ಪಿಕೊಂಡಿದೆ.

ಟಿವಿಕೆ: ರಾಜಕೀಯ 'ಯೂನಿಕಾರ್ನ್'

ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ 'ದಳಪತಿ' ವಿಜಯ್ ಅವರ ರಾಜಕೀಯ ಪ್ರವೇಶವು ನವೋದ್ಯಮ ಪರಿಸರ ವ್ಯವಸ್ಥೆಯಲ್ಲಿ 'ಯೂನಿಕಾರ್ನ್'ಗಳ ಬೆಳವಣಿಗೆಯ ಸ್ವರೂಪದಂತಿದೆ.

ಒಂದು ಶತಕೋಟಿ ಡಾಲರ್ ಮೌಲ್ಯ ಹೊಂದಿರುವ ಕಂಪನಿಗಳನ್ನು ಯೂನಿಕಾರ್ನ್ ಎಂದು ಕರೆಯಲಾಗುತ್ತದೆ. ಈ ಕಂಪನಿಗಳು ಹೊಸ ಆಲೋಚನೆಗಳು ಮತ್ತು ತಂತ್ರಜ್ಞಾನದ ಮೂಲಕ ಅತ್ಯಂತ ವೇಗವಾಗಿ ಬೆಳೆದು, ಹೆಚ್ಚಿನ ಮಾರುಕಟ್ಟೆ ಮೌಲ್ಯ ಪಡೆಯುತ್ತವೆ. ವಿಜಯ್ ಅವರ ರಾಜಕೀಯ ಪ್ರವೇಶಕ್ಕೂ ಇದೇ ವೇಗ ಸಿಕ್ಕಿದೆ.

ಆಮ್ ಆದ್ಮಿ ಪಕ್ಷ (ಎಎಪಿ), ಅಸ್ಸಾಂ ಗಣ ಪರಿಷದ್ (ಎಜಿಪಿ), ತೆಲುಗು ದೇಶಂ ಪಕ್ಷ (ಟಿಡಿಪಿ) ಮಾದರಿಯಲ್ಲೇ ಟಿವಿಕೆ ಕೂಡ ಮೊದಲ ಚುನಾವಣೆಯಲ್ಲಿ ಸರ್ಕಾರ ರಚನೆಯಂಥ ದೊಡ್ಡ ಹೊಣೆ ಹೊತ್ತಿರುವುದು ಇಲ್ಲಿ ಗಮನಾರ್ಹ.

2012ರಲ್ಲಿ ರಾಜಕೀಯ ಪ್ರವೇಶಿಸಿದ್ದ ಎಎಪಿ, 2013ರಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ಸರ್ಕಾರ ರಚಿಸಿತ್ತು. ಇತ್ತ ಎಜಿಪಿ ಕೂಡ ರಚನೆಯಾದ ಕೆಲವೇ ಸಮಯದಲ್ಲಿ 1985ರ ಚುನಾವಣೆ ಎದುರಿಸಿ, ಪಕ್ಷೇತರ ಅಭ್ಯರ್ಥಿಗಳ ಸಹಕಾರದೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿದಿತ್ತು.

ಇನ್ನು 1983ರ ಆಂಧ್ರಪ್ರದೇಶ ವಿಧಾನಸಭೆ ಚುನಾವಣೆಗೂ ಒಂದು ವರ್ಷದ ಹಿಂದೆಯಷ್ಟೇ ರಚನೆಯಾಗಿದ್ದ ತೆಲುಗು ದೇಶಂ ಪಕ್ಷವು ಬಹುಮತದೊಂದಿಗೆ ಅಧಿಕಾರಕ್ಕೇರಿದ್ದು ಇತಿಹಾಸ. ಇದೀಗ ಇದೇ ಹಾದಿಯಲ್ಲೇ ಟಿವಿಕೆ ಕೂಡ ತನ್ನ ಹೆಜ್ಜೆ ಗುರುತು ಮೂಡಿಸಿ, ಸ್ಥಾಪನೆಯಾದ ಎರಡು ವರ್ಷದಲ್ಲೇ ಗದ್ದುಗೆ ಏರಿದೆ.

ಹೊಸದಾಗಿ ರಚನೆಯಾದ ಕೆಲವು ಪಕ್ಷಗಳು ಗೆಲುವಿನ ಮೆಟ್ಟಿಲನ್ನೇ ಏರದೆ ಮುಗ್ಗರಿಸಿದ್ದೂ ಇದೆ. ಕಳೆದ ವರ್ಷವಷ್ಟೇ ಬಿಹಾರ ಚುನಾವಣೆಯಲ್ಲಿ ಪ್ರಶಾಂತ್ ಕಿಶೋರ್ ನೇತೃತ್ವದ ಜನ ಸುರಾಜ್ ಪಕ್ಷ ಖಾತೆಯನ್ನೇ ತೆರೆಯದೇ ಹೋದದ್ದು ಇದಕ್ಕೊಂದು ನಿದರ್ಶನ.

ಕಮಲ್ ಹಾಸನ್ ನೇತೃತ್ವದ ಎಂಎನ್‌ಎಂ ನಿರೀಕ್ಷೆಗಳನ್ನು ಹುಟ್ಟಿಸಿ ನಂತರ ನೆಲಕಚ್ಚಿದರೆ. ಇನ್ನೂ ಹಲವಾರು ರಾಜಕೀಯ ಪಕ್ಷಗಳು ರಚನೆಯಾದಷ್ಟೇ ವೇಗದಲ್ಲಿ ಅಳಿಸಿಹೋದದ್ದನ್ನೂ ಗಮನಿಸಬಹುದು.

ಇದೆಲ್ಲದರ ನಡುವೆ ಅಪಾರ ಸದ್ದು ಮಾಡಿ, ಅದಕ್ಕೆ ತಕ್ಕಂತೆ ಗೆಲುವು ಸಾಧಿಸುವ ಮೂಲಕ ಟಿವಿಕೆ ಹೊಸ ರಾಜಕೀಯ ಪಕ್ಷಗಳ ರಚನೆಗೆ ಭರವಸೆ ಮೂಡಿಸಿದೆ. ವಿಜಯ್ ಅವರ ಈ ಚೊಚ್ಚಲ ಗೆಲುವನ್ನು 'ಬ್ಲಾಕ್‌ಬಸ್ಟರ್' ಎಂದೂ ವಿಶ್ಲೇಷಿಸಲಾಗುತ್ತಿದೆ.

ವಿಜಯ್‌ಗೆ 'ಜಾತ್ಯತೀತ ಶಕ್ತಿ'ಗಳ ಬಲ

ಚೆನ್ನೈ: ತಮಿಳುನಾಡಿನಲ್ಲಿ ಸರಳ ಬಹುಮತಕ್ಕೆ ಕೇವಲ 12 ಸ್ಥಾನಗಳ ಕೊರತೆ ಎದುರಿಸುತ್ತಿರುವ ಟಿವಿಕೆ ನಾಯಕ ಸಿ. ಜೋಸೆಫ್ ವಿಜಯ್ ಅವರಿಗೆ ಮುಂದಿನ ಸರ್ಕಾರ ರಚಿಸಲು ಕಾಂಗ್ರೆಸ್ ಮತ್ತು ಡಿಎಂಕೆ ಮೈತ್ರಿಯ ಇತರ ಮಿತ್ರ ಪಕ್ಷಗಳು ಬೆಂಬಲ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಚುನಾವಣೆಯಲ್ಲಿ ಕಾಂಗ್ರೆಸ್ ಐದು ಕ್ಷೇತ್ರಗಳಲ್ಲಿ ಗೆದ್ದಿದ್ದರೆ, ವಿಸಿಕೆ, ಸಿಪಿಐ (ಎಂ), ಸಿಪಿಐ, ಡಿಎಂಡಿಕೆ ಮತ್ತು ಐಯುಎಂಎಲ್ ತಲಾ ಎರಡು ಕ್ಷೇತ್ರಗಳಲ್ಲಿ ವಿಜಯ ಸಾಧಿಸಿವೆ. ಈ ಆರು ಪಕ್ಷಗಳು ಒಟ್ಟು 15 ಕ್ಷೇತ್ರಗಳಲ್ಲಿ ಗೆದ್ದಿವೆ. ಹೀಗಾಗಿ ರಾಜ್ಯದಲ್ಲಿ ಈಗ ಎಲ್ಲರ ಗಮನ ಈ ಪಕ್ಷಗಳತ್ತ ನೆಟ್ಟಿದೆ. ಟಿವಿಕೆ ನಾಯಕ ವಿಜಯ್ ಅವರ ಅದ್ಭುತ ಗೆಲುವಿಗೆ ಅಭಿನಂದಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಪಕ್ಷಕ್ಕೆ ಬೆಂಬಲ ನೀಡುವ ಸುಳಿವು ನೀಡಿದ್ದಾರೆ.

'ಈ ಜನಾದೇಶವು ಯುವ ಜನರ ಧ್ವನಿಯನ್ನು ಬಿಂಬಿಸುತ್ತದೆ. ಅದನ್ನು ನಿರ್ಲಕ್ಷಿಸಲಾಗುವುದಿಲ್ಲ' ಎಂದು ರಾಹುಲ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಚುನಾವಣೆಗೂ ಮುನ್ನ ರಾಹುಲ್ ಅವರು ಟಿವಿಕೆ ಜತೆ ಹೊಂದಾಣಿಕೆ ಮಾಡಿಕೊಳ್ಳಲು ಒಲವು ತೋರಿದ್ದರು. ಆದರೆ ಡಿಎಂಕೆ ಮೈತ್ರಿ ಜತೆ ಮುಂದುವರಿಯುವ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿರ್ಧಾರ ಮೇಲುಗೈ ಸಾಧಿಸಿತ್ತು. ಚುನಾವಣಾ ಪ್ರಚಾರದ ವೇಳೆ ರಾಹುಲ್ ಅವರು ಸ್ಟಾಲಿನ್ ಅವರ ಜತೆ ವೇದಿಕೆ ಹಂಚಿಕೊಂಡಿರಲಿಲ್ಲ. ಇದು ಮೈತ್ರಿಯಲ್ಲಿ ಗೊಂದಲಗಳನ್ನು ಬಹಿರಂಗಪಡಿಸಿತ್ತು.



ತಮಿಳುನಾಡಿನ ಎಲ್ಲ ಕ್ಷೇತ್ರಗಳ ಫಲಿತಾಂಶ ರಾತ್ರಿ 9.30ರವರೆಗೂ ಪ್ರಕಟವಾಗಿರಲಿಲ್ಲ. ಪಕ್ಷಗಳು ಗೆದ್ದಿರುವ ಮತ್ತು ಮುನ್ನಡೆ ಕಾಯ್ದುಕೊಂಡಿರುವ ಬಗೆಗಿನ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿನ ವಿವರಗಳ ಆಧಾರದಲ್ಲಿ ನಕ್ಷೆ ನೀಡಲಾಗಿದೆ

ಸ್ಟಾಲಿನ್‌ಗೆ ಸೋಲು

ಚೆನ್ನೈ (ಪಿಟಿಐ): ತಮಿಳುನಾಡಿನ ಕೊಳತ್ತೂರು ಕ್ಷೇತ್ರದಲ್ಲಿ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಟಿವಿಕೆ ಅಭ್ಯರ್ಥಿ ವಿ.ಎಸ್ ಬಾಬು ಅವರ ಎದುರು 8,795 ಮತಗಳ ಅಂತರದಲ್ಲಿ ಸೋಲನುಭವಿಸಿದ್ದಾರೆ. ಬಾಬು ಅವರು 82,997 ಮತಗಳನ್ನು ಪಡೆದರೆ, ಸ್ಟಾಲಿನ್ ಅವರು 74,202 ಮತಗಳನ್ನು ಪಡೆದರು. 'ಟಿವಿಕೆ ಮುಖ್ಯಸ್ಥ ವಿಜಯ್ ಅವರು ಗೆದ್ದಿದ್ದಾರೆ. ಟಿವಿಕೆಯ ಎಲ್ಲ ಅಭ್ಯರ್ಥಿಗಳ ಗೆಲುವು ವಿಜಯ್ ಅವರ ಗೆಲುವಿದ್ದಂತೆ' ಎಂದು ಬಾಬು ಹೇಳಿದ್ದಾರೆ.

ಏಕೈಕ ರಾಜ್ಯವನ್ನೂ ಕಳೆದುಕೊಂಡ ಸಿಪಿಎಂ

ಪ್ರಜಾವಾಣಿ ವಾರ್ತೆ

ತಿರುವನಂತಪುರ/ನವದೆಹಲಿ: ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ಸಿಪಿಎಂ ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಹೀನಾಯ ಸೋಲು ಅನುಭವಿಸಿದೆ. ಈ ಮೂಲಕ ಕಮ್ಯುನಿಸ್ಟ್ ಪಕ್ಷವು ಅಧಿಕಾರದಲ್ಲಿರುವ ಏಕೈಕ ರಾಜ್ಯವನ್ನೂ ಕಳೆದುಕೊಂಡಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಹತ್ತು ವರ್ಷ ಆಡಳಿತ ನಡೆಸಿದ್ದ ಸಿಪಿಎಂ ತನ್ನ ಆಂತರಿಕ ಸಮಸ್ಯೆಗಳು ಹಾಗೂ ಆಡಳಿತ ವಿರೋಧಿ ಅಲೆಯಿಂದ ಈ ಚುನಾವಣೆಯಲ್ಲಿ ಸೋಲು ಕಂಡಿದೆ.

2021ರಲ್ಲಿ ಪಿಣರಾಯಿ ಅವರ ಜನಪ್ರಿಯತೆಯನ್ನು ಬಳಸಿಕೊಂಡು 99 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಕೇರಳಂನಲ್ಲಿ ಅಧಿಕಾರವನ್ನು ಉಳಿಸಿಕೊಂಡಿದ್ದ ಎಲ್‌ಡಿಎಫ್, ಪಿಣರಾಯಿ ಅವರ ವಿರೋಧಿ ಅಲೆಯಿಂದಾಗಿಯೇ ಈ ಬಾರಿ ದೊಡ್ಡ ಹೊಡೆತ ಅನುಭವಿಸಿದೆ.

2025ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎಲ್‌ಡಿಎಫ್ ಸರ್ಕಾರದ ವಿರುದ್ಧದ ಆಡಳಿತ ವಿರೋಧಿ ಅಲೆ ಹೆಚ್ಚಾಗಿತ್ತು. ಪಿಣರಾಯಿ ಸರ್ಕಾರವು ಮಹಿಳೆಯರು ಮತ್ತು ಯುವಕರನ್ನು ಕೇಂದ್ರೀಕರಿಸಿ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಆ ವಿರೋಧಿ ಅಲೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿದರೂ ನಿರೀಕ್ಷಿತ ಫಲ ನೀಡಿರಲಿಲ್ಲ.

ಪಿಣರಾಯಿ ಅವರು ಹಲವು ಹಾಲಿ ಶಾಸಕರಿಗೆ ಟಿಕೆಟ್ ನೀಡದೆ ಮೂಲೆಗುಂಪು ಮಾಡಿದ್ದಾರೆ ಎಂಬ ಆರೋಪವೂ ಕೇಳಿಬಂದಿತ್ತು. ಇದು ಪಕ್ಷದೊಳಗೆ ಅಸಮಾಧಾನಕ್ಕೆ ಕಾರಣವಾಗಿತ್ತು.

'ಪಾಠ ಕಲಿಯದ ಸಿಪಿಎಂ': ದೇಶದಲ್ಲಿ ಕೇರಳಂ ಹೊರತುಪಡಿಸಿದರೆ ಸದ್ಯ ಯಾವ ರಾಜ್ಯದಲ್ಲೂ ಕಮ್ಯುನಿಸ್ಟ್ ಪಕ್ಷ ಅಧಿಕಾರದಲ್ಲಿ ಇರಲಿಲ್ಲ. 1969ರ ನವೆಂಬರ್‌ನಿಂದ ಈವರೆಗೆ ಕೇರಳಂ ಸೇರಿದಂತೆ ಕೆಲ ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಆದರೆ, ಕೇರಳಂನಲ್ಲಿ ಅಧಿಕಾರದಲ್ಲಿದ್ದ ಸಿಪಿಎಂ 2026ರ ವಿಧಾನಸಭಾ ಚುನಾವಣೆಯಲ್ಲಿ ಸೋಲುವ ಮೂಲಕ ಅಧಿಕಾರವನ್ನು ಕಳೆದುಕೊಂಡಿದೆ.

ಕೇರಳಂನಲ್ಲಿ ಪಕ್ಷದ ಮೇಲೆ ಪ್ರಭುತ್ವ ಸಾಧಿಸಿದ್ದ ಪಿಣರಾಯಿ ವಿಜಯನ್ ಅವರನ್ನು ನಿಯಂತ್ರಿಸಲು ವಿಫಲವಾದ ಸಿಪಿಎಂ ನಾಯಕತ್ವವೇ ಈ ಬೆಳವಣಿಗೆಗೆ ಮೂಲ ಕಾರಣ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಸಿಪಿಎಂ ಒಂದು ಸ್ಥಾನ ಗೆದ್ದಿದೆ. 2021ರಲ್ಲಿ ಒಂದು ಸ್ಥಾನವನ್ನೂ ಗೆಲ್ಲದ ಆ ಪಕ್ಷಕ್ಕೆ ಈ ಬಾರಿ ಒಂದು ಸ್ಥಾನ ಸಿಕ್ಕಿರುವುದು ತುಸು ಸಮಾಧಾನ ತಂದಿದೆ. ತಮಿಳುನಾಡಿನಲ್ಲಿಯೂ ಡಿಎಂಕೆ ಮೈತ್ರಿಕೂಟದ ಬೆಂಬಲದೊಂದಿಗೆ ಸಿಪಿಎಂ ಮತ್ತು ಸಿಪಿಐ ಪಕ್ಷಗಳು ಜಯ ಗಳಿಸಿವೆ. 2011ರಲ್ಲಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಕಳೆದುಕೊಂಡ ನಂತರವೂ ಆ ಪಕ್ಷವು ಪಾಠ ಕಲಿತಂತೆ ಕಾಣುತ್ತಿಲ್ಲ. ಅದೇ ತಪ್ಪುಗಳನ್ನು ಪುನರಾವರ್ತಿಸುತ್ತಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.



ಸತೀಶನ್ ಹೆಸರು ಮುಂಚೂಣಿಯಲ್ಲಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿರುವ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್), ಮುಖ್ಯಮಂತ್ರಿಯನ್ನು ಅಂತಿಮಗೊಳಿಸಲು ಮತ್ತು ಸಂಪುಟದಲ್ಲಿ ಎಲ್ಲ ಮಿತ್ರ ಪಕ್ಷಗಳಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಲು ಕಸರತ್ತು ನಡೆಸಬೇಕಾಗಿದೆ.

ಯುಡಿಎಫ್ ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಅವರು ಮೈತ್ರಿಕೂಟವನ್ನು ಗೆಲುವಿನತ್ತ ಮುನ್ನಡೆಸಿರುವುದರಿಂದ ಮುಖ್ಯಮಂತ್ರಿ ಹುದ್ದೆಗೆ ಅವರ ಹೆಸರು ಮುಂಚೂಣಿಯಲ್ಲಿದೆ.

'ಟೀಮ್ ಯುಡಿಎಫ್' 100ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಹೇಳಿದ್ದ ಸತೀಶನ್ ಅವರು ಪಕ್ಷವು ನಿರ್ಣಾಯಕ ಗೆಲುವು ಸಾಧಿಸದಿದ್ದರೆ 'ರಾಜಕೀಯ ವನವಾಸ'ಕ್ಕೆ ಹೋಗುವುದಾಗಿ ಸವಾಲು ಹಾಕಲೂ ಮುಂದಾಗಿದ್ದರು.

ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಹೆಸರೂ ಕೇಳಿ ಬರುತ್ತಿದ್ದು, ಇಬ್ಬರು ನಾಯಕರ ಬೆಂಬಲಿಗರು ಕೂಡಾ ತೆರೆಮರೆಯಲ್ಲಿ ಕಸರತ್ತು ಆರಂಭಿಸಿದ್ದಾರೆ.

ಮುಖ್ಯಮಂತ್ರಿ ಅಭ್ಯರ್ಥಿಯನ್ನು ಅಂತಿಮಗೊಳಿಸಲು ಪಕ್ಷವು ತನ್ನದೇ ಆದ ಕಾರ್ಯ-ವಿಧಾನವನ್ನು ಅನುಸರಿಸುವುದರಿಂದ ತಾನು ಯಾವುದೇ ಹಕ್ಕು ಚಲಾಯಿಸಲು ಮುಂದಾಗುವುದಿಲ್ಲ ಎಂದು ಚುನಾವಣಾ ಫಲಿತಾಂಶದ ಬೆನ್ನಲ್ಲೇ ಸತೀಶನ್ ಹೇಳಿದ್ದಾರೆ.



ವಿ.ಡಿ. ಸತೀಶನ್

ವೇಣುಗೋಪಾಲ್

ಪಕ್ಷದ ಕೆಲವು ನಾಯಕರು ಈ ಹಿಂದೆಯೇ ಚೆನ್ನಿತ್ತಲ ಮತ್ತು ವೇಣುಗೋಪಾಲ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಗಳೆಂದು ಬಹಿರಂಗವಾಗಿ ಪ್ರಸ್ತಾಪಿಸಿದ್ದರು.

ಆದರೆ ವೇಣುಗೋಪಾಲ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರೆ, ಅದು ಎರಡು ಉಪಚುನಾವಣೆಗಳಿಗೆ ಕಾರಣವಾಗಲಿದೆ ಎಂದು ಅವರನ್ನು ವಿರೋಧಿಸುವ ಬಣವು ಪ್ರಚಾರ ಮಾಡುತ್ತಿದೆ. ಅವರನ್ನು ಶಾಸಕರಾಗಿ ಆಯ್ಕೆ ಮಾಡಲು ಒಂದು ಉಪಚುನಾವಣೆ ನಡೆಯಬೇಕು. ಅದೇ ರೀತಿ, ಅವರು ಆಲಪ್ಪುಳ ಕ್ಷೇತ್ರದ ಸಂಸದ ಸ್ಥಾನ ತ್ಯಜಿಸಬೇಕಿರುವುದರಿಂದ ಅಲ್ಲಿಗೂ ಉಪಚುನಾವಣೆ ನಡೆಸಬೇಕಾಗುತ್ತದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ, ಕೇರಳದ ಉಸ್ತುವಾರಿ ದೀಪಾ ದಾಸ್‌ಮುನ್ಷಿ ಅವರು ಮುಖ್ಯಮಂತ್ರಿಯ ಹೆಸರು ಅಂತಿಮಗೊಳಿಸಲು ಕಾಂಗ್ರೆಸ್‌ನ ಚುನಾಯಿತ ಸದಸ್ಯರೊಂದಿಗೆ ಶೀಘ್ರದಲ್ಲೇ ಮಾತುಕತೆ ಆರಂಭಿಸಲಿದ್ದಾರೆ.

ಪುದುಚೇರಿ: 2 ಕ್ಷೇತ್ರಗಳಲ್ಲಿ ಮುಖ್ಯಮಂತ್ರಿ ಗೆಲುವು



ಎನ್‌ ರಂಗಸ್ವಾಮಿ

ಪುದುಚೇರಿ (ಪಿಟಿಐ): ಪುದುಚೇರಿ ಮುಖ್ಯಮಂತ್ರಿ, ಎಐಎನ್‌ಆರ್‌ಸಿ ನಾಯಕ ಎನ್. ರಂಗಸಾಮಿ ಅವರು ತಟ್ಟಂಚವಾಡಿ ಮತ್ತ ಮಂಗಲಂ ಕ್ಷೇತ್ರಗಳೆರಡಲ್ಲೂ ಗೆಲುವು ಸಾಧಿಸಿದ್ದಾರೆ. ತಮ್ಮ ಭದ್ರಕೋಟೆಯಾದ ತಟ್ಟಾಂಚಾವಡಿ ಕ್ಷೇತ್ರದಲ್ಲಿ ಅವರು 'ನೇಯಂ ಮಕ್ಕಳ್ ಕಳಗಂ' ಪಕ್ಷದ ಇ. ವಿನಾಯಗಂ ಅವರನ್ನು 4441 ಮತಗಳಿಂದ ಸೋಲಿಸಿದರೆ, ಮಂಗಳಂ ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿ ಎಸ್.ಎಸ್. ರಂಗನ್ ವಿರುದ್ಧ 7050 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದಾರೆ. ರಂಗಸಾಮಿ ಅವರು ಈ ಹಿಂದೆ ಕೂಡಾ ಎರಡೆರೆಡು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. 2021ರ ವಿಧಾನಸಭಾ ಕ್ಷೇತ್ರದಲ್ಲಿ ಅವರು ಯಾನಂ ಮತ್ತು ತಟ್ಟಾಂಚಾವಡಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಆದರೆ ಯಾನಂ ಅಲ್ಲಿ ಅವರು ಸೋಲು ಕಂಡಿದ್ದರು.

ಯುಡಿಎಫ್‌ಗೆ ಅನುಕೂಲವಾದ ಅಂಶ

- ಚುನಾವಣೆವರೆಗೂ ಪಕ್ಷದೊಳಗಿನ ಒಳಜಗಳ ಬಹಿರಂಗಗೊಳ್ಳದಂತೆ ನೋಡಿಕೊಂಡ ಕಾಂಗ್ರೆಸ್
- ರಾಜ್ಯ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೇರಿದಂತೆ ವಿವಿಧ ಭರವಸೆಗಳು
- ಕೇಂದ್ರ ಸರ್ಕಾರ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ತಿದ್ದುಪಡಿಗೆ ಮುಂದಾಗಿದ್ದರಿಂದ ಬಿಜೆಪಿಗೆ ಕೈತಪ್ಪಿದ ಕ್ರೈಸ್ತರ ಮತಗಳು
- ಕ್ರೈಸ್ತರು ಹಾಗೂ ಮುಸ್ಲಿಂ ಮತ ಸೆಳೆಯುವಲ್ಲಿ ಸಫಲವಾದ ಯುಡಿಎಫ್

ಕೇರಳಂ: 3 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ: ಕೇರಳಂನ ನೇಮಂ, ಕಜಕ್ಕೂಟ್ಟಂ ಹಾಗೂ ಚಾತ್ತನ್ನೂರ್ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸುವ ಮೂಲಕ ಮತ್ತೆ ಖಾತೆ ತೆರೆದಿದೆ.

ತಿರುವನಂತಪುರದ ನೇಮಂ ಕ್ಷೇತ್ರದಿಂದ ಬಿಜೆಪಿ ಕೇರಳಂ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್, ಕಜಕ್ಕೂಟ್ಟಂ ಕ್ಷೇತ್ರದಿಂದ ವಿ.ಮುರಳೀಧರನ್ ಹಾಗೂ ಕೊಲ್ಲಂ ಜಿಲ್ಲೆಯ ಚಾತ್ತನ್ನೂರ್ ಕ್ಷೇತ್ರದಿಂದ ಬಿ.ಬಿ. ಗೋಪಕುಮಾರ್ ಗೆಲುವು ಸಾಧಿಸಿದ್ದಾರೆ.

'ಇದು ಸಿಪಿಐ ವಿರೋಧಿ ಚುನಾವಣೆಯಾಗಿತ್ತು. ಭ್ರಷ್ಟಾಚಾರ, ಶಬರಿಮಲೆ ಚಿನ್ನ ನಾಪತ್ತೆ ಪ್ರಕರಣದಿಂದ ಜನರು ಬೇಸತ್ತಿದ್ದರು. ಹೀಗಾಗಿ, ನೇಮಂ, ಕಜಕ್ಕೂಟ್ಟಂ ಮತ್ತು ಚಾತ್ತನೂರ್ ಕ್ಷೇತ್ರಗಳ ಜನರು ಕಾಂಗ್ರೆಸ್ ಮತ್ತು ಸಿಪಿಎಂಗೆ ಸ್ಪಷ್ಟ ಉತ್ತರ ನೀಡಿದ್ದಾರೆ' ಎಂದು ರಾಜೀವ್ ಚಂದ್ರಶೇಖರ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

2016ರ ವಿಧಾನಸಭಾ ಚುನಾವಣೆಯಲ್ಲಿ ನೇಮಂ ಕ್ಷೇತ್ರದಿಂದ ಒ.ರಾಜಗೋಪಾಲ್ ಗೆಲುವ ಸಾಧಿಸುವ ಮೂಲಕ ಬಿಜೆಪಿ ಚೊಚ್ಚಲ ಸ್ಥಾನ ಪಡೆದಿತ್ತು. ಆದರೆ, 2021ರಲ್ಲಿ ಆ ಸ್ಥಾನವನ್ನು ಕಳೆದುಕೊಂಡಿತ್ತು.

ಪಕ್ಷ ಸಂಘಟಿಸಿದ ರಾಜೀವ್: ಉದ್ಯಮಿ ರಾಜೀವ್ ಚಂದ್ರಶೇಖರ್ ಅವರು ರಾಜ್ಯಸಭಾ ಸದಸ್ಯರಾಗಿ, ಕೇಂದ್ರ ಸಚಿವರಾಗಿ ಈಗ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ತಮ್ಮ ರಾಜಕೀಯ ಹಾದಿ ಯಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿಯು ನೆಲೆ ಕಂಡುಕೊಳ್ಳಲು ದೀರ್ಘಕಾಲದಿಂದ ಹೆಣಗಾಡುತ್ತಿರುವ ಕೇರಳಂನಲ್ಲಿ, ಪಕ್ಷವನ್ನು ಬಲಗೊಳಿಸುವ ಕಠಿಣ ಜವಾಬ್ದಾರಿಯನ್ನು ಪಕ್ಷದ ರಾಷ್ಟ್ರೀಯ ನಾಯಕರು ಒಂದು ವರ್ಷದ ಹಿಂದೆ ರಾಜೀವ್ ಅವರಿಗೆ ವಹಿಸಿದ್ದರು. ತಳಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವ ಮೂಲಕ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಕಾರಣರಾಗಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ತಿರುವನಂತಪುರದ ನೇಮಂ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ ರಾಜೀವ್ ಚಂದ್ರಶೇಖರ್ ಸಂಭ್ರಮಾಚರಣೆ ಮಾಡಿದರು —ಪಿಟಿಐ ಚಿತ್ರ

3ನೇ ಸ್ಥಾನಕ್ಕೆ ಕುರಿಯನ್

ಕೊಟ್ಟಾಯಂ (ಪಿಟಿಐ): ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ಕಾಂಜಿರಾಪಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕೇಂದ್ರ ಸಚಿವ ಜಾರ್ಜ್ ಕುರಿಯನ್ ಅವರು ಮೂರನೇ ಸ್ಥಾನ ಪಡೆದಿದ್ದಾರೆ. ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಕ್ರೈಸ್ತರನ್ನು ಗಮನದಲ್ಲಿ ಇರಿಸಿ ಕೊಂಡು ಕೇಂದ್ರ ಸಚಿವ ಕುರಿಯನ್ ಅವರನ್ನು ಬಿಜೆಪಿ ಕಣಕ್ಕಿಳಿಸಿತ್ತು.

ಫಾತಿಮಾ ಐಯುಎಂಎಲ್‌ನ ಮೊದಲ ಶಾಸಕಿ

ತಿರುವನಂತಪುರ: ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ಅಭ್ಯರ್ಥಿ ಫಾತಿಮಾ ತಹ್ಲಿಯ ಅವರು ಪೆರಂಬ್ರಾ ವಿಧಾನಸಭಾ ಕ್ಷೇತ್ರದದಲ್ಲಿ ಸಿಪಿಎಂ ಪ್ರಮುಖ ನಾಯಕ ಟಿ.ಪಿ. ರಾಮಕೃಷ್ಣನ್ ಅವರನ್ನು ಸೋಲಿಸಿ ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ. ಈ ಮೂಲಕ ಐಯುಎಂಎಲ್ ಪಕ್ಷದ ಮೊದಲ ಶಾಸಕಿ ಎಂಬ ಖ್ಯಾತಿಗೂ ಪಾತ್ರರಾಗಿದ್ದಾರೆ.

5,087 ಮತಗಳ ಅಂತರದಲ್ಲಿ ಫಾತಿಮಾ ಅವರು ರಾಮಕೃಷ್ಣನ್ ಅವರನ್ನು ಪರಾಭವಗೊಳಿಸಿದ್ದು, ಒಟ್ಟು 81,429 ಮತಗಳನ್ನು ಗಳಿಸುವಲ್ಲಿ ಸಫಲರಾಗಿದ್ದಾರೆ.

ಬಿಜೆಪಿಯ ದಶಕದ ಶ್ರಮಕ್ಕೆ ಪ್ರತಿಫಲ

ಪಶ್ಚಿಮ ಬಂಗಾಳ: ಸಂಘಟನಾತ್ಮಕ ಪ್ರಯತ್ನಕ್ಕೆ ಸಂದ ಯಶಸ್ಸು
• ಸುನಿಲ್ ಬನ್ಸಲ್, ಭೂಪೇಂದರ್ ಯಾದವ್ ಜುಗಲ್‌ಬಂದಿ

• ಅಮೃತಾ ಮಧುಕಲ್ಯ

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಕೇಸರಿ ಪಕ್ಷಕ್ಕೆ ದೊರೆತ ಅದ್ವಿತೀಯ ಜಯವು ಒಂದೆರಡು ದಿನಗಳ ಪರಿಶ್ರಮಕ್ಕೆ ದೊರೆತದ್ದಲ್ಲ. ಅದಕ್ಕಾಗಿ ಬಿಜೆಪಿ ರಾಜ್ಯದಲ್ಲಿ ದಶಕಕ್ಕೂ ಹೆಚ್ಚು ಕಾಲದಿಂದ ಬೆವರು ಹರಿಸಿದೆ. ಈ ಅವಧಿಯಲ್ಲಿ ತನ್ನ ಪ್ರಭಾವವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಲು ನಡೆಸಿದ ಸಂಘಟನಾತ್ಮಕ ಪ್ರಯತ್ನಕ್ಕೆ ಈಗ ಫಲ ದೊರೆತಿದೆ.

ರಾಜ್ಯ ಮಟ್ಟದಿಂದ ಮತಗಟ್ಟೆ ಮಟ್ಟದವರೆಗೆ ಪಕ್ಷವನ್ನು ಕಟ್ಟುವ ಕಾರ್ಯದಲ್ಲಿ ನಿಪುಣರೂ, ಅನುಭವಿಯೂ ಆದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸುನಿಲ್ ಬನ್ಸಲ್ ಮತ್ತು ಕೇಂದ್ರ ಸಚಿವ ಭೂಪೇಂದರ್ ಯಾದವ್ ಅವರಂತಹ ನಾಯಕರನ್ನು ನಿಯೋಜಿಸುವ ಮೂಲಕ, ಗಡಿ ರಾಜ್ಯವನ್ನು ತನ್ನ ತೆಕ್ಕೆಗೆ ಎಳೆದುಕೊಳ್ಳಲು ಬಿಜೆಪಿ ಹೆಜ್ಜೆ ಮುಂದಿಟ್ಟಿತು.

ಪ್ರಮುಖವಾಗಿ, ಗೃಹ ಸಚಿವ ಅಮಿತ್ ಶಾ ಅವರು ಚುನಾವಣೆಗೂ 15 ದಿನ ಮೊದಲು ಪಶ್ಚಿಮ ಬಂಗಾಳದಲ್ಲಿ ಉಳಿಯಲು ನಿರ್ಧರಿಸಿದ್ದು ಪಕ್ಷದ ಪರಿಸ್ಥಿತಿಯನ್ನು ಉತ್ತಮಗೊಳಿಸಿತು. ಬಿಜೆಪಿಯ ನೂತನ ಅಧ್ಯಕ್ಷ ನಿತಿನ್ ನವೀನ್ ಅವರೂ ಈ ಹಿಂದೆ ರಾಜ್ಯದಲ್ಲಿ ಕೆಲಸ ಮಾಡಿದ ಅನುಭವಿ. ಅವರು ಸಾಂಸ್ಥಿಕ ನಿರ್ಧಾರಗಳನ್ನು ವೇಗ ಮತ್ತು ಪರಿಣಾಮಕಾರಿಯಾಗಿ ಮಾಡುತ್ತಿದ್ದುದು ಪಕ್ಷದ ಬಲವನ್ನು ಇನ್ನಷ್ಟು ಹೆಚ್ಚಿಸಿತು.

2021ರ ಸೋಲು, ಈ ಗೆಲುವಿನ ಮೆಟ್ಟಿಲು: ಪಶ್ಚಿಮ ಬಂಗಾಳದಲ್ಲಿ ಐದು ವರ್ಷಗಳ ಹಿಂದಿನ (2021) ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋತಿತ್ತು. ಆದರೆ ಆ ಸೋಲಿನಲ್ಲೂ ಪಕ್ಷಕ್ಕೆ ಮೊದಲಿಗಿಂತಲೂ ಹೆಚ್ಚಿನ ಸ್ಥಾನಗಳು ದೊರೆತಿದ್ದವು. ಜತೆಗೆ ಮತ ಹಂಚಿಕೆಯ ಪ್ರಮಾಣವೂ ಹೆಚ್ಚಾಗಿತ್ತು. ಇನ್ನಷ್ಟು ಶ್ರಮಿಸಿದರೆ ಗಡಿ ರಾಜ್ಯದಲ್ಲಿ ಅಧಿಕಾರಕ್ಕೆ ಬರಬಹುದು ಎಂಬ ವಿಶ್ವಾಸ ಕೇಸರಿ ಪಕ್ಷಕ್ಕೆ ಆಗ ಮೂಡಿತು.

2016ರಲ್ಲಿ ಕೇವಲ 3 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ 2021ರ ಚುನಾವಣೆಯಲ್ಲಿ ತನ್ನ ಬಲವನ್ನು 77 ಸ್ಥಾನಗಳಿಗೆ ಹೆಚ್ಚಿಸಿಕೊಂಡಿತು. ಅದರ ಜತೆಗೆ ಮತ ಹಂಚಿಕೆ ಪ್ರಮಾಣವೂ ಶೇ 10ರಿಂದ ಶೇ 38ಕ್ಕೆ ಹೆಚ್ಚಾಯಿತು. ಈ ಸೋಲನ್ನು ಮುಂದಿನ ದಿನಗಳಲ್ಲಿ ಗೆಲುವಿನ ಮೆಟ್ಟಿಲಾಗಿಸಿಕೊಳ್ಳಲು ಏನೆಲ್ಲ ಯೋಜನೆ ಮಾಡಬೇಕು ಎಂಬುದನ್ನು ನಿರ್ಧರಿಸಲು ಪಕ್ಷವು ಆಂತರಿಕ ಸಮಿತಿ ರಚಿಸಿ ವರದಿ ತರಿಸಿಕೊಂಡಿತು ಎಂದು ಬಿಜೆಪಿಯ ಉನ್ನತ ಮೂಲಗಳು ತಿಳಿಸಿವೆ.

‘ಪ್ರತಿ ಕ್ಷೇತ್ರದಲ್ಲೂ ನಿಧನರಾದ ಅಥವಾ ರಾಜ್ಯವನ್ನು ತೊರೆದವರ ಹೆಸರಿನಲ್ಲಿ ಸುಮಾರು 10,000ದಿಂದ 12,000ಕ್ಕೂ ಹೆಚ್ಚು ಮತಗಳು ಚಲಾವಣೆ ಆಗಿವೆ ಎಂದು ವರದಿಯು ಅಂದಾಜು ಮಾಡಿತ್ತು. ಇವು ಮತದಾರರ ಪಟ್ಟಿಯಲ್ಲಿ ಇರಬಾರದು ಎಂದು ಅದೂ ಉಲ್ಲೇಖಿಸಿತು. ಅಲ್ಲದೆ ರಾಜ್ಯದಲ್ಲಿ ಜನರು ಬದಲಾವಣೆಯನ್ನು ಬಲವಾಗಿ ಬಯಸಿದ್ದರು, ಆದರೆ ನಾವು ಗೆಲ್ಲಲಿಲ್ಲ ಎಂಬುದಾಗಿಯೂ ಅದು ಸ್ಪಷ್ಟವಾಗಿ ತಿಳಿಸಿತ್ತು’ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ವಿವರಿಸಿದರು.

ಬನ್ಸಲ್– ಯಾದವ್ ಜುಗಲ್‌ಬಂದಿ: ಈ ಆಂತರಿಕ ವರದಿಯ ನಂತರ ಬಿಜೆಪಿಯು ಬಂಗಾಳಕ್ಕಾಗಿ ಒಂದು ಯೋಜನೆ ರೂಪಿಸಿತು. 2021ರ ಚುನಾವಣಾ ಸೋಲಿನ ಬೆನ್ನಲ್ಲೇ ರಾಜ್ಯಕ್ಕೆ ಸಂಘಟನಾ ಚತುರ ಸುನಿಲ್ ಬನ್ಸಲ್ ಅವರನ್ನು ಬಿಜೆಪಿ ನಿಯೋಜಿಸಿತು. 2014ರಲ್ಲಿ ವಾರಾಣಸಿ, 2023ರಲ್ಲಿ ತೆಲಂಗಾಣ, 2024ರಲ್ಲಿ ಒಡಿಶಾದಲ್ಲಿ ಚುನಾವಣಾ ಪ್ರಚಾರವನ್ನು ಬನ್ಸಲ್ ಅವರು ಪರಿಣಾಮಕಾರಿಯಾಗಿ ಮಾಡಿದ್ದರು. ಅವರ ಅನುಭವವನ್ನು ಬಿಜೆಪಿ ಪಶ್ಚಿಮ ಬಂಗಾಳದಲ್ಲಿ ಬಳಸಿಕೊಂಡಿತು. ವಿಧಾನಸಭಾ ಚುನಾವಣೆಗೂ ಕೆಲ ತಿಂಗಳು ಮೊದಲೇ ರಾಜ್ಯದಲ್ಲಿಯೇ ಠಿಕಾಣಿ ಹೂಡಿದ ಅವರು ರಾಜಕೀಯ ತಂತ್ರಗಾರಿಕೆ, ಪಕ್ಷ ಸಂಘಟನೆಗಳನ್ನು ರೂಪಿಸಿದರು ಎಂದು ಮೂಲಗಳು ಹೇಳಿವೆ.

ಅಲ್ಲದೆ ಚುನಾವಣಾ ಉಸ್ತುವಾರಿಯಾಗಿ ನೇಮಕಗೊಂಡ ಭೂಪೇಂದರ್ ಯಾದವ್ ಅವರು ರಾಜ್ಯದಲ್ಲಿ ಪಕ್ಷದ ಸಂಘಟನಾ ಬಲವನ್ನು ಮತ್ತಷ್ಟು ಹೆಚ್ಚಿಸಿದರು. ಸೆಪ್ಟೆಂಬರ್‌ನಲ್ಲಿಯೇ ಉಸ್ತುವಾರಿಯಾಗಿ ನೇಮಕಗೊಂಡ ಅವರು, ಅಂದಿನಿಂದಲೇ ರಾಜ್ಯದಲ್ಲಿ ವಾಸ್ತವ್ಯ ಹೂಡಿದ್ದರು.

65,000 ಬೂತ್‌ಗಳಲ್ಲಿ ಉಪಸ್ಥಿತಿ: ರಾಜ್ಯದಲ್ಲಿ 2021ರಲ್ಲಿ 80,000 ಬೂತ್‌ಗಳ ಪೈಕಿ ಕೇವಲ 30,000 ಬೂತ್‌ಗಳಲ್ಲಿ ಬಿಜೆಪಿಯ ಉಪಸ್ಥಿತಿಯಿತ್ತು. ಬನ್ಸಲ್ ಮತ್ತು ಭೂಪೇಂದ್ರ ಅವರು ಜತೆಗೂಡಿ ಸಂಘಟನಾ ಬಲವನ್ನು ಹೆಚ್ಚಿಸಿದರು. ಇದರ ಪರಿಣಾಮ ಈ ಬಾರಿ 65,000 ಬೂತ್‌ಗಳಲ್ಲಿ ಪಕ್ಷದ ಉಪಸ್ಥಿತಿ ಹೊಂದಲು ಸಾಧ್ಯವಾಯಿತು ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರು ಕೇಸರಿ ಬಣ್ಣವನ್ನು ಪರಸ್ಪರ ಎರಚಿಸಿಕೊಳ್ಳುತ್ತಾ ಸೋಮವಾರ ಸಂಭ್ರಮಿಸಿದರು —ಪಿಟಿಐ ಚಿತ್ರ



ಮಮತಾಗೆ ಸೋಲುಣಿಸಿದ ಸುವೇಂದು

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ಅವರು ಭವಾನಿಪುರ ಕ್ಷೇತ್ರದಲ್ಲಿ 15,105 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ.

ಸುವೇಂದು ಅವರು 73,917 ಮತಗಳನ್ನು ಪಡೆದಿದ್ದರೆ, ಮಮತಾ ಅವರು 58,812 ಮತಗಳನ್ನು ಪಡೆದಿದ್ದಾರೆ.

2021ರಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ಮಮತಾ ಅವರನ್ನು ಸುವೇಂದು ಅಧಿಕಾರಿ ಸೋಲಿಸಿದ್ದರು.

ಸುವೇಂದು ಅಧಿಕಾರಿ

ಮಹತ್ವದ ಪಾತ್ರ ನಿರ್ವಹಿಸಿದ ಐ.ಟಿ ಘಟಕ

ಪಶ್ಚಿಮ ಬಂಗಾಳಕ್ಕೆ ಸಂಬಂಧಿಸಿದಂತೆ ಕೆಲ ವರ್ಷಗಳಿಂದ ಬಿಜೆಪಿಯ ಐ.ಟಿ ಘಟಕವು ಪಕ್ಷದ ನಿರೂಪಣೆ ಮೇಲೆ ಎಚ್ಚರಿಕೆಯಿಂದ ಕೆಲಸ ಮಾಡಿದೆ. ಆರ್.ಜಿ.ಕರ್ ಆಸ್ಪತ್ರೆಯ ಘಟನೆ, ಅಕ್ರಮ ವಲಸಿಗರ ಸಮಸ್ಯೆ ಸೇರಿದಂತೆ ವಿವಿಧ ವಿಷಯಗಳನ್ನು ಐ.ಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಎಚ್ಚರಿಕೆಯಿಂದ ನಿರ್ವಹಿಸಿ, ಪಕ್ಷದ ಪರ ನಿರೂಪಣೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದರು ಎಂದು ಮೂಲಗಳು ವಿವರಿಸಿವೆ.

ಅತ್ಯಾಚಾರ ಸಂತ್ರಸ್ತೆ ತಾಯಿಗೆ ಗೆಲುವು

ಪಾನಿಹಾಟಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಆರ್.ಜಿ.ಕರ್ ಕಾಲೇಜಿನ ಅತ್ಯಾಚಾರ ಮತ್ತು ಕೊಲೆ ಸಂತ್ರಸ್ತೆಯ ತಾಯಿ, ಬಿಜೆಪಿ ಅಭ್ಯರ್ಥಿ 28,836 ಮತಗಳ ಅಂತರದಿಂದ ಟಿಎಂಸಿ ಅಭ್ಯರ್ಥಿ ವಿರುದ್ಧ ಗೆಲುವು ಸಾಧಿಸಿದ್ದಾರೆ.

ಟಿಎಂಸಿ ಅಭ್ಯರ್ಥಿ ತೀರ್ಥಂಕರ ಘೋಷ್ ಅವರು ಪರಾಭವಗೊಂಡಿದ್ದಾರೆ.

2024ರ ಆಗಸ್ಟ್‌ನಲ್ಲಿ ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ವೈದ್ಯೆಯ ಮೇಲೆ ಅತ್ಯಾಚಾರ ನಡೆಸಿ, ಕೊಲೆಗೈಯಲಾಗಿತ್ತು.

ಬಿಜೆಪಿ ಗೆಲುವು ಸಾಧಿಸಲು ಆರ್‌ಎಸ್‌ಎಸ್ ಅಡಿಪಾಯ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾಸಭೆ ಚುನಾವಣೆಗೆ ಕೆಲವೇ ವಾರಗಳು ಬಾಕಿ ಇದ್ದಾಗ ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ದೊಡ್ಡ ಮಟ್ಟದಲ್ಲಿ ಅಭಿಯಾನ ನಡೆಸಿ ಮತದಾರರಿಗೆ ಅರಿವು ಮೂಡಿಸಿತ್ತು.

ಸಂಘದ ಸ್ವಯಂ ಸೇವಕರು ರಾಜ್ಯದ ಪ್ರತಿ ಮೂಲೆ ಮೂಲೆಯ ಜನರೊಂದಿಗೆ ಲಕ್ಷಾಂತರ ಸಭೆ ನಡೆಸಿದ್ದರು. ಯಾವುದೇ ಭಯ ಇಲ್ಲದಂತೆ ಮತ ಹಾಕಿ ಎಂದು ಹುರಿದುಂಬಿಸಿದ್ದರು.

‘ಆರ್‌ಎಸ್‌ಎಸ್ ಸ್ವಯಂ ಸೇವಕರು ತಳಮಟ್ಟದ ಆಗುಹೋಗುಗಳ ಬಗ್ಗೆ ತಿಳಿದು ಕೊಳ್ಳುತ್ತ, ಜನರ ನಾಡಿಮಿಡಿತ ಮತ್ತು ಪ್ರತಿಸ್ಪರ್ಧಿಗಳ ಮುಂದಿನ ನಡೆ ಬಗ್ಗೆ ಬಿಜೆಪಿಗೆ ಮೌಲ್ಯಯುತ ಸಲಹೆಗಳನ್ನು ನೀಡುತ್ತಿದ್ದರು. ಇದರಿಂದ ಪಕ್ಷಕ್ಕೆ ಕಾರ್ಯತಂತ್ರವನ್ನು ರೂಪಿಸಲು ಸಾಧ್ಯವಾಯಿತು’ ಎಂದು ಮೂಲಗಳು ತಿಳಿಸಿವೆ.

ಹಿರಿಯ ಬಿಜೆಪಿ ನಾಯಕ ರೊಬ್ಬರು, ‘ಆರ್‌ಎಸ್‌ಎಸ್ ಸ್ವಯಂ ಸೇವಕರು ಭಾರಿ ಪರಿಶ್ರಮ ಹಾಕಿದ್ದಾರೆ. ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯನ್ನು ಅಧಿಕಾರದಿಂದ ಕೆಳಗಿಳಿಸುವಲ್ಲಿ ಸ್ವಯಂ ಸೇವಕರ ಕೊಡುಗೆ ದೊಡ್ಡದಿದೆ’ ಎಂದು ಹೇಳಿದರು.

ಅಭೂತಪೂರ್ವ ಬಹುಮತ ದೊರೆತಿರುವ ಬಗ್ಗೆ ಪ್ರತಿಕ್ರಿಯಿಸಿರುವ ಆರ್‌ಎಸ್‌ಎಸ್‌ನ ಮೂಲಗಳು, ‘ಸಂತೋಷಕ್ಕಿಂತ ಇದು ಅತ್ಯಂತ ಭಾವನಾತ್ಮಕ ಗಳಿಗೆ. ಬಿಜೆಪಿ ಸರ್ಕಾರದ ಸ್ಥಾಪನೆಯ ಮೂಲಕ, ಪಶ್ಚಿಮ ಬಂಗಾಳ ದಲ್ಲಿ ಪ್ರಗತಿ ಮತ್ತು ಗತವೈಭವವು ಮರುಕಳಿಸಲಿದೆ. 2021ರ ವಿಧಾನಸಭೆ ಚುನಾವಣೆ ಯಲ್ಲಿ ಬಿಜೆಪಿಯು 77 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿದ ಬೆನ್ನಲ್ಲೇ, ಅದು ತನ್ನ ಕಬಂಧಬಾಹುವನ್ನು ವಿಸ್ತರಿಸಲು ಆರಂಭಿಸಿತು’ ಎಂದು ಹೇಳಿವೆ.

‘2021ರ ಚುನಾವಣೆ ಬಳಿಕ ನಡೆದ ಹಿಂಸಾಚಾರದಲ್ಲಿ ಹಲವು ಕಾರ್ಯಕರ್ತರನ್ನು ಹತ್ಯೆಗೈಯಲಾಗಿತ್ತು. ಆದರೆ ನಾವು ನಮ್ಮ ಕಾರ್ಯವನ್ನು ನಿಲ್ಲಿಸಲಿಲ್ಲ’ ಎಂದು ಆರ್‌ಎಸ್‌ಎಸ್‌ನ ಮೂಲಗಳು ತಿಳಿಸಿದೆ.

‘ಗೆಲುವಿಗೆ ಎಸ್‌ಐಆರ್ ಏಕೈಕ ಕಾರಣವಲ್ಲ’

ಕೋಲ್ಕತ್ತ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ನೆರಳಿನಲ್ಲಿಯೇ ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣೆ ನಡೆದಿತ್ತು. ಬಿಜೆಪಿಯ ಐತಿಹಾಸಿಕ ವಿಜಯದಲ್ಲಿ ಎಸ್‌ಐಆರ್ ಮಹತ್ವದ ಪಾತ್ರ ವಹಿಸಿದೆ. ಆದರೆ ಗೆಲುವಿಗೆ ಎಸ್‌ಐಆರ್ ಒಂದೇ ಕಾರಣವಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ತಳಮಟ್ಟದಲ್ಲಿ ಬಿಜೆಪಿಯ ಸಂಘಟನಾ ಶಕ್ತಿ, ನಾಯಕತ್ವ, ತೀಕ್ಷ್ಣ ಪ್ರಚಾರ ತಂತ್ರ ಮತ್ತು ಆಡಳಿತವಿರೋಧಿ ಅಲೆ ಸಹ ಬಿಜೆಪಿಯ ಅಭೂತಪೂರ್ವ ಯಶಸ್ಸಿಗೆ ಕಾರಣ ಎಂದು ಅವರು ಪ್ರತಿಪಾದಿಸಿದ್ದಾರೆ.

ವರದಿಗಳ ಪ್ರಕಾರ, ಎಸ್‌ಐಆರ್ ಮೂಲಕ ರಾಜ್ಯದಲ್ಲಿ ಸುಮಾರು 90 ಲಕ್ಷ ಹೆಸರುಗಳನ್ನು (ಶೇ 12) ಮತದಾರರ ಪಟ್ಟಿಯಿಂದ ಅಳಿಸಿಹಾಕಲಾಗಿದೆ. ಹೀಗಾಗಿ ಇದು ಬಹುಚರ್ಚಿತ ವಿಷಯವಾಗಿತ್ತು. ಚುನಾವಣೆಯಲ್ಲಿ ಮತದಾರರ ಭಾಗವಹಿಸುವಿಕೆ ಮತ್ತು ರಾಜಕೀಯ ಸಂಕಥನಗಳ ಮೇಲೆ ವ್ಯಾಪಕ ಪ್ರಭಾವ ಬೀರಿತು ಎಂದು ಹೇಳಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆಯು ಪ್ರಜಾಪ್ರಭುತ್ವದ ಉಳಿವಿಗಾಗಿ ಕೈಗೊಂಡ ಕ್ರಮ ಎಂದು ಬಿಜೆಪಿ ಪ್ರತಿಪಾದಿಸಿದರೆ, ಮತದಾರರ ಹಕ್ಕುಗಳನ್ನು ಕಸಿಯುವ ಯತ್ನ ಎಂದು ಟಿಎಂಸಿ ಆರೋಪಿಸಿತು. ಹೀಗಾಗಿ ಚುನಾವಣಾ ಪ್ರಚಾರದುದ್ದಕ್ಕೂ ಎಸ್‌ಐಆರ್ ಬಹು ಚರ್ಚಿತ ವಿಷಯವಾಗಿ ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿತ್ತು ಎಂದಿದ್ದಾರೆ.

ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೊಗೊಯ್‌ಗೆ ಸೋಲು

ಗೌರವ್ ಗೊಗೊಯ್

ಗುವಾಹಟಿ (ಪಿಟಿಐ): ಅಸ್ಸಾಂ ಕಾಂಗ್ರೆಸ್ ಘಟಕದ ಅಧ್ಯಕ್ಷ ಗೌರವ್ ಗೊಗೊಯ್ ಅವರು ತಮ್ಮ ರಾಜಕೀಯ ಜೀವನದಲ್ಲಿ ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಸೋಲು ಅನುಭವಿಸಿದ್ದಾರೆ.

ಬಿಜೆಪಿ ನಾಯಕ ಹಿತೇಂದ್ರ ನಾಥ್ ಗೋಸ್ವಾಮಿ ಅವರ ವಿರುದ್ಧ ಜೋರ್ಹಾಟ್ ಕ್ಷೇತ್ರದಲ್ಲಿ 23,182 ಮತಗಳಿಂದ ಪರಾಭವ ಗೊಂಡಿದ್ದಾರೆ.

ಮೂರು ಬಾರಿ ಸಂಸದರಾಗಿರುವ ಗೊಗೊಯ್ ಅವರು, ಈ ಬಾರಿ ರಾಜ್ಯ ರಾಜಕೀಯಕ್ಕೆ ಧುಮುಕುವ ತಮ್ಮ ಮೊದಲ ಯತ್ನದಲ್ಲೇ ಸೋಲು ಕಂಡಿದ್ದಾರೆ. ಇವರು 46,257 ಮತಗಳನ್ನು ಪಡೆದಿದ್ದರೆ ಗೋಸ್ವಾಮಿ ಅವರು 69,439 ಮತಗಳೊಂದಿಗೆ ಜೋರ್ಹಾಟ್‌ನಲ್ಲಿ ಸತತ 3ನೇ ಬಾರಿಗೆ ಗೆಲುವು ಸಾಧಿಸಿದ್ದಾರೆ.

2024ರ ಲೋಕಸಭೆ ಚುನಾವಣೆ ಯಲ್ಲಿ ಗೊಗೊಯ್ ಅವರು ಜೋರ್ಹಾಟ್‌ನಿಂದ ಸಂಸದರಾಗಿ ಆಯ್ಕೆಯಾದರು.

ಗೊಗೊಯ್ ಅವರ ಪತ್ನಿ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜೊತೆ ಸಂಪರ್ಕ ಹೊಂದಿದ್ದಾರೆ ಎಂದು ಮುಖ್ಯ ಮಂತ್ರಿ ಹಿಮಂತ ಬಿಸ್ವಾ ಶರ್ಮಾ ಆರೋಪಿಸಿದ್ದರು. ಈ ಬಗ್ಗೆ ತನಿಖೆಗೆ ವಿಶೇಷ ತಂಡವನ್ನೂ ರಚಿಸಲಾಯಿತು. ಅದು ಕಳೆದ ಸೆಪ್ಟೆಂಬರ್‌ನಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಇದು ಸಂಪೂರ್ಣ ಆಧಾರರಹಿತ ಎಂದು ಗೊಗೊಯ್ ಅವರು ಆರೋಪಗಳನ್ನು ತಳ್ಳಿಹಾಕಿದ್ದರು.

ನೋಟಾ: ಆಸಕ್ತಿ ತೋರದ ಮತದಾರ

ನವದೆಹಲಿ (ಪಿಟಿಐ): ಪಂಚ ರಾಜ್ಯಗಳ ಚುನಾವಣೆಯಲ್ಲಿ ‘ನೋಟಾ’ದ ಬಗ್ಗೆ ಮತದಾರರು ಒಲವು ತೋರಿಲ್ಲ.

ಅಸ್ಸಾಂ ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿ ‘ನೋಟಾ’ದ ಪ್ರಮಾಣವು ಶೇಕಡ ಒಂದರ ಗಡಿ ದಾಟಿಲ್ಲ ಎಂದು ಚುನಾವಣಾ ಆಯೋಗದ ದತ್ತಾಂಶಗಳು ತಿಳಿಸಿವೆ.

ಅಸ್ಸಾಂನಲ್ಲಿ ಶೇ 1.29ರಷ್ಟು, ಪಶ್ಚಿಮ ಬಂಗಾಳದಲ್ಲಿ ಶೇ 0.81ರಷ್ಟು, ಪುದುಚೆರಿ ಯಲ್ಲಿ ಶೇ 0.73ರಷ್ಟು, ಕೇರಳದಲ್ಲಿ ಶೇ 0.58ರಷ್ಟು, ತಮಿಳುನಾಡಿನಲ್ಲಿ ಶೇ 0.41ರಷ್ಟು ನೋಟಾ ಮತ ಚಲಾವಣೆಯಾಗಿದೆ.

ಕಡಿಮೆ ಪ್ರಮಾಣದಲ್ಲಿ ನೋಟಾ ಚಲಾವಣೆ ಆಗಿರುವುದು, ಪ್ರಾದೇಶಿಕ ರಾಜಕೀಯ ಬದಲಾವಣೆ, ಮತದಾರರ ಆದ್ಯತೆ ಮತ್ತು ರಾಜಕೀಯ ಭಾಗವಹಿಸುವಿಕೆಯ ಪ್ರಮಾಣವನ್ನು ಪ್ರತಿಬಿಂಬಿಸುತ್ತದೆ.

ಅಸ್ಸಾಂ ವಿಧಾನಸಭಾ ಚುನಾವಣೆ ಫಲಿತಾಂಶ • ಸತತ ಮೂರನೇ ಅವಧಿಗೆ ಗೆಲುವು ದಾಖಲಿಸಿದ ಬಿಜೆಪಿ

ಹಿಮಂತ ಶರ್ಮಾ ‘ನಾಯಕತ್ವ’ಕ್ಕೆ ಅನುಮೋದನೆ

• ಸುಮಿತ್ ಕರ್ಮಾಕರ್

ಗುವಾಹಟಿ: ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮಿತ್ರಕೂಟ ಐತಿಹಾಸಿಕ ಗೆಲುವು ದಾಖಲಿಸುತ್ತಿದ್ದಂತೆಯೇ ‘ಶತಕದೊಂದಿಗೆ ಹ್ಯಾಟ್ರಿಕ್’ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ‘ಎಕ್ಸ್’ ಮೂಲಕ ಸಂತಸ ಹಂಚಿಕೊಂಡಿದ್ದಾರೆ. ಒಟ್ಟು 126 ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ 100ಕ್ಕೂ ಅಧಿಕ ಸೀಟು ಗೆಲ್ಲುವ ಮೂಲಕ ಮೂರನೇ ಅವಧಿಗೆ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಚುನಾವಣೆ ಘೋಷಣೆಯಾಗುವ ತಿಂಗಳ ಮೊದಲು ಪಕ್ಷ ಗೆಲ್ಲುವ ಕುರಿತು ಶರ್ಮಾ ನಿಖರವಾಗಿ ಭವಿಷ್ಯ ನುಡಿದಿದ್ದರು. ಚುನಾವಣೆ ಘೋಷಣೆ ಯಾದ ಬಳಿಕ ಮತ್ತೆರಡು ವಿಷಯಗಳನ್ನು ಬಹಿರಂಗಪಡಿಸಿದ್ದರು. ವಿರೋಧ ಪಕ್ಷ ಕಾಂಗ್ರೆಸ್ ಮುಸಲ್ಮಾನರು ಬಹುಸಂಖ್ಯಾತರಾಗಿರುವ 20–22 ಕ್ಷೇತ್ರಗಳಲ್ಲಿ ಗೆಲುವು ಪಡೆಯಲಿದೆ, ಬದ್ರುದ್ದೀನ್ ಅಜ್ಮಲ್ ನೇತೃತ್ವದ ಎಐಯುಡಿಎಫ್ ಪಕ್ಷವು ಅಸ್ಸಾಂ ರಾಜಕಾರಣದಿಂದಲೇ ನಾಮಾವಶೇಷವಾಗಲಿದೆ ಎಂದು ಹೇಳಿದ್ದರು. ಶರ್ಮಾ ಹೇಳಿದ ಎರಡೂ ವಿಷಯಗಳು ಬಹುತೇಕ ನಿಜವಾಗಿವೆ. ಸೋಮವಾರ ಪ್ರಕಟಗೊಂಡ ಫಲಿತಾಂಶದಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿರುವ 18 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಪಡೆದಿದೆ. ಕಳೆದ 25 ವರ್ಷಗಳಲ್ಲಿಯೇ ಕಾಂಗ್ರೆಸ್‌ನ ಅತ್ಯಂತ ಹೀನಾಯ ಸೋಲಾಗಿದೆ. ಎಐಯುಡಿಎಫ್ ಅತ್ಯಂತ ಹೀನಾಯ ಪ್ರದರ್ಶನ ನೀಡಿದ್ದು, ಕೇವಲ 2 ಕ್ಷೇತ್ರಗಳಲ್ಲಿ ಗೆಲುವು ಪಡೆದಿದೆ.

2021ರಲ್ಲಿ ಬಿಜೆಪಿ 60ರಲ್ಲಿ ಗೆಲುವು ಪಡೆದರೆ, ಈ ಸಲ ಗೆಲುವಿನ ನಾಗಾಲೋಟವನ್ನು 82 ಕ್ಷೇತ್ರಗಳಿಗೆ ವಿಸ್ತರಿಸಿದೆ. ಮಿತ್ರ ಪಕ್ಷ ಅಸ್ಸೋಂ ಗಣ ಪರಿಷತ್, ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ ತಲಾ 10 ಕ್ಷೇತ್ರಗಳಲ್ಲಿ ಗೆಲುವಿನ ಸಿಹಿ ಉಂಡಿದೆ.

ಗುಜರಾತ್‌ನಂತೆಯೇ ಅಸ್ಸಾಂನಲ್ಲಿಯೂ ಕೂಡ ಸತತ ಮೂರನೇ ಅವಧಿಗೆ ಬಿಜೆಪಿ ಗೆಲುವು ಪಡೆದಿದ್ದು, ಶರ್ಮಾ ನಾಯಕತ್ವಕ್ಕೆ ಜನರು ಬಹುಮತದ ಮುದ್ರೆಯೊತ್ತಿದ್ದಾರೆ. ಮುಖ್ಯಮಂತ್ರಿಯಾಗಿ ಮೊದಲ ಚುನಾವಣೆ ಎದುರಿಸಿದ್ದ ಹಿಮಂತ ಕೂಡ ರಾಷ್ಟ್ರ ಮಟ್ಟದಲ್ಲಿ ತಮ್ಮ ನಾಯಕತ್ವವನ್ನು ಸಾಬೀತುಪಡಿಸಿದ್ದಾರೆ.

‘ಎನ್‌ಡಿಎ ಮಿತ್ರಕೂಟಕ್ಕೆ 100ಕ್ಕೂ ಅಧಿಕ ಸೀಟು ಸಾಧ್ಯ ಎಂದು ನಂಬಿದ್ದೆನು. ಮೋದಿ ಅವರ ಆಶೀರ್ವಾದ, ನಾವು ಮಾಡಿದ ಅಭಿವೃದ್ಧಿ ಕಾರ್ಯಗಳಿಗೆ ಅಸ್ಸಾಂ ಜನರು ಮನಃಪೂರ್ವಕವಾಗಿ ಆಶೀರ್ವಾದಿಸಿದ್ದಾರೆ’ ಎಂದು ಗೆಲುವಿನ ಬಳಿಕ ಪ್ರತಿಕ್ರಿಯಿಸಿದ್ದಾರೆ.

ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಮೂರನೇ ಅವಧಿಗೆ ಜಯಗಳಿಸಿದ ಬಳಿಕ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಗುವಾಹಟಿಯಲ್ಲಿ ಸಂತಸ ಹಂಚಿಕೊಂಡರು —ಪಿಟಿಐ ಚಿತ್ರ



ನುಸುಳುಕೋರರಿಗೆ ಕಡಿವಾಣ

‘ಬಾಂಗ್ಲಾದೇಶದ ನುಸುಳುಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಹಿಂದೂಗಳನ್ನು ಒಗ್ಗೂಡಿಸಲು ಯಶಸ್ವಿಯಾದರು’ ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದ್ದಾರೆ.

2021ರಲ್ಲಿ ಮುಖ್ಯಮಂತ್ರಿಯಾದ ಬಳಿಕ ಶರ್ಮಾ ಸರ್ಕಾರವು ಬಂಗಾಳಿ ಮಾತನಾಡುವ ಮುಸಲ್ಮಾನರನ್ನು ಅರಣ್ಯ ಹಾಗೂ ಸರ್ಕಾರಿ ಭೂಮಿಯಿಂದ ಒಕ್ಕಲೆಬ್ಬಿಸಿ, ಅಕ್ರಮ ನುಸುಳುಕೋರರನ್ನು ಮರಳಿ ಬಾಂಗ್ಲಾದೇಶಕ್ಕೆ ಕಳುಹಿಸಿದರು. ಅದರ ಜೊತೆಗೆ ಕಾಂಗ್ರೆಸ್‌ನ ಹಲವು ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಂಡು, ಕಾಂಗ್ರೆಸ್ ಘಟಕದಲ್ಲಿ ನಾಯಕತ್ವದ ನಿರ್ವಾತ ಸೃಷ್ಟಿಸಿದರು. ದಶಕಗಳಿಂದ ಬಾಕಿ ಉಳಿಸಿದ್ದ ಹಲವು ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸುವ ಮೂಲಕ ಗೆಲುವಿನ ಹಾದಿ ಸುಗಮಗೊಳಿಸಿದರು ಎಂದು ಅವರು ವಿವರಿಸಿದ್ದಾರೆ.

ಇಲ್ಲಿ ಸೀಟಿ ಸದ್ದು, ಅಲ್ಲಿ ದೀದಿಗೆ ಗುದ್ದು

ಒಂದನೇ ಪುಟದಿಂದ...

ಮಹಿಳೆಯರು ಹಾಗೂ ಯುವಜನರ ಕೋಪಕ್ಕೆ ಪಕ್ಷವು ಎರಡಂಕಿಗೆ ಕುಸಿಯುವಂತಾಗಿದೆ. ಹಿಂದುತ್ವದ ಹೆಸರಿನ ಧ್ರುವೀಕರಣವೇ ಬಿಜೆಪಿಗೆ ಚುನಾವಣೆಗಳನ್ನು ಗೆಲ್ಲಿಸಿಕೊಡುವ ಪ್ರಮುಖ ಅಂಶ ಎಂಬುದನ್ನು ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ಫಲಿತಾಂಶ ಮತ್ತೊಮ್ಮೆ ಸಾಬೀತು ಮಾಡಿದೆ. ಮೋದಿ, ಅಮಿತ್ ಶಾ, ಹಿಮಂತ್ ಬಿಸ್ವ ಶರ್ಮಾ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತಿತರ ನಾಯಕರು ಅಕ್ರಮ ನುಸುಳುಕೋರರ ವಿಷಯಗಳನ್ನು ಪದೇ ಪದೇ ಪ್ರಸ್ತಾಪಿಸಿದರು. ಟಿಎಂಸಿ ಹಾಗೂ ಕಾಂಗ್ರೆಸ್ ಮುಸ್ಲಿಮರ ಓಲೈಕೆಯಲ್ಲಿ ತೊಡಗಿವೆ ಎಂದು ಸಾರಿ ಹಿಂದೂ ಮತಗಳ ಕ್ರೋಡೀಕರಣ ಮಾಡಿದರು. ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 30ರಿಂದ ಶೇ 35ರಷ್ಟಿದೆ. ಪಶ್ಚಿಮ ಬಂಗಾಳದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 20ಕ್ಕಿಂತ ಕಡಿಮೆ ಇರುವ 153 ಕ್ಷೇತ್ರಗಳ ಪೈಕಿ, 120ರಲ್ಲಿ ಬಿಜೆಪಿ ಗೆದ್ದು ಬೀಗಿದ್ದೇ ಇದಕ್ಕೆ ಪುರಾವೆ. ಅಸ್ಸಾಂನಲ್ಲಿ ಕಾಂಗ್ರೆಸ್‌ನಿಂದ ಗೆದ್ದಿರುವ 19 ಶಾಸಕರ ಪೈಕಿ 18 ಮಂದಿ ಮುಸ್ಲಿಮರು.

ಹಳ್ಳಿ ಮುಟ್ಟಿದ ಸಂಘಟನೆ: ಬಂಗಾಳದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲು ಹಾಗೂ 2024ರ ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಉಂಟಾದ ಬಳಿಕ ಬಿಜೆಪಿಯು ಚುನಾವಣಾ ಕಾರ್ಯತಂತ್ರದಲ್ಲಿ ಬದಲಾವಣೆ ಮಾಡಿತು. ಅಮಿತ್ ಶಾ ಅವರು ರಾಜ್ಯದ ಪಕ್ಷದ ಚಟುವಟಿಕೆಗಳ ನೇರ ಉಸ್ತುವಾರಿ ವಹಿಸಿಕೊಂಡರು. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸುನಿಲ್ ಬನ್ಸಲ್ ವರ್ಷಗಳಿಂದ ರಾಜ್ಯದ ಹೊಣೆ ಹೊತ್ತುಕೊಂಡು ಗ್ರಾಮಗಳಲ್ಲಿ ಸಂಘಟನೆ ಬಲಪಡಿಸುವ ಹೊಣೆ ನಿಭಾಯಿಸಿದರು. ಕೇಂದ್ರ ಸಚಿವ ಭೂಪೇಂದರ್ ಯಾದವ್ ಪ್ರತಿ ವಾರಾಂತ್ಯದಲ್ಲಿ ರಾಜ್ಯಕ್ಕೆ ಭೇಟಿ ನೀಡಿ ಸಂಘಟನೆಗೆ ಚುರುಕು ಮುಟ್ಟಿಸಿದರು. ಬಿಹಾರದ ಸಚಿವ ಮಂಗಲ್ ಪಾಂಡೆ ಅವರು ಉತ್ತರ ಪ್ರದೇಶದ ಹಾಗೂ ಬಿಹಾರದ ವಲಸೆ ಕಾರ್ಮಿಕರ ಯೋಗ ಕ್ಷೇಮ ವಿಚಾರಿಸುವ ಹೊಣೆ ಹೊತ್ತುಕೊಂಡರು. ಮಹಿಳಾ ಮತಗಳನ್ನು ಸೆಳೆಯುವ ಉದ್ದೇಶದಿಂದ 1.65 ಲಕ್ಷ ಸಣ್ಣ ಸಣ್ಣ ಸಭೆಗಳನ್ನು ಪಕ್ಷ ನಡೆಸಿತು.

2024ರ ಲೋಕಸಭಾ ಸಂಖ್ಯೆಗಳಿಗೆ ಹೋಲಿಸಿದರೆ, ಬಿಜೆಪಿಯು ಈ ಸಲ ತನ್ನ ಮತ ಪಾಲನ್ನು 8 ಪ್ರತಿಶತದಷ್ಟು ಹೆಚ್ಚಿಸುವ ಮೂಲಕ, ಬಹುಸಂಖ್ಯಾತ ಸಮುದಾಯಗಳ ಮತಗಳನ್ನು ಬುಟ್ಟಿಗೆ ಹಾಕಿಕೊಂಡಿದೆ. ಕಳೆದ ಎರಡು ಲೋಕ ಸಭಾ ಚುನಾವಣೆಗಳಲ್ಲಿ ಉತ್ತರ ಬಂಗಾಳದಲ್ಲಿ ದಲಿತ, ಬುಡಕಟ್ಟು ಮತ ಬ್ಯಾಂಕ್‌ಗೆ ಪಕ್ಷ ಲಗ್ಗೆ ಹಾಕಿತ್ತು. ಈ ಸಲ ಇತರ ಭಾಗಗಳಿಗೂ ಪಕ್ಷದ ನೆಲೆ ವಿಸ್ತರಿಸಿದೆ. ಬಿಜೆಪಿ ನಾಯಕರು ಮಮತಾ ಬ್ಯಾನರ್ಜಿ ಅವರ ಮೇಲೆ ವೈಯಕ್ತಿಕ ದಾಳಿ ನಡೆಸದೆ 15 ವರ್ಷಗಳ ಆಡಳಿತದ ವಿರುದ್ಧ ವಾಗ್ದಾಳಿ ನಡೆಸಿದರು. ಮಮತಾ ಅವರ ‘ಸ್ಥಳೀಯರು ವರ್ಸಸ್ ಹೊರಗಿನವರು’ ಪ್ರಚಾರ ತಂತ್ರವೂ ಈ ಸಲ ಕೆಲಸ ಮಾಡಲಿಲ್ಲ. ಇದಕ್ಕೆ ಪ್ರತಿಯಾಗಿ ಬಿಜೆಪಿ ಸಂಘಟಿತ ಹಾಗೂ ತೀವ್ರ ಪ್ರಚಾರ ನಡೆಸಿತು. ಮೋದಿ ಅವರು 19 ದಿನಗಳಲ್ಲಿ 22 ರ್‍ಯಾಲಿಗಳಲ್ಲಿ ಭೋರ್ಗರೆದರು.

ವಿಜಯ್ ಸುನಾಮಿ

ತಮಿಳುನಾಡಿನಲ್ಲಿ ಹೊಸ ಪಕ್ಷ ಕಟ್ಟಿ ಚುನಾವಣಾ ಕಣಕ್ಕೆ ಧುಮುಕಿದ್ದ ಜನಪ್ರಿಯ ನಟ ವಿಜಯ್ ಅವರ ಸುಂಟರಗಾಳಿಗೆ ದ್ರಾವಿಡ ಪಕ್ಷಗಳೆರಡು ಕೊಚ್ಚಿ ಹೋಗಿವೆ. ರಾಜ್ಯದಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿಯಾಗಿದೆ. ಆಡಳಿತ ವಿರೋಧಿ ಅಲೆಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೋತು ಸುಣ್ಣವಾಗಿದ್ದಾರೆ. ಬಹುತೇಕ ಮತಗಟ್ಟೆ ಸಮೀಕ್ಷೆಗಳು ಸುಳ್ಳಾಗಿವೆ. ವಿಜಯ್ ಕಿಂಗ್ ಮೇಕರ್ ಆಗಲಿದ್ದಾರೆ ಎಂದು ಸಮೀಕ್ಷೆಗಳು ಹೇಳಿದ್ದವು. ಅವರು ಈಗ ಕಿಂಗ್ (ರಾಜ) ಆಗಿದ್ದಾರೆ. ರಾಜ್ಯದ ಜನರು ಹೊಸ ನಾಯಕನಿಗೆ ಮಣೆ ಹಾಕುವ ಮೂಲಕ ಪ್ರಾದೇಶಿಕ ರಾಜಕಾರಣ ಮತ್ತೊಂದು ಮಜಲಿಗೆ ಹೊರಳುವಂತೆ ಮಾಡಿದ್ದಾರೆ.

1977ರಲ್ಲಿ ಎಂ.ಕರುಣಾನಿಧಿ ಅವರ ಪಕ್ಷವನ್ನು ಸೂಪರ್ ಸ್ಟಾರ್ ಎಂ.ಜಿ.ರಾಮಚಂದ್ರನ್ ಅವರ ಎಐಎಡಿಎಂಕೆ ಪಕ್ಷವು ಸೋಲಿಸಿತ್ತು. ಇದೀಗ, ಕರುಣಾನಿಧಿ ಅವರ ಮಗ ಸ್ಟಾಲಿನ್ ಅವರು ವಿಜಯ್ ಅವರ ಸುನಾಮಿ ಎದುರು ತರಗೆಲೆಯಾಗಿದ್ದಾರೆ. ವಿಜಯ್ ಅವರು ಮುಖ್ಯಮಂತ್ರಿ ಗಾದಿಯ ಕನಸು ಈಡೇರಿಸಿಕೊಳ್ಳಲು ಇತರ ಪಕ್ಷಗಳನ್ನು ನೆಚ್ಚಿಕೊಳ್ಳಬೇಕಿದೆ. ನಟರಾದ ಎಂ.ಜಿ.ರಾಮಚಂದ್ರನ್, ಜಯಲಲಿತಾ ಅವರಂತೆಯೇ ಮುಖ್ಯಮಂತ್ರಿ ಆಗಬೇಕು ಎಂದು ಸಂಕಲ್ಪ ತೊಟ್ಟು 2009ರಿಂದ ಸಂಘಟನೆಯಲ್ಲಿ ತೊಡಗಿ ಶ್ರಮ ಹಾಕುತ್ತಲೇ ಬಂದ ವಿಜಯ್ ಇತಿಹಾಸ ನಿರ್ಮಿಸಿದ್ದಾರೆ.

ರಾಜ್ಯದಲ್ಲಿ ಮತ್ತೊಂದು ದ್ರಾವಿಡ ಪಕ್ಷದ ಉದಯಕ್ಕೆ ಅವಕಾಶವಿದೆ ಎಂಬುದನ್ನು ಮೊದಲ ಚುನಾವಣೆಯಲ್ಲೇ ಸಾಬೀತುಪಡಿಸಿದ್ದಾರೆ. ಜತೆಗೆ, ರಾಜ್ಯವನ್ನು ಪರ್ಯಾಯವಾಗಿ ಆಳಿದ ಎರಡು ಪಕ್ಷಗಳಿಂದ ಬೇಸತ್ತ ಮತದಾರರ ಬದಲಾವಣೆಯ ಹಂಬಲದ ಭರಪೂರ ಲಾಭ ಪಡೆದಿದ್ದಾರೆ. ಪಶ್ಚಿಮ ಬಂಗಾಳದ ಮಾದರಿಯಲ್ಲಿ ತಮಿಳುನಾಡು ವಶಕ್ಕೆ ಬಿಜೆಪಿ ಇನ್ನಿಲ್ಲದ ಪ್ರಯತ್ನ ನಡೆಸಿತ್ತು. ಆದರೆ, ಯಶಸ್ಸು ಸಿಕ್ಕಿಲ್ಲ.

ದಶಕದ ಬಳಿಕ ಯುಡಿಎಫ್‌ಗೆ ಮಣೆ

ಕೇರಳದಲ್ಲಿ ಹತ್ತು ವರ್ಷಗಳ ನಂತರ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಅಧಿಕಾರಕ್ಕೆ ಮರಳುತ್ತಿದ್ದು, 140 ಸದಸ್ಯರ ವಿಧಾನ ಸಭೆಯಲ್ಲಿ 102 ಸ್ಥಾನಗಳಲ್ಲಿ ಐತಿಹಾಸಿಕ ಗೆಲುವು ಸಾಧಿಸಿದೆ.

ಪಿಣರಾಯಿ ವಿಜಯನ್ ಅವರ ಹತ್ತು ವರ್ಷಗಳ ಆಡಳಿತದ ವಿರುದ್ಧದ ಅಲೆ ಹಾಗೂ ಪಕ್ಷದ ನಾಯಕತ್ವದ ಬಗ್ಗೆ ಸಿಪಿಎಂನೊಳಗೆ ಸೃಷ್ಟಿಯಾಗಿದ್ದ ಅಸಮಾಧಾನ ಚುನಾವಣಾ ಫಲಿತಾಂಶದಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ. ಪಿಣರಾಯಿ ದುರಹಂಕಾರವೇ ಸೋಲಿಗೆ ಕಾರಣ ಎಂದು ಪಕ್ಷದ ನಾಯಕರೇ ದೂಷಿಸಿದ್ದಾರೆ. ಮೂರು ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಬಿಜೆಪಿ ತನ್ನ ಖಾತೆಯನ್ನು ಮತ್ತೆ ತೆರೆದಿದೆ. 2016ರ ಚುನಾವಣೆ ಯಲ್ಲಿ ಪಕ್ಷ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿತ್ತು. ಮಧ್ಯ ಕೇರಳದ ಕ್ರೈಸ್ತ ಭದ್ರಕೋಟೆಯಲ್ಲಿ ಕೇಸರಿ ಪಕ್ಷದ ಮತ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ.

ಬಂಗಾಳದಲ್ಲಿ ಗೆಲುವು: ಕಾರ್ಯಕರ್ತರನ್ನು ಶ್ಲಾಘಿಸಿದ ಮೋದಿ

ಗಂಗಾಸಾಗರದವರೆಗೆ ಅರಳಿದ ಕಮಲ

ನವದೆಹಲಿ/ ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಐತಿಹಾಸಿಕ ಗೆಲುವಿನೊಂದಿಗೆ ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಕಮಲ ಅರಳಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆದ ವಿಜಯೋತ್ಸವ ಸಮಾರಂಭದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಎಲ್ಲಾ ಪಕ್ಷಗಳು ಬದಲಾವಣೆಗಾಗಿ ಕೆಲಸ ಮಾಡಬೇಕೇ ಹೊರತು ಸೇಡು ತೀರಿಸಿಕೊಳ್ಳಲು ಮುಂದಾಗಬಾರದು’ ಎಂದರು.

‘ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೆರಿ, ತಮಿಳುನಾಡು ಮತ್ತು ಕೇರಳಂ ರಾಜ್ಯಗಳ ಜನತೆಗೆ ಶಿರಬಾಗಿ ನಮಿಸುವೆ’ ಎಂದು ಮೋದಿ ಹೇಳಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ರಾಜನಾಥ ಸಿಂಗ್ ಅವರು ಸಮಾರಂಭದಲ್ಲಿ ಪಾಲ್ಗೊಂಡರು.

‘ಕಳೆದ ವರ್ಷ ನವೆಂಬರ್ 14ರಂದು ಬಿಹಾರ ಚುನಾವಣೆಯ ಫಲಿತಾಂಶ ಹೊರಬಿದ್ದಾಗ ಗಂಗಾ ನದಿಯು ಬಿಹಾರದಿಂದ ಗಂಗಾಸಾಗರದವರೆಗೆ (ಪಶ್ಚಿಮ ಬಂಗಾಳ) ಹರಿಯಲಿದೆ ಎಂದು ಬಿಜೆಪಿ ಕಾರ್ಯಕರ್ತರಿಗೆ ಹೇಳಿದ್ದೆ’ ಎಂಬುದನ್ನು ಪ್ರಧಾನಿ ನೆನಪಿಸಿಕೊಂಡರು.

ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಗೆ ಬಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅದ್ದೂರಿ ಸ್ವಾಗತ ಕೋರಲಾಯಿತು —ಪಿಟಿಐ ಚಿತ್ರ

‘ಇದೀಗ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವಿನೊಂದಿಗೆ ಗಂಗೋತ್ರಿಯಿಂದ (ಉತ್ತರಾಖಂಡ) ಗಂಗಾಸಾಗರದವರೆಗೆ (ಪಶ್ಚಿಮ ಬಂಗಾಳ) ಕಮಲ ಅರಳಿದೆ. ಉತ್ತರಾಖಂಡ, ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳ– ಗಂಗಾಮಾತೆಯನ್ನು ಸುತ್ತುವರೆದಿರುವ ಈ ರಾಜ್ಯಗಳಲ್ಲಿ ಬಿಜೆಪಿ-ಎನ್‌ಡಿಎ ಸರ್ಕಾರಗಳಿವೆ’ ಎಂದರು.

‘ಬಂಗಾಳದಲ್ಲಿ ಇದೇ ಮೊದಲ ಬಾರಿಗೆ, ಚುನಾವಣೆಯನ್ನು ಸಂಪೂರ್ಣವಾಗಿ ಶಾಂತಿಯುತವಾಗಿ ನಡೆಸಲಾಯಿತು. ಒಬ್ಬ ವ್ಯಕ್ತಿಯೂ ಪ್ರಾಣ ಕಳೆದುಕೊಳ್ಳಲಿಲ್ಲ’ ಎಂದು ಹಿಂಸಾಚಾರ ಮುಕ್ತ ಮತದಾನವನ್ನು ಖಾತರಿಪಡಿಸಿಕೊಳ್ಳಲು ಭದ್ರತಾ ಪಡೆಗಳು ವಹಿಸಿದ ಪಾತ್ರವನ್ನು ಉಲ್ಲೇಖಿಸಿ ಪ್ರಧಾನಿ ಹೇಳಿದರು.

ಸೋಲು ಮತ್ತು ಗೆಲುವು ಪ್ರಜಾಪ್ರಭುತ್ವ ಮತ್ತು ರಾಜಕೀಯದ ಭಾಗವಾಗಿದೆ. ಆದರೆ, ನಾಲ್ಕು ರಾಜ್ಯಗಳು ಮತ್ತು ಪುದುಚೆರಿಯ ಜನರು, ಭಾರತವು ಪ್ರಜಾಪ್ರಭುತ್ವದ ತಾಯಿ ಎಂಬುದನ್ನು ಜಗತ್ತಿಗೆ ತೋರಿಸಿದ್ದಾರೆ ಎಂದು ಹೇಳಿದರು.

ಮನಸ್ಸಿನ ಪ್ರಸನ್ನತೆ ಮತ್ತು ಆರೋಗ್ಯ



• ರಮ್ಯಾ ಶ್ರೀಹರಿ

ಮನಸ್ಸು ಎಷ್ಟು ಪ್ರಶಾಂತವಾಗಿದೆ ಎನ್ನುವುದರ ಮೇಲೇ ದೇಹದ ನಿಜವಾದ ಆರೋಗ್ಯ ನಿರ್ಧರಿತವಾಗುತ್ತದೆ. ಮನಸ್ಸು ಪ್ರಸನ್ನವಾಗಿದ್ದಾಗ ದೇಹದ ಕಾರ್ಯಚಟುವಟಿಕೆಗಳು ಸರಾಗವಾಗಿ, ನಡೆಯುತ್ತಿರುತ್ತವೆ.

‘ದೇಹ’ ಮತ್ತು ‘ಮನಸ್ಸು’ ಎನ್ನುವುದು ಎರಡು ವಿಭಿನ್ನ ‘ಪದಾರ್ಥ’ಗಳು ಎಂದು ನೋಡುವ ಬದಲಾಗಿ ‘ದೇಹ-ಮನಸ್ಸು’ ಎರಡೂ ಒಂದೇ ಸಂಕೀರ್ಣ ವ್ಯವಸ್ಥೆ ಎಂದು ನೋಡುವುದು ಸೂಕ್ತ. ಹಾಗಾದರೆ ಆರೋಗ್ಯ ಎನ್ನುವುದು ದೈಹಿಕ ತೊಂದರೆಗಳು ಇಲ್ಲದಿರುವುದಷ್ಟೇ ಅಲ್ಲ ಅಥವಾ ಆರೋಗ್ಯ ಪರೀಕ್ಷೆಗಳಲ್ಲಿ ‘ನಾರ್ಮಲ್’ ಆಗಿರುವ ಅಂಕಿ-ಸಂಖ್ಯೆಗಳನ್ನು ಪಡೆಯುವುದಷ್ಟೇ ಅಲ್ಲವೆಂದಾಯಿತಲ್ಲವೇ? ಸದ್ಯಕ್ಕೆ ದೈಹಿಕವಾಗಿ ಸದೃಢವಾಗಿದ್ದರೂ ಯಾವ ಅರ್ಥಪೂರ್ಣ ಕೆಲಸವನ್ನೂ ಮಾಡದೇ, ಜೀವನದ ಸೌಂದರ್ಯವನ್ನು ಕಾಣದೇ ಒಂದು ಬಗೆಯ ವಿಕೃತಿಯಲ್ಲೇ ಮಗ್ನನಾಗಿ ತನಗೂ ಇತರರಿಗೂ ಸಮಸ್ಯೆಯಾಗಿ ಬಾಳುವ ವ್ಯಕ್ತಿ ನಿಜಕ್ಕೂ ಆರೋಗ್ಯವಾಗಿ ನಿರಂತರ ಬಾಳುವುದು ಸಾಧ್ಯವೇ?

ಮನಸ್ಸು ಎಷ್ಟು ಪ್ರಶಾಂತವಾಗಿದೆ ಎನ್ನುವುದರ ಮೇಲೇ ದೇಹದ ನಿಜವಾದ ಆರೋಗ್ಯ ನಿರ್ಧರಿತವಾಗುತ್ತದೆ. ಮನಸ್ಸು ಪ್ರಸನ್ನವಾಗಿದ್ದಾಗ ದೇಹದ ಕಾರ್ಯಚಟುವಟಿಕೆಗಳು ಸರಾಗವಾಗಿ, ನಡೆಯುತ್ತಿರುತ್ತವೆ. ಆತಂಕ, ಚಿಂತೆ, ದುಃಖಗಳಿದ್ದಾಗ ಆಹಾರ ಸೇವನೆಯೂ ಪಚನಕ್ರಿಯೆಯೂ ಉಸಿರಾಟವೂ ನಡಿಗೆಯೂ ಎಷ್ಟು ಅಸ್ತವ್ಯಸ್ತವಾಗಿರುತ್ತದೆ ಎನ್ನುವುದನ್ನು ಎಲ್ಲರೂ ಅನುಭವಿಸಿಯೇ ಇರುತ್ತೇವೆ. ಮಾನಸಿಕ ಆರೋಗ್ಯವೆಂದರೆ ಮನಸ್ಸು ಪ್ರಶಾಂತವಾಗಿ, ಪ್ರಸನ್ನವಾಗಿ ಇರುವುದು ಎಂದರ್ಥವೇ? ಎಂದು ಕೇಳುವ ಮುಂಚೆ ‘ಮನಸ್ಸಿನ ಪ್ರಸನ್ನತೆ’ ಎನ್ನುವುದನ್ನು ಹೇಗೆ ಅರ್ಥೈಸುತ್ತೇವೆ ಎಂದು ಕೇಳುವುದು ಉತ್ತಮ. ಸದಾ ಸಂತೋಷವಾಗಿ, ಖುಷಿಖುಷಿಯಾಗಿ ನಗುತ್ತಾ ಇರುವುದು ಯಾರಿಗೂ ಸಾಧ್ಯವಿಲ್ಲ, ಹಾಗೆಂದು ಸಣ್ಣಪುಟ್ಟ ಕಷ್ಟನಷ್ಟಗಳಿಗೂ ಮನಸ್ಸು ತೀರ ಪ್ರಕ್ಷುಬ್ಧಗೊಂಡು ಬದುಕಿನ ಎಲ್ಲವನ್ನೂ ಅಲ್ಲೋಲಕಲ್ಲೋಲವಾಗುವಷ್ಟು ಗಾಸಿಗೊಳ್ಳುವುದೂ ಸಹಜ ನಡವಳಿಕೆಯಲ್ಲ; ಹಾಗೆಯೇ ದಿನನಿತ್ಯದ ಚಿಂತೆ, ಬೇಸರ, ಒಂಟಿತನಗಳಿದ್ದ ಮಾತ್ರಕ್ಕೆ ಮನಸ್ಸಿನ ಪ್ರಸನ್ನತೆ ನಾಶವಾಗಿದೆಯೆಂದೇನೂ ಅಲ್ಲ. ಬಿಳಿಪರದೆಯೊಂದರ ಮೇಲೆ ಬಣ್ಣಬಣ್ಣದ ಚಿತ್ರಗಳು ಬರುತ್ತವೆ, ಕುಣಿಯುತ್ತವೆ, ಹೋಗುತ್ತವೆ; ಆದರೆ ಪರದೆ ಮಾತ್ರ ತಾನಿದ್ದಂತೆಯೇ ಇರುತ್ತದೆಯಲ್ಲವೇ? ಹಾಗೆ ಬಂದುಹೋಗುವ ಏರಿಳಿತಗಳ ಹಿನ್ನೆಲೆಯಾಗಿದ್ದಾಗ ಮನಸ್ಸು ಪ್ರಸನ್ನವಾಗಿದೆಯೆಂದರ್ಥ, ಬಂದು ಹೋಗುವ ಏರಿಳಿತಗಳ ಜೊತೆಗೇ ತಾನೂ ಪೈಪೋಟಿಗಿಳಿದಂತೆ ವರ್ತಿಸುವ ಮನಸ್ಸು ತನ್ನ ನೈಜಸ್ಥಿತಿಯಿಂದ ಪಲ್ಲಟಗೊಂಡಿದೆಯೆಂದರ್ಥ.

ಮನಸ್ಸಿಗೆ ‘ಸ್ಥಿತಿಸ್ಥಾಪಕತ್ವ’ದ (resilience) ಗುಣವಿದೆ, ಅಂದರೆ ಕಷ್ಟ, ನೋವಿನ ನಂತರವೂ ಚೇತರಿಸಿಕೊಂಡು ಮತ್ತೆ ಮೊದಲ ಪ್ರಸನ್ನ ಸ್ಥಿತಿಗೆ ತಲುಪುವ ಶಕ್ತಿಯಿದೆ ಮನಸ್ಸಿಗೆ. ಮನಸ್ಸು ಪ್ರಸನ್ನವಾಗಿರುವುದೆಂದರೆ ನೋವು ಚಿಂತೆಗಳೊಂದೂ ಇರದ ಸ್ಥಿತಿಯಲ್ಲ, ಬದಲಾಗಿ ಒದಗುವ ಎಲ್ಲ ಸಂಕಟಗಳನ್ನೂ ಸಂಸ್ಕರಿಸಿ, ಹದಗೊಳಿಸಿ ಅಂತರಂಗ ವಿಕಾಸಕ್ಕೆ ಬೇಕಾದ ಸತ್ವವನ್ನು ಹೀರಿದ ನಂತರ ಇನ್ನೂ ಸಂಕಟದ ಹಿಡಿತಲ್ಲಿರದೆ ನೋವು ಬೇಸರಗಳನ್ನು ‘ಬಿಟ್ಟುಕೊಟ್ಟುಬಿಡುವ’ (let go) ಗುಣ ಎಂದರ್ಥ.

ನೋವು, ನಲಿವು, ಸಂತೋಷ, ದುಃಖ, ಬೇಸರ, ಕೋಪ, ಭಯ ಎಲ್ಲವೂ ನೀರಿನಂತೆ ಚಲನಶೀಲವಾಗಿರಬೇಕು; ಅವು ಮನಸ್ಸನ್ನು ಕೆಲಕಾಲ ಆವರಿಸಿಕೊಂಡು, ದೇಹದಲ್ಲಿ ಸಂವೇದನೆಗಳನ್ನುಂಟುಮಾಡಿ ನಾವದನ್ನು ಸಂಪೂರ್ಣವಾಗಿ ಅನುಭವಿಸಿದ ನಂತರ ನಮ್ಮ ಮೇಲಿನ ತನ್ನ ಹಿಡಿತವನ್ನು ಸಡಿಲಗೊಳಿಸಬೇಕು; ಹಾಗಿಲ್ಲದೆ ಭಾವನೆಗಳು, ಚಿಂತೆಗಳು ಹರಿದುಹೋಗದೇ ತಾನೇ ಒಂದು ಕತ್ತಲ ಆವರಣವಾಗಿ ಆ ಕತ್ತಲಿನ ಗೂಡಿನೊಳಗೆ ವ್ಯಕ್ತಿಯನ್ನು ಬಂಧಿಸಿಡುವುದಾದರೆ ಮನಸ್ಸು ತನ್ನ ಕಾರ್ಯಕ್ಷಮತೆಯನ್ನು ಕುಗ್ಗಿಸಿಕೊಂಡು ತನ್ನ ಸಹಜ ಪ್ರಸನ್ನತೆಯನ್ನು ಕಳೆದುಕೊಂಡಿರುತ್ತದೆ.

ಪ್ರಶಾಂತತೆಯನ್ನು ಕಳೆದುಕೊಂಡಿರುವ ಮನಸ್ಸು ಸ್ನೇಹಪರ ಸ್ಪಂದನೆಯನ್ನು ಮರೆತು ಪ್ರತೀಕಾರದ ಧಾಟಿಯಲ್ಲಿನ ಪ್ರತಿಕ್ರಿಯೆ ನೀಡುವುದಕ್ಕೆ ಒಗ್ಗಿಕೊಂಡುಬಿಟ್ಟಿರುತ್ತದೆ. ತಾನೇನಾದರೂ ಹೊಸದಾಗಿ ಸೃಜಿಸಬಲ್ಲೆ, ರಚಿಸಬಲ್ಲೆ ಎನ್ನುವ ಕ್ರಿಯಾತ್ಮಕ ನೆಲೆಯಿಂದ ಪದಚ್ಯುತಗೊಂಡ ಮನಸ್ಸು ಸದಾ ಎಲ್ಲವನ್ನೂ ತನ್ನ ಅಸ್ತಿತ್ವಕ್ಕೇ ಮಾರಕ ಎಂಬಂತೆ ಹೋರಾಡತೊಡಗುತ್ತದೆ. ಪ್ರಕ್ಷುಬ್ಧ ಮನಸ್ಸು ತನ್ನನ್ನು ಆವರಿಸಿಕೊಂಡಿರುವ ಚಿಂತೆಯ ಪರದೆಯ ಮೂಲಕವೇ ಜೀವನವನ್ನು ಕಾಣುತ್ತಾ, ಕಂಡದ್ದೆಲ್ಲವನ್ನೂ ಅಪಾರ್ಥಮಾಡಿಕೊಳ್ಳುತ್ತಾ, ತನ್ನ ಪೂರ್ವಗ್ರಹಗಳನ್ನೇ ಮತ್ತೂ ಊರ್ಜಿತ ಗೊಳಿಸುವಂತಹ ಅರ್ಥಗಳನ್ನೇ ಪಡೆಯುತ್ತಾ ಹೋಗುತ್ತದೆ. ಉದಾಹರಣೆಗೆ, ‘ತಾನು ಆತ್ಮೀಯತೆಗೆ ಅರ್ಹನಲ್ಲ’ ಎಂಬ ನಂಬಿಕೆಗೇ ಜೋತುಬಿದ್ದಿರುವ ಮನಸ್ಸು ಎಲ್ಲೆಲ್ಲೂ ಎಲ್ಲರೂ ತನ್ನನ್ನು ಉಪೇಕ್ಷಿಸುತ್ತಿರುವ ಸನ್ನಿವೇಶವನ್ನೇ ಎದುರುಗೊಳ್ಳುತ್ತಿರುತ್ತದೆ, ಏಕೆಂದರೆ ತನ್ನ ನಂಬಿಕೆಯನ್ನು ಪ್ರಶ್ನಿಸಿ ಆತ್ಮೀಯತೆ ಸಾಧಿಸಿಕೊಳ್ಳುವ ಸಾಧ್ಯತೆಗಳನ್ನು ಅನೇಕ ಕಾರಣಗಳಿಗಾಗಿ ಮನಸ್ಸು ನಿರಾಕರಿಸುತ್ತಿರುತ್ತದೆ.

ಹೀಗೆ ಮನಸ್ಸು ತಾನೇ ಹೋಗಿಬಿದ್ದಿರುವ ಕೆಸರಿನಕೂಪದಿಂದ ಮೇಲೇಳಲು ಸಾಧ್ಯವಾಗದೇ ಅದೇ ಕೆಸರಿನಲ್ಲಿ ಉಸಿರುಗಟ್ಟಿಸುವಷ್ಟು ಮುಳುಗುತ್ತಲೇ ಇರುತ್ತದೆ. ಮನಸ್ಸು ತನ್ನ ಸಹಜ ಕಾರ್ಯಶೀಲತೆಯಿಂದ ವಿಮುಖವಾಗಿ ಪತನಗೊಂಡು ಮತ್ತೆ ಮೇಲೇಳಲಾರದಂತೆ ಅದೇ ಪಾತಾಳದಿಂದ ಜೀವನವನ್ನು ಅರೆಬರೆಯಾಗಿ ಕಾಣುವುದನ್ನೇ ಮನಸ್ಸಿನ ‘ಅಸಮರ್ಪಕ ಕಾರ್ಯನಿರ್ವಹಣೆ’ (dysfunctionality) (ಅಥವಾ ನರಮಂಡಲದ ಪರಿಭಾಷೆಯಲ್ಲಿ ‘unregulated nervous system) ಎನ್ನಬಹುದು. ಇಂತಹ ಸ್ಥಿತಿಯನ್ನು ಮನಸ್ಸು ಪ್ರಸನ್ನವಾಗಿಲ್ಲದಿರುವ ಸ್ಥಿತಿ, ತನ್ನ ಸಹಜ ಲವಲವಿಕೆ, ಚಲನಶೀಲತೆ, ಸೃಜನಶೀಲತೆ, ಸಂದರ್ಭಕ್ಕೆ ಅನುಗುಣವಾಗಿ ತನ್ನ ನಂಬಿಕೆಗಳನ್ನು ಮಾರ್ಪಾಡುಗೊಳಿಸಿಕೊಳ್ಳಬಲ್ಲ ಸಾಮರ್ಥ್ಯಗಳನ್ನು ಕಳೆದುಕೊಂಡಿರುವ ಸ್ಥಿತಿ ಎನ್ನಬಹುದು. ಹೀಗೆ ಪ್ರಸನ್ನವಾಗಿಲ್ಲದ ಮನಸ್ಸು ದೈಹಿಕ ಮತ್ತು ಸಾಮಾಜಿಕ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಪ್ರಕ್ಷುಬ್ಧಗೊಂಡು ತನ್ನ ಸ್ಥಿತಿಸ್ಥಾಪಕ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿರುವ ಮನಸ್ಸಿಗೆ ರುಚಿಸಬಹುದಾದ ಕೆಲಮಾತುಗಳು ಇಲ್ಲಿವೆ:

- ಮನಸ್ಸು ಯಾವ ಸನ್ನಿವೇಶಗಳಲ್ಲಿ ತನ್ನ ಪ್ರಶಾಂತತೆಯನ್ನು ಕಳೆದುಕೊಂಡು ಅಸೌಖ್ಯಕ್ಕೊಳಪಡುತ್ತಿದೆ ಎನ್ನುವುದನ್ನು ಗುರುತಿಸುವುದು ಮುಖ್ಯವಾದ ಹಂತ. ಸಂದರ್ಭದ ಅರಿವು ಸಂದರ್ಭದ ಮೇಲೆ ನಾವೊಂದು ನಿಯಂತ್ರಣ ಸಾಧಿಸಲು ಅನುಕೂಲ ಮಾಡಿಕೊಡುತ್ತದೆ.
- ಪ್ರತಿಯೊಂದು ಘಟನೆಯ ಸುತ್ತಲೂ ನಾವೊಂದು ಕಥೆ ಹೆಣೆದುಕೊಳ್ಳುತ್ತೇವೆ. ಈ ಕಥನದಿಂದಲೇ ಒಮ್ಮೊಮ್ಮೆ ವಾಸ್ತವಕ್ಕೆ ಏನೂ ಸರಿಹೊಂದದ ಆಲೋಚನೆಗಳು ಹೊಮ್ಮುತ್ತವೆ. ಪ್ರತಿಯೊಂದು ನೈಜಭಾವವೂ ಒಂದು ದೈಹಿಕ ಸಂವೇದನೆಯೊಟ್ಟಿಗೇ ಉಂಟಾಗುತ್ತದೆ. ದೇಹದ ಸಂವೇದನೆಯಾಗಿ ನಮ್ಮ ಅನುಭವಕ್ಕೆ ಬರದ ಕಲ್ಪಿತ ಕಥೆಗಳಿಂದ ಉಂಟಾದ ಆಲೋಚನೆಗಳು ಕಡಿಮೆಯಾಗಬೇಕಾದರೆ ನಾವು ಅತಿಯಾಗಿ ನೆಚ್ಚಿಕೊಂಡಿರುವ ‘ಕಥನ’ಗಳನ್ನು ಕೈಬಿಡಬೇಕು. ಅಂದರೆ ಅತಿಯಾದ ಊಹಾಪೋಹಗಳಿಗೆ ಪ್ರಜ್ಞಾಪೂರ್ವಕವಾಗಿ ಪೂರ್ಣವಿರಾಮವನ್ನು ಕೊಡಬೇಕು.
- ನಮ್ಮ ದೇಹದ ಬಗೆಗೆ ಧನಾತ್ಮಕ ರೀತಿಯಲ್ಲಿ ನಮ್ಮ ಮಾತಕತೆಯಿರಬೇಕು. ನಮ್ಮ ದೇಹವನ್ನು ಅದಿರುವಂತೆಯೇ ಸ್ವೀಕರಿಸಿ, ಪ್ರೀತಿಸಿ, ಗೌರವಿಸುವುದು, ದೈಹಿಕ ಅಗತ್ಯಗಳನ್ನು ನಿರ್ಲಕ್ಷಿಸದೇ, ದ್ವೇಷಿಸದೇ ಇರುವುದು ನಮ್ಮ ಮನಸ್ಸಿಗೆ ನಾವು ಕೊಡಬಹುದಾದ ದೊಡ್ಡ ಉಡುಗೊರೆ.
- ಮನಸ್ಸಿಗೆ ತಾನು ನಿರ್ವಹಿಸಲಾರದಷ್ಟು ಕಠಿಣ ಪರಿಸ್ಥಿತಿಗಳು ಉಂಟಾದಾಗ ದೀರ್ಘವಾಗಿ ಉಸಿರಾಡುವುದು, ಮನಸ್ಸು ಗೊಂದಲದಲ್ಲಿ ಚಡಪಡಿಸುತ್ತಿರುವಾಗ ವೇಗದ ಕಾಲ್ನಡಿಗೆಯಲ್ಲಿ ತೊಡಗುವುದು, ನಿತ್ಯದ ಕೆಲಸಗಳನ್ನು ಗಮನವಿಟ್ಟು ಮಾಡುವುದು ನಾವು ಊಹೆ ಮಾಡುವುದಕ್ಕಿಂತಲೂ ಹೆಚ್ಚು ಉಪಶಮನ ನೀಡುತ್ತದೆ.
- ನಾವು ಸದಾ ನಮ್ಮ ಈ ದೇಹದಲ್ಲಿಯೇ ಇರಬೇಕು, ದೇಹದ ಹೊರತಾದ ಅಸ್ತಿತ್ವವಿದೆಯೋ ಇಲ್ಲವೋ ಗೊತ್ತಿಲ್ಲ, ಅದರ ಅನುಭವವೂ ನಮಗಿಲ್ಲ; ಈ ದೇಹವನ್ನು ನಾವು ಹೇಗೆ, ಯಾವ ರೀತಿಯಲ್ಲಿ ವಾಸಯೋಗ್ಯ ಮಾಡಿಕೊಳ್ಳುತ್ತೇವೆ ಎನ್ನುವುದು ನಮ್ಮ ಕೈಯಲ್ಲೇ ಇದೆ. ನಮ್ಮದೇ ಮನೆಯಲ್ಲಿ ಆರಾಮವಾಗಿ ಕೈಕಾಲು ಚಾಚಿಕೊಂಡು ನಿರಾಳವಾಗಿ ವಿಶ್ರಾಂತಿ ತೆಗೆದುಕೊಳ್ಳುವಷ್ಟು ನೆಮ್ಮದಿಯಾಗಿ ನಮ್ಮ ದೇಹದಲ್ಲಿ ನಾವು ನೆಲಸಬೇಕು. ದೇಹವನ್ನು ಉಪೇಕ್ಷಿಸಿ ಸದಾ ಯೋಚನೆಗಳಲ್ಲೇ ಕಳೆದುಹೋಗಿ, ಭ್ರಮೆಯ ಅರಮನೆ ಕಟ್ಟಿಕೊಂಡು ಅದರಲ್ಲಿ ಒಂಟಿಯಾಗಿ ಬದುಕುವಂತಾಗಬಾರದು.



ಚಲನೆಯೇ ಚಿಕಿತ್ಸೆಯಾದಾಗ!

• ಡಾ.ಕೆ.ಎಸ್.ಪವಿತ್ರ

ಅದೊಂದು ಖಿನ್ನತೆಯಿಂದ ನರಳುತ್ತಿರುವವರ ಗುಂಪು. ಅವರೊಡನೆ ಒಬ್ಬ ಚಿಕಿತ್ಸಕಿ ನಿಂತಿದ್ದಾರೆ. ಮೆಲುದನಿಯ ಸಂಗೀತ ಮಂದಗತಿಯಲ್ಲಿ ಕೇಳಿ ಬರುತ್ತಿದೆ. ನಿಧಾನವಾಗಿ ಚಿಕಿತ್ಸಕಿ ವಿವಿಧ ರೀತಿಯ ಚಲನೆಗಳಲ್ಲಿ ಇಡೀ ಗುಂಪನ್ನು ತೊಡಗಿಸುತ್ತಿದ್ದಾರೆ. ಸಾಮಾನ್ಯವಾಗಿ ಮಾತನಾಡಲು ಹಿಂದೆ ಮುಂದೆ ನೋಡುವ, ಇತರರ ಜೊತೆ ಬೆರೆಯಲು ಹಿಂಜರಿಯುವ ಈ ವ್ಯಕ್ತಿಗಳು ಕ್ರಮೇಣ ಇತರರ ಚಲನೆಗಳನ್ನು ತಾವು ಅನುಕರಿಸುವುದು ನಂತರ ತಾವೇ ಮುಂದಾಳುವಾಗಿ ಇಡೀ ಗುಂಪಿಗೆ ಚಲನೆಯನ್ನು ತಾವು ಹೇಳಿಕೊಡುವುದು ಇವುಗಳನ್ನು ಮಾಡುತ್ತಿದ್ದಾರೆ. ಮಾತನಾಡದೆಯೇ ಅವರೆಲ್ಲರ ನಡುವೆ ಒಂದು ರೀತಿಯ ಬಾಂಧವ್ಯ ಕಳೆದ ಕೆಲವು ದಿನಗಳಲ್ಲಿ ಸಾಧ್ಯವಾಗಿದೆ.

ಮತ್ತೊಂದು ಸನ್ನಿವೇಶ. ವ್ಯಕ್ತಿಯೊಬ್ಬ ಎದುರು ಕುಳಿತಿದ್ದಾನೆ. ಆತನಿಗೆ ಅದೇನೋ ಬೇಸರ. ಹೇಳಿಕೊಳ್ಳಲಾಗದಂತಹ ತಳಮಳ. ಆದರೆ ಆತನ ಇಡಿ ದೇಹ ಆತನ ಮನಸ್ಥಿತಿಯನ್ನು ಹೊರ ಹಾಕುತ್ತಿದೆ. ಆತನ ಎದುರು ಕುಳಿತ ವ್ಯಕ್ತಿ ಸೂಕ್ಷ್ಮಗ್ರಾಹಿಯಾಗಿರಬಹುದಾದರೆ ‘ಈ ವ್ಯಕ್ತಿಗೆ ಬೇಸರವಿದೆ, ಮನಸ್ಸಿಗೆ ನೋವಾಗಿದೆ’ ಎಂಬುದನ್ನು ಗ್ರಹಿಸುವುದು ಸುಲಭಸಾಧ್ಯ. ಆತನ ಹಾವಭಾವಗಳನ್ನು ವಿಶ್ಲೇಷಿಸುತ್ತಾ ಸಾಗಿದಂತೆ ಆತನ ಮನಸ್ಸಿನೊಳಗಿರುವ ನೋವೂ ಅರ್ಥ ಮಾಡಿಕೊಳ್ಳುವಂತಹ ಮೌನಸಂವಹನ ಸಾಧ್ಯವಾದೀತು.

ನಮ್ಮ ದೇಹ ನಮ್ಮ ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಿಸುವ ಸಶಕ್ತ ಸಾಧನ; ಹಾಗೆ ದೇಹ ಹೊರಹಾಕುವ ಭಾವನೆಗಳನ್ನು ಗ್ರಹಿಸುವ ಸೂಕ್ಷ್ಮತೆ ಇತರ ಮನುಷ್ಯರಿಗೆ ಇರಲು ಸಾಧ್ಯವಿದೆ; ಮಾತು ಏನನ್ನು ನಮಗೆ ತಿಳಿಯಪಡಿಸಬಹುದೋ ಅವೆಲ್ಲವನ್ನೂ ಚಲನೆಯೂ ನಮಗೆ ಗೊತ್ತು ಮಾಡಬಲ್ಲದು.

ಚಲನೆ ಎಂಬುದು ‘ದೇಹ ಮಾತನಾಡುವ ಬಗೆ’ ಎನ್ನುವುದನ್ನೇ ನೃತ್ಯ ಮತ್ತು ಚಲನೆಯ ಚಿಕಿತ್ಸೆ ಎಂಬ ಅಧ್ಯಯನ ಕ್ಷೇತ್ರವಾಗಿ ಇಂದು ಬೆಳೆದು ನಿಂತಿರುವ ಚಿಕಿತ್ಸಾ ವಿಧಾನ ತನ್ನ ತಳಹದಿಯಾಗಿರಿಸಿಕೊಂಡಿದೆ.

ವೇದಿಕೆಯ ಮೇಲೆ ನೃತ್ಯವನ್ನು ಮಾಡುವುದು, ವೇದಿಕೆಯ ಎದುರು ಕುಳಿತು ನೃತ್ಯ ನೋಡುವುದು, ತರಗತಿಗೆ ಹೋಗಿ ನೃತ್ಯ ಕಲಿಯುವುದು - ಇವೆಲ್ಲವೂ ಅಪಾರ ಪ್ರಯೋಜನಗಳನ್ನು ವ್ಯಕ್ತಿಗೂ ಸಮಾಜಕ್ಕೂ ತರುತ್ತದೆ ಎಂಬುದರಲ್ಲಿ ಯಾವ ಸಂಶಯವು ಇಲ್ಲ . ಆದರೆ ಚಲನೆ ಮತ್ತು ನೃತ್ಯದ ಚಿಕಿತ್ಸೆ ಅಥವಾ ಬಹುಜನರಿಗೆ ಗೊತ್ತಿರಬಹುದಾದ ಡಾನ್ಸ್ ಮೂವ್‌ಮೆಂಟ್ ಥೆರಪಿ, ಪ್ರದರ್ಶನ ಕಲೆಯಾಗಿ ನಾವು ನೋಡುವ ನೃತ್ಯಕ್ಕಿಂತ ಬಹು ಭಿನ್ನವಾದದ್ದು.

ಇಂದು ಆಧುನಿಕ ವೈದ್ಯಕೀಯ ವಿಜ್ಞಾನದ ಪ್ರಗತಿಯಿಂದ ದೈಹಿಕ ಕಾಯಿಲೆಗಳಾಗಲಿ ಅಥವಾ ಮಾನಸಿಕ ಸಮಸ್ಯೆಗಳಾಗಲಿ, ಪ್ರಾಣವನ್ನು ಕಬಳಿಸುವ ಅಪಾಯಗಳಾಗಿ ಉಳಿದಿಲ್ಲ. ಆದರೆ ಜೀವನದ ಗುಣಮಟ್ಟದ ಬಗ್ಗೆ ಇದೇ ಮಾತು ಹೇಳಲು ಬರುವಂತಿಲ್ಲ . ಪ್ರಾಣಾಪಾಯದಿಂದ ಪಾರಾದ ನಂತರ ಜೀವನದ ಗುಣಮಟ್ಟವನ್ನು ಉಳಿಸಿಕೊಳ್ಳಲು, ಬೆಳೆಸಿಕೊಳ್ಳಲು ಬೇಕಾಗುವ ಉಪಾಯಗಳಲ್ಲಿ ನೃತ್ಯ ಮತ್ತು ಚಲನೆಯ ಚಿಕಿತ್ಸೆಯೂ ಬಹು ಮುಖ್ಯವಾದ ವಿಧಾನವಾಗಿ ಇಂದು ಬೆಳೆದು ನಿಂತಿದೆ. ನೃತ್ಯ ಮತ್ತು ಯಾವುದೇ ಚಲನೆ ನಮ್ಮ ದೇಹ, ಮಿದುಳು, ಮನಸ್ಸಿನ ಮೇಲೆ ಬೀರುವ ಪರಿಣಾಮಗಳು ಇಂದು ವೈಜ್ಞಾನಿಕವಾಗಿಯೇ ದೃಢಪಟ್ಟಿದೆ.

ನೃತ್ಯ ಮತ್ತು ಚಲನೆಯ ಚಿಕಿತ್ಸೆಯನ್ನು ವಿವಿಧ ಕಾಯಿಲೆಗಳಲ್ಲಿ ಉಪಯೋಗಿಸಿ ದಾಖಲಿಸಿರುವ ವೈಜ್ಞಾನಿಕ ಅಧ್ಯಯನಗಳು ಇಂದು ಸಾಕಷ್ಟಿವೆ. ಆದರೆ ‘ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಔಷಧ ವೈದ್ಯಕೀಯ ಸಲಹೆಗಳನ್ನು ಬದಿಗಿರಿಸಿ ಕೇವಲ ನೃತ್ಯ ಮತ್ತು ಚಲನೆಯ ಚಿಕಿತ್ಸೆಯಿಂದಲೇ ನಾವು ಗುಣ ಮಾಡಿಕೊಂಡುಬಿಡಬಹುದು’ ಎನ್ನುವಂತಹ ಉತ್ಪ್ರೇಕ್ಷಿತ ಅಭಿಪ್ರಾಯಗಳನ್ನು ನಾವು ಸರಿಪಡಿಸಿಕೊಳ್ಳಬೇಕಾದ್ದು ಅತ್ಯವಶ್ಯ. ಏಕೆಂದರೆ ಅಂತಹ ತಪ್ಪು ಅಭಿಪ್ರಾಯದಿಂದ ಒಳಿತಿನ ಬದಲು ಕೆಡುಕೇ ಆಗಿಬಿಡಬಲ್ಲ ಅಪಾಯವಿದೆ.

ಪ್ರಾಥಮಿಕ ಚಿಕಿತ್ಸೆಯಾಗಿ ನೃತ್ಯಚಲನೆಯ ಚಿಕಿತ್ಸೆ ‘ತಕ್ಷಣ’ ‘ಪ್ರಾಣಾಪಾಯ/ ತೀವ್ರತೆಯಿಂದ ಹೊರಬರುವಂತೆ ಮಾಡುವಂತಹದ್ದು’ ಎಂಬ ಫಲಿತಾಂಶಗಳನ್ನು ತೋರಿಸಿಲ್ಲ. ಆದರೆ ಜೀವನದ ಗುಣಮಟ್ಟವನ್ನು ಏರಿಸುವಲ್ಲಿ ಯಾವುದೇ ಹಂತದಲ್ಲಿಯೂ ಅದು ಉಪಯುಕ್ತ. ಒಂದು ಪೂರಕ ಚಿಕಿತ್ಸೆಯಾಗಿ ದೈಹಿಕ-ಮಾನಸಿಕ ಕಾಯಿಲೆಗಳೆರಡರಲ್ಲಿಯೂ ಈ ಚಿಕಿತ್ಸೆಯ ಉಪಯುಕ್ತತೆ ಬಲವಾಗಿಯೇ ನಿರೂಪಿಸಲ್ಪಟ್ಟಿದೆ.

ಕೇವಲ ನೃತ್ಯತರಗತಿಯಲ್ಲಿ ಅಥವಾ ಮನೆಯಲ್ಲಿ ಅಭ್ಯಾಸ ಮಾಡುವಾಗ ಚಲನೆಗಳನ್ನು ಮತ್ತೆ ಮತ್ತೆ ಪರಿಷ್ಕರಿಸಿಕೊಳ್ಳುತ್ತಾ ಕಲಿಯುವುದರ ಬದಲು ನಿರಂತರವಾಗಿ ನಮ್ಮ ದೇಹದ ಚಲನೆಯ ರೀತಿಗಳ ಅರಿವು, ಇತರರ ಚಲನೆಗಳನ್ನು ಅವಲೋಕಿಸಿ ಗ್ರಹಿಸುವ ಸಾಮರ್ಥ್ಯ ಇವುಗಳನ್ನು ವೃದ್ಧಿಸಿಕೊಳ್ಳುತ್ತಾ ನಮ್ಮ ಜೀವನದ ಗುಣಮಟ್ಟವನ್ನು ಕಾಪಾಡಿಕೊಳ್ಳುವುದರ ಉದ್ದೇಶ ನೃತ್ಯ ಮತ್ತು ಚಲನೆಯ ಚಿಕಿತ್ಸೆಯದು.

ಉದಾಹರಣೆಗೆ, ನಾವು ಆಫೀಸಿಗೆ ಸಿದ್ಧವಾಗಿ ಓಡುತ್ತಿದ್ದೇವೆ. ತಡವಾದೀತೆಂದು ಗಾಬರಿಯಾಗಿದೆ. ಎಲ್ಲವನ್ನು ಗಡಿಬಿಡಿಯಿಂದ ಮಾಡುತ್ತಿರುವುದರಿಂದ ಹೆಚ್ಚು ತಪ್ಪುಗಳಾಗುತ್ತಿವೆ. ಆಗ ನಮ್ಮ ದೇಹದ ಚಲನೆಗಳಲ್ಲಿ ಇರುವ ಗಡಿಬಿಡಿಯನ್ನು ನಾವು ಗಮನಿಸಿ, ದೀರ್ಘ ಉಸಿರಾಟದಿಂದ ಆ ಚಲನೆಗಳನ್ನು ಕಿಂಚಿತ್ ನಿಧಾನವಾಗಿಸಲು ಪ್ರಯತ್ನಿಸಿದ್ದೇ ಆದರೆ ತಪ್ಪುಗಳು ಕಡಿಮೆಯಾಗುತ್ತದೆ ; ಗಾಬರಿ ಇಳಿಯುತ್ತದೆ; ಕಡಿಮೆ ಸಮಯದಲ್ಲಿ ವೇಳೆಗೆ ಸರಿಯಾಗಿ ಆಫೀಸು ತಲುಪುವ ಸಾಧ್ಯತೆ ಹೆಚ್ಚುತ್ತದೆ.

ಇದು ನೃತ್ಯ ಮತ್ತು ಚಲನೆಯ ಚಿಕಿತ್ಸೆ ಪ್ರಾಯೋಗಿಕವಾಗಿ ಹೇಗೆ ನಮ್ಮ ದೈನಂದಿನ ಜೀವನದಲ್ಲಿ ಒತ್ತಡ ನಿರ್ವಹಣೆಗೆ ಉಪಯೋಗ ವಾಗಬಹುದು ಎಂಬುದರ ನಿದರ್ಶನ. ನೃತ್ಯ ಮತ್ತು ಚಲನೆಯ ಚಿಕಿತ್ಸೆಯಲ್ಲಿ ಚಿಕಿತ್ಸಕರು ಉಪಯೋಗಿಸುವ ಚಲನೆಯ ತಂತ್ರಗಳು ವೈವಿಧ್ಯಮಯ . ಅವು ಯಾವ ಒಂದು ನೃತ್ಯ ಪದ್ಧತಿಗೆ ಸೀಮಿತವಾದವಲ್ಲ. ಸಾಂಪ್ರದಾಯಿಕ ಶಾಸ್ತ್ರೀಯ ನೃತ್ಯಶೈಲಿಗಳ ತಾಳಗಳನ್ನು, ಹೆಜ್ಜೆಗಳನ್ನು, ಹಸ್ತಮುದ್ರೆಗಳನ್ನು ಉಪಯೋಗಿಸಬಹುದು. ಆದರೆ ಅವುಗಳನ್ನು ಉಪಯೋಗಿಸದೆಯೂ ಮುಕ್ತವಾದ ಚಲನೆಗಳ ಮೂಲಕ ಚಿಕಿತ್ಸೆ ನಡೆಯಬಹುದು.

ಕಾಯಿಲೆಗಳಿಗೆ ವೈದ್ಯರ ಮಾತು, ಮಾತ್ರೆ ಮತ್ತು ಶಸ್ತ್ರದ ಚಿಕಿತ್ಸೆಗಳ ಜೊತೆಗೆ ಜೀವನದ ಗುಣಮಟ್ಟಕ್ಕಾಗಿ ಚಲನೆಯನ್ನು ಚಿಕಿತ್ಸೆಯಾಗಿ ಪಡೆದುಕೊಳ್ಳುತ್ತ, ಚಲನೆಯನ್ನು ದಿನಚರಿಯ ಭಾಗವಾಗಿಸಿಕೊಳ್ಳುವತ್ತ ನಮ್ಮ ಮನಸ್ಸುಗಳು ಮುಂದಾಗಬೇಕಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ | MATHS

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಾಸ್ತವ ಸಂಖ್ಯೆಗಳು

2) ಕೆಳಗೆ ನೀಡಿರುವ ಜೋಡಿ ಲಸಾಅ ಮತ್ತು ಮಸಾಅ ಕಂಡು ಹಿಡಿದು ಲಸಾಅXಮಸಾಅ= ಆ ಎರಡು ಸಂಖ್ಯೆಗಳ ಗುಣಲಬ್ಧ ಎಂಬುದನ್ನು ತಾಳೆ ನೋಡಿ (1) 26 ಮತ್ತು 91 (2) 510 ಮತ್ತು 92 (3) 336 ಮತ್ತು 54

ಉತ್ತರ:– (ಹಿಂದಿನ ಸಂಚಿಕೆಯಿಂದ)

ಉತ್ತರ:– (3) 336 ಮತ್ತು 54

$a = 336$ $\qquad$ $b = 54$

2 | 336	2 | 54
2 | 168	3 | 21
2 | 84	3 | 9
2 | 42	3 | 3
3 | 21	1
7 | 7	
1	

$\therefore 336 = 2 \times 2 \times 2 \times 2 \times 3 \times 7$

$= 2^4 \times 3 \times 7$

$54 = 2 \times 3 \times 3 \times 3$

$= 2 \times 3^3$

ಎರಡು ಸಂಖ್ಯೆಗಳ ಮಸಾಅ $= 2 \times 3 = 6$

ಎರಡು ಸಂಖ್ಯೆಗಳ ಲಸಾಅ $= 2\times2\times2\times2\times3\times3\times3\times7$

$= 2^4 \times 3^3 \times 7$

$= 3024$

ಲಸಾಅ X ಮಸಾಅ = a x b

$(a\ b) \times (a\ b) = a \times b$

$6 \times 3024 = 336 \times 54$

$18144 = 18144$

3) ಕೆಳಗಿನ ಪೂರ್ಣಾಂಕಗಳ ಲ.ಸಾ.ಅ ಮತ್ತು ಮ.ಸಾ.ಅ ಗಳನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ

1) 12, 15 ಮತ್ತು 21
2) 17, 23 ಮತ್ತು 29
3) 8, 9, ಮತ್ತು 25

ಉತ್ತರ:– (1) 12, 15 ಮತ್ತು 21

$12 = 2 \times 2 \times 3$

$15 = 3 \times 5$

$21 = 3 \times 7$

ಮ. ಸಾ.ಅ. = 3

ಲ.ಸಾ.ಅ $= 3 \times 2 \times 2 \times 5 \times 7$

$= 420$

ಉತ್ತರ(2) 17, 23 ಮತ್ತು 29

$17 = 17 \times 1$

$23 = 23 \times 1$

$29 = 29 \times 1$

ಮ. ಸಾ.ಅ. = 1

ಲ.ಸಾ.ಅ $= 17 \times 23 \times 29$

$= 11339$

ಉತ್ತರ(3) 8, 9 ಮತ್ತು 25

$8 = 2 \times 2 \times 2 = 2^3$

$9 = 3 \times 3 = 3^2$

$25 = 5 \times 5 = 5^2$

ಮ. ಸಾ.ಅ. = 1

ಲ.ಸಾ.ಅ $= 2^3 \times 3^2 \times 5^2$

$= 8 \times 9 \times 25$

$= 1800$

4) (306, 657)ರ ಮ.ಸಾ.ಅ = 9 ಆದರೆ ಅವುಗಳ ಲ.ಸಾ.ಅ ವನ್ನು ಕಂಡುಹಿಡಿಯಿರಿ.

ಉತ್ತರ:– ಲಸಾಅ(a, b) x ಮಸಾಅ(a, b) = a x b

9 x ಲಸಾಅ $= 306 \times 657$

$$LCM = \frac{306 \times 657}{9}$$

$= 22338$

(306, 657)ರ ಮ.ಸಾ.ಅ = 9 ಆದರೆ ಅವುಗಳ ಲ.ಸಾ.ಅ= 22338

5) nದ ಯಾವುದೇ ಬೆಲೆಗೆ 6^n ಇದು ಸೊನ್ನೆಯಿಂದ ಕೊನೆಕೊಳ್ಳಬಹುದೇ ಪರೀಕ್ಷಿಸಿ. ಇಲ್ಲಿ n ಒಂದು ಸ್ವಾಭಾವಿಕ ಸಂಖ್ಯೆಯಾಗಿದೆ.

ಉತ್ತರ:– ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳಿಗೆ ಉದಾ ಎಂದರೆ (ಅ) 10 (ಆ)100 ಮೊದಲಾದವು

10ರ ಅವಿಭಾಜ್ಯ ಅಪವರ್ತನ= 2 x 5

100ರ ಅವಿಭಾಜ್ಯ ಅಪವರ್ತನ= 2 x2 x 5 x5

ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳ ಅವಿಭಾಜ್ಯ ಅಪವರ್ತನ 2 ಮತ್ತು 5ಆದರೆ2 x 3 ಗಳು 6ರ ಅವಿಭಾಜ್ಯ ಅಪವರ್ತನಗಳಾಗಿವೆ ಆದರೆ ಇಲ್ಲಿ 5 ಇಲ್ಲ ಹೀಗಾಗಿ ಸಾಧ್ಯವಿಲ್ಲ

6) 7 x 11 x13 +13 ಮತ್ತು 7 x6 x5 x4 x3 x2 x1 +5 ಇವು ಸಂಯುಕ್ತ ಸಂಖ್ಯೆಗಳಾಗಿವೆ ಏಕೆ ವಿವರಿಸಿ

ಉತ್ತರ:– $7 \times 11 \times 13 + 13 = 13\ (7 \times 11 + 1)$

$= 13 \times 78$

∴ ಇದು ಸಂಯುಕ್ತ ಸಂಖ್ಯೆ

$7 \times 6 \times 5 \times 4 \times 3 \times 2 \times 1 + 5$

$= 5(7\times6\times4\times3\times2\times1+1)$

$= 5(1008+1) = 5\times1009$

∴ ಇದು ಸಂಯುಕ್ತ ಸಂಖ್ಯೆ

7) ಒಂದು ಕ್ರೀಡಾಂಗಣದ ಸುತ್ತಲೂ ವೃತ್ತಾಕಾರದ ಮಾರ್ಗವಿದೆ ಸೋನಿಯಾಳು ಆ ಕ್ರೀಡಾಂಗಣದ ಒಂದು ಸುತ್ತನ್ನು ಪೂರ್ಣಗೊಳಿಸಲು 18 ನಿಮಿಷಗಳನ್ನು ತೆಗೆದುಕೊಂಡರೆ, ರವಿಯು ಅದೇ ಸುತ್ತನ್ನು ಪೂರ್ಣಗೊಳಿಸಲು 12 ನಿಮಿಷಗಳನ್ನು ತೆಗೆದುಕೊಳ್ಳುತ್ತಾನೆ, ಒಂದೊಮ್ಮೆ ಅವರಿಬ್ಬರೂ ಒಂದೇ ಬಿಂದುವಿನಿಂದ ಏಕಕಾಲದಲ್ಲಿ ಆರಂಭಿಸಿ, ಏಕಮುಖವಾಗಿ ಚಲಿಸಿದರೆ, ಎಷ್ಟು ನಿಮಿಷಗಳ ನಂತರ ಅವರು ಪುನಃ ಆರಂಭಿಕ ಬಿಂದುವಿನಲ್ಲಿ ಸಂಧಿಸುತ್ತಾರೆ?

ಉತ್ತರ:– ಸೋನಿಯಾಳಿಗೆ ಕ್ರೀಡಾಂಗಣ 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ = 18 ನಿಮಿಷ

ರವಿ ಅದೇ ಕ್ರೀಡಾಂಗಣವನ್ನು 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ= 12 ನಿಮಿಷ

ಏಕಕಾಲದಲ್ಲಿ ಚಲಿಸಿದರೆ ಅವರು ಸಂಧಿಸುವ ಸಮಯ = ?

$LCM(18,12) = 2\times3\times3\times2\times1=36$

ಅವರಿಬ್ಬರೂ 36 ನಿಮಿಷಗಳ ತರುವಾಯ ಒಂದು ಸ್ಥಳದಲ್ಲಿ ಸಂಧಿಸುತ್ತಾರೆ

ಅಭ್ಯಾಸ 1.2

1) $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

ಉತ್ತರ:– $\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

i.e. $\sqrt{5} = a/b$

$b\sqrt{5} = a$

ಎರಡೂ ಕಡೆ ವರ್ಗಗೊಳಿಸಿದಾಗ

$(b\sqrt{5})^2 = a^2$

$\Rightarrow 5b^2 = a^2$……………… (1)

5 ಇದು a ಅನ್ನು ಭಾಗಿಸುತ್ತದೆ

5 ಇದು b^2 ಅನ್ನು ಭಾಗಿಸುತ್ತದೆ

(ಮುಂದುವರಿಯುವುದು)

Inverse trigonometric functions

9. Prove that $\cos^{-1}(-x) = \pi - \cos^{-1}x, -1 \le x \le 1$

Soln :– Let $\cos^{-1}(-x) = \theta$;

$\therefore \cos\theta = -x$

i.e., $-\cos\theta = x$ (…..Contd)

$\Rightarrow \cos(\pi - \theta) = x$

Hence, $\pi - \theta = \cos^{-1}x$

(or) $\theta = \pi - \cos^{-1}x$

$\therefore \cos^{-1}(-x) = \pi - \cos^{-1}x$

10. Show that $\operatorname{cosec}^{-1}x = \sin^{-1}\frac{1}{x}$

Soln :– Proof : take $\theta = \operatorname{cosec}^{-1}x$, then $\operatorname{cosec}\theta = x$

$\therefore \sin\theta = \frac{1}{x}$ $\left(\because \sin\theta = \frac{1}{\operatorname{cosec}\theta}\right)$

$\Rightarrow \theta = \sin^{-1}\frac{1}{x}$;

Equating the two values of θ,

we get, $\operatorname{cosec}^{-1}x = \sin^{-1}\frac{1}{x}$

11. Show that $\sec^{-1}x = \cos^{-1}\frac{1}{x}$

Soln :– Proof : take $\theta = \sec^{-1}x$, then $\sec\theta = x$

$\therefore \cos\theta = \frac{1}{x}$ $\left(\because \cos\theta = \frac{1}{\sec\theta}\right)$

$\therefore \theta = \cos^{-1}\frac{1}{x}$;

Equating the two values of θ,

we get, $\sec^{-1}x = \cos^{-1}\frac{1}{x}$

12. Show that $\cot^{-1}x = \tan^{-1}\frac{1}{x}$

Soln :– Proof : take $\theta = \cot^{-1}x$, then $\cot\theta = x$

$\therefore \tan\theta = \frac{1}{x}$ $\left(\because \tan\theta = \frac{1}{\cot\theta}\right)$

$\therefore \theta = \tan^{-1}\frac{1}{x}$;

Equating the two values of θ,

we get, $\cot^{-1}x = \tan^{-1}\frac{1}{x}$

13. What is the value of $\sin^{-1}\left(-\frac{\sqrt{3}}{2}\right)$?

Soln :– $\sin^{-1}\left(-\frac{\sqrt{3}}{2}\right) = \sin^{-1}\left(\frac{\sqrt{3}}{2}\right)$

$= -\frac{\pi}{3}$

$\left(\because \sin^{-1}(-x) = -\sin^{-1}x\right)$

14. What is the value of $\operatorname{cosec}^{-1}(-1)$?

Soln :– $\operatorname{cosec}^{-1}(-1) = -\operatorname{cosec}^{-1}(1)$

$\left(\because \operatorname{cosec}^{-1}(-1) = -\operatorname{cosec}^{-1}1\right)$

$\Rightarrow -\frac{\pi}{2}$ $\left(\because \operatorname{cosec}\frac{\pi}{2} = 1\right)$

15. Find the value of $\cos^{-1}(\cos 350^\circ)$?

Soln :– Consider $\cos 350^\circ$

$\cos 350^\circ = \cos(360^\circ - 10^\circ)$

$= \cos 10^\circ$

$\therefore \cos^{-1}(\cos 350^\circ) = \cos^{-1}(\cos 10^\circ)$

$\Rightarrow \cos^{-1}(\cos 350^\circ) = 10^\circ$

$(\because 0 \le 10^\circ \le 180^\circ)$

16. Find the value of $\cos^{-1}(\sin 675^\circ)$?

Soln :– Consider $\sin(675^\circ)$

$\sin(675^\circ) = \sin(360^\circ + 315^\circ)$

$= \sin(315^\circ) = \sin(360^\circ - 45^\circ)$

$= -\sin 45^\circ = -\frac{1}{\sqrt{2}}$

$(\because \sin(360^\circ - \theta) = -\sin\theta)$

17. Find the value of $\sin^{-1}(\sin(-600^\circ))$?

Soln :– Consider $\sin(-600^\circ)$

$\sin(-600^\circ) = -\sin 600^\circ$

$= -\sin(360^\circ + 240^\circ) = -\sin 240^\circ$ 18.

$= \sin(180^\circ + 60^\circ) = \sin 60^\circ = \frac{\sqrt{3}}{2}$

$\sin^{-1}[\sin(-600^\circ)] = \sin^{-1}\frac{\sqrt{3}}{2} = 60^\circ$

18. Find the value of $\tan^{-1}(\tan 820^\circ)$?

Soln:- Consider, $\tan 820^\circ$

$\tan 820^\circ = \tan\{2 \times 360^\circ + 100^\circ\}$

$= \tan 100^\circ = \tan(180^\circ - 80^\circ)$

$= -\tan 80^\circ = \tan(-80^\circ)$

$\therefore \tan^{-1}(\tan 820^\circ) = \tan^{-1}(\tan(-80^\circ))$

$= -80^\circ$

19. Show that $\tan^{-1}x + \cot^{-1}x = \frac{\pi}{2}$; **for** $-\infty < x < \infty$

Soln :– Proof : Let, $\tan^{-1}x = \theta$;

when, $-\frac{\pi}{2} < \theta < \frac{\pi}{2}$ & $-\infty < x < \infty$

$\therefore \tan\theta = x \Rightarrow \cot\left(\frac{\pi}{2} - \theta\right) = x$

$\left(\because \cot\left(\frac{\pi}{2} - \theta\right) = \tan\theta\right)$

$\Rightarrow \frac{\pi}{2} - \theta = \cot^{-1}x$ $\left(\because 0 \le \left(\frac{\pi}{2} - \theta\right) \le \pi\right)$

$\Rightarrow \frac{\pi}{2} - \tan^{-1}x = \cot^{-1}x$ $(\because \tan^{-1}x = \theta)$

$\Rightarrow \frac{\pi}{2} = \tan^{-1}x + \cot^{-1}x$; Hence proved.

‘ಕೈ’ಗೆ ಅಲ್ಪ ಅಂತರದ ಗೆಲುವು

ದಾವಣಗೆರೆ ದಕ್ಷಿಣ: ಗೆಲುವಿನ ದಡ ಸೇರಿದ ಸಮರ್ಥ ಶಾಮನೂರು

• ಜಿ.ಬಿ.ನಾಗರಾಜ್

ದಾವಣಗೆರೆ: ರಾಜ್ಯದ ಗಮನ ಸೆಳೆದಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮುಸ್ಲಿಂ ಮತಗಳು ಚದುರಿದರೂ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಗೆಲುವಿನ ದಡ ಸೇರುವಲ್ಲಿ ಯಶಸ್ವಿಯಾಗಿದ್ದಾರೆ. ತೀವ್ರ ಪೈಪೋಟಿ ನೀಡಿದ ಬಿಜೆಪಿ ಪರಾಭವಗೊಂಡಿದೆ.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಕ್ಷೇತ್ರದಲ್ಲಿ ಅವರ ಮೊಮ್ಮಗ ಸಮರ್ಥ್ ಶಾಮನೂರು ಅವರನ್ನು ಕಣಕ್ಕೆ ಇಳಿಸಿದ್ದ ಕಾಂಗ್ರೆಸ್, ಮುಸ್ಲಿಂ ಸಮುದಾಯದ ಕೆಂಗಣ್ಣಿಗೆ ಗುರಿಯಾಗಿತ್ತು. ಟಿಕೆಟ್ ಕೈತಪ್ಪಿದ ಅಸಮಾಧಾನದಿಂದ ಭುಗಿಲೆದ್ದಿದ್ದ ಬಂಡಾಯವನ್ನು ಶಮನಗೊಳಿಸಿದರೂ, ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಹಾಗೂ ಮುಸ್ಲಿಂ ಸಮುದಾಯದ ಪಕ್ಷೇತರರು ಕಾಂಗ್ರೆಸ್ ಗೆಲುವಿನ ಭಾರಿ ಅಂತರವನ್ನು ತಗ್ಗಿಸಿದ್ದಾರೆ.

ಮುಸ್ಲಿಂ ಬಾಹುಳ್ಯದ ದಕ್ಷಿಣ ಕ್ಷೇತ್ರದ ಉಪಚುನಾವಣೆ ರಾಜ್ಯ ಸರ್ಕಾರಕ್ಕೆ ಪ್ರತಿಷ್ಠೆಯಾಗಿತ್ತು. ಟಿಕೆಟ್ ಹಂಚಿಕೆ ಕುರಿತ ಗೊಂದಲವು ಕ್ಷೇತ್ರ ‘ಕೈ’ ತಪ್ಪುವ ಆತಂಕಕ್ಕೆ ಕಾಂಗ್ರೆಸ್ ಪಕ್ಷವನ್ನು ದೂಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಪಕ್ಷದ ಅನೇಕ ಮುಖಂಡರು ಕ್ಷೇತ್ರಕ್ಕೆ ಧಾವಿಸಿ ಮತಯಾಚಿಸಿದ್ದರು. ಕೆಪಿಸಿಸಿ ಕ್ಯಾಂಪ್ ಕಚೇರಿ ತೆರೆದು ಶಾಸಕರು ಹಾಗೂ ಸಚಿವರಿಗೆ ಮತಗಟ್ಟೆಗಳ ಹೊಣೆ ನೀಡಿ ವ್ಯವಸ್ಥಿತವಾಗಿ ಚುನಾವಣೆ ಎದುರಿಸಿದ್ದರು.

ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಮನವೊಲಿಸಿದ ಕೈಪಡೆ, ಗೆಲುವಿನ ಹಾದಿ ಸುಗಮಗೊಂಡ ಹುರುಪಿನಲ್ಲಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಹಾಗೂ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ನಡುವಿನ ಮುನಿಸು ಮುಂದುವರಿದ ಪರಿಣಾಮ ದಿನಕಳೆದಂತೆ ಕಣದ ಚಿತ್ರಣ ಬದಲಾಗಿತ್ತು. ಕ್ಷೇತ್ರದ ಮತದಾರರಿಗೆ ಆದ ಮಾಜಿ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ಸೇರಿದಂತೆ ಮುಸ್ಲಿಂ ನಾಯಕರು ಪ್ರಚಾರದಿಂದ ದೂರ ಉಳಿದಿದ್ದರು. ಮತದಾನದ ದಿನ ಹತ್ತಿರವಾದಂತೆ ಕಾಂಗ್ರೆಸ್‌ಗೆ ಸೋಲಿನ ಭೀತಿ ಕಾಡಿತ್ತು.

ಮಾಜಿ ಕ್ರಿಕೆಟಿಗ ಮಹಮ್ಮದ್ ಅಜರುದ್ದೀನ್ ಅವರನ್ನು ಕರೆಸಿ ರೋಡ್ ಶೋ ಮಾಡಿಸಿ ಮುಸ್ಲಿಂ ಮತಗಳನ್ನು ಸೆಳೆಯಲು ಕಾಂಗ್ರೆಸ್ ಪ್ರಯತ್ನಿಸಿತ್ತು. ಮುಸ್ಲಿಂ ಸಮುದಾಯದ ಮತಗಳು ಕೈತಪ್ಪುವುದು ಖಚಿತ ಆದಂತೆ ವೀರಶೈವ ಲಿಂಗಾಯತ ಮತದಾರರ ಮನವೊಲಿಕೆಗೆ ಕಾಂಗ್ರೆಸ್ ಮುಂದಾಯಿತು. ಬಿಜೆಪಿ ಸ್ಥಳೀಯದಲ್ಲಿ ಈ ಮತದಾರರನ್ನು ಸೆಳೆಯುವಲ್ಲಿ ಕೈ ಯಶಸ್ವಿಯಾಗಿರುವುದು ಕಾಣುತ್ತಿತ್ತು.

ಕ್ಷೇತ್ರದಲ್ಲಿ ಸದಾ ಹಿಂದುತ್ವದ ಜಪ ಮಾಡುತ್ತಿದ್ದ ಬಿಜೆಪಿ ಉಪಚುನಾವಣೆಯ ಕಣದಲ್ಲಿ ಕಾರ್ಯತಂತ್ರ ಬದಲಿಸಿತ್ತು. ಮುಸ್ಲಿಂ ಮತದಾರರ ಮನ ಗೆಲ್ಲಲು ನಿರಂತರವಾಗಿ ಪ್ರಯತ್ನಿಸಿತ್ತು. ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳ ಮತಗಳನ್ನು ಒಗ್ಗೂಡಿಸಲು ಶ್ರಮಿಸಿತು. 2008ರ ಕ್ಷೇತ್ರ ಪುನರ್ ವಿಂಗಡಣೆ ಬಳಿಕ ಇದೇ ಮೊದಲ ಬಾರಿಗೆ ಬಿಜೆಪಿ ಕಡಿಮೆ ಅಂತರದಲ್ಲಿ ಪರಾಭವಗೊಂಡಿದೆ.

ಸಾಮಾನ್ಯ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಬುಟ್ಟಿಗೆ ಬಿಜೆಪಿ ಕೈಹಾಕಿತ್ತು. ಮುಸ್ಲಿಂ ಮತಗಳು ಚದುರಿದರೆ ಅನುಕೂಲವಾಗಬಹುದು ಎಂಬ ಆಸೆಯಿಂದ ನೋಡುತ್ತಿತ್ತು. ಪಕ್ಷೇತರ ಅಭ್ಯರ್ಥಿಯ ಪರವಾಗಿ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಅಖಾಡಕ್ಕೆ ಇಳಿದಿದ್ದರು. ಆದರೆ, ನಿರೀಕ್ಷಿತ ಯಶಸ್ಸು ಸಿಗಲಿಲ್ಲ. ಶಾಮನೂರು ಶಿವಶಂಕರಪ್ಪ ಅವರ ಮೇಲಿನ ಅನುಕಂಪವೂ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಸಹಕಾರಿಯಾಯಿತು.

ಪ್ರಯಾಸದ ಗೆಲುವು

ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು 5,708 ಮತಗಳ ಅಂತರದಿಂದ ಪ್ರಯಾಸದ ಗೆಲುವು ಸಾಧಿಸಿದರು.

ಸಮರ್ಥ್ 69,578 ಮತಗಳನ್ನು ಪಡೆದು ವಿಜೇತರಾದರು. ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ ದಾಸಕರಿಯಪ್ಪ 63,870 ಹಾಗೂ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ 18,975 ಮತಗಳನ್ನು ಪಡೆದು ಪ್ರಬಲ ಪೈಪೋಟಿ ನೀಡಿದರು. ಕಣದಲ್ಲಿದ್ದ ಮುಸ್ಲಿಂ ಸಮುದಾಯದ ಇತರ 12 ಉಮೇದುವಾರರು ಒಟ್ಟು 3,825 ಮತಗಳನ್ನು ಪಡೆದರು.

ಆರಂಭದ 7 ಸುತ್ತಿನ ಮತಎಣಿಕೆಯಲ್ಲಿ ಬಿಜೆಪಿ ಮುನ್ನಡೆ ಸಾಧಿಸಿತ್ತು. ಶ್ರೀನಿವಾಸ ಅವರು 6ನೇ ಸುತ್ತಿನಲ್ಲಿ 8,539 ಮತಗಳ ಮುನ್ನಡೆ ಸಾಧಿಸಿದ್ದರು. 8ನೇ ಸುತ್ತಿನಲ್ಲಿ ಹೆಚ್ಚು ಮತ ಗಳಿಸಿದ ಕಾಂಗ್ರೆಸ್ ಗೆಲುವಿನ ಹಳಿ ಹಿಡಿಯಿತು. 21ನೇ ಸುತ್ತಿನವರೆಗೆ ಮುನ್ನಡೆಯಲ್ಲಿ ಏರಿಳಿತ ಉಂಟಾಗಿ ಕುತೂಹಲವನ್ನು ಕೆರಳಿಸಿತ್ತು.

3 ಮತಯಂತ್ರಗಳಲ್ಲಿ ದೋಷ ಕಾಣಿಸಿಕೊಂಡಿದ್ದರಿಂದ ವಿ.ವಿ.ಪ್ಯಾಟ್ ಎಣಿಕೆ ಮಾಡಲಾಯಿತು. ಇದರಿಂದ ಫಲಿತಾಂಶ ಹೊರಬೀಳುವುದು ತಡವಾಯಿತು. ಭದ್ರತಾ ಕೊಠಡಿಗಳಿಗೆ ಹಾಕಿದ್ದ ಬೀಗದ ಕೀಗಳಲ್ಲಿ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಚಿಲಕ ಮುರಿದು ಬಾಗಿಲು ತೆರೆಯಲಾಯಿತು. ಇದರಿಂದಲೂ ಎಣಿಕೆ ತಡವಾಗಿ ಆರಂಭವಾಯಿತು.

ಉಪ ಚುನಾವಣೆ

• ಗೆದ್ದ ಅಭ್ಯರ್ಥಿ
ಸಮರ್ಥ್ ಶಾಮನೂರು (ಕಾಂಗ್ರೆಸ್)
• ಪಡೆದ ಮತ: 69,578
• ಸಮೀಪದ ಅಭ್ಯರ್ಥಿ
ಟಿ.ಶ್ರೀನಿವಾಸ ದಾಸಕರಿಯಪ್ಪ (ಬಿಜೆಪಿ)
• ಗೆಲುವಿನ ಅಂತರ: 5,708

ಬಾಗಲಕೋಟೆ: ಹಳ್ಳಿಗಳಲ್ಲಿ ಸಂಘಟನೆ ವೈಫಲ್ಯ • ಬಿಜೆಪಿಗೆ ಒಳ ಏಟು

ಗ್ಯಾರಂಟಿ, ಅನುಕಂಪದ ಆಸರೆ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಉಮೇಶ ಮೇಟಿ ಗೆಲ್ಲಲು ಹಲವು ಕಾರಣಗಳಿವೆ. ಅವುಗಳಲ್ಲಿ ಪಂಚ ಗ್ಯಾರಂಟಿಗಳ ಬಲ, ಎಚ್.ವೈ.ಮೇಟಿ ಅವರ ಸಾವಿನ ಅನುಕಂಪದ ಅಲೆ, ಸಂಪನ್ಮೂಲಗಳ ಸಮರ್ಪಕ ವಿತರಣೆ, ಸಚಿವರಾದ ಸತೀಶ ಜಾರಕಿಹೊಳಿ, ಆರ್.ಬಿ. ತಿಮ್ಮಾಪುರ ಅವರ ತಂತ್ರಗಾರಿಕೆ ಪ್ರಮುಖವಾದವು.

ಪಂಚ ಗ್ಯಾರಂಟಿಯ ಹೆಚ್ಚಿನ ಲಾಭ ಪಡೆದ ಮಹಿಳೆಯರನ್ನೇ ಗುರಿ ಆಗಿಸಿಕೊಂಡ ಕಾಂಗ್ರೆಸ್ ಮುಖಂಡರು, ‘ಗ್ಯಾರಂಟಿಗಳು ಮುಂದುವರಿಯಬೇಕು ಅಲ್ವಾ’ ಎಂದು ಭಾಷಣದಲ್ಲೇ ಮಾತಿನ ಬರದಿಕೆ ಹಾಕಿದ್ದರು. ಜೊತೆಗೆ ಮನೆ, ಮನೆಗೆ ತೆರಳಿ ಗ್ಯಾರಂಟಿಗಳನ್ನು ನೆನಪಿಸುವ ಕಾರ್ಯ ಮಾಡಿದ್ದರು. ಪರಿಣಾಮ ಕಾಂಗ್ರೆಸ್‌ಗೆ ದಾಖಲೆಯ ಮುನ್ನಡೆ ದಕ್ಕಿತ್ತು.

ಎಚ್.ವೈ.ಮೇಟಿ ಅವರ ನಿಧನದ ಅನುಕಂಪ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿತ್ತು. ಅದನ್ನು ಮತಗಳನ್ನಾಗಿ ಪರಿವರ್ತಿಸುವ ಕಾರ್ಯವನ್ನು ಎಚ್.ವೈ. ಮೇಟಿ ಕುಟುಂಬದ ಸದಸ್ಯರು, ಮುಖಂಡರು, ಕಾರ್ಯಕರ್ತರು ಮಾಡಿದರು.

ಟಿಕೆಟ್ ಹಂಚಿಕೆ, ಚುನಾವಣಾ ಪ್ರಚಾರ ತಂತ್ರ, ಸಂಪನ್ಮೂಲ ವಿತರಣೆ, ನಾಯಕರ ನಡುವಿನ ಅಸಮಾಧಾನ ತಿಳಿಗೊಳಿಸುವ ಹೊಣೆ ಸಚಿವ ಸತೀಶ ಜಾರಕಿಹೊಳಿ ಅವರಿಗೆ ವಹಿಸಲಾಗಿತ್ತು. ಚುನಾವಣೆ ಘೋಷಣೆಗೂ ಎರಡು ತಿಂಗಳ ಮುನ್ನ ತಮ್ಮ ತಂಡದ ಮೂಲಕ ಸಮೀಕ್ಷೆ ಮಾಡಿಸಿದ್ದ ಜಾರಕಿಹೊಳಿ ಅವರು, ಇಡೀ ಚುನಾವಣೆಯನ್ನು ಮಾಧ್ಯಮ ಭರಾಟೆಯಿಲ್ಲದೆ ಮೌನವಾಗಿ ನಿಭಾಯಿಸಿದರು.

ಹಿಂದಿನ ಐದು ಚುನಾವಣೆಗಳಲ್ಲೂ ಕಾಂಗ್ರೆಸ್‌ಗೆ ಬಿಜೆಪಿ ಅಭ್ಯರ್ಥಿಯಾಗಿ ವೀರಣ್ಣ ಚರಂತಿಮಠ ಅವರೇ ಎದುರಾಳಿ. ಅವರ ಬಗ್ಗೆ ಕಾಂಗ್ರೆಸ್ಸಿನವರು ವೈಯಕ್ತಿಕ ಟೀಕೆ ಮಾಡಲಿಲ್ಲ. ಈ ಬಾರಿ ಅವರ ವಿರುದ್ಧ ವೈಯಕ್ತಿಕ ಟೀಕೆ ಮೂಲಕ ಮತಗಳನ್ನು ಸೆಳೆಯುವ ಯತ್ನವೂ ಫಲ ನೀಡಿದಂತಿದೆ. ತಮ್ಮ ಆಪ್ತರು, ತಮ್ಮದೇ ಸಮುದಾಯದ ಮುಖಂಡರಾಗಿದ್ದ ಎಚ್.ವೈ. ಮೇಟಿ ಅವರ ಕ್ಷೇತ್ರ ಉಳಿಸಿಕೊಳ್ಳುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಷ್ಠೆಯಾಗಿಸಿಕೊಂಡು ಆರು ದಿನಗಳ ಕಾಲ ಪ್ರಚಾರ ನಡೆಸಿದ್ದರು.

ಪ್ರಚಾರದ ವೇಳೆ ಬಿಜೆಪಿಯಲ್ಲಿನ ಭಿನ್ನಮತ ಶಮನವಾದಂತೆ ಕಂಡು ಬಂದರೂ ಮತ ಯಂತ್ರಗಳಲ್ಲಿ ದಾಖಲಾದ ಮತಗಳನ್ನು ನೋಡಿದಾಗ ಶಮನವಾದ ಲಕ್ಷಣಗಳು ಕಂಡು ಬಂದಿಲ್ಲ. ಒಗ್ಗಟ್ಟಿನ ಮಂತ್ರ ವೇದಿಕೆಗಷ್ಟೇ ಸೀಮಿತವಾದಂತೆ ಎನ್ನುವುದು ಕಾರ್ಯಕರ್ತರ ಪ್ರಶ್ನೆಯಾಗಿದೆ. ಗ್ರಾಮೀಣ ಭಾಗದಲ್ಲಿ ಪಕ್ಷದ ಸಂಘಟನೆ ದುರ್ಬಲವಿದ್ದದ್ದು ಗೊತ್ತಿದ್ದು, ಸುಬಲಗೊಳಿಸಲು ಪ್ರಯತ್ನಗಳು ನಡೆಯದ ಕಾರಣ ಸೋಲು ಎದುರಿಸಬೇಕಾಯಿತು ಎನ್ನುತ್ತಾರೆ ಬಿಜೆಪಿ ಮುಖಂಡರು. ಅಭ್ಯರ್ಥಿ ವೀರಣ್ಣ ಚರಂತಿಮಠರ ಸಹೋದರ ಮಲ್ಲಿಕಾರ್ಜುನ ಚರಂತಿಮಠ ಕಾಂಗ್ರೆಸ್ ಸೇರ್ಪಡೆಯೂ ಪರಿಣಾಮ ಬೀರಿದೆ.

ಯತ್ನಾಳ ಮರು ಸೇರ್ಪಡೆ ಹಾದಿ ಕಠಿಣ: ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡಿದ್ದ ಬಿಜೆಪಿಯಿಂದ ಉಚ್ಚಾಟಿತ ಶಾಸಕ ಬಸನಗೌಡ ಯತ್ನಾಳ ಪಾಟೀಲ ಅವರ ಪಕ್ಷ ಮರು ಸೇರ್ಪಡೆ ಹಾದಿ ಕಠಿಣವಾಗಿದೆ.

ಯತ್ನಾಳರನ್ನು ಕರೆಸಬೇಕು ಎಂದು ರಾಜ್ಯ ಘಟಕದ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಒತ್ತಡ ಹೇರಲಾಗಿತ್ತು. ಚುನಾವಣೆ ವೇಳೆ ಯತ್ನಾಳ, ‘ಚರಂತಿಮಠರ ಗೆಲುವಿನ ನಂತರ ಉಳಿದ ನಾಯಕರೇ ನನ್ನ ಸೇರ್ಪಡೆ ಬಗ್ಗೆ ನಾಯಕರ ಎದುರು ಮಾತನಾಡುವರು’ ಎಂದಿದ್ದರು. ಫಲಿತಾಂಶ ಉಲ್ಟಾ ಆಗಿದೆ. ಯತ್ನಾಳ ಸೇರ್ಪಡೆಗೆ ಹಲವು ಕಂಟಕಗಳು ಎದುರಾಗಲಿವೆ.

ನಿರಂತರ ಮುನ್ನಡೆ ಕಾಯ್ದುಕೊಂಡ ಕಾಂಗ್ರೆಸ್

ಬಾಗಲಕೋಟೆ ಕ್ಷೇತ್ರದ ಮತ ಎಣಿಕೆ ವೇಗವಾಗಿ ನಡೆದು ಮಧ್ಯಾಹ್ನ 12ರ ವೇಳೆಗೆ ಫಲಿತಾಂಶ ಪ್ರಕಟವಾಯಿತು. ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ಮತ್ತು ಜಿಲ್ಲೆಯ ಜನಪ್ರತಿನಿಧಿಗಳು ಮತ ಎಣಿಕೆ ಕೇಂದ್ರದತ್ತ ಸುಳಿಯಲಿಲ್ಲ.

ಮೊದಲ ಸುತ್ತಿನಿಂದಲೇ ಮುನ್ನಡೆ ಪಡೆದ ಕಾಂಗ್ರೆಸ್, ಕೊನೆಯವರೆಗೂ ಮುನ್ನಡೆ ಅನ್ನು ಕಾಯ್ದುಕೊಂಡಿತು. ನಡುವೆ ಕೆಲ ಸುತ್ತುಗಳಲ್ಲಿ ಮುನ್ನಡೆ ಅಂತರ ಕಡಿಮೆಯಾದರೂ, ಕೊನೆಯ ಸುತ್ತುಗಳಲ್ಲಿ ಮತ್ತೇ ಮುನ್ನಡೆ ಹೆಚ್ಚಾಯಿತು.

ಆರನೇ ಸುತ್ತಿನ ವೇಳೆಗೆ ಕಾಂಗ್ರೆಸ್ 15 ಸಾವಿರಕ್ಕೂ ಹೆಚ್ಚು ಮತಗಳ ಮುನ್ನಡೆ ಬಂದಿತು. ಎಣಿಕೆ ಕೇಂದ್ರದಲ್ಲಿದ್ದ ಬಿಜೆಪಿ ನಾಯಕರು ಒಬ್ಬೊಬ್ಬರಾಗಿಯೇ ಹೊರ ನಡೆದರು. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಎಣಿಕೆ ಕೇಂದ್ರದತ್ತ ಬರಲಿಲ್ಲ. ಮುನ್ನಡೆ ಅಂತರ ಹೆಚ್ಚಿದಂತೆ ಎಣಿಕೆ ಕೇಂದ್ರದ ಹೊರಗೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಡೊಳ್ಳು ಬಾರಿಸಿ, ಬಣ್ಣ ಎರಚಿ ಸಂಭ್ರಮಿಸಿದರು. 15 ಸುತ್ತಿನ ಬಳಿಕ ಕಾಂಗ್ರೆಸ್ ಮುಖಂಡರಿಗೆ ಗೆಲುವು ಖಚಿತವಾಯಿತು.

ಅಭ್ಯರ್ಥಿ ಉಮೇಶ ಮೇಟಿ ಎಣಿಕೆ ಕೇಂದ್ರಕ್ಕೆ ಧಾವಿಸಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಹಿಂದೆಯೇ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ, ಶಾಸಕರಾದ ಜೆ.ಟಿ. ಪಾಟೀಲ, ಬಿ.ಬಿ. ಚಿಮ್ಮನಕಟ್ಟಿ, ವಿಜಯಾನಂದ ಕಾಶಪ್ಪನವರ ಧಾವಿಸಿದರು. ಗೆಲುವು ಘೋಷಣೆಯಾಗುತ್ತಿದ್ದಂತೆಯೇ ಜಯಕಾರಗಳು ಮೊಳಗಿದವು.

• ಗೆದ್ದ ಅಭ್ಯರ್ಥಿ
ಉಮೇಶ ಮೇಟಿ (ಕಾಂಗ್ರೆಸ್)
• ಪಡೆದ ಮತ: 98,919
• ಸಮೀಪದ ಅಭ್ಯರ್ಥಿ
ವೀರಣ್ಣ ಚರಂತಿಮಠ (ಬಿಜೆಪಿ)
• ಗೆಲುವಿನ ಅಂತರ: 22,332

ಎರಡೂ ಕಡೆ ‘ಕೈ’ ಹಿಡಿದ ಗ್ಯಾರಂಟಿ– ಡಿಕೆಶಿ

ಬೆಂಗಳೂರು: ‘ಗ್ಯಾರಂಟಿ ಯೋಜನೆಗಳು ರಾಜ್ಯದ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ನಮ್ಮ ಕೈ ಹಿಡಿದಿವೆ. ತಮಿಳುನಾಡಿನದ್ದು ಅಚ್ಚರಿಯ ಫಲಿತಾಂಶವಾಗಿದ್ದು, ಅಲ್ಲಿನ ಜನರ ನಾಡಿಮಿಡಿತ ಗ್ರಹಿಸಲು ಆಗಲಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚುನಾವಣಾ ಫಲಿತಾಂಶದ ಕುರಿತು ವಿಶ್ಲೇಷಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೇರಳದ ಫಲಿತಾಂಶ ನಿರೀಕ್ಷಿತ. ಅಸ್ಸಾಂನಲ್ಲಿ ಕ್ಷೇತ್ರ ಮರುವಿಂಗಡಣೆ ವೇಳೆಯಲ್ಲಿ ಅಲ್ಪಸಂಖ್ಯಾತರು ಒಂದೇ ಕಡೆ ಬರುವಂತೆ ಉಪಾಯವಾಗಿ ಮಾಡಿದ್ದರಿಂದ ನಿರೀಕ್ಷೆಯ ಫಲಿತಾಂಶ ಬಂದಿಲ್ಲ’ ಎಂದು ದೂರಿದರು.

‘ಚುನಾವಣೆ ಫಲಿತಾಂಶವು ರಾಜ್ಯದಲ್ಲಿ ಏನಾದರೂ ಬದಲಾವಣೆ ತರಲಿದೆಯೇ’ ಎಂಬ ಪ್ರಶ್ನೆಗೆ, ‘ನಮ್ಮ ರಾಜ್ಯಕ್ಕೆ ಏನೂ ಆಗುವುದಿಲ್ಲ. ಒಂದಷ್ಟು ಜನಕ್ಕೆ ಸಂತೋಷ, ಒಂದಷ್ಟು ಜನಕ್ಕೆ ಬೇಜಾರು ಆಗಬಹುದು. ಡಬಲ್ ಎಂಜಿನ್ ಸರ್ಕಾರ ಇದ್ದಾಗಲೇ ಅವರಿಗೆ ಏನೂ ಮಾಡಲು ಸಾಧ್ಯ ಆಗಿರಲಿಲ್ಲ’ ಎಂದರು.

‘ತಮಿಳುನಾಡಿನಲ್ಲಿ ಸ್ಟಾಲಿನ್ ಜೊತೆ ರಾಹುಲ್ ಗಾಂಧಿ ಪ್ರಚಾರದಲ್ಲಿ ಕಾಣಿಸಿಕೊಂಡಿರಲಿಲ್ಲವಲ್ಲ’ ಎಂಬ ಪ್ರಶ್ನೆಗೆ, ‘ಆ ಬಗ್ಗೆ ಮಾತನಾಡಲು ನಾನು ಹೋಗುವುದಿಲ್ಲ. ಹೈಕಮಾಂಡ್ ತೀರ್ಮಾನ ಮಾಡಿದಂತೆ ನಾವೆಲ್ಲರೂ ಅಲ್ಲಿಗೆ ಪ್ರಚಾರಕ್ಕೆ ಹೋಗಿದ್ದೇವಲ್ಲ’ ಎಂದರು.

‘ಪಶ್ಚಿಮ ಬಂಗಾಳದಲ್ಲಿ ವ್ಯವಸ್ಥಿತವಾಗಿ ಅಧಿಕಾರ ದುರುಪಯೋಗವಾಗಿದೆ. ಚುನಾವಣಾ ಆಯೋಗವನ್ನು ವ್ಯಾಪಕವಾಗಿ ದುರುಪಯೋಗ ಮಾಡಿಕೊಂಡಿದ್ದಾರೆ. ಈ ಹಿಂದೆ ಬಹಳ ಪ್ರಯತ್ನ ಮಾಡಿದರು. ಮತದಾರರ ಹೆಸರುಗಳನ್ನು ಪಟ್ಟಿಯಿಂದ ಅಳಿಸಿ ಹಾಕಿದ ಕಾರಣಕ್ಕೆ ಬದಲಾವಣೆಯಾಗಿದೆ’ ಎಂದರು

> **ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಮತಪ್ರಮಾಣ ಕಡಿಮೆಯಾಗಿದೆ. ಪಕ್ಷದ ಮತಗಳು ಶಿಫ್ಟ್ ಆಗದಂತೆ ರಿಪೇರಿ ಮಾಡುತ್ತೇವೆ**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

> **ಬಾಗಲಕೋಟೆ, ದಾವಣಗೆರೆ ದಕ್ಷಿಣದಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ಉಪ ಚುನಾವಣೆ ಗೆದ್ದಿದೆ. ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಹಣ ಚೆಲ್ಲಿ ಗೆದ್ದಿದೆ**
> **ಜಗದೀಶ್ ಶೆಟ್ಟರ್,** ಸಂಸದ

> **ಈ ಫಲಿತಾಂಶ ಸರ್ಕಾರದ ಕೆಲಸಕ್ಕೆ ಸಿಕ್ಕ ಜನರ ಸರ್ಟಿಫಿಕೇಟ್. ಗ್ಯಾರಂಟಿಗಳು ಕೇವಲ ಘೋಷಣೆಗಳಲ್ಲ; ಜನರ ಬದುಕಿಗೆ ಬೆಂಬಲವಾಗಿವೆ. ಬಿಜೆಪಿಗೆ ಜನ ಸ್ಪಷ್ಟಸಂದೇಶ ನೀಡಿದ್ದಾರೆ**
> **ಲಕ್ಷ್ಮೀ ಹೆಬ್ಬಾಳಕರ,** ಸಚಿವೆ

ಕೋರ್ಟ್‌ಗೆ ಹೋಗುತ್ತೇವೆ: ಬಿಜೆಪಿ ಅಭ್ಯರ್ಥಿ

ದಾವಣಗೆರೆ: ‘ಇವಿಎಂ ಇರಿಸಿದ್ದ ಸ್ಟ್ರಾಂಗ್ ರೂಮ್‌ನ ಬೀಗ ತೆರೆಯಲು ಆಗದಿದ್ದರಿಂದ ಚಿಲಕ ಒಡೆದು ಮತ ಎಣಿಕೆ ಕೇಂದ್ರದ ಒಳಗೆ ಪ್ರವೇಶಿಸಲಾಗಿದೆ. ಇದು ಅನುಮಾನ ಮೂಡಿಸಿದೆ ಎಂದು ದಾವಣಗೆರೆ ದಕ್ಷಿಣ ಕ್ಷೇತ್ರದ ಪರಾಜಿತ ಅಭ್ಯರ್ಥಿ, ಬಿಜೆಪಿಯ ಶ್ರೀನಿವಾಸ ದಾಸಕರಿಯಪ್ಪ ಹೇಳಿದ್ದಾರೆ.

‘ಬೀಗದ ಕೈ ಕೆಲಸ ಮಾಡಿದ್ದರ ಹಿಂದೆ ಷಡ್ಯಂತ್ರ ನಡೆದಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇನೆ’ ಎಂದು ಫಲಿತಾಂಶದ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

‘ಜವಾಬ್ದಾರಿ ಇರುವ ಅಧಿಕಾರಿ ನಿರ್ಲಕ್ಷ್ಯ ವಹಿಸಿದ್ದು, ತಕ್ಷಣ ಅವರನ್ನು ವಜಾಗೊಳಿಸಬೇಕು. ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಚುನಾವಣಾ ಆಯೋಗಕ್ಕೂ ದೂರು ನೀಡುತ್ತೇನೆ’ ಎಂದರು.

ನಗರಸಭಾ ಕಾರ್ಯಾಲಯ, ಚಿತ್ರದುರ್ಗ
ಸಂ:ನಸಚಿ/ತಾಂತ್ರಿಕ/ಕು.ನಿ/ಸಿಆರ್/21/2026–27 ದಿನಾಂಕ: 02.05.2026
ದರಪಟ್ಟಿ ಕೊಟೇಷನ್ ಪ್ರಕಟಣೆ
ಚಿತ್ರದುರ್ಗ ನಗರಸಭೆಯ ವಿವಿದ ಅನುದಾನದಲ್ಲಿ ನಗರಸಭೆಯ ದೈನಂದಿನ ಕೆಲಸಕ್ಕೆ ಅವಶ್ಯಕವಾದ ಫೈಲ್ಸ್ ಮತ್ತು ಸರ್ಕಾರಿ ಸಮಾರಂಭಗಳಿಗೆ ಶಾಮಿಯಾನ ಹಾಕುವ ಕೆಲಸಗಳಿಗೆ ಎಸ್.ಆರ್.ದರಗಳು ಲಭ್ಯವಿಲ್ಲದೆ ಇರುವುದರಿಂದ ಅಂದಾಜು ಪಟ್ಟಿ ತಯಾರಿಸುವ ಸಲುವಾಗಿ ಪ್ರಸ್ತುತ ಮಾರುಕಟ್ಟೆ ದರಗಳನ್ನು ಪಡೆಯಲು ಕೆ.ಪಿ.ಪಿ ಪೋರ್ಟಲ್ ಮುಖಾಂತರ ದರಪಟ್ಟಿ ಕೊಟೇಷನ್ ಅಹ್ವಾನಿಸಲಾಗಿದೆ. ಇಚ್ಛೆವುಳ್ಳ ಅರ್ಹ ಏಜೆನ್ಸಿಯವರು/ ಸರಬರಾಜುದಾರರು/ ಅಧಿಕೃತ ಮಾರಾಟಗಾರರು/ಗುತ್ತಿಗೆದಾರರುಗಳು ತಮ್ಮ ದರಗಳನ್ನು ಈ ಕೆಳಕಂಡ ಇಂಡೆಂಟ್ ಸಂಖ್ಯೆಗಳಿಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನಮೂದಿಸುವುದು. ದರ ನಮೂದಿಸಲು ಕೊನೆಯ ದಿನಾಂಕ: 12–05–2026 ರಂದು ಸಂಜೆ:–5.30 ಗಂಟೆವರೆಗೆ ಹಾಗೂ ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಅಥವಾ ದೂರವಾಣಿ ಮೂಲಕ ಕೇಳಿ ಪಡೆದು ಸಲ್ಲಿಸಬಹುದು. (ದೂರವಾಣಿ ಸಂಖ್ಯೆ:9743152344) ಜಿ.ಎಸ್.ಟಿ. ಪ್ರತ್ಯೇಕವಾಗಿ ನಮೂದಿಸುವುದು.
Indent No
1) DMA/2026-27/PREQUAL_TENDER_NUMBER_264
2) DMA/2026-27/PREQUAL_TENDER_NUMBER_267
DIPR/CTA/KSMCA/ 84/2026-27
ಸಹಿ/–ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. . 8431235858 / 8431235867
ಇ–ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org
IFAB/2025-26/PM/WORK_INDENT3/CALL-4 Date: 30.04.2026
ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದ ಬಲವರ್ಧನೆ ಯೋಜನೆಯ ಡಬಲ್ ಡೀಪ್ ರ್‍ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್ ಇತ್ಯಾದಿಗಳನ್ನು ಒಳಗೊಂಡಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಮತ್ತು ಹೂವಿನ ಶೇಖರಣಾ ಕೋಲ್ಡ್ ರೂಮ್‌ಗಳ ನಿರ್ಮಾಣ ಟೆಂಡರ್ ಪ್ರಕಟಣೆ
IFAB ಲಿಮಿಟೆಡ್ ನಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಎರಡು ಬಿಡ್ ಸಿಸ್ಟಮ್ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದಲ್ಲಿ RIDF ಅಡಿಯಲ್ಲಿ ಡಬಲ್ ಡೀಪ್ ರ್‍ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್, ಇತ್ಯಾದಿ ಸೇರಿದಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಹಾಗೂ ಹೂವಿನ ಸಂಗ್ರಹಣೆ ಕೋಲ್ಡ್ ರೂಮ್‌ಗಳ ನಿರ್ಮಾಣ (IFAB/2025-26/PM /WORK_INDENT3/CALL-4)ಕ್ಕಾಗಿ ದಿ: 30.04.2026 ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ವಿವರ ಮತ್ತು ದಾಖಲೆಗಳು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ದಿನಾಂಕ: 30.04.2026 ರಿಂದ ಲಭ್ಯವಿರುತ್ತದೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11.05.2026 ರ ಸಂಜೆ 4.00 ಗಂಟೆ ಆಗಿರುತ್ತದೆ.
ದಯವಿಟ್ಟು ಗಮನಿಸಿ, ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಟೆಂಡರ್ ದಾಖಲೆಯಲ್ಲಿ ಕೊನೆಯ ದಿನಾಂಕ ವ್ಯತ್ಯಾಸವಾಗಿ ಕೈತಪ್ಪಿನಿಂದ 23.04.2026 ಎಂದು ನಮೂದಿಸಲಾಗಿದೆ. ಅದನ್ನು 11.05.2026 ಎಂದು ಓದಿಕೊಳ್ಳಲು ವಿನಂತಿಸಲಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/480/ಶಿರಡಿ ಸಾಯಿ/2026–27

CITY MUNICIPAL COUNCIL, SEDAM.
Near State Bank of India, Sedam-585222 Dist : Kalaburagi, State : Karnataka
WebSite: www.sedamtown.mrc.gov.in, Phone: 08441-277912-276932
NO:CMC-SEDAM/MF/2025-26 Date: 04.05.2026
ಅಲ್ಪಾವಧಿ ಟೆಂಡರ ಪ್ರಕಟಣೆ
ಪೌರಾಯುಕ್ತರು ನಗರಸಭೆ ಸೇಡಂ ಇವರಿಂದ Municipal Fund : 2025–26 ಅನುದಾನದಡಿಯಲ್ಲಿ ವಿವಿದ ಅಭಿವೃದ್ಧಿ ಕಾಮಗರಿಗಳ ಟೆಂಡರ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಪಿ.ಪಿ–2000) ರನ್ವಯ ಟೆಂಡರ ಕರೆಯಲಾಗಿದ್ದು, ಜಿ.ಎಸ್.ಟಿ ನೊಂದಾಯಿತ ನವಿಕರಿಸಿದ ಆಸಕ್ತಿಯುಳ್ಳ ನೊಂದಾಯಿತ ಅರ್ಹ ಗುತ್ತಿಗೆದಾರರು ತಮ್ಮ ಮೂಲ ಪ್ರಮಾಣ ಪತ್ರದ ಪ್ರತಿ ಹಾಗೂ ಇತರೆ ಸೂಕ್ತ ದಾಖಲಾತಿಗಳೊಂದಿಗೆ http://kppp.karnataka.gov.in ಅನ್‌ಲೈನ್ ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 18.05.2026 ರ (ಪ್ರತಿ ಟೆಂಡರಗೆ ಕೆ.ಪಿ.ಪಿ–ಪ್ರೊಕ್ಯೂರಮೆಂಟ್ ಪೋರ್ಟಲನಲ್ಲಿ ನಿಗದಿಪಡಿಸಿದ ಸಮಯದೊಳಗಾಗಿ ಟೆಂಡರ ಅರ್ಜಿ ಸಲ್ಲಿಸತಕ್ಕದ್ದು)
01) ಕಾಮಗಾರಿ/ಸರಕು/ಸೇವೆಯ ವಿವರ:– 1. DMA/2025-26/OW/WORK_INDENT55039/Call-2 Category-II(A), 2. DMA/2025-26/OW/WORK_INDENT55075/Call-2 Others, 3. DMA/ 2025-26/OW/WORK_INDENT55200/Call-2 Category- Sc., 02) ಅನುದಾನದ ವಿವರ : ನಗರಸಭೆ ನಿಧಿ : 2025–26, 03) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ : ರೂ. 80.27 ಲಕ್ಷ ರಿಂದ 100.00 ಲಕ್ಷ, 04) ಗುತ್ತಿಗೆದಾರರ/ಉತ್ಪಾದಕರು/ಅಧಿಕೃತ ಸರಬರಾಜುದಾರರ ಅರ್ಹತೆ ವಿವರ : ನೊಂದಾಯಿತ ಅರ್ಹ ಗುತ್ತಿಗೆದಾರರು, 05) ಕಾಮಗಾರಿ/ಸರಕು/ಸೇವೆಯ ಟೆಂಡರ ಮೊತ್ತದ ವಿವರ : ರೂ. 80.27 ಲಕ್ಷ ರಿಂದ 100.00 ಲಕ್ಷ, 06) ಟೆಂಡರ ಫಾರಂಗಾಗಿ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18.05.2026 ಸಾಯಂಕಲ 17.00 ಗಂಟೆಗೆ, 07) ಟೆಂಡರ ತೆರೆಯುವ ದಿನಾಂಕ : 20.05.2026 ಬೆಳಿಗ್ಗೆ 11.00 ಗಂಟೆಗೆ, (Financial Bid Opening As per kpp portal), 08) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ, ಕಛೇರಿಯ ವಿಳಾಸ, ದೂರವಾಣಿ ಸಂಖ್ಯೆ. : ನಗರಸಭೆ ಕಾರ್ಯಾಲಯ ಸೇಡಂ – 7892152625. **ಷರತ್ತು: ನಗರಸಭೆಯ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಬಿಲ್ಲು ಪಾವತಿಸುವ ಷರತ್ತಿಗೆ ಒಳಪಟ್ಟಿರುತ್ತಿದೆ.**
ಸಹಿ/– ಪೌರಾಯುಕ್ತರು ನಗರಸಭೆ, ಸೇಡಂ
ವಾ.ಸಾ.ಸಂ.ಇ.ಕಲಬುರಗಿ/99/ದೇಶಪಾಂಡೆ ಪಬ್ಲಿಸಿಟಿ/2026–27

ಸಮಗ್ರ ಶಿಕ್ಷಣ–ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ,
ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು–01
ಸಂಖ್ಯೆ: SSK/TALP/PAB/1/2025-JDQ/96321 ದಿನಾಂಕ:04.05.2026
ಮರು ಟೆಂಡರ್ ಪ್ರಕಟಣೆ
2025–26ನೇ ಸಾಲಿಗೆ ರಾಜ್ಯದಾದ್ಯಂತ ಇರುವ 3767 ಸರ್ಕಾರಿ ಪ್ರಾಥಮಿಕ, ಮಾಧ್ಯಮಿಕ, ಹಿರಿಯ ಮಾಧ್ಯಮಿಕ ಮತ್ತು 91 KGBV (Type 1 & Type 4) ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ರೂಂಗಳನ್ನು ಸ್ಥಾಪಿಸುವ ಸಲುವಾಗಿ, ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಪ್ಯಾನ್ ಇಂಡಿಯಾ OEM ಗಳು ಹಾಗೂ OEM ಅಧಿಕೃತ ಡೀಲರ್‌ಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮರು ಟೆಂಡರ್(Call-2) ಅನ್ನು ಆಹ್ವಾನಿಸಲಾಗಿದೆ. ಈ ಟೆಂಡರ್‌ನಲ್ಲಿ **ಸ್ಮಾರ್ಟ್ ಕ್ಲಾಸ್ ರೂಂ ಉಪಕರಣಗಳಾದ Interactive Display Board, UPS-1 KVA Line Interactive with Battery and LED Projector ಗಳ ಸರಬರಾಜು, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ ಹಾಗೂ ತರಬೇತಿ** ಕಾರ್ಯಗಳು ಒಳಗೊಂಡಿರುತ್ತವೆ.
ಟೆಂಡರ್ (IFT No.SSK/TALP/PAB/1/2025-JDQ/E-65010) ಸಂಬಂಧಿತ ವಿವರಗಳು **https://kppp.karnataka.gov.in** ನಲ್ಲಿ ಲಭ್ಯವಿರುತ್ತವೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **23.05.2026 ಸಂಜೆ 5:00 ಗಂಟೆಯವರೆಗೆ.**
ಸಹಿ/– ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ ಬೆಂಗಳೂರು – 27.
ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/ಟೆಂಡರ್/04/2026–27 ದಿನಾಂಕ: 04.05.2026
ಟೆಂಡರ್ ಆಹ್ವಾನ ಪ್ರಕಟಣೆ
ಬೆ.ಮ.ಸಾ.ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ಬಿಡಿಭಾಗಗಳನ್ನು/ಸೇವೆಗಳನ್ನು ಪಡೆಯಲು KPP Portal ನ ಮೂಲಕ ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ವಿವರ	ಕೆಪಿಪಿಪಿ ಮೂಲಕ ಬಿಡ್ ಸಲ್ಲಿಸಲು ಕೊನೆ ದಿನಾಂಕ
		ಅಲ್ಪಾವಧಿ ಟೆಂಡರ್	
1	BMTC/2026-27/IND0292	ಇಟಿಎಂ (ETM) ಥರ್ಮಲ್ ಪೇಪರ್ ರೋಲ್‌ಗಳ ಖರೀದಿ ಬಗ್ಗೆ.	20.05.2026, 17:00 ಗಂಟೆಗೆ
		ನಿಯಮಿತ ಟೆಂಡರ್	
2	BMTC/2026-27/SE1241	ಬೆಮಸಾಸಂಸ್ಥೆಯ ಆಸ್ತಿಗಳನ್ನು ಆಸ್ತಿ ಹಣಗಳಿಕೆ (ಅಸ್ಸೆಟ್ ಮೊನಿಟೈಜೇಶನ್) ಮಾಡಲು ವಹಿವಾಟು ಸಲಹೆಗಾರರನ್ನು (ಟ್ರಾನ್ಸಾಕ್ಷನ್ ಅಡ್ವೈಸರ್) ಆಯ್ಕೆ ಮಾಡುವ ಬಗ್ಗೆ.	04.06.2026, 17:00 ಗಂಟೆಗೆ
		ತಿದ್ದುಪಡಿ: ಈ ಕೆಳಕಂಡ ಟೆಂಡರ್‌ಗಳಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು ಕೆಳಕಂಡಂತೆ ವಿಸ್ತರಿಸಲಾಗಿದೆ.	
3	BMTC/2025-26/IND0259	ಆಟೋ ಎಲೆಕ್ಟ್ರಿಕಲ್ ವಸ್ತುಗಳ ಖರೀದಿ ಬಗ್ಗೆ.	04.06.2026, 17:00 ಗಂಟೆಗೆ

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ನಿಂದ ಪಡೆಯಬಹುದು. ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ KPP–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.
ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು KPP–ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ KPP–ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ಸರ್ಕಾರ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಆಯುಕ್ತರವರ ಕಛೇರಿ, ಕೆ.ಆರ್. ವೃತ್ತ, ಬೆಂಗಳೂರು–560001,
ದೂರವಾಣಿ ಸಂಖ್ಯೆ: 91–080–22212408, ಫ್ಯಾಕ್ಸ್ ನಂ.: 91–080–22277528
ಸಂಖ್ಯೆ:SSLR:E-2097784/2026-27 ದಿನಾಂಕ: 04.05.2026
ಇ–ಟೆಂಡರ್ ಪ್ರಕಟಣೆ
ವಿಷಯ: ಭೂಮಾಪನ ಇಲಾಖೆಯ, 04 ವಿಭಾಗಗಳಿಗೆ, ತಲಾ ಒಂದು ವಿಭಾಗಕ್ಕೆ 225 ರಂತೆ, ಒಟ್ಟು 900 ಆಧುನಿಕ ತಂತ್ರಜ್ಞಾನ ಆಧಾರಿತ ಭೂಮಾಪನ ಉಪಕರಣವಾದ Rovers ಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸುತ್ತಿರುವ ಬಗ್ಗೆ.
ಭೂಮಾಪನ ಇಲಾಖೆಯ, 04 ವಿಭಾಗಗಳಿಗೆ, ತಲಾ ಒಂದು ವಿಭಾಗಕ್ಕೆ 225 ರಂತೆ, ಒಟ್ಟು 900 ಆಧುನಿಕ ತಂತ್ರಜ್ಞಾನ ಆಧಾರಿತ ಭೂಮಾಪನ ಉಪಕರಣವಾದ Roversಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಲಾಗಿದೆ.
ಇಲಾಖೆಯು ಮೇಲ್ಕಂಡ Rovers ಒದಗಿಸಲು ಆಸಕ್ತಿಹೊಂದಿರುವ ಸಂಸ್ಥೆಗಳಿಂದ ಆರ್.ಎಫ್.ಪಿ ಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, **ದಿನಾಂಕ:04.05.2026 ರಿಂದ https://kppp.karnataka.gov.in** ರಲ್ಲಿ ಲಭ್ಯವಿರುತ್ತದೆ. ಆಸಕ್ತ ಹಾಗೂ ಅರ್ಹ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ **ದಿನಾಂಕ:19.05.2026 ಆಗಿರುತ್ತದೆ.**
ಸಹಿ/– ಕೆ.ಜಯಪ್ರಕಾಶ
ಅಪರ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು
ವಾಸಾಸಂಇ/ವಾ.ಪ್ರ/499/ಶಿರಡಿ ಸಾಯಿ/2026–27

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.
ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ
ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis') ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)
Short description of the Immovable Property (SPLOCA/AUC(2)/CR/16/2025-26)
Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004 (Khata stands in the name of Competent Authority and Auctioning Authority

Sl. No.	DETAILS OF THE SCHEDULE PROPERTY (Clear Title by Court in order No. MISC No. 702/2019)	Minimum Bid Price (Rs)	EMD (Rs)	Bid Increase Value (Rs)
1	Residential Building Apartment Old No.14, New No.58, Benson Cross Road, Benson Town, Bengaluru. PID No.92-32-58, Aggregating 5840 Sq.ft (UNDER CONSTRUCTION) Google Map link: https://maps.app.goo.gl/indpmFp1t5jYvdMu5	14,15,50,000/-	1,41,55,000/-	14,16,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಸಲ್ಲಿಸಲು ಮತ್ತು ಇಎಂಡಿ ಪಾವತಿಸಲು ಕೊನೆಯ ದಿನಾಂಕ	ಇ–ಹರಾಜು ದಿನಾಂಕ ಮತ್ತು ಸಮಯ
14ನೇ ಮೇ 2026 ಮಧ್ಯಾಹ್ನ 3.00 ರಿಂದ 4.00 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	21ನೇ ಮೇ 2026 ಮಧ್ಯಾಹ್ನ 02.00 ರಿಂದ ಸಂಜೆ 05.00 ಗಂಟೆಯವರೆಗೆ	26ನೇ ಮೇ 2026 ಸಂಜೆ 5 ಗಂಟೆಯವರೆಗೆ	29ನೇ ಮೇ 2026 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.
ಸ್ಥಳ: ಬೆಂಗಳೂರು
ದಿನಾಂಕ: 30.04.2026 DIPR/CP/483/ZEN/2026-27
ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಕರ್ನಾಟಕ ಸರ್ಕಾರ
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ
YADGIRI INSTITUTE OF MEDICAL SCIENCES, YADGIRI-585 202
(Government of Karnataka, Autonomous Institution)
E-mail id: directorymsyadgir@gmail.com Mob:9481623299
ಸಂಖ್ಯೆ : ಯಿಮ್ಸ್/ಟೆ.ಶಾ/ಟೆ.ಪ್ರ/16/2025–26 ದಿನಾಂಕ :02–05–2025
::ಟೆಂಡರ್ ಪ್ರಕಟಣೆ :: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2025–26ನೇ ಸಾಲೀನ ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿಯ ಟೆಂಡರ್.ಸಂ. 1)PRINTING AND SUPPLY OF HOSPITAL FORMATS AND REGISTERS TO YIMS YADGIRI ಸಲುವಾಗಿ ದಿನಾಂಕ: 02–05–2026 ರಿಂದ 18–05–2026 ವರೆಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್.ಸಂ. 2) ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ HOSPITAL FURNITURESR ಖರೀಧಿಸುವ ಸಲುವಾಗಿ ದಿನಾಂಕ:30–04–2026 ರಿಂದ 14–05–2026 ವರೆಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್.ಸಂ. 3) ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ BLOOD BANK ಗೆ ಅವಶ್ಯವಿರುವ KITS AND REAGENTS ಖರೀಧಿಸುವ ಸಲುವಾಗಿ ದಿನಾಂಕ:30–04–2026 ರಿಂದ 14–05–2026 ವರೆಗೆ ಟೆಂಡರ್‌ಕರೆಯಲಾಗಿದ್ದು, ಟೆಂಡರ್.ಸಂ.4 ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ E-OFFICE ಸಲುವಾಗಿ ದಿನಾಂಕ:02–05–2026 ರಿಂದ 18–05–2026 ವರೆಗೆ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿ ದ್ವಿ–ಲಕೋಟೆಯಲ್ಲಿ ಆಹ್ವಾನಿಸಿರುವ ಬಗ್ಗೆ.

ಕ್ರ ಸಂ	ಸಂಸ್ಥೆ	ವಿವರ	ಟೆಂಡರ್‌ನ ಅಂದಾಜು ಮೊತ್ತ ರೂ.	ಇ.ಎಂ.ಡಿ. ಮೊತ್ತ ರೂ.
1	ಡೀನ್ & ನಿರ್ದೇಶಕರು, ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ	DME/2026-27/IND2300 PRINTING AND SUPPLY OF HOSPITAL FORMATS AND REGISTERS TO YIMS YADGIRI	ರೂ. 25,00,000.00	ರೂ. 50,000.00
		DME/2026-27/IND2295 PROCURMENT OF HOSPITAL FURNITURES TO YIMS YADGIRI	ರೂ. 49,00,000.00	ರೂ. 50,000.00
		DME/2026-27/IND2292 SUPPLY OF KITS AND RE-AGENTS TO BLOOD BANK YIMS YADGIRI	ರೂ. 35,00,000.00	ರೂ. 50,000.00
		DME/2026-27/IND2301 PROCURMENT OF COM-PUTER, SCANNERS, PRINT-ERS, AND DESKTOPS AND OTHER ITEMS TO YIMS YADGIRI	ರೂ. 1,49,00,000.00	ರೂ.2,00,000.00

ಟೆಂಡರ್ ಪ್ರಕ್ರಿಯೆ ವಿವರ: ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿ ಪಡೆಯಬಹುದು.
ಸಹಿ/– ಡೀನ್ ಮತ್ತು ನಿರ್ದೇಶಕರು ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/50/ಕೆ.ಎಸ್.ಎಂ.ಸಿ.&ಎ/2026–27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?

–ಕುವೆಂಪು

ಸಂಪಾದಕೀಯ

ಪ್ರಾದೇಶಿಕ ಪಕ್ಷಗಳಿಗೆ ತೀವ್ರ ಪೆಟ್ಟು ದುರ್ಬಲಗೊಂಡ ವಿರೋಧಿ ಪಾಳಯ

ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಂಡಿದ್ದು, ಮೂರು ರಾಜ್ಯಗಳಲ್ಲಿ ಬದಲಾವಣೆಗಾಗಿ ಭಾರೀ ಜನಾದೇಶ ದೊರೆತಿದೆ. ಮತ್ತೊಂದು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿ ಈಗಿರುವ ಸರ್ಕಾರಗಳ ಮುಂದುವರಿಕೆಯನ್ನು ಮತದಾರರು ಬಯಸಿದ್ದಾರೆ. ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ರಾಜಕೀಯ ಭೂಕಂಪದಂತಹ ಬದಲಾವಣೆಗಳು ಕಂಡುಬಂದಿವೆ. ಪಶ್ಚಿಮ ಬಂಗಾಳದಲ್ಲಿ ಅಧಿಕಾರದ ಗದ್ದುಗೆಯನ್ನೇರಲು ಬಿಜೆಪಿ ಸಜ್ಜಾಗಿದೆ. ತಮಿಳುನಾಡಿನಲ್ಲಿ ನಟ ವಿಜಯ್ ನೇತೃತ್ವದ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷವು ಡಿಎಂಕೆಯನ್ನು ಅಧಿಕಾರದಿಂದ ಕೆಳಗಿಳಿಸಲು ಸಿದ್ಧವಾಗಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಭಾರೀ ಬಹುಮತದೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿಯಲು ಸಿದ್ಧವಾಗುವುದರೊಂದಿಗೆ, ಸಿಪಿಐಎಂ ನೇತೃತ್ವದ ಎಲ್‌ಡಿಎಫ್ ಮತದಾರರಿಂದ ಸಂಪೂರ್ಣ ನಿರಾಕರಣೆಗೆ ಒಳಗಾಗಿದೆ. ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಹಾಗೂ ಪುದುಚೇರಿಯಲ್ಲಿನ ಎನ್‌ಡಿಎ ಮೈತ್ರಿಕೂಟ (ಬಿಜೆಪಿ ಮತ್ತು ಎಐಎಡಿಎಂಕೆ) ಸರ್ಕಾರ ಜನರ ವಿಶ್ವಾಸ ಉಳಿಸಿಕೊಂಡಿವೆ ಹಾಗೂ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡಿವೆ. ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳದಲ್ಲಿನ ಜನಾದೇಶಗಳು ತಮ್ಮ ಸ್ವರೂಪ ಮತ್ತು ವ್ಯಾಪ್ತಿಯಿಂದ ಗಮನಾರ್ಹವಾಗಿವೆ.

ಬಿಜೆಪಿ ಪಾಲಿಗೆ ಪಶ್ಚಿಮ ಬಂಗಾಳದಲ್ಲಿನ ಗೆಲುವು ಮಹತ್ವದ್ದಾಗಿದ್ದು, ಮೂರನೇ ಎರಡರಷ್ಟು ಬಹುಮತ ಗಳಿಸಿದೆ. 2011ರಲ್ಲಿ ಚುನಾವಣಾ ಕಣದ ಚಿತ್ರಣದಲ್ಲಿಯೇ ಇರದ ಪಕ್ಷ, ನಂತರದಲ್ಲಿ 15 ವರ್ಷ ಬಲ ವೃದ್ಧಿಸಿಕೊಂಡು ಈಗ ಅಧಿಕಾರ ಸ್ಥಾನ ಪಡೆಯುವ ಹಂತಕ್ಕೆ ಬಂದುನಿಂತಿದೆ. ಈ ಸ್ಥಾನವನ್ನು ತಲುಪುವುದಕ್ಕಾಗಿ 'ರಾಜಕಾರಣದ ಎಲ್ಲ ಪಟ್ಟು'ಗಳನ್ನೂ ಬಿಜೆಪಿ ಕಳೆದ ಕೆಲವು ವರ್ಷಗಳಿಂದ ಬಳಸಿದೆ. ಇತರ ಪಕ್ಷಗಳಿಂದ ರಾಜಕೀಯ ನಾಯಕರನ್ನು ಸೇರಿಸಿಕೊಂಡು, ಪಕ್ಷದಲ್ಲಿ ಅವರಿಗೆ ಪ್ರಮುಖ ಸ್ಥಾನಗಳನ್ನು ನೀಡಿದೆ. ಕೇಂದ್ರ ಸರ್ಕಾರದ ಅಧಿಕಾರವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರ ಜೊತೆಗೆ, ಇತರ ರಾಜ್ಯಗಳಲ್ಲಿ ಮಾಡಿದಂತೆ ಪಶ್ಚಿಮ ಬಂಗಾಳದಲ್ಲೂ ಸಾಮಾಜಿಕ ಸಂರಚನೆಯ ತಂತ್ರವನ್ನು ಬಳಸಿದೆ. ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಮುಸ್ಲಿಂ ಸಮುದಾಯದ ಮತ ಬ್ಯಾಂಕ್ ಹೊಂದಿದ್ದರಿಂದ, ಕೋಮು ಧ್ರುವೀಕರಣದ ಮೂಲಕ ತನ್ನದೇ ಆದ ಮತಬ್ಯಾಂಕ್ ಅನ್ನು ಬಿಜೆಪಿ ಸೃಷ್ಟಿಸಿಕೊಂಡಿತು. ಚುನಾವಣಾ ಆಯೋಗದ 'ವಿಶೇಷ ಸಮಗ್ರ ಪರಿಷ್ಕರಣೆ' ಪ್ರಕ್ರಿಯೆಯು ಟಿಎಂಸಿಗೆ ದೊರೆಯಬಹುದಾಗಿದ್ದ ಗಣನೀಯ ಸಂಖ್ಯೆಯ ಮತಗಳನ್ನು ಕಡಿಮೆಗೊಳಿಸಿರುವ ಸಾಧ್ಯತೆಯಿದೆ. ಹಿಂದೂ ವಿರೋಧಿ ಹಾಗೂ ಅಕ್ರಮ ವಲಸಿಗರ ಸಂರಕ್ಷಕ ರೂಪದಲ್ಲಿ ಟಿಎಂಸಿಯನ್ನು ಬಿಂಬಿಸಿದ್ದು ಬಿಜೆಪಿಗೆ ಲಾಭ ತಂದಿದೆ. ಅಕ್ರಮ ವಲಸೆ, ಭ್ರಷ್ಟಾಚಾರ, ಉದ್ಯೋಗ, ಅಭಿವೃದ್ಧಿ ಮತ್ತು ಮಹಿಳಾ ಸುರಕ್ಷತೆಯು ಬಿಜೆಪಿಯ ಚುನಾವಣಾ ಪ್ರಚಾರದಲ್ಲಿ ಪ್ರಮುಖ ವಿಷಯಗಳಾಗಿದ್ದವು. ಮೂರು ಅವಧಿಗೆ ರಾಜ್ಯದಲ್ಲಿ ಆಡಳಿತ ನಡೆಸಿದ ಟಿಎಂಸಿಗೆ ಪ್ರಬಲ ಆಡಳಿತ ವಿರೋಧಿ ಅಲೆ ಇದ್ದುದರಿಂದ ಈ ಅಂಶಗಳು ತೀವ್ರ ಪರಿಣಾಮವನ್ನು ಬೀರಿದವು. ಉದ್ಯೋಗಾವಕಾಶಗಳ ಕೊರತೆ ಯುವಜನರ ಅಸಮಾಧಾನಕ್ಕೆ ಕಾರಣವಾಗಿದೆ. ಮಹಿಳೆಯರ ಬೆಂಬಲವನ್ನು ಟಿಎಂಸಿ ಕಳೆದುಕೊಂಡಂತೆ ಕಾಣಿಸುತ್ತಿದೆ. ಕೋಲ್ಕತ್ತದ ಆರ್‌.ಜಿ. ಕರ್ ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ–ಕೊಲೆ ಪ್ರಕರಣವು ಮಮತಾ ಅವರಿಂದ ಮಹಿಳೆಯರು– ವಿಶೇಷವಾಗಿ ನಗರ ಪ್ರದೇಶದ ಮಹಿಳೆಯರು– ದೂರವಾಗಲು, ಆ ಮೂಲಕ ಸರ್ಕಾರದ ವರ್ಚಸ್ಸು ಮಸುಕಾಗಲು ಕಾರಣವಾಗಿರಬಹುದು. ಇದರ ಜೊತೆಗೆ, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಅಭಿಯಾನ, ಗಡಿ ಭದ್ರತೆ, ಪೌರತ್ವ ನೀತಿಗಳು ಹಾಗೂ ವಿವಿಧ ಭರವಸೆಗಳು ಅನೇಕ ವರ್ಗಗಳ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿರುವುದು ಹಾಗೂ ಅನೇಕ ಕ್ಷೇತ್ರಗಳಲ್ಲಿ ಹಿಂದೂ ಮತಗಳ ಕ್ರೋಢೀಕರಣ ಸಾಧ್ಯವಾದುದು ಬಿಜೆಪಿ ಯಶಸ್ಸಿಗೆ ಕಾರಣವಾಗಿವೆ.

ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣಾ ಫಲಿತಾಂಶವು ಪ್ರಾದೇಶಿಕ ಪಕ್ಷಗಳ ಬಲ ಕುಂದಿಸಿದೆ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ವಿರೋಧ ಪಕ್ಷಗಳನ್ನು ದುರ್ಬಲಗೊಳಿಸಿದೆ

ತಮಿಳುನಾಡು ರಾಜಕೀಯದ ಹೊಸ ಪರ್ವಕ್ಕೆ ತನ್ನನ್ನು ತೆರೆದುಕೊಂಡಿದೆ. [illegible] ಕಳೆದ ಆರು ದಶಕಗಳ ತಮಿಳುನಾಡಿನ ರಾಜಕೀಯ ಚರಿತ್ರೆಯಲ್ಲಿ ಇದೇ ಮೊದಲ ಬಾರಿಗೆ ದ್ರಾವಿಡ ಸಿದ್ಧಾಂತ ಹಾಗೂ ರಾಜಕಾರಣದ ಹಿನ್ನೆಲೆಯಿಲ್ಲದ ನಾಯಕನೊಬ್ಬ ಜನರ ವಿಶ್ವಾಸ ಸಂಪಾದಿಸಿರುವುದು ಸಾಧಾರಣ ಸಂಗತಿಯಲ್ಲ. 2016ರಲ್ಲಿ ಜಯಲಲಿತಾ ಅವರ ನಿಧನದ ನಂತರ ದುರ್ಬಲಗೊಂಡಂತೆ ಕಾಣಿಸುತ್ತಿದ್ದ ಎಐಎಡಿಎಂಕೆಯ ಸಂಕಷ್ಟ, ಈ ಚುನಾವಣೆಯಲ್ಲಿನ ಸಮಾಧಾನಕರ ಸಾಧನೆಯೊಂದಿಗೆ ಮುಂದುವರಿದಿದೆ.

ಕೇರಳದಲ್ಲಿ ಯುಡಿಎಫ್ ಮೈತ್ರಿಕೂಟ ಮೂರನೇ ಎರಡರಷ್ಟು ಬಹುಮತ ಗಳಿಸುವುದರೊಂದಿಗೆ, ದಕ್ಷಿಣ ಭಾರತದ ಮತ್ತೊಂದು ರಾಜ್ಯದಲ್ಲಿ ಅಧಿಕಾರಕ್ಕೇರುವ ಸಮಾಧಾನ ಕಾಂಗ್ರೆಸ್‌ನದ್ದಾಗಿದೆ. ಕಳೆದ 10 ವರ್ಷಗಳಿಂದ ಅಧಿಕಾರದಲ್ಲಿದ್ದ ಎಲ್‌ಡಿಎಫ್ ದಾರುಣ ಸೋಲು ಅನುಭವಿಸಿದೆ. ಆಡಳಿತ ವಿರೋಧಿ ಅಲೆಯ ಪೆಟ್ಟು ಅದನ್ನು ತೀವ್ರವಾಗಿ ಗಾಸಿಗೊಳಿಸಿದೆ. ಎಲ್‌ಡಿಎಫ್ ಸರ್ಕಾರದ ಅನೇಕ ಸಚಿವರು ಹಾಗೂ ಹಿರಿಯ ನಾಯಕರು ಸೋಲನುಭವಿಸಿದ್ದಾರೆ. ರಾಜ್ಯದ ಎರಡು ಪ್ರಮುಖ ಸಮುದಾಯಗಳಾದ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಮತಗಳ ಕ್ರೋಡೀಕರಣ ಹಾಗೂ ಆಡಳಿತ ವಿರೋಧಿ ಅಲೆಯು ಯುಡಿಎಫ್‌ನ ಭರ್ಜರಿ ಗೆಲುವಿಗೆ ಕಾರಣವಾಗಿದೆ. ಮೂರು ಸ್ಥಾನಗಳೊಂದಿಗೆ ಕೇರಳದ ಚುನಾವಣಾ ರಾಜಕಾರಣದಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ತನ್ನ ಅಸ್ತಿತ್ವ ಕಂಡುಕೊಂಡಿದ್ದರೂ, ಅದು ಇನ್ನಷ್ಟು ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿತ್ತು. ಅಸ್ಸಾಂನಲ್ಲಿ ಕಳೆದ 10 ವರ್ಷಗಳಿಂದ ಅಧಿಕಾರದಲ್ಲಿದ್ದ ಬಿಜೆಪಿ ಮತ್ತೆ ಜನಾದೇಶ ಗಳಿಸಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ತೀವ್ರ ಕೋಮು ಧ್ರುವೀಕರಣ ಪ್ರಯೋಗವು, ಈಗಾಗಲೇ ಸಮುದಾಯ ಆಧಾರದಲ್ಲಿ ವಿಭಜನೆಯಾಗಿರುವ ರಾಜ್ಯದಲ್ಲಿ ಬಿಜೆಪಿಯ ಸ್ಥಿತಿಯನ್ನು ಮತ್ತಷ್ಟು ಬಲಗೊಳಿಸಿದೆ.

ಪ್ರಸಕ್ತ ಚುನಾವಣಾ ಫಲಿತಾಂಶ, ರಾಷ್ಟ್ರೀಯ ಮಟ್ಟದಲ್ಲಿ ವಿರೋಧ ಪಕ್ಷಗಳನ್ನು ದುರ್ಬಲಗೊಳಿಸಿದೆ. ಅಧಿಕಾರದಿಂದ ನಿರ್ಗಮಿಸುತ್ತಿರುವ ಡಿಎಂಕೆ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳು ವಿರೋಧಿ ಪಾಳಯದ ಆಧಾರ ಸ್ತಂಭಗಳಾಗಿದ್ದವು. ಸ್ಟಾಲಿನ್ ಹಾಗೂ ಮಮತಾ ಬ್ಯಾನರ್ಜಿ ಅವರ ವರ್ಚಸ್ಸನ್ನು ಫಲಿತಾಂಶ ಕುಗ್ಗಿಸಿದೆ. ಬಿಜೆಪಿಯ ದಾಳಿಗೆ ಪ್ರತಿರೋಧ ವ್ಯಕ್ತಪಡಿಸಲು ಸಾಕಷ್ಟು ಸಮರ್ಥವಾಗಿದ್ದವೆಂದು ಭಾವಿಸಲಾಗಿದ್ದ ಪಕ್ಷಗಳು ಸೋಲನುಭವಿಸಿವೆ. ಮಹಾರಾಷ್ಟ್ರ, ಬಿಹಾರ ಸೇರಿದಂತೆ ಇತರೆ ರಾಜ್ಯಗಳಲ್ಲಿಯೂ ಪ್ರಾದೇಶಿಕ ಪಕ್ಷಗಳು ಹಿನ್ನಡೆ ಅನುಭವಿಸಿವೆ. ಕೇರಳದಲ್ಲಿ ಎಲ್‌ಡಿಎಫ್ ಸೋಲನುಭವಿಸಿರುವುದರಿಂದ, ಆರು ದಶಕಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ದೇಶದ ಯಾವುದೇ ಭಾಗದಲ್ಲೂ ಕಮ್ಯುನಿಸ್ಟ್ ಪಕ್ಷದ ಸರ್ಕಾರ ಇಲ್ಲದಂತಾಗಿದೆ.

25 ವರ್ಷಗಳ ಹಿಂದೆ

ಶನಿವಾರ, 5-5-2001

• ಕಾಂಗ್ರೆಸ್‌ಗೆ 80ಕ್ಕೂ ಹೆಚ್ಚು ಕಡೆ ಬಹುಮತ

ಬೆಂಗಳೂರು, ಮೇ 4– ರಾಜ್ಯದ ನಾಲ್ಕು ಮಹಾನಗರಪಾಲಿಕೆಗಳು ಸೇರಿದಂತೆ 148 ಸ್ಥಳೀಯ ಸಂಸ್ಥೆಗಳಿಗೆ ಗುರುವಾರ ನಡೆದ ಚುನಾವಣೆಯ ಬಹುತೇಕ ಫಲಿತಾಂಶ ಬಂದಿದ್ದು, ಆಡಳಿತಾರೂಢ ಕಾಂಗ್ರೆಸ್ ಪಕ್ಷ 80ಕ್ಕೂ ಹೆಚ್ಚು ಸ್ಥಳೀಯ ಸಂಸ್ಥೆಗಳಲ್ಲಿ ಜಯಭೇರಿ ಬಾರಿಸಿದೆ.

ಜನತಾದಳ (ಯು) ಮತ್ತು ಜನತಾ ದಳ (ಎಸ್) ಪಕ್ಷಗಳು ಅಲ್ಲೊಂದು, ಇಲ್ಲೊಂದು ಎಂಬಂತೆ ಮಾತ್ರ ಗೆಲುವು ಸಾಧಿಸಿದ್ದರೆ, ಭಾರತೀಯ ಜನತಾ ಪಕ್ಷದ ಸ್ಥಿತಿಯೂ ಭಿನ್ನವಾಗಿಲ್ಲ.

75 ವರ್ಷಗಳ ಹಿಂದೆ

ಶನಿವಾರ, 5-5-1951

• ಹುಚ್ಚರಿಗೂ, ಪಾರ್ಲಿಮೆಂಟ್ ಸದಸ್ಯರಿಗೂ ಸ್ಥಾನವಿಲ್ಲ

ನವದೆಹಲಿ, ಮೇ 4– ಮತಿವಿಕಲ್ಪರು ಮಾತ್ರವಲ್ಲದೆ, ಪಾರ್ಲಿಮೆಂಟ್ ಸದಸ್ಯರೂ ಸಹ ರಚಿತವಾಗಲಿರುವ ಅರ್ಥ ಸಮಿತಿಯ ಸದಸ್ಯತ್ವಕ್ಕೆ ಅನರ್ಹರೆಂದು ಸಾರಬೇಕೆಂದು ಪ್ರೊ. ಕೆ.ಟಿ. ಷಾ ಅವರು ಇಂದು ಪಾರ್ಲಿಮೆಂಟಿನಲ್ಲಿ ವಾದಿಸಿದರು.

ಅಧ್ಯಕ್ಷರ ಪೀಠದಲ್ಲಿದ್ದ ಅನಂತಶಯನಂ ಅಯ್ಯಂಗಾರ್ಯರು, ಪಾರ್ಲಿಮೆಂಟ್ ಸಹಸದಸ್ಯತ್ವಕ್ಕೂ ಮತಿವಿಕಲತೆಗೂ ಒಂದೇ ಅರ್ಥವೇ ಎಂದು ಪ್ರಶ್ನಿಸಿದರು.

'ಗೋಲ್ಡನ್ ಗಳಿಗೆ'ಯ ಆಜೂಬಾಜು



ವಿಶ್ಲೇಷಣೆ

ನಾಗೇಶ ಹೆಗಡೆ

ಮೃತದೇಹದ ಸಂಸ್ಕಾರದ ಮುಂಚೆ ಅಂಗಾಂಗಗಳನ್ನು ಜೀವಂತ ವ್ಯಕ್ತಿಗೆ ಕಸಿ ಮಾಡುವ ತಂತ್ರಜ್ಞಾನ ತುಂಬ ಸುಧಾರಿಸಿದೆ. ಇತರ ತೊಡಕುಗಳನ್ನು ನಿವಾರಿಸುವ ಯತ್ನಗಳೂ ಜಾರಿಯಲ್ಲಿವೆ. ಆದರೆ ಕಸಿಗೆ ಬೇಕಾದ ಅಂಗಗಳೆಲ್ಲ ವೃಥಾ ಮಸಣಕ್ಕೆ ಹೋಗುತ್ತಿವೆ. ಅಂಗಾಂಗ ದಾನ ಮಾಡುವವರ ಸಂಖ್ಯೆ ನಮ್ಮಲ್ಲಿ ತೀರಾ ಕಡಿಮೆ ಇದೆ. ಹೆಚ್ಚಿಸುವುದು ಹೇಗೆ?

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ 'ಟೆನ್‌ಕೆ' ಮ್ಯಾರಥಾನ್ ಓಟದ ಸಂಭ್ರಮದಲ್ಲಿ ಗಣೇಶನ ವೇಷಧಾರಿ ಕೂಡ ಸೇರಿಕೊಂಡಿದ್ದರು. ಅವರ ಕೈಯಲ್ಲಿ 'ಅಂಗಾಂಗ ದಾನ ಕೊಡಿ' ಎಂಬ ಫಲಕವಿತ್ತು. ಆ ಚಿಕ್ಕ ಫಲಕದ ಹಿಂದೆ ಮಾನವೀಯ ಕಳಕಳಿ ಇತ್ತು. ನಮ್ಮ ದೇಶದ ತಳಕಚ್ಚಿದ ಮರ್ಯಾದೆಯನ್ನು ಮೇಲೆತ್ತುವ ಪ್ರಯತ್ನವಿತ್ತು.

ಅಂಗಾಂಗ ದಾನದ ವಿಷಯ ಬಂದಾಗ ನಮ್ಮ ದೇಶ ತೀರಾ ಕೆಳಸ್ತರದಲ್ಲಿದೆ. ಸುಧಾರಿತ ದೇಶಗಳಲ್ಲಿ ಪ್ರತಿ ಹತ್ತು ಲಕ್ಷ ಜನರಲ್ಲಿ 30–40–50 ಜನರು ಮರಣಾನಂತರ ಅಂಗದಾನ ಮಾಡುತ್ತಾರೆ. ನಮ್ಮಲ್ಲಿ ಆ ಸಂಖ್ಯೆ ಒಂದಂಕಿಯನ್ನೂ ಮುಟ್ಟಿಲ್ಲ. ದಿನ ಬೆಳಗಾದರೆ ಅಪಮೃತ್ಯುಗಳ ಸರಣಿ ಸುದ್ದಿಗಳನ್ನು ಕೇಳುತ್ತಿರುತ್ತೇವೆ. ಆತ್ಮಹತ್ಯೆ, ಅಪಘಾತ, ಬೆಂಕಿ ಆಕಸ್ಮಿಕಗಳಂಥ ಅನೈಸರ್ಗಿಕ ಸಾವುಗಳಿಲ್ಲದ ದಿನವೇ ಇಲ್ಲ. ಏಪ್ರಿಲ್–ಮೇ ಬಂದರಂತೂ ಈಜಲು ಹೋದವರ ಸಾವು, ಪರೀಕ್ಷಾ ಫಲಿತಾಂಶದ ನಂತರದ ಆತ್ಮಹತ್ಯೆ, ಅತಿಸೆಕೆಯ ಮರಣ– ಅವುಗಳ ಸಾಲಿಗೆ ಈಗ ಹಠಾತ್ ಹೃದಯಾಘಾತದಿಂದ ಪ್ರಾಣ ಬಿಡುವವರ ಸಂಖ್ಯೆಯೂ ಹೆಚ್ಚುತ್ತಿದೆ.

ಮರಣ ವಾರ್ತೆ ಎಂಥದಿದ್ದರೂ ನೋವಿನ ಸಂಗತಿಯೇ. ಅದರಲ್ಲೂ ಹರಯದ, ಸದೃಢ ಜೀವಗಳ ಅನಿರೀಕ್ಷಿತ, ಅಸ್ವಾಭಾವಿಕ ಸಾವು ಇಡೀ ಸಮಾಜಕ್ಕೆ ದೊಡ್ಡ ನಷ್ಟವಾಗುತ್ತದೆ. ಅಂಥ ಆರೋಗ್ಯವಂತ ಕಾಯಗಳು ಬೂದಿಯಾಗಿ ಅಥವಾ ಮಣ್ಣಾಗಿ ಹೋದರೆ ಅದು ನಿಜಕ್ಕೂ 'ತುಂಬಲಾರದ ನಷ್ಟ'.

ಮರಣಾನಂತರ ಆ ಶರೀರದ ಭಾಗಗಳು ಬೇರೊಬ್ಬರ ದೇಹಕ್ಕೆ ಸೇರಿ ಸಮರ್ಥವಾಗಿ, ಸಾರ್ಥಕ ಕೆಲಸ ಮಾಡಲು ಸಾಧ್ಯವಾಗುವಂತೆ ವೈದ್ಯಕೀಯ ಎಷ್ಟೊಂದು ಮುಂದುವರಿದಿದೆ. ಮೃತ ದೇಹದಿಂದ ಕೈಯನ್ನೂ ಬೇರ್ಪಡಿಸಿ ಬೇರೊಬ್ಬರಿಗೆ ಜೋಡಿಸಿದ ಉದಾಹರಣೆಗಳು ನಮ್ಮಲ್ಲಿವೆ. ಆದರೆ, ಬದುಕಿರುವಾಗಲೇ ಅಂಗದಾನ ಮಾಡಬೇಕೆಂಬ ಪ್ರಜ್ಞೆ ನಮ್ಮಲ್ಲಿ ಬೆಳೆದಿಲ್ಲ. ರಕ್ತದಾನಕ್ಕೇ ಹಿಂಜರಿಯುವ ಎಷ್ಟೊಂದು ಜನ ನಮ್ಮಲ್ಲಿದ್ದಾರೆ. ಆದರೆ ನೇತ್ರದಾನದ ಸತ್ಕಾರ್ಯ ಕೆಲಮಟ್ಟಿಗೆ ನಡೆಯುತ್ತದೆ. ಇಡೀ ದೇಹವನ್ನು ಆಸ್ಪತ್ರೆಗೆ ದಾನ ಮಾಡಿಸಿಕೊಂಡ ಹಿರಿಯ ಜೀವಾತ್ಮಗಳ ಸಂಖ್ಯೆ ಹೆಚ್ಚುತ್ತಿದೆಯಾದರೂ, ಅಂಥ ಕಳೇಬರಗಳಿಂದ ವೈದ್ಯಕೀಯ ಶಿಕ್ಷಣಕ್ಕೆ ಅನುಕೂಲ ಆಗುತ್ತದೆ ವಿನಾ ಜೀವಂತ ವ್ಯಕ್ತಿಗಳ ಬದುಕನ್ನು ಹಸನುಗೊಳಿಸಲು ಸಾಧ್ಯವಿಲ್ಲ.

ಪ್ರಜ್ಞಾವಂತ ನಾಗರಿಕರು ಅಂಗಾಂಗ ದಾನದ ಪ್ರತಿಜ್ಞೆಯನ್ನು ಕೈಗೊಳ್ಳುವಂತೆ ಮಾಡಲು ನಮ್ಮ ದೇಶದಲ್ಲಿ ಎಷ್ಟೊಂದು ಅನುಕೂಲಗಳನ್ನು ಕಲ್ಪಿಸಲಾಗಿದೆ. ನಿಮ್ಮ ಆಧಾರ್ ಸಂಖ್ಯೆ ಗೊತ್ತಿದ್ದರೆ, ಈ ಬರಹ ದೊಂದಿಗೆ ಇರುವ ಕ್ಯೂಆರ್ ಕೋಡ್ ಬಳಸಿ, ಓಟಿಪಿ ಪಡೆದು ಕೇವಲ ಐದೇ ನಿಮಿಷಗಳಲ್ಲಿ ಅಂಗಾಂಗ ದಾನಿ ಆಗಲು ಸಾಧ್ಯವಿದೆ. ಮರುಕ್ಷಣವೇ ಅಧಿಕೃತ ಸರ್ಟಿಫಿಕೇಟ್ ನಿಮ್ಮ ಮೊಬೈಲ್‌ಗೆ ಬಂದಿರುತ್ತದೆ. ನಮ್ಮ ದೇಶದಲ್ಲಿ ಇದುವರೆಗೆ ಇಂಥ ಪ್ರತಿಜ್ಞೆಯನ್ನು ದಾಖಲಿಸಿದವರ ಸಂಖ್ಯೆ ಐದು ಲಕ್ಷವನ್ನೂ ದಾಟಿಲ್ಲ. 140 ಕೋಟಿ ಜನರಿರುವ ನಮ್ಮ ದೇಶದಲ್ಲಿ ಕೋಟಿಗಟ್ಟಲೆ ಜನರು ಅಂಗದಾನಕ್ಕಾಗಿ ಕಾಯುತ್ತಿರುತ್ತಾರೆ. ಕೊಡುವವರ ಸಂಖ್ಯೆ ಮಾತ್ರ ತೀರಾ ಕಡಿಮೆ ಇದೆ.

ದಾನಿಗಳ ಸಂಖ್ಯೆಯನ್ನು ಹೆಚ್ಚಿಸಲು ನಾನಾ ದಾರಿಗಳಿವೆ: ಡ್ರೈವಿಂಗ್ ಲೈಸೆನ್ಸ್ ಜೊತೆ ಅದನ್ನು ಸೇರಿಸಬಹುದು. ಈಗಿನ ವ್ಯವಸ್ಥೆಯಲ್ಲಿ ವಾಹನ ಚಾಲನೆಯ ಅರ್ಹತಾ ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ಬ್ಲಡ್ ಗ್ರೂಪ್ ಮತ್ತು ಕಾಟಾಚಾರದ ಮೆಡಿಕಲ್ ಸರ್ಟಿಫಿಕೇಟ್ ಒದಗಿಸಿದರೆ ಸಾಕು ತಾನೆ? ಜೊತೆಗೆ ಅಂಗದಾನ ಪ್ರತಿಜ್ಞೆಯ ಸರ್ಟಿಫಿಕೇಟನ್ನೂ ಲಗತ್ತಿಸುವಂತೆ ಮಾಡಿದರೆ ಸಾಕು; ಜಗತ್ತಿನಲ್ಲೇ ಅತಿ ಹೆಚ್ಚು ಅಂಗದಾನಿಗಳಿರುವ ದೇಶ ನಮ್ಮದಾಗುವ ಸಾಧ್ಯತೆ ಇದೆ. ಅಂಥ ವ್ಯವಸ್ಥೆಯನ್ನು ಜಾರಿಗೆ ತರಲು ಆರೋಗ್ಯ ಇಲಾಖೆ ಧೈರ್ಯ ಮಾಡುತ್ತಿಲ್ಲ. ಅಮೆರಿಕದಲ್ಲಿ ಈ ವ್ಯವಸ್ಥೆ ಇದೆ. ಆದ್ದರಿಂದಲೇ ಅದು ಅತಿ ಹೆಚ್ಚು ಅಂಗದಾನ ಸ್ವೀಕರಿಸುವ ಮೊದಲ ಮೂರು ದೇಶಗಳ ಸಾಲಿನಲ್ಲಿದೆ.

ಅಂಗದಾನವನ್ನು ಕಡ್ಡಾಯ ಮಾಡಿದರೆ ಹೇಗೆ? ಇಟಲಿ ಆ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟಿತು. ತನ್ನ ಎಲ್ಲ ಪ್ರಜೆಗಳೂ ಹುಟ್ಟುತ್ತಲೇ ಅಂಗಾಂಗ ದಾನಿಗಳೂ ಆಗಿರುತ್ತಾರೆಂಬ ಕಾನೂನನ್ನು ಅದು 1990ರಲ್ಲಿ ರೂಪಿಸಿತು. ಆದರೆ, ಧಾರ್ಮಿಕ ಆಕ್ಷೇಪಗಳು ಎದುರಾದ ಕಾರಣ ಕಾನೂನನ್ನು ಜಾರಿಗೆ ತರಲು ಹಿಂಜರಿಯಿತು. ಅದೆಷ್ಟೊ ಸುತ್ತಿನ ಮಾತುಕತೆಗಳ ನಂತರ 'ಇಷ್ಟವಿಲ್ಲದವರು ಹೊರಗುಳಿಯಬಹುದು' ಎಂಬ ಆಯ್ಕೆ ಮುಂದೊಡ್ಡಿ ಕಾನೂನನ್ನು ಜಾರಿಗೊಳಿಸಿತು. ಅಂಗದಾನಿಗಳ ಸಂಖ್ಯೆ ಸರ್ರನೇ ಮೇಲೇರಿತು. ಪ್ರತಿ ದಶಲಕ್ಷ ಜನಸಂಖ್ಯೆಯಲ್ಲಿ 35 ಜನರಿಂದ ಅಂಗಾಂಗ ದಾನ ಪಡೆಯಲು ಸಾಧ್ಯವಾಯಿತು.

ಅಂಗಾಂಗಗಳೆಂದರೆ ಹೃದಯ, ಕಿಡ್ನಿ, ಯಕೃತ್ತು, ಶ್ವಾಸಕೋಶ, ಕೈ, ಮೇದೋಜೀರಕ ಗ್ರಂಥಿ ಮತ್ತು ಸಣ್ಣ ಕರುಳಿನಂಥ ಗಟ್ಟಿ ಭಾಗಗಳು ಸೇರುತ್ತವೆ. ಅಷ್ಟೇ ಅಲ್ಲ, ಕಣ್ಣಿನ ಕಾರ್ನಿಯಾ, ತ್ವಚೆ, ಮೂಳೆ, ಮಜ್ಜೆ, ಹೃದಯ ಕವಾಟ, ಗರ್ಭಕೋಶದ ಒಳಪೊರೆ, ಇವೆಲ್ಲವೂ ದಾನ ಯೋಗ್ಯ, ಕಸಿಯೋಗ್ಯ ಅಂಗಾಂಶಗಳೇ ಆಗಿರುತ್ತವೆ. ಆರೋಗ್ಯವಂತ ವ್ಯಕ್ತಿ ಜೀವಿಸಿದ್ದಾಗಲೇ ತನ್ನ ತೀರ ಹತ್ತಿರದ ಸಂಬಂಧಿಗೆ ಒಂದು ಕಿಡ್ನಿಯನ್ನು ಅಥವಾ ಶ್ವಾಸಕೋಶ, ಯಕೃತ್ತು ಮತ್ತು ಸಣ್ಣ ಕರುಳಿನ ಒಂದು ಭಾಗವನ್ನು ಕೊಡಬಹುದಾಗಿದೆ, ಕೊಡುತ್ತಿದ್ದಾರೆ. ಹೃದ್ರೋಗದಂಥ ಹಠಾತ್ ಮರಣ ಸಂಭವಿಸಿದರೆ ಹೃದಯ ಒಂದನ್ನು ಬಿಟ್ಟು ಇತರೆಲ್ಲ ಭಾಗಗಳನ್ನೂ ದಾನ ಕೊಡಬಹುದು. ಮಿದುಳು ನಿಷ್ಕ್ರಿಯವಾಗಿ ಉಳಿದೆಲ್ಲ ಭಾಗಗಳೂ ಸುಸ್ಥಿತಿಯಲ್ಲಿದ್ದರೆ ಕುತ್ತಿಗೆಯ ಕೆಳಗಿನ ಬಹುತೇಕ ಎಲ್ಲ ಅಂಗಗಳನ್ನೂ ಮಿದುಭಾಗಗಳನ್ನೂ ಬೇರೊಬ್ಬರಿಗೆ ಕಸಿ ಮಾಡಬಹುದು. ಕೇರಳದ ಆಲಿನ್ ಅಬ್ರಹಾಮ್ ಹೆಸರಿನ ಹತ್ತು ತಿಂಗಳ ಮಗು ಅಪಘಾತಕ್ಕೀಡಾಗಿ ಮತ್ತೆಂದೂ ಪ್ರಜ್ಞೆ ಬಾರದಂಥ ಸ್ಥಿತಿಯಲ್ಲಿದ್ದಾಗ ಅವಳ ತಾಯಿ–ತಂದೆಯ ಅನುಮತಿ ಪಡೆದು ತಕ್ಷಣ 'ಗ್ರೀನ್ ಕಾರಿಡಾರ್' ಮೂಲಕ ಅವಳ ಐದು ಒಳಾಂಗಗಳನ್ನು ಬೇರೆ ಬೇರೆ ಆಸ್ಪತ್ರೆಯಲ್ಲಿರುವ ಮಕ್ಕಳಿಗೆ ಕಸಿ ಮಾಡಿದ ಘಟನೆ 3 ತಿಂಗಳ ಹಿಂದಷ್ಟೇ ಸುದ್ದಿಯಾಗಿತ್ತು.

ಅಂಥದ್ದು ನಮ್ಮಲ್ಲಿ ತೀರ ಅಪರೂಪ. ಏಕೆಂದರೆ ಮರಣ ಸಂಭವಿಸಿದ ಮೊದಲ ಮೂರು–ನಾಲ್ಕು ಗಂಟೆಗಳ 'ಗೋಲ್ಡನ್ ಗಳಿಗೆ'ಯ ಸಂಕಟ, ಸಂಕಷ್ಟಗಳು ಒಂದೆರಡಲ್ಲ. ಆ್ಯಂಬುಲೆನ್ಸ್ ಬರಬೇಕು; ಸುಸಜ್ಜಿತ ಆಸ್ಪತ್ರೆ, ವೈದ್ಯತಂಡ ಇರಬೇಕು; ಮರಣೋತ್ತರ ವರದಿ ಬರಬೇಕು. ಅಪಘಾತದಿಂದ ಸಾವು ಸಂಭವಿಸಿದ್ದರಂತೂ ಪೊಲೀಸರು, ವಕೀಲರು ಮತ್ತು ಮೃತರ ಸಂಬಂಧಿಗಳು ಬರಬೇಕು. ಮೃತವ್ಯಕ್ತಿ ಈ ಮೊದಲೇ ಅಂಗದಾನ ಪ್ರತಿಜ್ಞೆ ಮಾಡಿದ್ದರೂ ಆ ದುರ್ಭರ ಸಮಯದಲ್ಲಿ ಅಂಗದಾನ ಪಡೆಯಲು ಸಂಬಂಧಿಗಳ ಮನವೊಲಿಸಬೇಕು. ಅದು ಎಲ್ಲ ಸಮಾಜದಲ್ಲೂ ತುಂಬ ಸೂಕ್ಷ್ಮ ವಿಷಯ. ಸ್ಪೇನ್ ದೇಶದಲ್ಲಿ ಅದಕ್ಕೆಂದೇ ವಿಶೇಷ ತರಬೇತಿ ಪಡೆದ 'ದುಃಖಭಂಜನ' ಸಿಬ್ಬಂದಿ ಇರುವುದರಿಂದಲೇ ಅಂಗದಾನ ಸ್ವೀಕೃತಿಯ ಶ್ರೇಯಾಂಕದಲ್ಲಿ ಅದು ಅತ್ಯುನ್ನತ ಸ್ಥಾನದಲ್ಲಿದೆ. ಇದಕ್ಕೆ ವ್ಯತಿರಿಕ್ತವಾಗಿ, ಕೆಲವು ದೇಶಗಳಲ್ಲಿ ಅಂಗಾಂಗಗಳ ಕಾಳಸಂತೆಕೋರರು ಈ ಕ್ಷಣಕ್ಕೆಂದೇ ಕಾದು ಕೂತಿದ್ದು ಮಿಂಚಿನ ಕಾರ್ಯಾಚರಣೆ ನಡೆಸುತ್ತಾರೆ. ಈ ಅನೈತಿಕ ಜಾಲದಲ್ಲಿ ಪೋಸ್ಟ್ ಮಾರ್ಟಮ್ ಸಿಬ್ಬಂದಿಯಷ್ಟೇ ಅಲ್ಲ, ವೈದ್ಯರೂ ನರ್ಸ್‌ಗಳೂ ಸೇರಿರುತ್ತಾರೆ. ಅಂಗಾಂಗಗಳ 'ಕೊಯ್ಲು' ಮಾಡುವ ಧಾವಂತದಲ್ಲಿ ತುಂಬ ಅಕ್ರಮಗಳು ನಡೆಯುತ್ತಿವೆ ಎಂದು ಕೇರಳದ ಡಾಕ್ಟರೊಬ್ಬರು ಸುಪ್ರೀಂ ಕೋರ್ಟ್‌ಗೂ ಹೋಗಿದ್ದಿದೆ. ಅಂತೂ ಕೋಮಾ/ಮರಣದ ನಂತರದ ನಾಲ್ಕೈದು ಗಂಟೆಗಳ ಅವಧಿಯ 'ಗೋಲ್ಡನ್ ಗಳಿಗೆ' ಎಂದರೆ ಆಸ್ಪತ್ರೆಯಲ್ಲಿ ಮಾನವೀಯತೆಯ ಪರಮೋಚ್ಚ ಸಮಯ ಆಗಿರುವಂತೆಯೇ, ಅನೈತಿಕ ಚಟುವಟಿಕೆಗಳ ಪಾಪಕೂಪದ ಕ್ಷಣವೂ ಆಗಿರುವ ಸಾಧ್ಯತೆ ಇರುತ್ತದೆ.

ಈ ವಿಪರ್ಯಾಸ ನೋಡಿ: ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಮತ್ತು ಮಿಂಚಿನ ಕಾರ್ಯಾಚರಣೆಯ ವ್ಯವಸ್ಥೆ ಇರುವ ಜಪಾನ್ ದೇಶ ಅಂಗದಾನದ ವಿಷಯದಲ್ಲಿ ತೀರಾ ಹಿಂದಿದೆ (ನಮ್ಮಷ್ಟು ಅಲ್ಲ). ಅಲ್ಲಿನ ಶಿಂಟೊ ಧಾರ್ಮಿಕ ನಂಬಿಕೆಯ ಪ್ರಕಾರ ದೇಹ ಮತ್ತು ಆತ್ಮ ಒಂದೇ ಆಗಿರುತ್ತದೆ. ಅಪಘಾತಕ್ಕೆ ತುತ್ತಾದ ವ್ಯಕ್ತಿ ಮತ್ತೆಂದೂ ಪ್ರಜ್ಞೆ ಬಾರದಂಥ (ಕೋಮಾ) ಸ್ಥಿತಿಯಲ್ಲಿದ್ದರೂ, ಹೃದಯ ಬಡಿತ ತಾನಾಗಿ ನಿಲ್ಲುವವರೆಗೆ ಆ ಕುಡಿಜೀವದ ಪೋಷಣೆ ಆಗುತ್ತಲೇ ಇರಬೇಕು. 1968ರಲ್ಲಿ ಮೊದಲ ಹೃದಯ ಕಸಿ ಮಾಡಲು ಹೋದ ಸರ್ಜನ್ ಮೇಲೆ ಕೊಲೆ ಮೊಕದ್ದಮೆ ಹಾಕಿದ ಲಾಗಾಯ್ತೂ ಕೋಮಾ ಸ್ಥಿತಿಯಲ್ಲಿರುವ ಕಾಯದಿಂದ ಕಸಿಯೋಗ್ಯ ಅಂಗಗಳನ್ನು ಬೇರ್ಪಡಿಸುವ ವಿಷಯದಲ್ಲಿ ಅತ್ಯಂತ ಕಟ್ಟುನಿಟ್ಟಾದ ಕಾನೂನುಗಳನ್ನು ರೂಪಿಸಲಾಗಿದೆ. ಕೋಮಾಕ್ಕೆ ತಲುಪಿದ ವ್ಯಕ್ತಿ ಅಂಗದಾನದ ಪ್ರತಿಜ್ಞೆ ಮೊದಲೇ ಮಾಡಿದ್ದರೂ ಮೃತ ಕಾಯ ಇಡಿಯಾಗಿ ಸಂಸ್ಕಾರವಾಗಬೇಕು ಎಂಬ ನಂಬಿಕೆ ಕುಟುಂಬಸ್ಥರಲ್ಲಿ ಆಳವಾಗಿ ಬೇರೂರಿದೆ. ಅದೇನೊ ತುಸು ಸಡಿಲ ಆಗುತ್ತಿದೆಯಾದರೂ, ಎರಡನೆಯ ಕಾರಣ ಇನ್ನೂ ಬಿಗಿಯಾಗಿಯೇ ಇದೆ: ಕೋಮಾ ಸ್ಥಿತಿಯಲ್ಲಿರುವ ವ್ಯಕ್ತಿಯ ರಕ್ತ ಪರಿಚಲನ ವ್ಯವಸ್ಥೆಯನ್ನು ನಿಲ್ಲಿಸಲು ಅಲ್ಲಿ ಕಾನೂನಿನ ಕ್ಲಿಷ್ಟ ಅಡಚಣೆಗಳಿವೆ. ನಮ್ಮಲ್ಲಿ ಅದನ್ನು ಸರಳಗೊಳಿಸಲಾಗುತ್ತಿದೆ. ಕೋಮಾ ಸ್ಥಿತಿಯಲ್ಲಿರುವವರಿಗೆ 'ಸಾವಿನ ಹಕ್ಕು' ಮತ್ತು 'ಗೌರವಯುತ' ಸಾವಿನ ಹಕ್ಕನ್ನು ಎತ್ತಿ ಹಿಡಿಯುವ ತೀರ್ಪನ್ನು ಕಳೆದ ಮಾರ್ಚ್ ತಿಂಗಳಿನಲ್ಲಷ್ಟೇ ಸುಪ್ರೀಂ ಕೋರ್ಟ್ ನೀಡಿದೆ.

ಜೀವರಕ್ಷಕ ಔಷಧಗಳ ಉತ್ಪಾದನೆಯಲ್ಲಿ ಭಾರತಕ್ಕೆ 'ಗ್ಲೋಬಲ್ ಫಾರ್ಮಸಿ' ಎಂಬ ಕೀರ್ತಿಯಿದೆ. ನಮ್ಮ ದೇಶದಲ್ಲಿ ಡಿಜಿಟಲ್ ಕ್ರಾಂತಿ, ವೈದ್ಯಕೀಯ ವ್ಯವಸ್ಥೆಗಳ ನೆರವಿನಲ್ಲಿ ಅಂಗದಾನವನ್ನು ಸರಳಗೊಳಿಸುವ ಅದೆಷ್ಟೇ ಸಾಲುಸಾಲು ಯತ್ನಗಳು ನಡೆದರೂ ದಾನಿಗಳೇ ಸಿಗದಿದ್ದರೆ? ಸದೃಢ ವ್ಯಕ್ತಿಗಳೆಲ್ಲ ಅಂಗದಾನದ ಪ್ರತಿಜ್ಞೆ ಮಾಡಿದರೆ ದೇಶದ ಪ್ರತಿಷ್ಠೆಯನ್ನು ಕೊಂಚ ಮೇಲಕ್ಕೆ ಎತ್ತರಿಸಬಹುದು. ಪ್ರತಿಜ್ಞೆಯ ಜೊತೆಗೇ ರಾತ್ರಿ ಊಟದ ವೇಳೆಯಲ್ಲಿ ಕುಟುಂಬದ ಸದಸ್ಯರಿಗೆ ತಿಳಿಸಿ ಹೇಳಬೇಕು. ಏಕೆಂದರೆ, ಈ ಪುಣ್ಯಕಾರ್ಯಕ್ಕೆ ಕುಟುಂಬದ ಸದಸ್ಯರಿಂದಲೇ ದೊಡ್ಡ ವಿಘ್ನ ಬರುತ್ತದೆ. ಟೆನ್‌ಕೆ ಓಟದ ಸಂದರ್ಭದಲ್ಲಿ ಅಂಗದಾನದ ಫಲಕ ಹಿಡಿದವರು ಗಣೇಶನ (ಅಂದರೆ ವಿಘ್ನೇಶನ) ವೇಷದಲ್ಲೇ ಬಂದಿದ್ದೇಕೆ ಎಂಬುದನ್ನು ಹೀಗೂ ಅರ್ಥೈಸಬಹುದು.

ಅಸಹಜ ಸಾವು ಯಾರಿಗೂ ಬರಲೇಬಾರದು ನಿಜ. ಬಂದರೂ ಅಂಥ ದೇಹ ಮಣ್ಣಾಗುವ ಮುಂಚೆ, ಅಥವಾ ಚಿತಾಗ್ನಿಯಲ್ಲಿ ಉರಿಯುವ ಮುಂಚೆ ಆ ಕಾಯದ ಕೊಂಚ ಪಾಲು ಇನ್ನೊಬ್ಬರ ಪಾಲಿಗೆ ಆಶಾಕಿರಣವಾಗಲು ಸಾಧ್ಯವಿದೆ.

ವಾಚಕರ ವಾಣಿ

ನಟ ವಿಜಯ್ ನಿಜವಾದ 'ಜನನಾಯಗನ್'

ಎಂ.ಜಿ. ರಾಮಚಂದ್ರನ್ ಅವರು ಎರಡು ದಶಕಗಳಿಗೂ ಹೆಚ್ಚು ಕಾಲ ರಾಜಕೀಯದಲ್ಲಿದ್ದರು. ಪ್ರಜ್ಞಾಪೂರ್ವಕವಾಗಿ ತನ್ನ ಪಾತ್ರಗಳನ್ನು ಆಯ್ಕೆ ಮಾಡಿಕೊಂಡು ಜನರ ಮನಸ್ಸಿನಲ್ಲಿ ಸ್ಥಾನ ಸಂಪಾದಿಸಿದ್ದರು. ಆದರೆ, ಎರಡು ವರ್ಷಗಳ ಹಿಂದೆ ಪಕ್ಷ ಸ್ಥಾಪಿಸಿದ್ದ ವಿಜಯ್ ಅವರ ಸಾಧನೆ ಎಂಜಿಆರ್‌ಗಿಂತಲೂ ದೊಡ್ಡದು. 300 ಚಿತ್ರಗಳಲ್ಲಿ ನಟಿಸಿ, ತೆಲುಗರ ಆರಾಧ್ಯ ದೈವವಾಗಿದ್ದ ಎನ್‌ಟಿಆರ್ ಅವರಿಗಿಂತಲೂ ವಿಜಯ್ ಸಾಧನೆ ಹೆಚ್ಚಿನದು. ಸುಮಾರು ಹದಿನಾರು ವರ್ಷಗಳಿಂದ ರಾಜಕೀಯದಲ್ಲಿರುವ ಪವನ್ ಕಲ್ಯಾಣ್ 18 ಶಾಸಕರಿಗೆ ತೃಪ್ತಿಪಟ್ಟುಕೊಂಡಿದ್ದಾರೆ. 'ತನ್ನ ರಾಜಕೀಯ ಶತ್ರು ಡಿಎಂಕೆ; ಸೈದ್ಧಾಂತಿಕ ಶತ್ರು ಬಿಜೆಪಿ' ಎಂದು ಘಂಟಾಘೋಷವಾಗಿ ಸಾರಿದ್ದ ದಳಪತಿಯ ಧೈರ್ಯ ಹಾಗೂ ಗೆಲುವನ್ನು ಮೆಚ್ಚಬೇಕು. ಚುನಾವಣಾ ಪ್ರಚಾರ ಸಭೆಗಳಲ್ಲಿ ಭ್ರಷ್ಟಾಚಾರ ರಹಿತ ಆಡಳಿತವೇ ತಮ್ಮ ಪಕ್ಷದ ಗುರಿ ಎಂದು ಹೇಳಿದ್ದರು. ಆ ನಿಟ್ಟಿನಲ್ಲಿ ವಿಜಯ್ ಆಡಳಿತ ನಡೆಸಲಿ.

ಟಿ. ಜಯರಾಂ, ಕೋಲಾರ

ತುರ್ತು ಸಂದೇಶ: ಬಿಎಸ್‌ಎನ್‌ಎಲ್ ಅಲಕ್ಷ್ಯ

ರಾಷ್ಟ್ರೀಯ ವಿಪತ್ತು ಪ್ರಾಧಿಕಾರವು ಪ್ರಾಕೃತಿಕ ವಿಕೋಪಗಳು ಮತ್ತು ತುರ್ತು ಸಂದರ್ಭದಲ್ಲಿ ನಾಗರಿಕರ ಮೊಬೈಲ್‌ಗಳಿಗೆ ಎಚ್ಚರಿಕೆಯ ಸಂದೇಶ ಬಿತ್ತರಿಸುವ ವ್ಯವಸ್ಥೆ ಮಾಡುತ್ತಿದೆ. ಇದು ವಿಪತ್ತಿನ ಸಂದರ್ಭದಲ್ಲಿ ನಾಗರಿಕರ ಹಾಗೂ ಸಾಕುಪ್ರಾಣಿಗಳ ಜೀವರಕ್ಷಣೆಗೆ ನೆರವಾಗಲಿದೆ. ಆದರೆ, ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್‌ನಿಂದ ಗ್ರಾಹಕರಿಗೆ ಅವರಿರುವ ಪ್ರದೇಶದಲ್ಲಿ ವಿದ್ಯುತ್ ನಿಲುಗಡೆ ಆದಾಗ ಇಂತಹ ಎಚ್ಚರಿಕೆಯ ಸಂದೇಶ ದೊರೆಯುವುದಿಲ್ಲ. ಏಕೆಂದರೆ, ಹಲವು ವರ್ಷಗಳಿಂದ ಬಿಎಸ್‌ಎನ್‌ಎಲ್ ಟವರ್‌ಗಳಿಗೆ ಬ್ಯಾಟರಿ ಸಂಪರ್ಕವಿಲ್ಲ. ಹಾಗಾಗಿ, ಅವು ವಿದ್ಯುತ್ ನಿಲುಗಡೆಯಾದಾಗ ಕಾರ್ಯ ನಿರ್ವಹಿಸುತ್ತಿಲ್ಲ.

ಮಹಾಂತೇಶ ಗ. ಓಶಿಮಠ, ಕೈಗಾ

ಅಲಿಪ್ತ ನೀತಿ: ಮತ್ತೆ ಬರುವುದೇ ಜೀವ?

ಭಾರತದ ಅಲಿಪ್ತ ನೀತಿಯನ್ನು ವಿಶ್ವದ ಎಲ್ಲಾ ದೇಶಗಳು ಸ್ವಾಗತಿಸುತ್ತವೆ. ಅದು ಜವಾಹರಲಾಲ್ ನೆಹರೂರವರ ಕೊಡುಗೆ. ಅದನ್ನು ಮುಂದುವರಿಸುವುದೇ ದೇಶಕ್ಕೆ ಹಿತ ಎನ್ನುವುದರಲ್ಲಿ ಎರಡು ಮಾತಿಲ್ಲ. ಪ್ರಸ್ತುತ ತಟಸ್ಥ ವಿದೇಶಾಂಗ ನೀತಿಯನ್ನು ಪಾಲಿಸುತ್ತಿದ್ದೇವೆ ಎಂದು ಕೇಂದ್ರ ಸರ್ಕಾರ ಘೋಷಿಸುತ್ತಿದ್ದರೂ, ಇತ್ತೀಚಿನ ಕೆಲ ವಿದ್ಯಮಾನಗಳು ಅದನ್ನು ಪುಷ್ಟೀಕರಿಸುತ್ತಿಲ್ಲ. ಇರಾನ್ ಮೇಲಿನ ಇಸ್ರೇಲ್ ದಾಳಿಯ ಎರಡು ದಿನಗಳ ಮೊದಲು ಪ್ರಧಾನಿ ನರೇಂದ್ರ ಮೋದಿಯವರ ಇಸ್ರೇಲ್ ಭೇಟಿ, ಇಸ್ರೇಲ್ ಪರ ಭಾರತ ಎಂಬ ಘೋಷಣೆ; ಎರಡನೆಯದಾಗಿ, ಇರಾನ್‌ನ ಪರಮೋಚ್ಚ ನಾಯಕ ಖಮೇನಿ ಸಾವಿಗೆ ತಡವಾಗಿ ಸಂತಾಪ ಸೂಚಿಸಿದ್ದು ನೆಹರೂ ಹಾಕಿಕೊಟ್ಟ ತಟಸ್ಥ ನೀತಿಯಿಂದ ದೂರ ಸರಿಯುತ್ತಿರುವುದರ ಸಂಕೇತವಾಗಿದೆ.

ಶಾಂತಕುಮಾರ್, ಸರ್ಜಾಪುರ

ಗೃಹ ಆರೋಗ್ಯ ಮತ್ತು ಸಿಬ್ಬಂದಿಯ ಕೊರತೆ

ಜನಸಾಮಾನ್ಯರ ಮನೆ ಬಾಗಿಲಿಗೆ ಆರೋಗ್ಯ ಸೇವೆ ತಲುಪಿಸುವ 'ಗೃಹ ಆರೋಗ್ಯ' ಯೋಜನೆಯ ಹಿಂದಿರುವ ಕಾಳಜಿ ಅಭಿನಂದನಾರ್ಹ. ಆದರೆ, ಈ ಯೋಜನೆ ಯಶಸ್ವಿಯಾಗಬೇಕಾದರೆ ತಳಮಟ್ಟದ ಆರೋಗ್ಯ ವ್ಯವಸ್ಥೆಯೂ ಸುಧಾರಣೆಯಾಗಬೇಕಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಹಿಡಿದು ಜಿಲ್ಲಾ ಆಸ್ಪತ್ರೆಗಳವರೆಗೆ ರೋಗಿಗಳಿಗೆ ಸಮಯಕ್ಕೆ ಸರಿಯಾದ ಚಿಕಿತ್ಸೆ ಸಿಗಬೇಕು. ಜಿಲ್ಲಾ ಆಸ್ಪತ್ರೆ ಗಳಿಗೆ ನಿತ್ಯ ಸಾವಿರಾರು ಜನರು ತುರ್ತು ಚಿಕಿತ್ಸೆಗೆ ಬರುತ್ತಾರೆ. ಆದರೆ, ಇಲ್ಲಿ ಸಾಮಾನ್ಯ ಜನರು ಚಿಕಿತ್ಸೆ ಪಡೆಯುವುದು ತುಂಬಾ ಕಷ್ಟಕರ. ಆಸ್ಪತ್ರೆಗಳಿಗೆ ಅಗತ್ಯ ವೈದ್ಯಕೀಯ ಸಿಬ್ಬಂದಿ ನೇಮಿಸಿದರೆ ಬಡವರಿಗೆ ಸಕಾಲದಲ್ಲಿ ಚಿಕಿತ್ಸೆ ಸಿಗಲಿದೆ.

ಚಂದ್ರಶೇಖರ್ ಕಳಲೆ, ಮೈಸೂರು

ಬಾಲವನ: ಕಾರಂತರ ಆಶಯ ಉಳಿಯಲಿ

ಸಾಹಿತಿ ಶಿವರಾಮ ಕಾರಂತರು ನಲವತ್ತು ವರ್ಷಗಳ ಕಾಲ ಪುತ್ತೂರಿನ 'ಬಾಲವನ'ದಲ್ಲಿ ಸಾಹಿತ್ಯ, ವಿಜ್ಞಾನ, ಮಕ್ಕಳ ಚಟುವಟಿಕೆ, ನಾಟಕ, ಚಿತ್ರಕಲೆ ಹಾಗೂ ಮುದ್ರಣಾಲಯದ ಚಟುವಟಿಕೆ ನಡೆಸಿದ್ದರು. ಅವರು ಸಾಲಿಗ್ರಾಮಕ್ಕೆ ತೆರಳಿದ ಬಳಿಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಬಾಲವನವನ್ನು ಹಸ್ತಾಂತರಿಸಿದರು. ಇದು ಜೀವವೈವಿಧ್ಯದ ತಾಣ. ಇಲ್ಲಿ ಸಾಹಿತ್ಯ, ಯಕ್ಷಗಾನ, ಚಿತ್ರಕಲೆ, ಪರಿಸರ ಸಂರಕ್ಷಣೆ, ವಿಜ್ಞಾನ, ಶಿಕ್ಷಣ ಕಮ್ಮಟ, ತರಬೇತಿ ಮಾತ್ರ ಆಯೋಜಿಸಬೇಕು. ಸಾಹಿತ್ಯೇತರ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ರಾಜ್ಯ ಸಮಿತಿಯು ಈ ಬಗ್ಗೆ ಸ್ಪಷ್ಟ ನಿಯಮಾವಳಿ ರೂಪಿಸಿ ಬಾಲವನದಲ್ಲಿ ಕಾರಂತರ ಆಶಯಗಳನ್ನು ಉಳಿಸಲಿ.

ಎಸ್.ಎನ್. ಅಮೃತ, ಪುತ್ತೂರು

ಆಯೋಗದ ನಡೆ: ಪ್ರಜಾಪ್ರಭುತ್ವಕ್ಕೆ ಮಾರಕ

'**ಸಾಂವಿಧಾನಿಕ** ಸಂಸ್ಥೆಗಳ ವೈಫಲ್ಯ; ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕ' ಶೀರ್ಷಿಕೆಯ ಸಂಪಾದಕೀಯ (ಪ್ರ.ವಾ., ಮೇ 4) ಓದಿದಾಗ ಕಥೆಯೊಂದು ನೆನಪಾಯಿತು. ಬೆಟ್ಟದ ಮೇಲಿಂದ ಇಳಿಯುತ್ತಿದ್ದ ಝರಿಯಲ್ಲಿ ನೀರು ಕುಡಿಯುತ್ತಿದ್ದ ತೋಳ, ಬೆಟ್ಟದ ಕೆಳಗೆ ನೀರಿನ ಬಳಿಯಿದ್ದ ಕುರಿಯನ್ನು ನೋಡಿ, ಗಟ್ಟಿಯಾಗಿ ಹೇಳಿತಂತೆ; 'ನಾನು ನೀರು ಕುಡಿಯುವ ಜಾಗದಲ್ಲಿ, ನೀನೂ ನೀರು ಕುಡಿದು ಎಂಜಲು ಮಾಡುವುದೆ?'. 'ನೀವು ಮೇಲಿದ್ದೀರಿ, ನಾನು ನಿಮ್ಮ ಎಂಜಲನ್ನು ಕುಡಿಯುತ್ತಿದ್ದೇನೆ' ಎಂದು ಕುರಿ ಹೇಳಿತು. ತೋಳಕ್ಕೆ ಈ ಉತ್ತರ ಸರಿಹೋಗಲಿಲ್ಲ. ಮತ್ತೊಮ್ಮೆ ತೋಳ ಪ್ರಶ್ನೆ ಮಾಡಿತು; 'ಈಗ್ಗೆ ಆರು ತಿಂಗಳ ಹಿಂದೆ ನೀನು ನನ್ನನ್ನು ಬೈದಿದ್ದೀಯಾ'. 'ಅಯ್ಯೋ ಶಿವನೇ ನಾನು ಹುಟ್ಟಿ ಮೂರೇ ತಿಂಗಳು ಆಗಿರೋದು' ಎಂದಿತು ಕುರಿ. ತೋಳಕ್ಕೆ ಈ ಉತ್ತರವೂ ಸರಿಯಾಗಲಿಲ್ಲ. 'ನೀನೋ ನಿಮ್ಮ ಅಪ್ಪನೋ ಅಂತೂ ಬೈದಿದ್ದೀರಿ' ಎನ್ನುತ್ತಲೇ ಕೆಳಕ್ಕೆ ನೆಗೆದು ಕುರಿಯನ್ನು ಹಿಡಿಯಿತಂತೆ. ಚುನಾವಣಾ ಆಯೋಗವು ಪ್ರಜಾಪ್ರಭುತ್ವದ ಶಕ್ತಿಯನ್ನು ಕಾಲಲ್ಲಿ ಹೊಸಕಿ ಹಾಕಿ ಪಶ್ಚಿಮ ಬಂಗಾಳದಲ್ಲಿ ಚುನಾವಣೆ ನಡೆಸಿರುವ ರೀತಿ ಸರಿಯಿಲ್ಲ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲಾಗಿಸುವ ಕೆಟ್ಟ ಮಾದರಿ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಚುರುಮುರಿ

ಜೆನ್‌ಝೀ ಟೂಲುಕಿಟ್ಟು

• ಡಿ.ಎಸ್. ಲಿಂಗರಾಜು

'**ಜೆನ್‌ಝೀ** ಯುವ ನಾಯಕರು ರಾಜಕೀಯ ಕಲೀಲಿ ಅಂತ ಸರ್ಕಾರ ರಾಜಕೀಯ ಕಾಲೇಜು ಓಪನ್ ಮಾಡ್ತದಂತೆ' ಸುದ್ದಿ ಹಂಚಿದೆ.

'ಹೂ ಕನೇಳೋ, ಪಂಚ ರಾಜ್ಯಗಳಲ್ಲಿ ಏನೇನು ಕದಲಾವಣೆ ನಡೆದಿರತದೋ ನೋಡಿ ಸಿಲಬಸ್ ಮಾಡಬೇಕಾತದೆ' ಯಂಟಪ್ಪಣ್ಣ ಟೆಕ್ಸ್ಟ್‌ಬುಕ್ ಕಮಿಟಿ ಚೇರ್ಮನ್ ಥರ ಮಾತಾಡಿತು.

'ಕುರಿ ಕೊಬ್ಬಿದರೆ ಪಾಯ್ದೆ ಯಾರಿಗೇಳು? ಹಾಲಿ ರಾಜಕಾರಣಿಗಳ ಮಕ್ಕಳಿಗೆ ಬಾವುಟ ಕಟ್ಟಕ್ಕೆ ಪುಗಸಟ್ಟೆ ಕಾರ್ಯಕರ್ತರು ಬೇಕಲ್ಲವಾ?' ತಿಪ್ಪಣ್ಣ ಚುಚ್ಚಿದ.

'ತಿಪ್ಪಣ್ಣ ಕಾಲೇಜಲ್ಲಿ ಟಾಪರ್ ಆದ್ರೆ ಸಂಬಳದ ಮ್ಯಾಲೆ ಬದುಕಬೇಕಾಯ್ತದೆ ಕಯಾ. ಡ್ರಾಮಾಚಾರ, ಬೂತುಚೇಷ್ಟೆ, ಮತಮ್ಯಾಟಿಕ್ಸ್ ಕಲೀಬೇಕು ಅಂದ್ರೆ ಕಾಲೇಜು ಬೇಕೇಬೇಕು' ತುರೇಮಣೆ ವಿಚಾರ ಮಂಡಿಸಿದರು.

'ಕಪಟನಾಟಕ ಕಲಿಸೋ ಇಂತೇ ಕಾಲೇಜಿಗೆ ನುರಿತ ರಾಜಕಾರಣಿಗಳನ್ನೇ ವಿಜಿಟಿಂಗ್ ಪ್ರೊಫೆಸರುಗಳಾಗಿ ಕರೆಸಬೇಕೇನೋ?' ತಿಪ್ಪಣ್ಣ ಕೇಳಿದ.

'ಮೂವತ್ತೊರ್ಸದ ಹಿಂದೆ 'ಮಕ್ಕಳ ಸೊಂಟಕ್ಕೆ ಪೆನ್ನು, ಗನ್ನು ಕಟ್ಟಿ ಕಳಿಸ್ತೀವಿ. ಓದಾದ್ರೂ ಬದೀಕ್ಕಳ್ಳಿ, ಬೋದಾದ್ರೂ ಬದೀಕ್ಕಳ್ಳಿ' ಅಂತಿದ್ರು. ಕಾಲ ಬದಲಾಗ್ಯದೆ. ಈಗಿನ ರಾಜಕೀಯ ಕಾಲೇಜಿನ ಟೂಲ್‌ಕಿಟ್ಟಲ್ಲಿ ಗೇಮ್ಸ್‌ಬಾಂಡ್ ಗ್ಯಾಜೆಟ್ಟುಗಳೇ ತುಂಬಿರಬಕು' ತುರೇಮಣೆ ವಡಪು ಹಾಕಿದರು. 'ಅದರಲ್ಲಿ ಅಂಥಾದ್ದು ಏನಿದ್ದಾತು?' ಅಂದೋ ಎಲ್ಲಾ ಒಟ್ಟಿಗೆ.

'ಆಪರೇಷನ್ ಸ್ಕಿಲ್ಲು, ರೆಸಾರ್ಟ್ ರಾಜಕೀಯ, ಅನ್‌ಎಥಿಕಲ್ ಹ್ಯಾಕಿಂಗ್, ಓಟರ್ ಐಡಿ ಕಿತ್ತು ಇಟ್ಕಳೋ ಡಿಜಿಟಲ್ ಅರೆಸ್ಟ್ ಟ್ರೈನಿಂಗ್, ಹೇಳಿದ್ದನ್ನ ಇಲ್ಲ ಅನ್ನೋ ಎರಡು ನಾಲಗೆ, ಒಳರಾಜಕೀಯ, ದುಡ್ಡು ಹೊಡೆಯೋ ಜೇಬುಗಣಿತ, ಲಂಚತಂತ್ರ, ದಗಾಯುದ್ಧ ಪ್ರಸಂಗ ಕಲಿಸ್ಬೇಕು. ಇವೆಲ್ಲಾ ಹೊರಕ್ಕೆ ಕಾಣಿಸದಂಗೆ ಬಿಳಿ ಅಂಗಿ, ಪ್ಯಾಂಟು ಇಕ್ಕ್ಯಂದಿರಬೇಕು' ಅಂತಂದ್ರು ತುರೇಮಣೆ.

'ಅಣ್ಣೆ ಒಂದು ಮಾತೇಳ್ತಿನಿ. ರಾಜಕಾರಣಿಗಳು ಮಕ್ಕಳಿಗೆ ಬದುಕು ಕಟ್ಟೋ ಸ್ಕಿಲ್ ಕಲಿಸದು ಬುಟ್ಟು ರಾಜಕೀಯ ಕಲಿಸಿ ಅವರನ್ನ ಹಾಳುಬಾವಿಗೆ ತಳ್ಳಬಾರ್ದು' ಎಲ್ಲಾರೂ ನನ್ನ ಮಾತನ್ನ ದಿಟ ಅಂತ ಒಪ್ಪಿ ಗಪ್ಪಾಗೋದ್ರು.

ಸಂಗತ

ಆಡಂಬರದ ಬೆನ್ನತ್ತಿ ಬದುಕು ದುರಂತದತ್ತ!

ಅದ್ದೂರಿ ಆಚರಣೆಗಳು ಜನಸಾಮಾನ್ಯರಿಗೆ ಚಕ್ರವ್ಯೂಹ ಇದ್ದಂತೆ. ಒಳಪ್ರವೇಶಿಸಿ ಹೊರಬರಲಾಗದೆ ಒದ್ದಾಡುವ ಅಭಿಮನ್ಯು ಮಧ್ಯಮವರ್ಗಕ್ಕೆ ಪಾಠ ಆಗಬೇಕು.

• ಸುಷ್ಮಾ ಸವಸುದ್ದಿ

ಆಡಂಬರದ ಆಚರಣೆಗಳು ಜನಸಾಮಾನ್ಯರ ಬದುಕಿಗೆ ಕುತ್ತಾಗಿ ಪರಿಣಮಿಸುತ್ತವೆ ಎನ್ನುವ ಸತ್ಯ ಸ್ನೇಹಿತೆಯೊಬ್ಬಳ ಬದುಕನ್ನು ಹತ್ತಿರದಿಂದ ನೋಡಿದಾಗ ಮತ್ತಷ್ಟು ನಿಚ್ಚಳವಾಯಿತು.

ಡಿಗ್ರಿ ಮುಗಿಸುತ್ತಿದ್ದಂತೆ ಕುಟುಂಬದ ಒತ್ತಡಕ್ಕೆ ಮಣಿದ ಆಕೆ, ಉನ್ನತ ಶಿಕ್ಷಣದ ಕನಸನ್ನು ಮೊಟಕುಗೊಳಿಸಿದಳು. ಮಗಳ ಉನ್ನತ ವ್ಯಾಸಂಗಕ್ಕೆ ಖರ್ಚು ಮಾಡುವ ಬದಲು, ಒಳ್ಳೆಯ ಮನೆತನಕ್ಕೆ ಮದುವೆ ಮಾಡಿಕೊಡುವ ಮೂಲಕ 'ಜವಾಬ್ದಾರಿ' ಕಳೆದುಕೊಳ್ಳುವುದು ಪಾಲಕರಿಗೆ ಮುಖ್ಯವೆನ್ನಿಸಿತ್ತು. ಉತ್ತಮ ಕೆಲಸ, ಆಸ್ತಿ ಹೊಂದಿರುವ ವರನನ್ನು ಹುಡುಕಿದ ಅವರು, ಅದ್ದೂರಿಯಾಗಿ ಮದುವೆ ನಡೆಸಿ ಕೊಟ್ಟರು. ಪ್ರಿ ವೆಡ್ಡಿಂಗ್ ಶೂಟ್, ದುಬಾರಿ ಬಟ್ಟೆ, ದೊಡ್ಡ ಸಭಾಂಗಣ, ಮದುವೆ ಚಿತ್ರೀಕರಣ ಎಂದೆಲ್ಲಾ ಹಣ ಖರ್ಚು ಮಾಡಿದರು.

ಮದುವೆಗಾಗಿ ಮಾಡಿದ ಲಕ್ಷಾಂತರ ರೂಪಾಯಿ ಸಾಲದ ಬಾಕಿ ಬೆಳೆಯುತ್ತಿರುವಾಗಲೇ, ಮಗಳು ಹೆರಿಗೆಗೆಂದು ತವರಿಗೆ ಬಂದಳು. ಸಾಲದ ಸುಳಿಗೆ ಸಿಲುಕಿದ್ದ ಪೋಷಕರಿಗೆ, ಗರ್ಭಿಣಿ ಮಗಳಿಗೆ ಉತ್ತಮ ಚಿಕಿತ್ಸೆ ಕೊಡಿಸುವುದು ಸಾಧ್ಯವಾಗಲಿಲ್ಲ. ಅವಧಿಪೂರ್ವ ಹೆರಿಗೆ ನೋವು ಕಾಣಿಸಿಕೊಂಡಿತು.

ವೈದ್ಯಕೀಯ ಹೋರಾಟದಲ್ಲಿ ತಾಯಿ ಉಳಿದರೂ, ಮಗು ದಕ್ಕಲಿಲ್ಲ. ಸಾಲ ಮಾಡಿ ಮಗಳ ಮದುವೆ ಮಾಡಿದ್ದ ಕುಟುಂಬ, ಈಗ ಅದೇ ಮಗಳ ಆರೋಗ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ ಹಿಂದೆಮುಂದೆ ನೋಡುವಂತೆ ಆಗಿತ್ತು.

ಕೂಸನ್ನು ಕಳೆದುಕೊಂಡ ದುಃಖ ಹೆಚ್ಚಿಸುವಂತೆ, ಉತ್ತಮ ವೈದ್ಯಕೀಯ ಚಿಕಿತ್ಸೆ ಕೊಡಿಸದಿರುವುದೇ ಮಗುವಿನ ಸಾವಿಗೆ ಕಾರಣ ಎಂದು ಗಂಡನ ಮನೆಯವರು ದೂಷಿಸಿದರು. ಸೊಸೆಯ ಕಾಳಜಿ ಮತ್ತು ಆರೋಗ್ಯ ತಮ್ಮ ಜವಾಬ್ದಾರಿಯೂ ಹೌದು ಎನ್ನುವುದರ ಅರಿವಿಲ್ಲದಂತೆ ಗೆಳತಿಯ ಗಂಡನ ಮನೆಯವರು ವರ್ತಿಸುತ್ತಿದ್ದಾರೆ. ತವರು ಮನೆಯವರ ಅಸಹಾಯಕತೆ, ಗಂಡನ ಮನೆಯವರ ಹೊಣೆಗೇಡಿತನದಲ್ಲಿ ಆಕೆ ನವೆಯುತ್ತಿದ್ದಾಳೆ. ವೃಥಾ ಆಡಂಬರಕ್ಕೆ ಬಿದ್ದರೆ ಜನಸಾಮಾನ್ಯರ ಬದುಕು ಹೇಗೆ ಸಂಕಷ್ಟಕ್ಕೆ ಸಿಲುಕುತ್ತದೆ ಎನ್ನುವುದಕ್ಕೆ ಗೆಳತಿ ಉದಾಹರಣೆಯಂತೆ ಕಾಣಿಸುತ್ತಿದ್ದಾಳೆ.

ಮಕ್ಕಳ ಮದುವೆಯಿಂದ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಉದಾಹರಣೆಗಳು ನಮ್ಮಲ್ಲಿ ಕಡಿಮೆಯೇನಿಲ್ಲ. ಅರಿವಿನ ಕೊರತೆ, ಒಣ ಪ್ರತಿಷ್ಠೆ, ನೋಡಿದವರು ಏನಂತಾರೆ ಎಂಬ ದಾಕ್ಷಿಣ್ಯ ಮದುವೆಗೆ ತಮ್ಮ ಶಕ್ತಿಮೀರಿ ಹಣ ಖರ್ಚು ಮಾಡಲು ಪೋಷಕರನ್ನು ಪ್ರೇರೇಪಿಸುತ್ತದೆ.

ಆಡಂಬರದ ಮದುವೆಗಳಲ್ಲಿ ಸಾಮಾಜಿಕ ಮಾಧ್ಯಮಗಳ ಪಾತ್ರವೂ ಇದೆ. ನಮ್ಮ ನಿರ್ಧಾರಗಳು ಹಾಗೂ ಜೀವನಶೈಲಿ ಮೇಲೆ ಸಾಮಾಜಿಕ ಮಾಧ್ಯಮಗಳು ಸಾಕಷ್ಟು ಪ್ರಭಾವ ಬೀರುತ್ತಿರುವ ದಿನಗಳಿವು. ಸಂವಹನದ ಉದ್ದೇಶಕ್ಕಾಗಿ ಆರಂಭ ವಾದ ಈ ಮಾಧ್ಯಮಗಳು, ಈಗ ತಮ್ಮ ವ್ಯಾಪ್ತಿಯನ್ನು ಮೀರಿ ಬೆಳೆದಿವೆ. ಒಂದೆಡೆ ಜನರ ಸೃಜನಶೀಲತೆಗೆ ವೇದಿಕೆಯಾಗಿ, ಆದಾಯದ ಮೂಲ ಆಗಿವೆ. ಇನ್ನೊಂದೆಡೆ, ಅನಗತ್ಯ ಒತ್ತಡ ಸೃಷ್ಟಿಸುವುದರೊಂದಿಗೆ ತೋರಿಕೆಯ ಜೀವನಕ್ಕೆ ಕುಮ್ಮಕ್ಕು ನೀಡುತ್ತಿವೆ.

ಈ ಮೊದಲು ಮನೆಮಂದಿಗಷ್ಟೇ ಸೀಮಿತವಾಗಿದ್ದ ಅನೇಕ ಆಚರಣೆಗಳು ಈಗ ದುಬಾರಿ ಪೆಂಡಾಲ್ ಮತ್ತು ಫೋಟೊ ಶೂಟ್‌ಗಳಿಂದ ಮಿಂಚುತ್ತಿವೆ. ಮದುವೆ ಮಾತ್ರವಲ್ಲ, ಪೂಜೆ ಹಾಗೂ ಹುಟ್ಟುಹಬ್ಬದಂತಹ ಆಚರಣೆಗಳಲ್ಲೂ ಆಡಂಬರ ಎದ್ದು ಕಾಣುತ್ತಿದೆ. ಈ ಅದ್ದೂರಿತನದ ಹಿಂದಿನ ಕಾರಣ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರದರ್ಶನ ಮಾಡುವುದೇ ಆಗಿದೆ. ದುಬಾರಿ ಪ್ರಿ ವೆಡ್ಡಿಂಗ್ ಶೂಟ್, ವೆಡ್ಡಿಂಗ್ ಶೂಟ್ ಹಾಗೂ ಮೆಟರ್ನಿಟಿ ಶೂಟ್‌ಗಳು ಕಡ್ಡಾಯ ಎನ್ನುವಂತೆ ಸಾಮಾಜಿಕ ಮಾಧ್ಯಮಗಳು ಒತ್ತಡ ಸೃಷ್ಟಿಸುತ್ತಿವೆ. ಉಳ್ಳವರು ಮಾತ್ರವಲ್ಲದೇ ಸಾಮಾನ್ಯರೂ ಈ ಒತ್ತಡಕ್ಕೆ ಒಳಗಾಗಿ, ಆರ್ಥಿಕ ಹೊರೆ ಅನುಭವಿ ಸುವಂತಾಗಿದೆ. ಪ್ರಿ ವೆಡ್ಡಿಂಗ್ ಶೂಟ್ ಬೇಡ ಎಂದ ಯುವಕ ನನ್ನು, ಯುವತಿ ಮದುವೆಯಾಗಲು ನಿರಾಕರಿಸಿದ ಘಟನೆಯೂ ನಡೆದಿದೆ.

ಮದುವೆ, ತಾಯ್ತನ, ಜನ್ಮದಿನಗಳು ನಮ್ಮ ಜೀವನದ ಬಹುಮುಖ್ಯ ಘಟ್ಟ ಎನ್ನುವುದು ನಿಜ. ಅವುಗಳನ್ನು ಸಂಭ್ರಮಿಸುವ ಆಸೆಯಿದ್ದರೆ ಅದು ತಪ್ಪೇನೂ ಅಲ್ಲ. ಆದರೆ, ತೋರಿಕೆಗಾಗಿ ಅಳತೆ ಮೀರಿ ವೆಚ್ಚ ಮಾಡದೆ, ನಮ್ಮ ಮಿತಿಯಲ್ಲಿ ಖರ್ಚು ಮಾಡುವುದು ಒಳಿತು.

ಆಡಂಬರದ ಆಚರಣೆಗಳು ಹೆಚ್ಚುವುದಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆಯೂ ಕಾರಣವಾಗಿದೆ. ಸರಳ ಮತ್ತು ಪ್ರಾಮಾಣಿಕ ಬದುಕನ್ನು ರೂಪಿಸಿಕೊಳ್ಳುವ ವಿಧಾನವನ್ನು ಕಲಿಸಿಕೊಡುವಲ್ಲಿ ಶಿಕ್ಷಣ ಸೋತಿದೆ. ಸರಳ ಜೀವನವನ್ನು ಬೋಧಿಸಿದ ಬುದ್ಧ ಹಾಗೂ ಬಸವ ಈಗ ನಮಗೆ ಸಂಭ್ರಮಿಸುವ ಸರಕಾಗಿರುವುದು ವಿಷಾದನೀಯ. ಮಹನೀಯರ ಜನ್ಮದಿನಗಳು ಡಿಜೆ ಸದ್ದಿನಲ್ಲಿ ಮುಗಿದುಹೋಗುತ್ತಿವೆ. ಅರ್ಥವಾಗದ ಸಂಪ್ರದಾಯಗಳನ್ನೆಲ್ಲ ನಿರಾಕರಿಸಿ, 'ಮಂತ್ರ ಮಾಂಗಲ್ಯ' ಎಂಬ ಸರಳ ಹಾಗೂ ಅರ್ಥಪೂರ್ಣ ಮದುವೆಯನ್ನು ಪ್ರೋತ್ಸಾಹಿಸಿದ ಕುವೆಂಪು, 'ಉಳ್ಳವರು ಶಿವಾಲಯ ಮಾಡಿದರು, ನಾನೇನು ಮಾಡಲಿ ಬಡವನಯ್ಯ' ಎಂದು ತನ್ನ ದೇಹವನ್ನೇ ದೇವಾಲಯ ಎಂದ ಬಸವಣ್ಣ, ತರತಮಗಳಿಲ್ಲದ ಸಮಾಜದ ಕನಸನ್ನು ಕೊಟ್ಟುಹೋದ ಅಂಬೇಡ್ಕರ್, ಇವರೆಲ್ಲ ನಮಗೆ ಆದರ್ಶವಾಗಬೇಕು. ಆಗ, ಪ್ರತಿಷ್ಠೆ ಮತ್ತು ದುಂದುವೆಚ್ಚದ ಆಚರಣೆಗಳಿಂದ ಹೊರಬರಲು ಸಾಧ್ಯವಾಗುತ್ತದೆ; ಸಾಮಾಜಿಕ ಮಾಧ್ಯಮಗಳ ಬಾಹ್ಯ ಒತ್ತಡವನ್ನು ಮೀರಿನಿಲ್ಲಲು ಸಾಧ್ಯವಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಹುಲ್ ಗಾಂಧಿ ಮೊಗದಲ್ಲಿ ಮಂದಹಾಸ ಮೂಡಿಸಿದ ಚುನಾವಣಾ ಫಲಿತಾಂಶ

‘ಇಂಡಿಯಾ’ ಕೂಟದಲ್ಲಿ ಹೆಚ್ಚಿದ ‘ಕೈ’ ಶಕ್ತಿ

• ಶೆಮಿನ್ ಜಾಯ್

ನವದೆಹಲಿ: 2024ರ ಲೋಕಸಭಾ ಚುನಾವಣೆ ಬಳಿಕ ನಡೆದ ಚುನಾವಣೆಗಳಲ್ಲಿ ಹಿನ್ನಡೆ ಅನುಭವಿಸಿದ್ದ ಕಾಂಗ್ರೆಸ್‌ಗೆ, ಐದು ವಿಧಾನಸಭೆಗಳ ಚುನಾವಣಾ ಫಲಿತಾಂಶವು ಅಲ್ಪ ಸಮಾಧಾನ ತಂದಿತ್ತಿದೆ. ಕೇರಳಂನಲ್ಲಿ ದೊರೆತ ಭರ್ಜರಿ ಗೆಲುವು ಪಕ್ಷಕ್ಕೆ ಹೊಸ ಬಲ ತುಂಬಿದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಡಿಎಂಕೆಯ ಪತನವು ‘ಇಂಡಿಯಾ’ ಮೈತ್ರಿಕೂಟದಲ್ಲಿ ಕಾಂಗ್ರೆಸ್‌ನ ಬಲವನ್ನು ವೃದ್ಧಿಸಿದೆ.

ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದ ಎರಡು ಪ್ರಮುಖ ಪಾಲುದಾರರಾಗಿರುವ, ಹಿಂದುತ್ವ ಶಕ್ತಿಗಳ ವಿರುದ್ಧದ ‘ತಡೆಗೋಡೆ’ ಎಂದೇ ಪರಿಗಣಿಸಲಾದ ಟಿಎಂಸಿ ಮತ್ತು ಡಿಎಂಕೆಯು ಆಡಳಿತ ವಿರೋಧಿ ಅಲೆಗೆ ಕೊಚ್ಚಿಕೊಂಡು ಹೋಗಿವೆ. ಬಿಜೆಪಿಯು ಅಸ್ಸಾಂನಲ್ಲಿ ಆಡಳಿತ ವಿರೋಧಿ ಅಲೆ ಏಳದಂತೆ ನೋಡಿಕೊಂಡಿದೆ. ಟಿಎಂಸಿ ಮತ್ತು ಡಿಎಂಕೆಯ ಸೋಲು, ತಮ್ಮ ಮುಂದಿನ ನಡೆಯ ಬಗ್ಗೆ ಹಲವು ಪ್ರಶ್ನೆಗಳನ್ನು ‘ಇಂಡಿಯಾ’ ಮೈತ್ರಿಕೂಟದ ನಾಯಕರ ಮುಂದಿಟ್ಟಿದೆ.

ಈಗಿನ ಫಲಿತಾಂಶದ ಆಧಾರದಲ್ಲಿ ಬಿಜೆಪಿ ಜತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನೂ ‘ವಿಜೇತ’ ಎಂದೇ ಪರಿಗಣಿಸಬಹುದು. ಏಕೆಂದರೆ, ಅವರು ತಮಿಳುನಾಡಿನಲ್ಲಿ ‘ಹಿರಿಯ ಸಹೋದರ’ ಎಂ.ಕೆ. ಸ್ಟಾಲಿನ್ ಅವರೊಂದಿಗೆ ವೇದಿಕೆ ಹಂಚಿಕೊಳ್ಳದಿರಲು ನಿರ್ಧರಿಸಿದ್ದರು. ವಿಜಯ್ ಅವರ ಟಿವಿಕೆಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಬಯಸಿದ್ದ ಪಕ್ಷದ ಒಂದು ಬಣದ ಪರ ಅವರು ನಿಂತರು. ಚುನಾವಣಾ ಪ್ರಚಾರದ ಸಮಯದಲ್ಲಿ ಟಿಎಂಸಿ ಮತ್ತು ಎಡಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಲು ತಮಗೆ ಲಭಿಸಿದ ಎಲ್ಲ ಅವಕಾಶಗಳನ್ನೂ ರಾಹುಲ್ ಬಳಸಿಕೊಂಡರು.

ಕಾಂಗ್ರೆಸ್‌ನ ಕೆಲವು ನಾಯಕರು ಟಿವಿಕೆ ಜತೆ ಮೈತ್ರಿ ಮಾಡಬೇಕೆಂದು ವಾದಿಸಿದ್ದರು. ಅವರಿಗೆ ಈ ಫಲಿತಾಂಶವು ಹೆಚ್ಚಿನ ಉತ್ತೇಜನ ನೀಡಿದೆ. ಟಿವಿಕೆ ಜತೆ ಮೈತ್ರಿಗೆ ಒಪ್ಪದ ಪಕ್ಷದ ಹಿರಿಯರನ್ನು ಅವರು ಇದೀಗ ದೂಷಿಸುತ್ತಿದ್ದಾರೆ. ತಮಿಳುನಾಡಿನಲ್ಲಿ ಯಥಾಸ್ಥಿತಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುವಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ ಎನ್ನಲಾಗಿದೆ.

ಪಕ್ಷವು ಡಿಎಂಕೆ ಜೊತೆ ಸೇರಿಕೊಂಡು ಚುನಾವಣೆ ಎದುರಿಸಬೇಕೆಂದು ಹಿರಿಯ ನಾಯಕರಾದ ಪಿ. ಚಿದಂಬರಂ ಮತ್ತು ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಯಸಿದ್ದರು ಎಂಬುದು ಕಾಂಗ್ರೆಸ್‌ನ ಒಂದು ಬಣದ ಹೇಳಿಕೆ. ಆದರೆ, 2010ರ ದಶಕದ ಆರಂಭದಲ್ಲಿ ಕಾಂಗ್ರೆಸ್ ಸೇರಲು ಉತ್ಸುಕರಾಗಿದ್ದ ವಿಜಯ್ ಪಕ್ಷದ ಜತೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುವ ಸಾಧ್ಯತೆಗಳನ್ನು ಅನ್ವೇಷಿಸಲು ರಾಹುಲ್ ಒಲವು ತೋರಿದ್ದರು ಎನ್ನಲಾಗಿದೆ.

ಸಿಪಿಎಂನ ತಮಿಳುನಾಡು ರಾಜ್ಯ ನಾಯಕತ್ವವೂ ಟಿವಿಕೆ ಜೊತೆ ಸೇರಿಕೊಂಡು ಚುನಾವಣೆ ಎದುರಿಸಲು ಬಯಸಿತ್ತು. ಆದರೆ, ಕಾಂಗ್ರೆಸ್‌ನಂತೆಯೇ ಸಿಪಿಎಂನ ದೆಹಲಿಯ ನಾಯಕರು ಅದಕ್ಕೆ ಒಪ್ಪಿಗೆ ನೀಡಲಿಲ್ಲ. ವಿಸಿಕೆಯಂತಹ ಪಕ್ಷಗಳು ಡಿಎಂಕೆ ಜೊತೆಗಿನ ಮೈತ್ರಿಯಲ್ಲಿ ತಮ್ಮ ಭವಿಷ್ಯವನ್ನು ಹೇಗೆ ನೋಡಲಿವೆ ಹಾಗೂ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಯಾವ ಹೆಜ್ಜೆ ಇಡಲಿದೆ ಎಂಬುದು ಕುತೂಹಲ ಮೂಡಿಸಿದೆ.

ಈ ಚುನಾವಣೆ ಸಂದರ್ಭದಲ್ಲಿ, ಕಾಂಗ್ರೆಸ್ ಪಕ್ಷವು ‘ಇಂಡಿಯಾ’ ಮೈತ್ರಿಕೂಟದ ಪಾಲುದಾರ ಪಕ್ಷಗಳ ಮೇಲೆ ನೇರವಾಗಿ ದಾಳಿ ಮಾಡಲು ಹಿಂಜರಿಯಲಿಲ್ಲ. ರಾಹುಲ್ ಅವರು ಮಮತಾ ಬ್ಯಾನರ್ಜಿ ಮತ್ತು ಪಿಣರಾಯಿ ವಿಜಯನ್ ಅವರಂತಹ ನಾಯಕರನ್ನು ಗುರಿಯಾಗಿಸಿ, ಅವರನ್ನು ಬಿಜೆಪಿಯ ‘ಸಹವರ್ತಿ’ ಎಂದು ಕರೆದರು.

ಟಿಎಂಸಿಯ ಸೋಲಿನಿಂದ ಮಮತಾ ಬ್ಯಾನರ್ಜಿ ಅವರಿಗೆ ರಾಷ್ಟ್ರ ಮಟ್ಟದಲ್ಲಿ ಪ್ರಮುಖ ಸ್ಥಾನವನ್ನು ಕೇಳಲು ಆ ಪಕ್ಷಕ್ಕೆ ಸಾಧ್ಯವಾಗದು. ಈ ಹಿಂದೆ ಕಾಂಗ್ರೆಸ್‌ಗೆ ಹಿನ್ನಡೆಯಾದಾಗಲೆಲ್ಲಾ ಟಿಎಂಸಿಯು ಮಮತಾ ಅವರನ್ನು ರಾಷ್ಟ್ರ ಮಟ್ಟದಲ್ಲಿ ಮುಂಚೂಣಿಗೆ ತಂದಿತ್ತು. ಈ ಬಾರಿಯೂ ಗೆದ್ದರೆ ಮಮತಾ ಅವರನ್ನು ‘ಇಂಡಿಯಾ’ ಮೈತ್ರಿಕೂಟದ ಮುಖವಾಗಿ ಬಿಂಬಿಸಲು ಟಿಎಂಸಿ ಸಿದ್ಧತೆ ನಡೆಸಿತ್ತು.

ಈಗಿನ ಫಲಿತಾಂಶವು ಬಿಜೆಪಿಯನ್ನು ಏಕಾಂಗಿಯಾಗಿ ಎದುರಿಸುವಲ್ಲಿ ಕಾಂಗ್ರೆಸ್ ಪಕ್ಷದ ಸಾಮರ್ಥ್ಯದ ಕುರಿತ ಹಳೆಯ ಪ್ರಶ್ನೆಗಳನ್ನು ಮತ್ತೆ ಹುಟ್ಟುಹಾಕಿರುವುದರಲ್ಲಿ ಎರಡು ಮಾತಿಲ್ಲ.

ಅಸ್ಸಾಂನಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ಕಾಂಗ್ರೆಸ್‌ಗೆ ಸಾಧ್ಯವಾಗಲಿಲ್ಲ. ಇಲ್ಲಿ ಪಕ್ಷದ ಪ್ರಚಾರ ಅಭಿಯಾನವೇ ದಿಕ್ಕುತಪ್ಪಿತ್ತು. ಅಹೊಮ್ ಸಮುದಾಯದ ಬೆಂಬಲ ಗಿಟ್ಟಿಸಲು ಹಾಗೂ ಅಸ್ಸಾಂನ ಉತ್ತರ ವಲಯದಲ್ಲಿ ತನ್ನ ಸಾಧನೆ ಉತ್ತಮಪಡಿಸಲು ವಿಫಲ ವಾಯಿತು. ಇಲ್ಲಿ ಮತದಾನಕ್ಕೂ ಮೊದಲೇ ಪಕ್ಷವು ಸೋಲೊಪ್ಪಿದಂತೆ ಕಂಡುಬಂದಿತ್ತು.

ತನ್ನ ಬಲ ಕಳೆದುಕೊಳ್ಳುತ್ತಿರುವ ರಾಜ್ಯಗಳಲ್ಲಿ ಪಕ್ಷವನ್ನು ಮರುಸಂಘಟಿಸ ಬೇಕು ಮತ್ತು ಮೈತ್ರಿಕೂಟ ಮಾಡಿ ಕೊಂಡು ಚುನಾವಣೆ ಎದುರಿಸಬಾರದು ಎಂದು ಕಾಂಗ್ರೆಸ್‌ನ ಒಂದು ವಿಭಾಗ ವಾದಿಸುತ್ತಿದೆ. ಈ ಫಲಿತಾಂಶವು ಅವರ ವಾದಕ್ಕೆ ಹೊಸ ಶಕ್ತಿ ತುಂಬಿದೆ. ಆದರೆ, ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಕಾಂಗ್ರೆಸ್ ಅಂತಹ ಸಾಹಸಕ್ಕೆ ಮುಂದಾಗುವುದೇ ಎಂಬುದನ್ನು ನೋಡಬೇಕಾಗಿದೆ.

ಕೇರಳಂನ ಗೆಲುವು ‘ಜೀವಸೆಲೆ’

ಕೇರಳಂನಲ್ಲಿ ದೊರೆತ ಗೆಲುವು ಕಾಂಗ್ರೆಸ್‌ಗೆ ಜೀವಸೆಲೆಯಾಗಿ ಪರಿಣಮಿಸಿದೆ. ಪಕ್ಷವು ಇಲ್ಲಿ ಸೋತಿದ್ದರೆ, ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ವಿರೋಧಿ ಮೈತ್ರಿಕೂಟವನ್ನು ಮುನ್ನಡೆಸುವ ಅದರ ಸಾಮರ್ಥ್ಯದ ಬಗ್ಗೆ ಮತ್ತೆ ಪ್ರಶ್ನೆಗಳು ಏಳುವಂತೆ ಮಾಡುತ್ತಿತ್ತು. ಜೊತೆಗೆ, ಕಾಂಗ್ರೆಸ್‌ನ ಚುನಾವಣಾ ಗೆಲುವಿನ ಸಾಮರ್ಥ್ಯದ ಕುರಿತ ಪ್ರಶ್ನೆಗಳನ್ನೂ ಕೇರಳದ ಫಲಿತಾಂಶ ಸದ್ಯಕ್ಕೆ ದೂರ ಮಾಡಿದೆ. ಕೇರಳಂನಲ್ಲಿ ನಾಯಕತ್ವದ ಹೊಣೆಯನ್ನು ಯಾರಿಗೆ ನೀಡಬೇಕು ಎಂಬುದನ್ನು ಪಕ್ಷವು ನಿರ್ಧರಿಸಬೇಕಿದೆ.

ಕೇರಳಂನ ತಿರುವನಂತಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು —ಪಿಟಿಐ ಚಿತ್ರ

ಯಾವ ರಾಜ್ಯದಲ್ಲಿ ಯಾವ ಪಕ್ಷದ ಆಡಳಿತ?





ಸಿಕ್ಕಿಂನ 32 ವಿಧಾನಸಭಾ ಕ್ಷೇತ್ರಗಳಲ್ಲಿ 31ರಲ್ಲಿ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾದ (ಎಸ್‌ಕೆಎಂ) ಶಾಸಕರಿದ್ದಾರೆ. 2024ರ ವಿಧಾನಸಭಾ ಚುನಾವಣೆಯಲ್ಲಿ ಅದು ಏಕಾಂಗಿಯಾಗಿ ಸ್ಪರ್ಧಿಸಿದ್ದರೂ, ನಂತರ ಅದು ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಬೆಂಬಲಿಸಿದೆ

ಆಂಧ್ರಪ್ರದೇಶದಲ್ಲಿ ಎನ್‌ಡಿಎ ಆಡಳಿತ ಇದ್ದರೂ, ಟಿಡಿಪಿ ಅತಿದೊಡ್ಡ ಪಕ್ಷವಾಗಿದೆ. ಮುಖ್ಯಮಂತ್ರಿ ಸ್ಥಾನವನ್ನೂ ಅದೇ ಪಕ್ಷ ಹೊಂದಿದೆ

ತಮಿಳುನಾಡಿನ ಡಿಎಂಕೆ, ಪಶ್ಚಿಮ ಬಂಗಾಳದ ಟಿಎಂಸಿ, ಜಮ್ಮು ಮತ್ತು ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಜಾರ್ಖಂಡ್‌ನ ಜೆಎಂಎಂ ಪಕ್ಷಗಳು ಕಾಂಗ್ರೆಸ್ ನೇತೃತ್ವದ ‘ಇಂಡಿಯಾ’ ಒಕ್ಕೂಟದ ಭಾಗವಾಗಿದ್ದರೂ, ಆಯಾ ರಾಜ್ಯಗಳಲ್ಲಿ ಇವುಗಳೇ ದೊಡ್ಡ ಪಕ್ಷಗಳು ಮತ್ತು ತಮ್ಮದೇ ಸ್ವಂತ ಬಲದಲ್ಲಿ ಸ್ಪರ್ಧಿಸಿದಂಥವು

• ಚುನಾವಣಾ ಫಲಿತಾಂಶ ಪ್ರಕಟವಾಗಿರುವ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಅಸ್ಸಾಂ ಮತ್ತು ಪುದುಚೆರಿಯಲ್ಲಿ ಇನ್ನಷ್ಟೇ ಸರ್ಕಾರ ರಚನೆಯಾಗಬೇಕಿದೆ.

ಗೆದ್ದ ಕೈ, ಗೆಲ್ಲದ ಕಮಲ: ಪಾಠ ಯಾರಿಗೆ?

ಒಂದನೇ ಪುಟದಿಂದ...

ಅಲ್ಲಿಂದಲೇ ಗೊಂದಲಗಳು ಶುರುವಾದವು. ಮುಸ್ಲಿಂ ನಾಯಕರ ಬೂದಿ ಮುಚ್ಚಿದ ಕೆಂಡದಂತಿದ್ದ ಒಳಜಗಳ ಬೀದಿಗೆ ಬಂದಿತು. ಅದು ಕೆಲವರ ತಲೆದಂಡಕ್ಕೆ ದಾರಿಯಾಯಿತು. ಕಾಂಗ್ರೆಸ್ ನಾಯಕರು ಸ್ವಲ್ಪ ಯಾಮಾರಿದ್ದರೂ ಸೋಲು ಖಚಿತವಾಗಿ ಬಿಡುತ್ತಿತ್ತು. 5,708 ಮತಗಳ ಅಂತರದಿಂದ ಸಮರ್ಥ್ ಗೆದ್ದಿದ್ದರಿಂದಾಗಿ, ಇನ್ನೂ ಕೆಲವರು ಅಧಿಕಾರ ಬಿಡಬೇಕಾದ ಸ್ಥಿತಿಯಿಂದ ಬಚಾವಾದರು. ಕಳೆದ ಎರಡು–ಮೂರು ವಿಧಾನಸಭೆ ಚುನಾವಣೆಗಳಿಂದ ರಾಜ್ಯದಲ್ಲಿ ಸಕ್ರಿಯವಾಗಿರುವ ಎಸ್‌ಡಿಪಿಐ ದಾವಣಗೆರೆಯಲ್ಲಿ ತುಸು ಬಲವಾದ ಹೆಜ್ಜೆ ಇಟ್ಟಿದೆ. ಪಕ್ಷದ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ 18,975 ಮತಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ತಮ್ಮ ಸಮುದಾಯಕ್ಕೆ ಟಿಕೆಟ್ ನೀಡಿಲ್ಲ ಎಂಬ ಸಿಟ್ಟಿನಲ್ಲಿದ್ದ ಮುಸ್ಲಿಮರ ಮತಗಳನ್ನು ದಕ್ಕಿಸಿಕೊಳ್ಳುವಲ್ಲಿ ಎಸ್‌ಡಿಪಿಐ ಒಂದು ಮಟ್ಟಿನ ಯಶಸ್ಸು ಕಂಡಿದೆ. ಇನ್ನು ಸುಮಾರು ಎರಡೂವರೆ ಸಾವಿರ ಮತಗಳನ್ನು ಪಡೆದಿದ್ದರೂ, ಸಮರ್ಥ ಗೆಲ್ಲುವುದು ಕಷ್ಟಸಾಧ್ಯವಿತ್ತು.

ಕಾಂಗ್ರೆಸ್‌ನ ಮತಬುಟ್ಟಿಗೆ ಕೈ ಇಟ್ಟಿರುವ ಎಸ್‌ಡಿಪಿಐ ಮುಂದೆ ಸುಮ್ಮನೆ ಕೂರುವುದಿಲ್ಲ. ಇನ್ನು ಎರಡು ವರ್ಷಗಳಲ್ಲಿ ಬರಲಿರುವ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತಷ್ಟು ಕಸರತ್ತು ಮಾಡುತ್ತದೆ. ಮುಸ್ಲಿಮರಿಗೆ ಕಾಂಗ್ರೆಸ್ ಅನಿವಾರ್ಯವಲ್ಲ ಎಂಬುದನ್ನು ಈ ಚುನಾವಣೆ ತೋರಿಸಿಕೊಟ್ಟಿದೆ. ಮುಸ್ಲಿಮರ ಮತಗಳನ್ನು ನೆಚ್ಚಿಕೊಂಡ ಕಾಂಗ್ರೆಸ್‌ಗೆ ಇದು ತೂಗುಗತ್ತಿಯಾಗಲಿದೆ.

ನಾಯಕತ್ವ ಜಗ್ಗಾಟಕ್ಕೆ ಅಲ್ಪವಿರಾಮ

ಎರಡೂ ಕ್ಷೇತ್ರಗಳಲ್ಲಿನ ತನ್ನ ಪ್ರಾತಿನಿಧ್ಯವನ್ನು ಕಾಂಗ್ರೆಸ್ ಉಳಿಸಿಕೊಂಡಿರುವುದರಿಂದಾಗಿ ರಾಜ್ಯ ಸರ್ಕಾರದ ನಾಯಕತ್ವಕ್ಕಾಗಿ ನಡೆಯುತ್ತಲೇ ಇರುವ ಹಗ್ಗಜಗ್ಗಾಟಕ್ಕೆ ಒಂದೆರಡು ತಿಂಗಳು ತಡೆ ಬೀಳಬಹುದು. ಹಾಗಂತ, ಅದಕ್ಕೆ ಪೂರ್ಣ ವಿರಾಮ ಬಿದ್ದಿದೆ ಎಂದು ಈಗಲೇ ಹೇಳಲಾಗದು.

ಸಿದ್ದರಾಮಯ್ಯ ಅವರು ತಮ್ಮ ಆಪ್ತ ಎಚ್.ವೈ. ಮೇಟಿ ಪ್ರತಿನಿಧಿಸುತ್ತಿದ್ದ ಬಾಗಲಕೋಟೆಯಲ್ಲಿ ಭರ್ಜರಿ ಅಂತರದಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ದಾವಣಗೆರೆಯಲ್ಲೂ ಕಾಂಗ್ರೆಸ್ ಗೆದ್ದಿದೆ. ಇದು ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸದ್ಯಕ್ಕೆ ಸಮಾಧಾನ ತರುವ ಸಂಗತಿ.

ಮೇ 4ರ ಫಲಿತಾಂಶದ ಬಳಿಕ ರಾಜ್ಯದಲ್ಲಿ ಅಲ್ಲೋಲಕಲ್ಲೋಲವಾಗಲಿದೆ ಎಂಬ ವಿಶ್ಲೇಷಣೆಗಳು ಇದ್ದವು. ಎರಡರಲ್ಲಿ ಒಂದು ಕ್ಷೇತ್ರ, ಅದರಲ್ಲಿಯೂ ಬಾಗಲಕೋಟೆಯಲ್ಲಿ ಸೋತಿದ್ದರೆ ಸಿದ್ದರಾಮಯ್ಯನವರ ಆಡಳಿತ ವೈಫಲ್ಯಕ್ಕೆ ಸಾಕ್ಷ್ಯ ಎಂದು ಬಿಂಬಿಸುವ ಸಾಧ್ಯತೆ ಇತ್ತು. ಎರಡರಲ್ಲೂ ಗೆದ್ದಿರುವುದರಿಂದ ಸದ್ಯಕ್ಕೆ ಆ ದಾಳ ಉರುಳಿಸುವುದು ಕಷ್ಟ. ಹೀಗಾಗಿ, ವಿಧಾನಪರಿಷತ್ ಹಾಗೂ ರಾಜ್ಯಸಭೆಗೆ ನಡೆಯಲಿರುವ ಚುನಾವಣೆವರೆಗೆ ಕಾಂಗ್ರೆಸ್‌ನ ಆಂತರಿಕ ಜಿದ್ದಾಜಿದ್ದಿಗೆ ತೆರೆ ಬೀಳುವ ಸಂಭವ ಇದೆ.

ಬಿಜೆಪಿಯ ಲೆಕ್ಕಾಚಾರ

ಬಿ.ವೈ. ವಿಜಯೇಂದ್ರ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ ನಡೆಯುತ್ತಿರುವ ಎರಡನೇ ಆವೃತ್ತಿಯ ಉಪ ಚುನಾವಣೆಯ ಸರದಿ ಇದು. ಲೋಕಸಭೆ ಚುನಾವಣೆ ಬಳಿಕ ನಡೆದ ಮೂರು ಕ್ಷೇತ್ರಗಳ ಚುನಾವಣೆ-ಗಳಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನಲ್ಲಿದ್ದ ತಲಾ ಒಂದು ಕ್ಷೇತ್ರವನ್ನು ಕಾಂಗ್ರೆಸ್ ಕಿತ್ತುಕೊಂಡಿತ್ತು. ಉಳಿದ ಒಂದು ಕ್ಷೇತ್ರವನ್ನು ಉಳಿಸಿಕೊಂಡಿತ್ತು.

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಬಿಜೆಪಿ ಪ್ರತಿನಿಧಿಸುತ್ತಿದ್ದ ಕ್ಷೇತ್ರಗಳೇನಲ್ಲ. ಅವು ಕಾಂಗ್ರೆಸ್‌ನ ತೆಕ್ಕೆಯಲ್ಲೇ ಇದ್ದವು. ಹೀಗಾಗಿ, ಬಿಜೆಪಿಗೆ ದೊಡ್ಡ ಮಟ್ಟದ ಹಿನ್ನಡೆ ಎನ್ನಲಾಗದು.

‘ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ನಡುವಿನ ಜಗಳದಿಂದಾಗಿ ಆಡಳಿತ ವ್ಯವಸ್ಥೆ ಕುಸಿದು ಬಿದ್ದುಹೋಗಿದೆ, ಭ್ರಷ್ಟಾಚಾರ ತಾಂಡವವಾಡುತ್ತಿದೆ, ಎಲ್ಲ ರೀತಿಯ ತೆರಿಗೆ, ಸುಂಕಗಳನ್ನು ಸರ್ಕಾರ ಏರಿಕೆ ಮಾಡಿದೆ, ಜನರ ರೋಸಿಹೋಗಿದ್ದಾರೆ’ ಎಂದು ಬಿಜೆಪಿ ನಾಯಕರು ದಿನವೂ ಆರೋಪ ಮಾಡುತ್ತಲೇ ಬರುತ್ತಿದ್ದಾರೆ. ಜನರ ಮಧ್ಯೆ ಇದ್ದುಕೊಂಡು ಹಲವು ಹೋರಾಟಗಳನ್ನು ಸಂಘಟಿಸುತ್ತಲೂ ಇದ್ದಾರೆ. ಹಾಗಿದ್ದರೂ, ಅದನ್ನು ಮತವಾಗಿಸಿಕೊಳ್ಳುವಲ್ಲಿ ಬಿಜೆಪಿ ವಿಫಲವಾಗಿದ್ದನ್ನು ಈ ಫಲಿತಾಂಶ ತೋರಿಸುತ್ತದೆ.

ಎರಡು ಕ್ಷೇತ್ರಗಳಲ್ಲಿ ಮುಸ್ಲಿಂ ಮತ್ತು ಹಿಂದುಳಿದ ವರ್ಗಗಳ ಮತಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಎರಡೂ ಕ್ಷೇತ್ರಗಳು ವೀರಶೈವ–ಲಿಂಗಾಯತ ಮತಗಳು ನಿರ್ಣಾಯಕವಾಗಿರುವ ಕ್ಷೇತ್ರಗಳೇ ಆಗಿವೆ.

ಅಲ್ಲಿಯೂ ಗೆಲುವಿನ ದಡ ಹತ್ತದೇ ಇರುವುದು ವಿಜಯೇಂದ್ರ ನಾಯಕತ್ವಕ್ಕೆ ಎದುರಾದ ಸವಾಲು. ಬಿಜೆಪಿಯಲ್ಲಿ ಒಳಗೊಳಗೆ ಕುದಿಯುತ್ತಿರುವ ಭಿನ್ನಮತವೂ ಒಳ ಏಟಿಗೆ ಕಾರಣವಾಗಿದೆ. ಇವೆಲ್ಲವನ್ನೂ ಸರಿಪಡಿಸಿಕೊಳ್ಳುವ ಪಾಠವನ್ನು ಬಿಜೆಪಿಗೆ ಈ ಚುನಾವಣೆ ಕೊಟ್ಟಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಾರ್ವಜನಿಕ ಸಮಾರಂಭವೊಂದರಲ್ಲಿ ಸಿಪಿಎಂ ಮುಖಂಡರು ರಾಮ ಭಜನೆ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಡಿಯೊದಲ್ಲಿ ಕಮ್ಯುನಿಸ್ಟ್ ಮುಖಂಡರು ಹಾರ್ಮೋನಿಯಂ, ತಬಲಾ ಮುಂತಾದ ಸಂಗೀತ ಉಪಕರಣಗಳನ್ನು ಮುಂದೆ ಇಟ್ಟುಕೊಂಡಿರುವುದು ಕಾಣುತ್ತದೆ. ಆದರೆ, ಈ ವಿಡಿಯೊ ಆಗಲಿ, ಅದನ್ನು ಹಂಚಿಕೊಳ್ಳುತ್ತಿರುವವರ ಪ್ರತಿಪಾದನೆಯಾಗಲಿ ನಿಜವಲ್ಲ.

ವಿಡಿಯೊ ಅನ್ನು ಇನ್‌ವಿಡ್ ಟೂಲ್ ಮತ್ತು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ, ಸಿಪಿಎಂ ಸದಸ್ಯರಾದ ಪಾರಿತೋಷ್ ಪಟ್ಟನಾಯಕ್ ಎನ್ನುವವರು ಫೇಸ್‌ಬುಕ್‌ನಲ್ಲಿ ಇಂಥದೇ ವಿಡಿಯೊ ಹಂಚಿಕೊಂಡಿರುವುದು ಕಂಡಿತು (2024ರ ನ.14). ವಿಡಿಯೊ ಅನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ರೀತಿಯೇ ಕಂಡರೂ ಹಲವು ವ್ಯತ್ಯಾಸಗಳು ಕಂಡವು. ವಿಡಿಯೊದಲ್ಲಿ ಹಾಡಿರುವುದು ರಾಮ ಭಜನೆ ಅಲ್ಲ; ಬದಲಿಗೆ, ‘ನೀಲ್ ಗಗನ್ ಪರ್ ಉಡ್ತೆ ಬದಲ್’ ಎನ್ನುವ ಹಾಡನ್ನು ಹಾಡಲಾಗಿದೆ. ದೇಶದ ಹಲವು ಸಮಸ್ಯೆಗಳನ್ನು ವಿರೋಧಿಸಿ ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದ ವಿಡಿಯೊ ಅದು. ಅದನ್ನು ಪಶ್ಚಿಮ ಬಂಗಾಳದ ಸಿಪಿಎಂ ಅಧಿಕೃತ ಖಾತೆಯಲ್ಲಿಯೂ ಅಪ್‌ಲೋಡ್ ಮಾಡಲಾಗಿದೆ. ಡಿಜಿಟಲ್ ಆಗಿ ಮಾರ್ಪಡಿಸಲಾದ ಹಳೆಯ ವಿಡಿಯೊ ಅನ್ನು ಚುನಾವಣಾ ಫಲಿತಾಂಶಗಳ ಸಂದರ್ಭದಲ್ಲಿ ಹಂಚಿಕೊಂಡು ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಕಾಣದ ಬಲೆಗಳು

ನುಡಿ ಬೆಳಗು

ದೀಪಾ ಹಿರೇಗುತ್ತಿ

ಒಂದು ಊರಿನ ಹೊರವಲಯದಲ್ಲಿ ಒಂದು ಆಳವಾದ ಬರಡು ಬಾವಿಯಿತ್ತು. ಆ ಬಾವಿ ಎಷ್ಟು ಆಳವಾಗಿತ್ತೆಂದರೆ ಅದರ ತಳ ಕಾಣುತ್ತಲೇ ಇರಲಿಲ್ಲ. ಒಂದು ದಿನ ಯಾರೋ ಆ ಬಾವಿಯೊಳಗೆ ಸತ್ತ ಪ್ರಾಣಿಯೊಂದನ್ನು ತಂದೆಸೆದರು. ವಾಸನೆಯಿಂದ ವಿಷಯ ತಿಳಿದ ಇಲಿಗಳ ಹಿಂಡು ಬಂದು ಭಡಭಡನೆ ಬಾವಿಯಲ್ಲಿಳಿಯಿತು. ಸುಮಾರು ಎಪ್ಪತ್ತರಿಂದ ಎಂಬತ್ತು ಇಲಿಗಳಿದ್ದವು. ಮನಸೋ ಇಚ್ಛೆ ಆ ಪ್ರಾಣಿಯ ಮಾಂಸವನ್ನು ತಿಂದವು. ತಿಂದು ಹೊಟ್ಟೆ ತುಂಬಿದ ಮೇಲೆ ಬಾವಿಯಿಂದ ಮೇಲೆ ಬರಲು ಪ್ರಯತ್ನಿಸಿದರೆ ಬರಲು ಸಾಧ್ಯವಾಗಲೇ ಇಲ್ಲ.

ಆಗ ಆ ಇಲಿಗಳಿಗೆ ತಾವು ಈ ಆಳವಾದ ಬಾವಿಯಲ್ಲಿ ಸಿಕ್ಕಿಹಾಕಿಕೊಂಡಿರುವುದು ಅರಿವಾಯಿತು. ದಿನಗಳು ಉರುಳಿದವು. ಮಾಂಸ ಪೂರ್ತಿಯಾಗಿ ಖಾಲಿಯಾಯಿತು. ಸ್ವರ್ಗವೆಂದು ಬಂದಿದ್ದ ಬಾವಿ ಈಗ ನರಕವಾಗಿತ್ತು. ಹಸಿವು ತಾಳಲಾರದೇ ಜತೆಗಿರುವ ಇಲಿಗಳನ್ನೇ ತಿನ್ನತೊಡಗಿದವು. ಇಲಿಗಳ ಸಂಖ್ಯೆ ನಿಧಾನವಾಗಿ ಕಡಿಮೆಯಾಗುತ್ತ ಬಂತು. ಕೊನೆಯಲ್ಲಿ ಒಂದೇ ಒಂದು ಇಲಿ ಉಳಿದಿತ್ತು.

ಒಂದು ದಿನ ಆ ಬಾವಿಯೊಳಗೆ ಇದ್ದಕ್ಕಿದ್ದಂತೆ ಒಂದು ಹಗ್ಗ ಬಂದು ನೇತಾಡಿತು. ಇಲಿ ಆ ಹಗ್ಗವನ್ನು ಕಚ್ಚಿ ಹಿಡಿದು ಹತ್ತಿ ಮೇಲೆ ಬಂದಿತು. ಆ ಹಗ್ಗ ಎಸೆದ ವ್ಯಕ್ತಿ ಬೇರೆ ಯಾರೂ ಅಲ್ಲ, ಸತ್ತ ಪ್ರಾಣಿಯನ್ನು ಬಾವಿಯಲ್ಲಿ ಎಸೆದವರೇ. ಇಲಿಯನ್ನು ತೆಗೆದುಕೊಂಡು ಹೋಗಿ ಆ ವ್ಯಕ್ತಿ ತನ್ನ ಗದ್ದೆಯಲ್ಲಿ ಬಿಟ್ಟರು.

ಆ ವ್ಯಕ್ತಿಗೆ ಇಲಿಯ ಮೇಲೆ ಕರುಣೆ ಬಂದಿತ್ತೇ? ಖಂಡಿತ ಇಲ್ಲ. ಆ ಇಲಿ ಈಗ ಬದಲಾಗಿತ್ತು. ತನ್ನದೇ ಜಾತಿಯ ಇಲಿಗಳನ್ನು ತಿನ್ನುವುದು ಅದಕ್ಕೆ ಅಭ್ಯಾಸವಾಗಿತ್ತು, ಹೀಗಾಗಿ ಅದು ಕಾಳು ತಿನ್ನುವುದಿಲ್ಲ ಎಂದು ಆ ವ್ಯಕ್ತಿಗೆ ಗೊತ್ತಾಗಿತ್ತು. ಹೊಲಕ್ಕೆ ಹೋಗುತ್ತಲೇ ಆ ಇಲಿ ಸಿಕ್ಕ ಸಿಕ್ಕ ಇಲಿಗಳ ಮೇಲೆ ದಾಳಿ ಮಾಡಿತು.

ಇದನ್ನು ಡಿವೈಡ್ ಟ್ರ್ಯಾಪ್ ಎನ್ನುತ್ತಾರೆ. ಅಧಿಕಾರದ, ಅಂತಸ್ತಿನ ಮೇಲುಗಡೆ ಇರುವ ಜನರು ಯಾವತ್ತೂ ನೇರವಾಗಿ ಹೋರಾಟ ಮಾಡುವುದಿಲ್ಲ. ಕೆಳಸ್ತರದಲ್ಲಿರುವ ಜನರು ತಮ್ಮತಮ್ಮೊಳಗೇ ಹೊಡೆದಾಡಿಕೊಂಡು ಸಂಕಷ್ಟ ಅನುಭವಿಸುತ್ತಾರೆ. ಕೆಲವರಂತೂ ಜೀವನ ಪೂರ್ತಿ ಮತ್ತೊಬ್ಬರನ್ನು ಸೋಲಿಸುವುದರಲ್ಲಿ ಎಷ್ಟು ವ್ಯಸ್ತರಾಗಿರುತ್ತಾರೆಂದರೆ ಅವರಿಗೆ ತಾವು ಯಾರದ್ದೋ ಆಟದ ದಾಳಗಳು ಎಂದು ಕೊನೆಯವರೆಗೂ ಅರ್ಥವೇ ಆಗುವುದಿಲ್ಲ. ಧರ್ಮದ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ, ಪ್ರಾದೇಶಿಕತೆಯ ಹೆಸರಿನಲ್ಲಿ, ಅಧಿಕಾರದ ಹೆಸರಿನಲ್ಲಿ, ಜಗತ್ತಿಗೆ ತಾನು ದೊಡ್ಡ ವ್ಯಕ್ತಿ ಎಂಬುದನ್ನು ಸಾಬೀತುಪಡಿಸುವ ಹುಚ್ಚಿನಲ್ಲಿ ಎಷ್ಟೋ ಸಲ ನಾವು ನಮಗೆ ಅರಿವಿಲ್ಲದಂತೆ ಈ ಜಾಲಗಳಲ್ಲಿ ಸಿಕ್ಕಿ ಬೀಳುತ್ತಿರುತ್ತೇವೆ. ಸಾಮಾಜಿಕ ಜಾಲತಾಣದಲ್ಲಂತೂ ಇಹದ ಪರಿವೆ ಇಲ್ಲದಂತೆ ಮುಳುಗಿ ಏಳುತ್ತಿರುತ್ತೇವೆ.

ಹಾಗಂತ ನಮಗಾಗಿ, ನಮ್ಮವರಿಗಾಗಿ, ನಾವು ನಂಬಿದ ವಿಚಾರಗಳಿಗಾಗಿ ದನಿಯೆತ್ತುವುದು ಬೇಡವೇ? ಖಂಡಿತ ಬೇಕು. ಆದರೆ ಅದು ನಮ್ಮ ನಿರ್ಧಾರವಾಗಿರಬೇಕು. ತೋರಿಕೆಯ ಸಮಸ್ಯೆಯಡಿ ನಿಜವಾದ ಸಮಸ್ಯೆಗಳು ಮುಚ್ಚಿಹೋಗದಂತೆ ಜಾಗ್ರತೆ ವಹಿಸಬೇಕು. ನಮ್ಮ ವಿಚಾರದ ವಿರುದ್ಧ ಇರುವವರನ್ನು ಸೈದ್ಧಾಂತಿಕವಾಗಿ ವಿರೋಧಿಸಬೇಕೇ ಹೊರತು ಅವರನ್ನು ದ್ವೇಷಿಸಬಾರದು. ಉದಾಹರಣೆಗೆ ಬೇರೆ ಬೇರೆ ರಾಜಕೀಯ ಪಕ್ಷಗಳ ದೊಡ್ಡ ದೊಡ್ಡ ಮುಖಂಡರು ಪರಸ್ಪರರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತ, ವೈವಾಹಿಕ ಸಂಬಂಧವನ್ನೂ ಏರ್ಪಡಿಸಿಕೊಳ್ಳುತ್ತ ಇರುವಾಗ ತಳಮಟ್ಟದ ಕಾರ್ಯಕರ್ತರು ಒಬ್ಬರ ಮುಖ ಮತ್ತೊಬ್ಬರು ನೋಡಲಾಗದಂತೆ ದ್ವೇಷಿಸುತ್ತಿರುತ್ತಾರೆ. ಹೀಗಾಗಿ ಯಾರೋ ಬೇರೆಯವರು ಹೆಣೆದ ಜಾಲದಲ್ಲಿ ಸಿಕ್ಕಿಹಾಕಿಕೊಳ್ಳದಂತೆ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಇಂದಿನ ತುರ್ತು. ❖

ಗುಂಡಣ್ಣ

ಪದಬಂಧ 6393

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಾಪದ ಸಮಯದಲ್ಲೇ ಅತೀ ದುಃಖ (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
5.ಇದು ಅಂತರಂಗ ಸ್ಪರ್ಶಿಯಾದುದು (3)
6.ಅವನಲ್ಲಿ ಕಾಣುತ್ತಿರುವ ಕೆಟ್ಟಸ್ವಭಾವ (4)
8.ಬರದಿಂದ ಕಂಗೆಟ್ಟವನಿಗೆ ನೀಡಿದ ಪಾನಕ (4)
10.ಓಟನ್ನು ನೀಡುವಿಕೆ (4)
12.ಗರತಿ ಸಮೀಪದಲ್ಲಿರುವ ವರ್ಗ (4)
13.ಬಲು ವಾಚಾಳಿ ಈತ! (3)
16.ಈ ಪರಿ ಮಾಡಿದ ಅಣಕ (4)
17.ನೂತನ ದಂಪತಿಗಳು ಕೈಗೊಳ್ಳುವ ವಿಹಾರಯಾತ್ರೆ (4)

ಮೇಲಿಂದ ಕೆಳಕ್ಕೆ

1.ಅತ್ತೆ ಹೇಳಿದ ವಿಳಾಸ (2)
2.ಪಣ ಕಟ್ಟಿ ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
4.ತೆಪ್ಪಗೆ ಹತ್ತಿ ಕುಳಿತಿರುವ ನಾವೆ (2)
7.ವರನ ತಗಾದೆಯೇ ಇದು? (3)
9.ಬಹಳ ಆತ್ಮೀಯರಾದ ನೆಂಟರ ಸಮೂಹ (3)
11.ಒಂಬತ್ತು ತಿಂಗಳಿದು (4)
12.ಈ ತರ ತೋರಿದ ಬೇಧಭಾವ (4)
14.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
15.ದೇವತೆಗಳ ಒಡೆಯ (2)



6392ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುರಾಂಗನೆ 3.ಸುವಾಸನೆ 5.ಮರ 6.ವ್ಯವಕಲನ 8.ಗರಡಿ 9.ಒಣಹರಟೆ 11.ಬಯಕೆ 12.ಹೊಲಸುಮಾತು 15.ಹಗೆ 16.ಪರಿಹಾರ 17.ಅಂಗರಾಗ

ಮೇಲಿಂದ ಕೆಳಕ್ಕೆ:
1.ಸುಶ್ರಾವ್ಯ 2.ಗಣಕ 3.ಸುರ 4.ನೆಗಡಿ 5.ಮನ 7.ಲಕ್ಷಣ 8.ಗಲಾಟೆ 9.ಒನಕೆ 10.ರಸಾಲ 11.ಬಳಪ 12.ಹೊಗೆ 13.ಸುಭಗ 14.ತುರಂಗ 15.ಹರ

ಸುಡೊಕು 6776

ಆಡುವುದು ಹೇಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				2		3		5
3		6	5		8			
	4			7	3	2		6
	6						7	9
9		1		8			6	
						1		8
		2	3		7		5	
7	1					6	2	
		3	4		2		9	

6775 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ಮೇ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ತೃತೀಯ ಗಂ. 5-25 ನಕ್ಷತ್ರ: ಜ್ಯೇಷ್ಠ ಗಂ. 12-55 ಯೋಗ: ಶಿವ ಗಂ. 24-17 ಕರಣ: ವಿಷ್ಟಿ ಗಂ. 5-25, ಮೇಷ ಮಾಸದ 22 ನೇ ದಿನ. ಮಳೆ ನಕ್ಷತ್ರ : ಭರಣಿ 3 ನೇ ಪಾದ. ರಾಹುಕಾಲ : ಸಾಯಂಕಾಲ 03-00 - 04-30 , ಸೂರ್ಯೋದಯ : 06-11 ಸೂರ್ಯಾಸ್ತ : 06-43, ಮುಸ್ಲಿಂ ದಿನಾಂಕ : 17 ಜುಲ್ಕಾದಾ, ಅದೃಷ್ಟ ಸಂಖ್ಯೆ : 3, 2

ಮೇಷ: ಕೆಲಸ ಕಾರ್ಯಗಳಿಗೆ ಅಡ್ಡಿ ಇರುವುದಿಲ್ಲ. ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪುನಃ ಪುನಃ ಪರಾಮರ್ಶಿಸಲೇಬೇಕಾದ ಸಮಯದಲ್ಲಿ ಮೋಸ ಕೃತ್ಯ ನಡೆದಿರುವುದು ತಿಳಿಯಲಿದೆ.

ವೃಷಭ: ನೃತ್ಯ ಕಲಿಕೆಯ ಚಟುವಟಿಕೆಯಲ್ಲಿನ ಆಸಕ್ತಿಯಿಂದಾಗಿ ಶೈಕ್ಷಣಿಕವಾಗಿ ಹಿಂದುಳಿಯುವ ಸ್ಥಿತಿ ಬರಲಿದೆ. ದೇವತಾನುಗ್ರದಿಂದ ತುರ್ತು ಕಾರ್ಯಗಳು ಶೀಘ್ರ ನೆರವೇರಲಿವೆ.

ಮಿಥುನ: ತಪ್ಪನ್ನು ಮಾಡದಿದ್ದರೂ ಅದರ ಅಪವಾದ ಸುತ್ತಿಕೊಳ್ಳುವ ಪ್ರಸಂಗ ಬರಬಹುದು. ರಕ್ಷಣಾ ಕ್ಷೇತ್ರದಲ್ಲಿರುವವರಿಗೆ ಅಭಿವೃದ್ಧಿ ತೋರಿ ಬರಲಿದೆ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು.

ಕರ್ಕಾಟಕ: ಮಾನಸಿಕ ಶಕ್ತಿಗಳು ಬಲಗೊಂಡು ಯೋಚನೆಗಳು ಶೀಘ್ರವೇ ಕಾರ್ಯರೂಪಕ್ಕೆ ಬರಲಿವೆ. ಪಶುಸಂಗೋಪನೆ ಮತ್ತು ಹಾಲು ಉತ್ಪನ್ನಗಳಿಂದ ಲಾಭ ಪಡೆಯುವಿರಿ. ವೈವಾಹಿಕ ಸಂಬಂಧಿ ಮಾತುಕತೆಗಳು ಫಲ ನೀಡಲಿವೆ.

ಸಿಂಹ: ಕಟ್ಟಡದ ಗುತ್ತಿಗೆದಾರರಿಗೆ ಕೆಲಸಗಾರರ ಕೊರತೆ ಕಾಣಲಿದೆ. ಪರಿಣತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು. ವಿದೇಶಿ ವ್ಯಾಪಾರದಲ್ಲಿ ಜಾಸ್ತಿ ಬಂಡವಾಳ ಹೂಡುವುದು ಸರಿಯಲ್ಲ.

ಕನ್ಯಾ: ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನದಿಂದ ಮೆಚ್ಚುಗೆಯ ಮಾತುಗಳನ್ನು ಕೇಳಲಿದ್ದೀರಿ. ಕ್ರೀಡಾಸಕ್ತರಿಗೆ ಅಥವಾ ಕ್ರೀಡಾ ಪಟುಗಳಿಗೆ ಶುಭದಾಯಕ ದಿನ.

ತುಲಾ: ವಿದೇಶದಲ್ಲಿನ ಶಿಕ್ಷಣಾವಕಾಶವನ್ನು ಪಡೆದುಕೊಳ್ಳುವ ಉತ್ತಮ ಅವಕಾಶ ನಿಮ್ಮದಾಗಲಿದೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಲಿದೆ. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿರುವುದು.

ವೃಶ್ಚಿಕ: ರೈತರಿಗೆ ಹೆಚ್ಚಿನ ಬೆಳೆ ಕಣ್ಣಿಗೆ ಕಂಡರೂ, ರೋಗಬಾಧೆಯಿಂದ ನಿರಾಸೆ ಉಂಟಾಗಬಹುದು. ಶುಭ ಸಮಾಚಾರ ಕೇಳುವಿರಿ. ಮಹಿಳೆಯರಿಗೆ ಆಡಳಿತ ಅಧಿಕಾರದ ಸ್ಥಾನ ಲಭ್ಯವಾಗಲಿದೆ.

ಧನು: ಹೋರಾಟ ನಡೆಸಿದ ನಂತರದಲ್ಲಿ ಗೆಲುವನ್ನಾಗಲೀ ಸೋಲನ್ನಾಗಲಿ ಒಪ್ಪಿಕೊಳ್ಳಲು ತೀರ್ಮಾನಿಸಿ. ದೂರದೃಷ್ಟಿ ಇಟ್ಟುಕೊಂಡು ಕಾರ್ಯಪ್ರವೃತ್ತರಾಗುವುದು ಉತ್ತಮ. ಅನಗತ್ಯ ವಸ್ತುಗಳಿಗೆ ಹಣಕಾಸಿನ ಹರಿವು ಹೆಚ್ಚಾಗಲಿದೆ.

ಮಕರ: ರಾಜಕೀಯ ಭವಿಷ್ಯಕ್ಕೆ ಪ್ರವೇಶ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ನಡೆಸುವಿರಿ. ಲಾಭದಾಯಕವೆನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸುವಿರಿ.

ಕುಂಭ: ಗ್ರಹಚಾರದ ಫಲವಾಗಿ ಮನೋಬಲದಿಂದ ಕಾರ್ಯ ಸಾಧಿಸುವಲ್ಲಿ ವಿಫಲರಾಗುವಿರಿ. ಇದರಿಂದ ಸಹವರ್ತಿಗಳಲ್ಲಿ ಸಹಕಾರಗಳನ್ನು ಕೋರುವುದು ಅನಿವಾರ್ಯ.

ಮೀನ: ಆಹಾರ ಪದ್ಧತಿಯಲ್ಲಿಯೇ ರಕ್ತದೊತ್ತಡವನ್ನು ನಿಯಂತ್ರಿಸಿಕೊಳ್ಳಲು ಪ್ರಯತ್ನಪಡಿ. ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ಕೆಲಸವು ದಾಯಾದಿಗಳಿಂದ ನಡೆಯಬಹುದು.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	33099-36099
ಕೋಕ	17569-34009
ಫ್ಯಾಕ್ಟರಿ	12509-27929
ಹಳೆಚಾಲಿ	47509-48898
ಹೊಸಚಾಲಿ	43709-47229
ಪುತ್ತೂರು	
ಕೋಕ	20000-34500
ಹೊಸತು	30000-47500
ಹಳತು	50000-55000
ಸಾಗರ	
ಬಿಳಿಗೋಟು	22099-35600
ಚಾಲಿ	36199-43599
ಕೋಕ	13099-33999
ಕೆಂಪುಗೋಟು	22999-38469
ರಾಶಿ	42570-55829
ಸಿಪ್ಪೆಗೋಟು	7099-22899
ಶಿವಮೊಗ್ಗ	
ಸರಕು	55199-94099
ಬೆಟ್ಟೆ	45299-63630
ರಾಶಿ	42009-56099
ಗೊರಬಲು	19010-43339
ಸಿದ್ದಾಪುರ	
ಬಿಳಿಗೋಟು	26419-35899
ಚಾಲಿ	39500-47439
ಕೋಕ	23909-33899
ಕೆಂಪುಗೋಟು	33289-35600
ರಾಶಿ	46099-54099
ತಟ್ಟಿಬೆಟ್ಟೆ	36000-41869
ಶಿರಸಿ	
ಬೆಟ್ಟೆ	41899-52099
ಬಿಳಿಗೋಟು	25189-37900
ಚಾಲಿ	44599-48999
ಕೆಂಪುಗೋಟು	26219-36500
ರಾಶಿ	50001-54100
ಯಲ್ಲಾಪುರ	
ಆಪಿ	58821-60555
ಬಿಳಿಗೋಟು	18299-39800
ಚಾಲಿ	38019-48699
ಕೋಕ	16909-34899
ಕೆಂಪುಗೋಟು	17909-37969
ರಾಶಿ	48619-57621
ತಟ್ಟಿಬೆಟ್ಟೆ	36666-50469

ಷೇರುಪೇಟೆ ವಹಿವಾಟು: 76,913 ಹಿಂದಿನ ಅಂತ್ಯ; 355; 77,269 ಇಂದಿನ ಅಂತ್ಯ (10:00, 12:00, 14:00, 16:00; 78,500, 78,000, 77,500, 77,000)

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,997
ಇಂದಿನ ಅಂತ್ಯ:	24,119
ದಿನದ ಗರಿಷ್ಠ:	24,290
	121

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹590
12 ಕ್ಕೆ	₹84
ಮೈಸೂರು: 100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹246
ಆರ್‌ಎಸ್‌ಎಸ್-5	₹241
ಗುಡ್ ಲಾಟ್	₹212

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹333-544
ದ್ವಿತಳಿ (ಬಿ.ವಿ)	₹422-788

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1610 (1600)
ಸೋಯಾ (ರಿಫೈನ್ಡ್)	₹1530 (1510)
ಸೂರ್ಯಕಾಂತಿ (ರಿಫೈನ್ಡ್)	₹1660 (1660)
ಪಾಮೋಲಿನ್	₹1460 (1455)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹33000-33000
ಹೊಸದುರ್ಗ	₹24000-24000
ತಿಪಟೂರು	₹32000-33735
ತುಮಕೂರು	₹18600-22500

ವಿಮಾನ ಪ್ರಯಾಣಿಕರ ಸಂಖ್ಯೆ ಏರಿಕೆ

ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಚುರುಕುಪಡೆದ ಚಟುವಟಿಕೆ
● 4 ಹೊಸ ಏರೊಡ್ರೋಮ್ ನಿರ್ಮಾಣ ಕಾರ್ಯ

● ನಾಗರಾಜ ಚಿನಗುಂಡಿ

ಹುಬ್ಬಳ್ಳಿ: ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ 2025-26ನೇ ಸಾಲಿನಲ್ಲಿ ಶೇ 8ರಷ್ಟು ಹೆಚ್ಚಳವಾಗಿದೆ.

ಹುಬ್ಬಳ್ಳಿಯಿಂದ ದೇಶದ ಯಾವುದೇ ಭಾಗಕ್ಕೆ ಮತ್ತು ವಿದೇಶಕ್ಕೆ ತೆರಳಲು ಈ ವಿಮಾನ ನಿಲ್ದಾಣವು ಅನುಕೂಲ ಮಾಡಿಕೊಡುತ್ತಿದೆ. ಇಲ್ಲಿಂದ ಪ್ರಯಾಣಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಮಾನಗಳು ಸಂಚರಿಸುವ ಮುಂಬೈ, ದೆಹಲಿ ಹಾಗೂ ಬೆಂಗಳೂರಿನಂತಹ ಮಹಾನಗರಕ್ಕೆ ಹೋಗಲು ವಿಮಾನ ಸೇವೆಯನ್ನು ಹುಬ್ಬಳ್ಳಿ ವಿಮಾನ ನಿಲ್ದಾಣ ಒದಗಿಸುತ್ತಿದೆ.

ನಿತ್ಯ ಸಂಚರಿಸುವ ವಿಮಾನಗಳ ಸಂಖ್ಯೆಯೂ ಕ್ರಮೇಣ ಹೆಚ್ಚಾಗಿದೆ. ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಿಗೂ ಹುಬ್ಬಳ್ಳಿಯಿಂದ ವಿಮಾನ ಸೇವೆ ಆರಂಭಿಸಬೇಕು ಎಂದು ಎರಡು ವರ್ಷಗಳಿಂದ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಮತ್ತು ಸಂಸದರಿಗೆ ಬೇಡಿಕೆ ಸಲ್ಲಿಸಲಾಗುತ್ತಿದೆ.

ಬೇಡಿಕೆಗೆ ಅನುಗುಣವಾಗಿ ವಿಮಾನ ಸೇವೆ ನೀಡುವ ಉದ್ದೇಶದಿಂದ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯ ಭರದಿಂದ ಸಾಗಿದೆ. ಏಕಕಾಲಕ್ಕೆ ನಾಲ್ಕು ವಿಮಾನಗಳು ತಂಗುವುದಕ್ಕೆ ಸಾಧ್ಯವಾಗುವಂತೆ ನಾಲ್ಕು ಹೊಸ ಏರೊಡ್ರೋಮ್ ನಿರ್ಮಾಣ ಮಾಡಲಾಗುತ್ತಿದೆ.

ಹುಬ್ಬಳ್ಳಿ ವಿಮಾನ ನಿಲ್ದಾಣದ ಹೊರನೋಟ

ಮುಂಚೂಣಿಯಲ್ಲಿ ಹುಬ್ಬಳ್ಳಿ: ರಾಜ್ಯದಲ್ಲಿ ಅಂತರರಾಷ್ಟ್ರೀಯ ವಿಮಾನಗಳು ಸಂಚರಿಸುವ ಮಂಗಳೂರು, ಬೆಂಗಳೂರು ಹೊರತುಪಡಿಸಿದರೆ ದೇಶಿ ವಿಮಾನಗಳ ಪೈಕಿ ಹುಬ್ಬಳ್ಳಿ ವಿಮಾನ ನಿಲ್ದಾಣ ಪ್ರಯಾಣಿಕರ ದಟ್ಟಣೆಯಲ್ಲಿ ಮುಂಚೂಣಿಯಲ್ಲಿದೆ. ಹುಬ್ಬಳ್ಳಿ ಮಾದರಿಯ ವಿಮಾನ ನಿಲ್ದಾಣವಿರುವ ಬೆಳಗಾವಿಯಿಂದ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಹಿಂದಿನ ವರ್ಷಕ್ಕಿಂತಲೂ 2025-26ನೇ ಸಾಲಿನಲ್ಲಿ ಶೇ 11.4ರಷ್ಟು ಕುಸಿತವಾಗಿದೆ.

ಬೆಳಗಾವಿ ವಿಮಾನ ನಿಲ್ದಾಣವನ್ನು 2024-25ನೇ ಸಾಲಿನಲ್ಲಿ 3,40,295 ಪ್ರಯಾಣಿಕರು ಬಳಸಿದ್ದರು.

ಮೈಸೂರು ವಿಮಾನ ನಿಲ್ದಾಣವನ್ನು 2024-25ನೇ ಸಾಲಿನಲ್ಲಿ 94,891 ಪ್ರಯಾಣಿಕರು ಬಳಸಿದ್ದರು. 2025-26ನೇ ಸಾಲಿನಲ್ಲಿ ಆ ಸಂಖ್ಯೆಯು 91,739ಕ್ಕೆ ತಗ್ಗಿದೆ. ಕಲಬುರಗಿ ವಿಮಾನ ನಿಲ್ದಾಣದಲ್ಲೂ ಪ್ರಯಾಣಿಕರ ಸಂಖ್ಯೆ 30,924ರಿಂದ 13,966 ಕಡಿಮೆಯಾಗಿದೆ.

ಹೊಸದಾಗಿ ಕಾರ್ಯಾಚರಣೆ ಆರಂಭಿಸಿರುವ ಶಿವಮೊಗ್ಗ ವಿಮಾನ ನಿಲ್ದಾಣವನ್ನು 2024-25ನೇ ಸಾಲಿನಲ್ಲಿ 1,17,450 ಪ್ರಯಾಣಿಕರು ಬಳಸಿದ್ದಾರೆ, 2025-26ನೇ ಸಾಲಿನಲ್ಲಿ ಇದು 1,81,587ಕ್ಕೆ ಏರಿಕೆಯಾಗಿದೆ.

> ಹುಬ್ಬಳ್ಳಿಯಿಂದ ಅಹಮದಾಬಾದ್‌ಗೆ ವಿಮಾನ ಹಾರಾಟ ಆರಂಭಿಸುವುದಕ್ಕೆ ಇಂಡಿಗೊ ಕಂಪನಿ ಆಸಕ್ತಿ ತೋರಿಸಿದ್ದು, ಅಧಿಕೃತವಾಗಿ ಸಮಯ ನಿಗದಿಯಾಗಿಲ್ಲ
> **ರೂಪೇಶಕುಮಾರ್,** ವ್ಯವಸ್ಥಾಪಕ ನಿರ್ದೇಶಕ, ಹುಬ್ಬಳ್ಳಿ ವಿಮಾನ ನಿಲ್ದಾಣ

WAN-IFRA I COLOR QUALITY CLUB 2026-28 I V1

ನೇರ ತೆರಿಗೆ ಸಂಗ್ರಹ ಗುರಿಗಿಂತ ಕಡಿಮೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ನೇರ ತೆರಿಗೆಗಳ ಸಂಗ್ರಹವು 2025-26ರಲ್ಲಿ ಶೇ 5.12ರಷ್ಟು ಹೆಚ್ಚಳ ಕಂಡಿದ್ದು ₹23.40 ಲಕ್ಷ ಕೋಟಿಗೆ ತಲುಪಿದೆ. ಆದರೆ ಇದು ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಪರಿಷ್ಕೃತ ಬಜೆಟ್ ಅಂದಾಜಿನಲ್ಲಿ ನಿಗದಿ ಮಾಡಿದ್ದ ಗುರಿಗಿಂತ ಕಡಿಮೆ.

2025-26ರ ಪರಿಷ್ಕೃತ ಅಂದಾಜಿನಲ್ಲಿ ಕೇಂದ್ರ ಸರ್ಕಾರವು ನೇರ ತೆರಿಗೆ ಸಂಗ್ರಹವು ₹24.21 ಲಕ್ಷ ಕೋಟಿ ಆಗುವ ಗುರಿ ಹಾಕಿಕೊಂಡಿತ್ತು. ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ 2025-26ರಲ್ಲಿ ₹10.99 ಲಕ್ಷ ಕೋಟಿ ಕಾರ್ಪೊರೇಟ್ ತೆರಿಗೆ ಸಂಗ್ರಹ ಆಗಿದೆ, ಎಸ್‌ಟಿಟಿ ಸೇರಿ ವೈಯಕ್ತಿಕ ಆದಾಯ ತೆರಿಗೆ ಸಂಗ್ರಹವು ₹12.41 ಲಕ್ಷ ಕೋಟಿ ಆಗಿದೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಮುಂಬೈ ಧಾರಣೆ (ಶೇಂಗಾ)
04-05-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1610)
ಒಂದು ವಾರದ ಡೆಲಿವರಿ	1615 (1605)
ಪಾಮ್ ವಾರದ ಡೆಲಿವರಿ	1458 (1453)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1555)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,47,000 (1,49,000)
ಬೆಳ್ಳಿ ಕೆ.ಜಿಗೆ	2,40,000 (2,47,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ಆರ್.ಜೆ.ಲಕ್ಷ್ಮಮ್ಮ ಅವರು
ಸೋಮವಾರ ಮಧ್ಯಾಹ್ನ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯು ಕುಣಿಗಲ್ ತಾಲ್ಲೂಕು, ಕಸಬಾ ಹೋಬಳಿ ಕೆಂಕೆರೆ ಗ್ರಾಮದಲ್ಲಿರುವ ಫಾರ್ಮ್‌ಹೌಸ್‌ನಲ್ಲಿ ಮಂಗಳವಾರ ಮಧ್ಯಾಹ್ನ 12 ರಿಂದ 12:30ರ ವೇಳೆಗೆ ನಡೆಯಲಿದೆ.
ಇಂತಿ ದುಃಖತಪ್ತರು
ಶ್ರೀ ಈ ಚನ್ನಗಂಗಪ್ಪ ಮತ್ತು ಡಿ ಸುಜಾತ, ಶ್ರೀ ಈ ನಾಗರಾಜ್ ಮತ್ತು ಲತಾ, ಶ್ರೀ ಸರೋಜ ಮತ್ತು ಹೊನ್ನಸ್ವಾಮಿ ಹಾಗೂ ಮೊಮ್ಮಕ್ಕಳು.

15ನೇ ವರ್ಷದ ಪುಣ್ಯಸ್ಮರಣೆ



ಬಿ. ಮರಿಯಪ್ಪನವರು
(ಐಟಿಐ–ನಿವೃತ್ತ)
ನಿಧನ: 05–05–2011
ಕವಿತಾ ವೈನ್ ಸೆಂಟರ್
ವಿಜಯನಗರ, ಬೆಂಗಳೂರು–560040
ನಿಮ್ಮ ಪ್ರೀತಿ, ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ಆಶೀರ್ವಾದ ಎಂದೆಂದಿಗೂ ನಮ್ಮ ಮೇಲಿರಲಿ ಎಂದು ಆಶಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...
ಧರ್ಮಪತ್ನಿ– ಶ್ರೀಮತಿ ಹೆಚ್. ಎಸ್. ಜಯಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು. ಫೋ: 23154164

ರಸಗೊಬ್ಬರ ಸಬ್ಸಿಡಿ ಮೊತ್ತ ಬಜೆಟ್ ಅಂದಾಜಿಗಿಂತ ಹೆಚ್ಚು?

ನವದೆಹಲಿ (ಪಿಟಿಐ): 2026–27ನೆಯ ಸಾಲಿನಲ್ಲಿ ಕೇಂದ್ರ ಸರ್ಕಾರವು ರಸಗೊಬ್ಬರಗಳ ಸಬ್ಸಿಡಿಗೆ ವೆಚ್ಚ ಮಾಡುವ ಮೊತ್ತವು ಬಜೆಟ್ ಅಂದಾಜಿನ ₹1.71 ಲಕ್ಷ ಕೋಟಿಗಿಂತ ಜಾಸ್ತಿ ಆಗುವ ಸಾಧ್ಯತೆ ಇದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಯೂರಿಯಾ ಹಾಗೂ ಇತರ ರಸಗೊಬ್ಬರಗಳ ಆಮದು ವೆಚ್ಚವು ಜಾಸ್ತಿ ಆಗುತ್ತಿರುವುದು ಇದಕ್ಕೆ ಕಾರಣ. 'ವೆಚ್ಚಗಳು ಜಾಸ್ತಿ ಆಗಿವೆ. ಯೂರಿಯಾ ಹಾಗೂ ಇತರ ರಸಗೊಬ್ಬರಗಳ ವೆಚ್ಚವು ಏರುಗತಿಯಲ್ಲಿ ಇದೆ. ಆದರೆ ಎಷ್ಟರ-ಮಟ್ಟಿಗೆ ಹೆಚ್ಚಳ ಆಗಲಿದೆ ಎಂಬುದನ್ನು ಈಗಲೇ ಹೇಳಲಾಗದು' ಎಂದು ರಸಗೊಬ್ಬರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅಪರ್ಣಾ ಎಸ್. ಶರ್ಮಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಪೂರೈಕೆ ವ್ಯವಸ್ಥೆಯಲ್ಲಿ ಅಡ್ಡಿಗಳು ಸೃಷ್ಟಿಯಾಗಿದ್ದರೂ ಮುಂಗಾರು ಹಂಗಾಮಿಗೆ ರಸಗೊಬ್ಬರಗಳ ಲಭ್ಯತೆಯು ಚೆನ್ನಾಗಿಯೇ ಇರಲಿದೆ, ಸ್ಥಿರವಾಗಿಯೂ ಇರಲಿದೆ ಎಂದು ಅಪರ್ಣಾ ಅವರು ಹೇಳಿದ್ದಾರೆ.

ಮಾರ್ಚ್–ಏಪ್ರಿಲ್ ಅವಧಿಯಲ್ಲಿ ರಸಗೊಬ್ಬರಗಳ ಉತ್ಪಾದನೆಯು 67.76 ಲಕ್ಷ ಟನ್ ಆಗಿದೆ. ಅಲ್ಲದೆ, 17 ಲಕ್ಷ ಟನ್ ರಸಗೊಬ್ಬರವನ್ನು ಆಮದು ಮಾಡಿಕೊಳ್ಳಲಾಗಿದೆ. ಮೇ ತಿಂಗಳಿನಲ್ಲಿ ರಸಗೊಬ್ಬರ ಉತ್ಪಾದನೆಯು 22 ಲಕ್ಷ ಟನ್ ಆಗಬೇಕು ಎಂಬ ಗುರಿಯನ್ನು ಇಲಾಖೆಯು ನಿಗದಿ ಮಾಡಿಕೊಂಡಿದೆ. ಸ್ಥಗಿತಗೊಂಡಿದ್ದ ಕೆಲವು ಯೂರಿಯಾ ಉತ್ಪಾದನಾ ಘಟಕಗಳು ಮತ್ತೆ ಕಾರ್ಯಾಚರಣೆ ಆರಂಭಿಸಲಿವೆ ಎಂದು ಕೂಡ ಅವರು ಮಾಹಿತಿ ನೀಡಿದ್ದಾರೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಪೂರೈಕೆ ಮೇಲೆ ಪರಿಣಾಮ
ಎಲ್‌ಪಿಜಿ ಬಳಕೆ: ಶೇ 16ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ದೇಶದಲ್ಲಿ ಎಲ್‌ಪಿಜಿ ಪೂರೈಕೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಿರುವ ಸಂದರ್ಭದಲ್ಲಿ, ಎಲ್‌ಪಿಜಿ ಬಳಕೆಯು ಏಪ್ರಿಲ್ ತಿಂಗಳಿನಲ್ಲಿ ಶೇ 16ರಷ್ಟು ಇಳಿಕೆ ಆಗಿದೆ ಎಂದು ಸರ್ಕಾರದ ಅಂಕಿ ಅಂಶಗಳು ಸೋಮವಾರ ತಿಳಿಸಿವೆ.

ಕಳೆದ ವರ್ಷದ ಏಪ್ರಿಲ್‌ನಲ್ಲಿ ದೇಶದಲ್ಲಿ 26.2 ಲಕ್ಷ ಟನ್‌ನಷ್ಟು ಎಲ್‌ಪಿಜಿ ಬಳಕೆಯಾಗಿತ್ತು. ಅದು ಈ ಬಾರಿ 22 ಲಕ್ಷ ಟನ್‌ಗೆ ಇಳಿದಿದೆ. ಮಾರ್ಚ್‌ನಲ್ಲಿ ಇದು 23.7 ಲಕ್ಷ ಟನ್‌ನಷ್ಟಿತ್ತು ಎಂದು ಕೇಂದ್ರ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕ (ಪಿಪಿಎಸಿ) ತಿಳಿಸಿದೆ.

ಸಂಘರ್ಷದಿಂದಾಗಿ ಹೊರ್ಮುಜ್ ಜಲಸಂಧಿಯಲ್ಲಿ ಎಲ್‌ಪಿಜಿ ಸಾಗಣೆಗೆ ಅಡಚಣೆ ಉಂಟಾಯಿತು. ಹೀಗಾಗಿ, ಕೇಂದ್ರ ಸರ್ಕಾರವು ಮನೆಗಳಿಗೆ ಸಿಲಿಂಡರ್ ಪೂರೈಕೆ ಮಾಡಲು, ಹೋಟೆಲ್ ಮತ್ತು ಕೈಗಾರಿಕೆಗಳಲ್ಲಿ ಬಳಸುವ ವಾಣಿಜ್ಯ ಸಿಲಿಂಡರ್ ಪೂರೈಕೆ ಪ್ರಮಾಣವನ್ನು ಕಡಿತಗೊಳಿಸಿತು.

ಸಂಘರ್ಷದಿಂದ ಹಲವು ಕೊಲ್ಲಿ ರಾಷ್ಟ್ರಗಳಲ್ಲಿ ವಾಯು-ಪ್ರದೇಶವನ್ನು ಮುಚ್ಚಲಾಯಿತು. ಅಲ್ಲದೆ, ವಿಮಾನಗಳ ಹಾರಾಟ ರದ್ದುಗೊಂಡಿತು. ಇದರಿಂದ ವಿಮಾನ ಇಂಧನದ ಬಳಕೆಯು ಶೇ 1.37ರಷ್ಟು ಇಳಿಕೆಯಾಗಿ, 7.61 ಲಕ್ಷ ಟನ್‌ನಷ್ಟು ಆಗಿದೆ. ಮಾರ್ಚ್‌ನಲ್ಲಿ ಇದು 8.07 ಲಕ್ಷ ಟನ್‌ನಷ್ಟಿತ್ತು ಎಂದು ತಿಳಿಸಿದೆ.

ಏಪ್ರಿಲ್‌ನಲ್ಲಿ 82.8 ಲಕ್ಷ ಟನ್ ಡೀಸೆಲ್ ಮತ್ತು 36.7 ಲಕ್ಷ ಟನ್ ಪೆಟ್ರೋಲ್ ಮಾರಾಟವಾಗಿದೆ. ಇದು ಮಾರ್ಚ್ ತಿಂಗಳಿನಲ್ಲಿ ಕ್ರಮವಾಗಿ 87.2 ಲಕ್ಷ ಟನ್ ಮತ್ತು 37.8 ಲಕ್ಷ ಟನ್‌ನಷ್ಟಿತ್ತು ಎಂದು ತಿಳಿಸಿದೆ.

ನಷ್ಟ ಭರ್ತಿ ಪ್ರಸ್ತಾವ ಇಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ಮತ್ತು ವಿಮಾನ ಇಂಧನವನ್ನು (ಎಟಿಎಫ್) ಮಾರುಕಟ್ಟೆ ಬೆಲೆಗಿಂತ ಕಡಿಮೆಗೆ ಮಾರಾಟ ಮಾಡುತ್ತಿರುವುದರಿಂದಾಗಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳಿಗೆ ಆಗುತ್ತಿರುವ ನಷ್ಟವನ್ನು ಭರ್ತಿಮಾಡಿಕೊಡುವ ಆಲೋಚನೆ ಇಲ್ಲ ಎಂದು ಕೇಂದ್ರದ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಕಂಡಿದೆ. ಆದರೆ ದೇಶದ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಕಚ್ಚಾ ತೈಲದ ಬೆಲೆ ಹೆಚ್ಚಳಕ್ಕೆ ಅನುಗುಣವಾಗಿ ಜಾಸ್ತಿ ಮಾಡಿಲ್ಲ. ಹೀಗಾಗಿ, ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಂಪನಿಗಳು ನಷ್ಟ ಅನುಭವಿಸುತ್ತಿವೆ.

'ತೈಲ ಉತ್ಪನ್ನಗಳ ಮಾರಾಟ ಕಂಪನಿಗಳಿಗೆ ನೆರವು ಒದಗಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ.

ಬಿಎಚ್‌ಇಎಲ್‌ಗೆ ₹1,290 ಕೋಟಿ ಲಾಭ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್) ₹1,290 ಕೋಟಿ ನಿವ್ವಳ ಲಾಭ ಗಳಿಸಿದೆ.

2024–25ರ ಆರ್ಥಿಕ ವರ್ಷದಲ್ಲಿ ಕಂಪನಿಯು ₹504 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣವು 2.5 ಪಟ್ಟಿಗಿಂತಲೂ ಹೆಚ್ಚಳವಾಗಿದೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಒಟ್ಟು ವರಮಾನವು ₹9,142 ಕೋಟಿಯಿಂದ ₹12,553 ಕೋಟಿಗೆ ಹೆಚ್ಚಳವಾಗಿದೆ. ವಿದ್ಯುತ್ ವಿಭಾಗದ ವರಮಾನವು ₹6,192 ಕೋಟಿಯಿಂದ ₹9,509 ಕೋಟಿಗೆ ತಲುಪಿದೆ. ಇದು ಲಾಭ ಏರಿಕೆಗೆ ಕಾರಣವಾಗಿದೆ.

ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು ₹1,600 ಕೋಟಿ ಲಾಭ ಗಳಿಸಿದೆ. 2024–25ರಲ್ಲಿ ಇದು ₹533 ಕೋಟಿಯಷ್ಟಾಗಿ-ತ್ತು. ಒಟ್ಟು ವರಮಾನವು ₹34,589 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ತಯಾರಿಕಾ ವಲಯದ ಚಟುವಟಿಕೆ ಏರಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆ ಏಪ್ರಿಲ್ ತಿಂಗಳಿನಲ್ಲಿ ಸ್ವಲ್ಪ ಏರಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷೆ ಸೋಮವಾರ ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು (ಪಿಎಂಐ) ಮಾರ್ಚ್‌ನಲ್ಲಿ 53.9 ಇತ್ತು. ಏಪ್ರಿಲ್‌ನಲ್ಲಿ ಅದು 54.7ಕ್ಕೆ ಏರಿಕೆ ಆಗಿದೆ ಎಂದು ಹೇಳಿದೆ.

ವಲಯದ ಸರಕುಗಳಿಗೆ ಹೊಸ ಕಾರ್ಯಾದೇಶ ಬರುವುದು ಮತ್ತು ಉತ್ಪಾದನೆಯು ಹೆಚ್ಚಳವಾಗಿದೆ. ಇದು ವಲಯದ ಬೆಳವಣಿಗೆಗೆ ಕಾರಣ ಎಂದು ತಿಳಿಸಿದೆ.

ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತವೆಂದು ಕಾಣಲಾಗುತ್ತದೆ.

'ಏಪ್ರಿಲ್‌ನಲ್ಲಿ ತಯಾರಿಕಾ ವಲಯದ ಚಟುವಟಿಕೆ ಪ್ರಗತಿ ಸಾಧಿಸಿದೆ. ಆದರೆ, ಇದು ನಾಲ್ಕು ವರ್ಷಗಳಲ್ಲಿ ಎರಡನೇ ಅತಿ ನಿಧಾನವಾದ ಬೆಳವಣಿಗೆ ಆಗಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಹಣದುಬ್ಬರದ ಮೇಲೆ ಪರಿಣಾಮ ಬೀರಿದೆ. ಇದರಿಂದ ತಯಾರಿಕಾ ವೆಚ್ಚ ಹೆಚ್ಚಳವು ನಾಲ್ಕು ವರ್ಷಗಳ ತ್ವರಿತ ಏರಿಕೆಯನ್ನು ದಾಖಲಿಸಿದೆ. ಉದ್ಯೋಗ ಸೃಷ್ಟಿ ಸ್ವಲ್ಪ ಹೆಚ್ಚಳವಾಗಿದೆ. ಆಸ್ಟ್ರೇಲಿಯಾ, ಫ್ರಾನ್ಸ್, ಜಪಾನ್, ಸೌದಿ ಅರೇಬಿಯಾ ಸೇರಿದಂತೆ ವಿವಿಧ ದೇಶಗಳಿಂದ ಬೇಡಿಕೆ ಉತ್ತಮವಾಗಿತ್ತು ಎಂದಿದ್ದಾರೆ.

9,023 ಟನ್ ಸೂರ್ಯಕಾಂತಿ ಖರೀದಿಗೆ ಒಪ್ಪಿಗೆ

ನವದೆಹಲಿ: ಬೆಂಬಲ ಬೆಲೆ ಕುಸಿತದ ಹಿನ್ನೆಲೆಯಲ್ಲಿ ಕರ್ನಾಟಕದ 9,023 ಟನ್ ಸೂರ್ಯಕಾಂತಿ ಖರೀದಿಗೆ ಕೇಂದ್ರ ಕೃಷಿ ಸಚಿವಾಲಯ ಒಪ್ಪಿಗೆ ನೀಡಿದೆ.

ರಾಜ್ಯದ ಪ್ರಸ್ತಾವದಂತೆ ಸೂರ್ಯಕಾಂತಿ ಬೆಳೆಗಾರರಿಗೆ ಆಸರೆಯಾಗುವಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಈ ಹಿಂದೆ ಕೇಂದ್ರ ಕೃಷಿ ಸಚಿವರು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಗಮನ ಸೆಳೆದಿದ್ದರು.

ಚುನಾವಣೆ ಫಲಿತಾಂಶ: ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಹೂಡಿಕೆದಾರರು ಬ್ಲೂಚಿಪ್ ಷೇರುಗಳನ್ನು ಖರೀದಿಸಿದ್ದುದು, ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶವು ಮಾರುಕಟ್ಟೆಯ ನಿರೀಕ್ಷೆಗಳಿಗೆ ಅನುಗುಣವಾಗಿ ಇದ್ದಿದ್ದು ಸೋಮವಾರದ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 356 ಅಂಶ ಏರಿಕೆ ಕಂಡಿತು, ರಾಷ್ಟ್ರೀಯ ಷೇರುಪೇಟೆಯ ನಿಫ್ಟಿ ಸೂಚ್ಯಂಕವು 121 ಅಂಶ ಜಿಗಿಯಿತು.

'ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶವು ಹೂಡಿಕೆದಾರರ ನಿರೀಕ್ಷೆಗೆ ಪೂರಕವಾಗಿತ್ತು, ಕಂಪನಿಗಳ ನಾಲ್ಕನೆಯ ತ್ರೈಮಾಸಿಕದ ಹಣಕಾಸು ಫಲಿತಾಂಶವು ನಿರೀಕ್ಷೆಗಿಂತ ಉತ್ತಮವಾಗಿದೆ. ಇವು ಮಾರುಕಟ್ಟೆ ಏರಿಕೆಗೆ ಕಾರಣ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಐದು ವಿಧಾನಸಭೆಗಳ ಪೈಕಿ ಮೂರರಲ್ಲಿ ಬಿಜೆಪಿ ಪ್ರಾಬಲ್ಯ ಸಾಧಿಸಿರುವುದು ರಾಜಕೀಯ ಸ್ಥಿರತೆಗೆ ಬಲ ನೀಡಲಿದೆ. ಜಿಎಸ್‌ಟಿ ಸಂಗ್ರಹ ಜಾಸ್ತಿ ಆಗಿರುವುದು ಹಾಗೂ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದಲ್ಲಿ ವಾಹನಗಳ ಮಾರಾಟ ಆಗಿರುವುದು ಬೇಡಿಕೆ ಚೆನ್ನಾಗಿ ಇದೆ ಎಂಬುದನ್ನು ಹೇಳುತ್ತಿವೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಪತ್ತು ನಿರ್ವಹಣಾ ವಿಭಾಗದ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ತಿಳಿಸಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 39 ಪೈಸೆ ಕುಸಿದಿದೆ. ವಹಿವಾಟಿನ ಅಂತ್ಯದ ವೇಳೆಗೆ ಮೌಲ್ಯವು 95.23 ಆಗಿದೆ. ಇದು ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs
ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆಯಿಲ್ಲದ ವರಿಗೂ. 20,000 / 25,000 ಕೊರಿಯರ್, 7090177446

Marketing & Sales
Job Opportunities with Hinduja Housing Finance
We have opportunities for Branch Sales Manager positions at multiple locations.
Position: Branch Sales Manager
• 2-3 years of experience required
• Graduate in any discipline
• Salary: ₹3 LPA - ₹5 LPA
Salary will be determined based on experience and performance.
Locations: Bangalore
Interested candidates can send their CV to mohan.h@hindujahousingfinance.com, swati.reddy@hindujahousingfinance.com
You can directly submit your application via email.
9513375225, 8217872910

Wanted
ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080-25300714

General
ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

WISDOM'S CHOICE: Required Male Candidates (Freshers), 2nd PUC or any degree, Age: Below 40years, Salary: Rs.20000/ month, Contact: 9980298940

ಪ್ರವಾಸ

Travel
22.5.2026 ನೇಪಾಳ ಮುಕ್ತಿನಾಥ ಕಾಶಿ ವೈದ್ಯನಾಥ (ವಿಮಾನ) 9.6.26 ಶಿರಡಿ ಮೂರು ಜ್ಯೋತಿರ್ಲಿಂಗ (ವಿಮಾನ) 19.6.26 ರಾಜಸ್ಥಾನ ವಿಮಾನ ಪ್ರವಾಸ ಮಲ್ಲಿಕಾರ್ಜುನ ಪ್ಯಾಕೇಜ್ ಮೊ: 8496044942/ 8277409101

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಲಿಪುಲೇಖ್ ಪಾಸ್' ನಮ್ಮದೇ– ನೇಪಾಳ

ಕಠ್ಮಂಡು (ಪಿಟಿಐ): 'ಲಿಪುಲೇಖ್ ಪಾಸ್' ಮೇಲಿನ ತನ್ನ ಪ್ರಾದೇಶಿಕ ಹಕ್ಕು ಪ್ರತಿಪಾದಿಸಿರುವ ನೇಪಾಳವು ಈ ವಿಚಾರದಲ್ಲಿ ಭಾರತದೊಂದಿಗೆ ಮಾತುಕತೆ ನಡೆಸಲು ನಿರ್ಧರಿಸಿದೆ.

ಮುಂಬರುವ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಭಾರತ 'ಲಿಪುಲೇಖ್ ಪಾಸ್' ಮೂಲಕ ನಡೆಸಲು ಯೋಜಿಸು-ತ್ತಿರುವುದಕ್ಕೆ ನೇಪಾಳ ಭಾನುವಾರ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಆಕ್ಷೇಪಣೆಯನ್ನು ತಳ್ಳಿಹಾಕಿದ್ದ ಭಾರತ, ಉತ್ತರಾಖಂಡದ ಲಿಪುಲೇಖ್ ಪಾಸ್ ಮೂಲಕ ದಶಕಗಳಷ್ಟು (1954) ಹಿಂದಿನಿಂದಲೂ ಕೈಲಾಸ ಮಾನಸ ಸರೋವರ ಯಾತ್ರೆ ನಡೆದುಕೊಂಡು ಬಂದಿದೆ. ಇದು ಅತ್ಯಂತ ಹಳೆಯ ಮಾರ್ಗ ಎಂದು ಕಟುವಾಗಿ ಪ್ರತಿಕ್ರಿಯೆ ನೀಡಿತ್ತು. 'ನೇಪಾಳವು ತನ್ನ ಗಡಿಯನ್ನು ವಿಸ್ತರಿಸುವ ಉದ್ದೇಶ ಹೊಂದಿಲ್ಲ. 'ಲಿಪುಲೇಖ್ ಪಾಸ್' ನೇಪಾಳಕ್ಕೆ ಸೇರಿದ್ದಾಗಿದ್ದು, ನಮ್ಮ ನಿಲುವಿಗೆ ಬದ್ಧವಾ-ಗಿದ್ದೇವೆ' ಎಂದು ಸರ್ಕಾರದ ವಕ್ತಾರ, ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಸಸ್ಮಿತ್ ಪೊಖಾರೆಲ್ ತಿಳಿಸಿದ್ದಾರೆ.

'ಎರಡು ದೇಶಗಳ ನಡುವಿನ ಸಹಯೋಗ ಹಾಗೂ ರಾಜತಾಂತ್ರಿಕ ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆ-ಹರಿಸಲಾಗುವುದು' ಎಂದು ತಿಳಿಸಿದ್ದಾರೆ.

ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಬೆಳ್ಳಿ ದರವು ಏರಿಕೆಯಾಗಿದ್ದರೆ, ಚಿನ್ನದ ದರವು ಇಳಿದಿದೆ.

ಬೆಳ್ಳಿ ದರವು ಕೆ.ಜಿಗೆ ₹6,800 ಹೆಚ್ಚಳವಾಗಿ, ₹2,49,500ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ಬೆಲೆಯು ₹2 ಸಾವಿರ ಕಡಿಮೆಯಾಗಿ, ₹1,52,800 ಆಗಿದೆ.

ಆಭರಣ ತಯಾರಕರು ಮತ್ತು ದಾಸ್ತಾನುಗಾರರಿಂದ ಖರೀದಿ ಹೆಚ್ಚಳವಾಗಿದೆ. ಹೀಗಾಗಿ ಬೆಳ್ಳಿ ದರವು ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ತರಕಾರಿ ಸಾಗಾಟ

ಪಿಟಿಐ ಚಿತ್ರ

ಹರಿಯಾಣದ ಗುರುಗ್ರಾಮದಲ್ಲಿ ಮಳೆಯಿಂದ ಆವೃತವಾದ ರಸ್ತೆಯಲ್ಲಿ ಕಾರ್ಮಿಕರು ತರಕಾರಿಗಳನ್ನು ಸಾಗಿಸಿದರು

ಹಂಟಾವೈರಸ್: ಮೂವರು ಸಾವು

ಕೇಪ್ ಟೌನ್ (ಎಪಿ): ಸುಮಾರು 150 ಪ್ರಯಾಣಿಕರೊಂದಿಗೆ ಅಟ್ಲಾಂಟಿಕ್ ಸಾಗರದ ಕೇಪ್ ವರ್ಡ್ ಕರಾವಳಿಯ ಬಳಿ ಸಾಗುತ್ತಿರುವ ಡಚ್ ವಿಹಾರ ನೌಕೆಯೊಂದರಲ್ಲಿ ಅತಿವಿರಳ 'ಹಂಟಾವೈರಸ್' ಸೋಂಕು ಕಾಣಿಸಿಕೊಂಡಿದೆ.

ಈ ಸೋಂಕಿನಿಂದಾಗಿ ಹಡಗಿನಲ್ಲಿದ್ದ ಮೂವರು ಮೃತಪಟ್ಟಿದ್ದು, ಕನಿಷ್ಠ ಮೂವರು ಗಂಭೀರವಾಗಿ ಅಸ್ವಸ್ಥಗೊಂಡಿದ್ದಾರೆ. ಪ್ರಸ್ತುತ ಹಡಗು ಸಹಾಯಕ್ಕಾಗಿ ಕಾಯುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮತ್ತು ಹಡಗಿನ ನಿರ್ವಾಹಕರು ತಿಳಿಸಿದ್ದಾರೆ.

ಅರ್ಜೆಂಟೀನಾದಿಂದ ಅಂಟಾರ್ಕ್ಟಿಕಾ ಮತ್ತು ದಕ್ಷಿಣ ಅಂಟ್ಲಾಂಟಿಕ್‌ನ ದ್ವೀಪಗಳಿಗೆ ವಾರಗಳ ಕಾಲ ಪ್ರವಾಸದಲ್ಲಿದ್ದ 'ಎಂವಿ ಹೊಂಡಿಯಸ್' ಹಡಗು ಪಶ್ಚಿಮ ಆಫ್ರಿಕಾದ ಕೇಪ್ ವರ್ಡ್ ದ್ವೀಪಕ್ಕೆ ಬಂದ ನಂತರ ಅಲ್ಲಿನ ಆರೋಗ್ಯ ಅಧಿಕಾರಿಗಳ ಸಹಾಯ ಕೋರಿದೆ.

ತಕ್ಷಣದಿಂದಲೇ ಕಾರ್ಯಾಚರಣೆ ಆರಂಭ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ
ಹೊರ್ಮುಜ್: ಹಡಗುಗಳಿಗೆ ಮಾರ್ಗದರ್ಶನ

ದುಬೈ (ಎಪಿ): ಇರಾನ್‌ನ ಹಿಡಿತದ-ಲ್ಲಿರುವ ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ ಹಡಗುಗಳ ಸುಗಮ ಸಂಚಾರಕ್ಕೆ ತಕ್ಷಣದಿಂದಲೇ ಸೂಕ್ತ ಮಾರ್ಗದರ್ಶನ ನೀಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್

'ಇರಾನ್ ಯುದ್ಧದಿಂದಾಗಿ 'ತಟಸ್ಥ ಹಾಗೂ ಅಮಾಯಕ' ದೇಶಗಳು ದುಷ್ಪರಿಣಾಮ ಎದುರಿಸುತ್ತಿವೆ. ನಿರ್ಬಂಧಿತ ಜಲಮಾರ್ಗದಿಂದ ಈ ದೇಶಗಳಿಗೆ ಹಡಗುಗಳು ಸುರಕ್ಷಿತವಾಗಿ ಸಂಚರಿಸುವಂತೆ ನಾವು ಮಾರ್ಗದರ್ಶನ ನೀಡಲಿದ್ದೇವೆ. ಇದರಿಂದಾಗಿ ಅವರು ಮುಕ್ತವಾಗಿ ಮತ್ತು ಸಮರ್ಥವಾಗಿ ತಮ್ಮ ವ್ಯವಹಾರ ಮುಂದುವರಿಸಬಹುದು' ಎಂದು ಟ್ರಂಪ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

'ಪಶ್ಚಿಮ ಏಷ್ಯಾದಲ್ಲಿ ತಕ್ಷಣದಿಂದಲೇ 'ಪ್ರಾಜೆಕ್ಟ್ ಫ್ರೀಡಂ' ಶುರುವಾಗಲಿದೆ. ನಮ್ಮ ಪ್ರತಿನಿಧಿಗಳು ಇರಾನ್‌ನೊಂದಿಗೆ ಮಾತುಕತೆಯನ್ನು ನಡೆಸುತ್ತಿದ್ದಾರೆ. ಎಲ್ಲರಿಗೂ ಇದು ತುಂಬಾ ಸಕಾರಾತ್ಮಕವಾಗಿರಲಿದೆ' ಎಂದು ಹೇಳಿದ್ದಾರೆ.

ನೂರಾರು ಹಡಗುಗಳು ಹಾಗೂ ಅದರೊಳಗಿರುವ 20 ಸಾವಿರಕ್ಕೂ ಹೆಚ್ಚು ಸಿಬ್ಬಂದಿಗೆ ಯಾವ ರೀತಿ ನೆರವು ಒದಗಿಸಲಾ-ಗುವುದು ಎಂಬುದರ ಬಗ್ಗೆ ಟ್ರಂಪ್ ಅವರು ಕೆಲ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

ಜಲಸಂಧಿಯ ಸುತ್ತಮುತ್ತಲಿದ್ದ ಎರಡು ಹಡಗುಗಳ ಮೇಲೆ ದಾಳಿ ನಡೆದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಕ್ರಮವು ಕದನ ವಿರಾಮದ ಉಲ್ಲಂಘನೆ ಎಂದು ಇರಾನ್ ಹೇಳಿದೆ.

ಅರಾಘ್ಚಿ– ದಾರ್ ಮಾತುಕತೆ

ಇಸ್ಲಾಮಾಬಾದ್ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ಹಾಗೂ ಸ್ಥಿರತೆಗಾಗಿ ಇಸ್ಲಾಮಾಬಾದ್‌ನ ರಾಜತಾಂತ್ರಿಕ ಪ್ರಯತ್ನಗಳ ಭಾಗವಾಗಿ ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಅವರು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾರ್ ಹಾಗೂ ಅರಾಘ್ಚಿ ಅವರು ಭಾನುವಾರ ತಡರಾತ್ರಿ ದೂರವಾಣಿ ಸಂಭಾಷಣೆ ನಡೆಸಿದರು ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಇರಾನ್ ಹಡಗಿನಲ್ಲಿದ್ದ 22 ಸಿಬ್ಬಂದಿ ಪಾಕ್‌ಗೆ ಸ್ಥಳಾಂತರ

ಇಸ್ಲಾಮಾಬಾದ್ (ಪಿಟಿಐ): ಅಮೆರಿಕ ಪಡೆಗಳು ಏಪ್ರಿಲ್ 19ರಂದು ವಶಪಡಿಸಿಕೊಂಡಿದ್ದ ಇರಾನ್‌ನ ಹಡಗಿನಲ್ಲಿದ್ದ 22 ಸಿಬ್ಬಂದಿಯನ್ನು ಪಾಕಿಸ್ತಾನಕ್ಕೆ ಸ್ಥಳಾಂತರಿಸಲಾಗಿದೆ ಎಂದು ಪಾಕ್ ವಿದೇಶಾಂಗ ಕಚೇರಿ ಸೋಮವಾರ ಹೇಳಿದೆ.

ಅಮೆರಿಕ ಮತ್ತು ಇರಾನ್ ನಡುವೆ ವಿಶ್ವಾಸ ಮರುಸ್ಥಾಪಿಸುವ ನಿಟ್ಟಿನಲ್ಲಿ ಅಮೆರಿಕ ಪಡೆಗಳು ತಮ್ಮ ವಶದಲ್ಲಿದ್ದ ಸಿಬ್ಬಂದಿಯನ್ನು ಪಾಕಿಸ್ತಾನಕ್ಕೆ ಕಳುಹಿಸಿವೆ, ಅವರನ್ನು ಇರಾನ್‌ಗೆ ಕಳುಹಿಸಲಾಗುವುದು ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಜತೆಗೆ ಇರಾನ್ ಹಡಗು ಕೂಡ ಶೀಘ್ರವೇ ಪಾಕಿಸ್ತಾನಕ್ಕೆ ಬರಲಿದ್ದು, ಅಗತ್ಯ ದುರಸ್ತಿಯ ಬಳಿಕ ಇರಾನ್‌ಗೆ ಕಳುಹಿಸಲಾಗುವುದು ಎಂದೂ ತಿಳಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ಪರಸ್ಪರ ಸಹಕಾರದೊಂದಿಗೆ ಈ ಕ್ರಮ ಕೈಗೊಂಡಿವೆ. ಉಭಯ ರಾಷ್ಟ್ರಗಳಲ್ಲಿ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಮುಂದಿನ ಮಾತುಕತೆಗೆ ಮಧ್ಯಸ್ಥಿಕೆ ವಹಿಸಲಾಗುವುದು ಎಂದು ಪಾಕ್ ವಿದೇಶಾಂಗ ಸಚಿವ ಇಶಾಕ್ ದಾರ್ ಹೇಳಿದ್ದಾರೆ.

ನೌಕಾ ಹಡಗಿನ ಮೇಲೆ ದಾಳಿ: ಅಲ್ಲಗಳೆದ ಅಮೆರಿಕ

ದುಬೈ (ಎಪಿ): ಹೊರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ನೌಕಾಪಡೆಯ ಹಡಗೊಂದರ ಮೇಲೆ ದಾಳಿ ನಡೆಸಲಾಗಿದೆ ಎಂಬ ಇರಾನ್ ಹೇಳಿಕೆಯನ್ನು ಅಮೆರಿಕದ ಸೇನೆ ಸೋಮವಾರ ತಳ್ಳಿಹಾಕಿದೆ. ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ ವಾಣಿಜ್ಯ ಹಡಗುಗಳು ಸಾಗಲು ನೆರವು ನೀಡುವುದಾಗಿ ಅಮೆರಿಕ ಹೇಳಿತ್ತು.

'ಜಲಸಂಧಿಯ ಆಗ್ನೇಯದಲ್ಲಿರುವ ಇರಾನ್‌ನ ಬಂದರಿನಲ್ಲಿ ಅಮೆರಿಕದ ನೌಕಾ ಹಡಗಿನ ಮೇಲೆ ಇರಾನ್ ದಾಳಿ ನಡೆಸಿದೆ. ಕಡಲ ತೀರದ ಭದ್ರತೆ ಮತ್ತು ಸಂಚಾರಿ ನಿಯಮಗಳ ಉಲ್ಲಂಘನೆ ಆರೋಪದ ಮೇಲೆ ದಾಳಿ ನಡೆಸಿದೆ' ಎಂದು ಇರಾನ್‌ನ ಮಾಧ್ಯಮಗಳು ವರದಿ ಮಾಡಿವೆ. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪ್ರತಿಕ್ರಿಯಿಸಿರುವ ಅಮೆರಿಕದ ಕೇಂದ್ರೀಯ ಕಮಾಂಡ್, 'ದೇಶದ ನೌಕಾಪಡೆಯ ಯಾವುದೇ ಹಡಗಿನ ಮೇಲೆ ದಾಳಿ ನಡೆದಿಲ್ಲ' ಎಂದು ಹೇಳಿದೆ.

ವಿಚಾರಣೆ ಪ್ರಗತಿ ವರದಿ ಕೇಳಿದ 'ಸುಪ್ರೀಂ'

ರೇಣುಕಸ್ವಾಮಿ ಕೊಲೆ ಪ್ರಕರಣ; ಜಾಮೀನು ಕೋರಿ ರಿಟ್ ಅರ್ಜಿ ಸಲ್ಲಿಸಿದ್ದ ದರ್ಶನ್

ಪ್ರಜಾವಾಣಿ ವಾರ್ತೆ

ನವದೆಹಲಿ: ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆಯ ಸ್ಥಿತಿಗತಿಯ ವರದಿ ಸಲ್ಲಿಸುವಂತೆ ಬೆಂಗಳೂರಿನ ವಿಚಾರಣಾ ನ್ಯಾಯಾಲಯಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಜಾಮೀನು ಕೋರಿ ನಟ ದರ್ಶನ್ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ವಿಜಯ್ ಬಿಷ್ಣೋಯ್ ಅವರ ಪೀಠವು, 'ಎಷ್ಟು ಸಾಕ್ಷಿಗಳನ್ನು ವಿಚಾರಣೆ ಮಾಡಲಾಗಿದೆ, ಎಷ್ಟು ಸಾಕ್ಷಿಗಳ ವಿಚಾರಣೆ ಬಾಕಿ ಇದೆ ಮತ್ತು ವಿಚಾರಣೆ ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆ ಎಂಬುದನ್ನು ಒಳಗೊಂಡಂತೆ ವಿಚಾರಣೆಯ ಸ್ಥಿತಿಗತಿ ವರದಿ ಸಲ್ಲಿಸಬೇಕು' ಎಂದು ಸೂಚಿಸಿದೆ.

ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, 'ದರ್ಶನ್ ಅವರಿಗೆ ನೀಡಿದ್ದ ಜಾಮೀನನ್ನು 2025ರ ಆಗಸ್ಟ್ 14ರಂದು ರದ್ದುಗೊಳಿಸಲಾಗಿತ್ತು. ಅವರು ಒಟ್ಟು ಒಂದು ವರ್ಷ ಜೈಲಿನಲ್ಲಿ ಕಳೆದಿದ್ದಾರೆ' ಎಂದರು.

ಮುಖ್ಯಾಂಶಗಳು

- ಎಷ್ಟು ಸಾಕ್ಷಿಗಳ ವಿಚಾರಣೆ ಬಾಕಿ ಇದೆ?
- ವಿಚಾರಣೆ ಪೂರ್ಣಗೊಳಿಸಲು ಎಷ್ಟು ಸಮಯ ಬೇಕು?
- ಈ ಎಲ್ಲಾ ಮಾಹಿತಿ ಕೇಳಿದ ನ್ಯಾಯಾಲಯ

'ಆರೋಪಿಗಳಿಗೆ ಜೈಲಿನಲ್ಲಿ ವಿಶೇಷ ಅಥವಾ ಫೈವ್ ಸ್ಟಾರ್ ಆತಿಥ್ಯ ನೀಡಬಾರದು ಎಂದು ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಿತ್ತು. ಆದರೆ, ದರ್ಶನ್ ಅವರಿಗೆ ವಿಚಾರಣಾಧೀನ ಕೈದಿಗೆ ನೀಡಲಾಗುವ ಮೂಲಭೂತ ಸೌಲಭ್ಯಗಳನ್ನು ನಿರಾಕರಿಸಲಾಗಿದೆ. ಸುಪ್ರೀಂ ಕೋರ್ಟ್ ಆದೇಶದಿಂದಾಗಿ ದರ್ಶನ್ ಅವರನ್ನು ಪ್ರತ್ಯೇಕ ಸೆಲ್‌ನಲ್ಲಿ ಇರಿಸಲಾಗಿದೆ. ಅವರಿಗೆ ಮೂಲಭೂತ ಸೌಲಭ್ಯ ಸಿಗುತ್ತಿಲ್ಲ' ಎಂದು ರೋಹಟಗಿ ಹೇಳಿದರು.

ಸಂಕ್ಷಿಪ್ತ ವಿಚಾರಣೆಯ ನಂತರ, ಪೀಠವು ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು. ದರ್ಶನ್ ಅವರಿಗೆ ನೀಡುತ್ತಿರುವ ಸೌಲಭ್ಯಗಳ ಬಗ್ಗೆ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಿತು.

ವಾರದೊಳಗೆ ವರದಿ ಸಲ್ಲಿಸುವಂತೆ ಸೂಚಿಸಿದ ಪೀಠವು, ವರದಿ ಬಂದ ಬಳಿಕ ಮುಂದಿನ ವಿಚಾರಣೆಯ ದಿನಾಂಕ ನಿಗದಿಪಡಿಸುವುದಾಗಿ ತಿಳಿಸಿತು.

'ಕೊಲೆ ಪ್ರಕರಣದಲ್ಲಿ 262 ಸಾಕ್ಷಿಗಳಿದ್ದಾರೆ. ಈ ಪೈಕಿ, ಕೇವಲ 10 ಸಾಕ್ಷಿಗಳನ್ನು ಮಾತ್ರ ವಿಚಾರಣೆ ನಡೆಸಲಾಗಿದೆ. ವಿಚಾರಣೆ ಪೂರ್ಣಗೊಳ್ಳಲು ಬಹಳ ಸಮಯ ತೆಗೆದುಕೊಳ್ಳಲಿದೆ. ಇದರಿಂದಾಗಿ, ಅರ್ಜಿದಾರರು ದೀರ್ಘ ಜೈಲು ಶಿಕ್ಷೆಗೆ ಒಳಗಾಗುತ್ತಾರೆ ಎಂಬುದು ಸ್ಪಷ್ಟವಾಗಿದೆ, ಇದರಿಂದಾಗಿ ಅವರ ವೈಯಕ್ತಿಕ ಸ್ವಾತಂತ್ರ್ಯ, ಘನತೆ ಮತ್ತು ಸಮಾನತೆ ಹಾಗೂ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತದೆ. ಹೀಗಾಗಿ, ದರ್ಶನ್ ಅವರಿಗೆ ಜಾಮೀನು ಮಂಜೂರು ಮಾಡಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

'ರಿಜಿಸ್ಟ್ರಿಯದ್ದು ಕೆಟ್ಟ ಸ್ವಭಾವ'

ತನ್ನ ಕಚೇರಿಯನ್ನೇ ಕಟು ಶಬ್ದಗಳಲ್ಲಿ ಟೀಕಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): 'ರಿಜಿಸ್ಟ್ರಿಯದ್ದು ಕೆಟ್ಟ ಸ್ವಭಾವ' ಎಂದು ಕಟು ಶಬ್ದಗಳಲ್ಲಿ ತನ್ನ ಕಚೇರಿಯನ್ನೇ ಸುಪ್ರೀಂ ಕೋರ್ಟ್ ಸೋಮವಾರ ಟೀಕಿಸಿದೆ.

'ರಿಜಿಸ್ಟ್ರಿಯಲ್ಲಿರುವ ಅಧಿಕಾರಿಗಳು ತಾವೇ ಭಾರತದ ಸೂಪರ್ ಮುಖ್ಯ ನ್ಯಾಯಮೂರ್ತಿಯಂತೆ ವರ್ತಿಸುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದೆ.

₹37 ಸಾವಿರ ಕೋಟಿಗೂ ಹೆಚ್ಚು ಮೊತ್ತದ ಹೂಡಿಕೆ ವಂಚನೆ ಪ್ರಕರಣದ ಆರೋಪಿಯಾಗಿರುವ ಆಯುಷಿ ಮಿತ್ತಲ್ ಅಲಿಯಾಸ್ ಆಯುಷಿ ಅಗರ್ವಾಲ್ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಅರ್ಜಿಯ ಕುರಿತಂತೆ ಮಾರ್ಚ್ 23ರಂದು ಹೊರಡಿಸಲಾದ ಆದೇಶವನ್ನು ಉಲ್ಲೇಖಿಸಿದ ಸಿಜೆಐ, ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡದ ಇತರರಿಗೆ ನ್ಯಾಯಪೀಠವು ನೋಟಿಸ್ ನೀಡಿಲ್ಲ ಎಂಬುದನ್ನು ರಿಜಿಸ್ಟ್ರಿಯ ಅಧಿಕಾರಿಗಳು ಹೇಗೆ ನಿರ್ಣಯಿಸಿದ್ದಾರೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

'ತುಂಬಾ ಕೆಟ್ಟ ಸ್ವಭಾವದ ರಿಜಿಸ್ಟ್ರಿ. ಇಲ್ಲಿ ಕುಳಿತಿರುವ ಪ್ರತಿಯೊಬ್ಬರೂ ತಮ್ಮನ್ನು ಭಾರತದ ಸೂಪರ್ ಮುಖ್ಯ ನ್ಯಾಯಮೂರ್ತಿ ಎಂದೇ ಭಾವಿಸಿಕೊಂಡಿದ್ದಾರೆ' ಎಂದು ಸಿಜೆಐ ಅವರು ಹೇಳಿದ್ದಾರೆ.

'ಮಾರ್ಚ್ 23ರಂದು ಪೀಠವು ಹೊರಡಿಸಿರುವ ಆದೇಶದಲ್ಲಿ ಇ.ಡಿ.ಗೆ ನೋಟಿಸ್ ನೀಡುವಂತೆ ಸೂಚಿಸಿಲ್ಲ ಎಂಬುದರ ಕುರಿತಂತೆ ನ್ಯಾಯಾಂಗದ ರಿಜಿಸ್ಟ್ರಾರ್ (ಸುಪ್ರೀಂ ಕೋರ್ಟ್) ಸತ್ಯಶೋಧನಾ ವಿಚಾರಣೆಯನ್ನು ಕೈಗೊಳ್ಳಲಿ. ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ನೀಡಲಿ' ಎಂದು ನ್ಯಾಯಪೀಠವು ಹೊಸ ಆದೇಶ ಹೊರಡಿಸಿದೆ.

ಕ್ರಿಮಿನಲ್ ಪ್ರಕರಣ ರದ್ದುಗೊಳಿಸುವಂತೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆ ಮತಗಳ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿದ ಬೆನ್ನಿಗೇ ಮತಗಳನ್ನು ತಿರುಚಿದ ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ ಬಿಜೆಪಿಯ ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಅರ್ಜಿಯು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠದ ಮುಂದೆ ಮಂಗಳವಾರ (ಮೇ 05) ವಿಚಾರಣೆಗೆ ನಿಗದಿಯಾಗಿದೆ.

'2023ರ ಮೇ 13ರಂದು ಮತ ಎಣಿಕೆ ಮುಗಿದ ಬಳಿಕ ಜೀವರಾಜ್, ಈ ಹಿಂದಿನ ಚುನಾವಣಾಧಿಕಾರಿ ವೇದಮೂರ್ತಿ ಮತ್ತು ಅಂದಿನ ಚಿಕ್ಕಮಗಳೂರು ಜಿಲ್ಲಾಧಿಕಾರಿ ರಮೇಶ್ ಸಂಚು ರೂಪಿಸಿ ಮತಪೆಟ್ಟಿಗೆಗಳ ಸೀಲು ತೆಗೆದು, ಟಿ.ಡಿ. ರಾಜೇಗೌಡ ಅವರಿಗೆ ಬಿದ್ದಿದ್ದ ಒಂದು ಕಟ್ಟಿನ 170 ಮತಗಳನ್ನು ತಿದ್ದಿದ್ದಾರೆ' ಎಂದು ಆರೋಪಿಸಿ ಕಾಂಗ್ರೆಸ್ ಅಭ್ಯರ್ಥಿಯ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ 2026ರ ಮೇ 3ರಂದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈ ದೂರಿನ ಅನ್ವಯ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 143 (ಅಕ್ರಮ ಕೂಟ), 465 (ಸುಳ್ಳು ದಾಖಲೆ ಸೃಷ್ಟಿ), 468 (ವಂಚಿಸಲು ಸುಳ್ಳು ದಾಖಲೆ ಸೃಷ್ಟಿ), 471 (ಸುಳ್ಳು ದಾಖಲೆಗಳನ್ನು ಅಸಲಿ ಎಂದು ಬಿಂಬಿಸುವುದು), 120ಬಿ (ಪಿತೂರಿ), ಮತ್ತು 149 (ಸಮಾನ ಉದ್ದೇಶ) ಜೊತೆಗೆ ಪ್ರಜಾಪ್ರತಿನಿಧಿ ಕಾಯ್ದೆ–1951ರ ಕಲಂ 136ರ (ಚುನಾವಣಾ ಅಕ್ರಮ) ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಜೀವರಾಜ್ ಪರ ಹೈಕೋರ್ಟ್ ವಕೀಲೆ ವಂದನಾ ರೆಡ್ಡಿ ವಕಾಲತ್ತು ವಹಿಸಿದ್ದಾರೆ.

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳನ್ನು ತಿದ್ದಿರುವ ಆರೋಪ

ಜೀವರಾಜ್ ಸೇರಿ ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶೃಂಗೇರಿ ಕ್ಷೇತ್ರದ ಅಂಚೆ ಮತಗಳನ್ನು ತಿದ್ದಿರುವ ಆರೋಪದಲ್ಲಿ ನೂತನ ಶಾಸಕ ಡಿ.ಎನ್.ಜೀವರಾಜ್, ಶೃಂಗೇರಿ ವಿಧಾನಸಭಾ ಕ್ಷೇತ್ರದ ಹಿಂದಿನ ಚುನಾವಣಾಧಿಕಾರಿ ವೇದಮೂರ್ತಿ, ಅಂದಿನ ಜಿಲ್ಲಾಧಿಕಾರಿ ಕೆ.ಎನ್.ರಮೇಶ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರ ಮತ ಎಣಿಕೆ ಏಜೆಂಟ್ ಸುಧೀರ್‌ಕುಮಾರ್ ಮುರೊಳ್ಳಿ ಅವರು ನೀಡಿದ್ದ ದೂರು ಆಧರಿಸಿ, ಮತಪತ್ರಗಳನ್ನು ತಿದ್ದಿರುವ ಆರೋಪ, ನಕಲಿ ಮತಪತ್ರ ಸೃಷ್ಟಿ, ಕ್ರಿಮಿನಲ್ ಪಿತೂರಿ ಸೇರಿ ಹಲವು ಸೆಕ್ಷನ್‌ಗಳನ್ನು ದಾಖಲಿಸಲಾಗಿದೆ.

ಅಂಚೆ ಮತಪತ್ರಗಳ ಮರುಎಣಿಕೆ ಮುಗಿದ ಸ್ವಲ್ಪ ಸಮಯದ ನಂತರ ಭಾನುವಾರ ಬೆಳಗಿನ ಜಾವ ಮುರೊಳ್ಳಿ ದೂರು ನೀಡಿದ್ದರು. ಆರಂಭದಲ್ಲಿ ಸ್ವೀಕೃತಿ ಪತ್ರ ನೀಡಿ ಕಾನೂನು ಅಭಿಪ್ರಾಯ ಪಡೆದು ನಂತರ ಎಫ್‌ಐಆರ್ ದಾಖಲಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದರು.

'ಇಂತಹ ಪ್ರಕರಣಗಳಲ್ಲಿ ಚುನಾವಣಾಧಿಕಾರಿ ದೂರು ನೀಡಿದರೆ ಮಾತ್ರ ಎಫ್‌ಐಆರ್ ದಾಖಲಿಸಲು ಸಾಧ್ಯ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರಕುಮಾರ್ ದಯಾಮ ಭಾನುವಾರ ಸಂಜೆ ಹೇಳಿದ್ದರು. ರಾತ್ರಿ ವೇಳೆಗೆ ಎಫ್‌ಐಆರ್ ದಾಖಲಾಗಿದೆ.

'ರಾಜೇಗೌಡ ಅವರ ಪರವಾಗಿ ಚಲಾವಣೆಯಾಗಿದ್ದ 255 ಮತಪತ್ರ ತಿದ್ದಲಾಗಿದೆ. ರಾಜೇಗೌಡ ಪರವಾಗಿದ್ದ ಮತಪತ್ರಗಳನ್ನೇ ಹುಡುಕಿ ಅದರಲ್ಲಿ ಮತ್ತೊಬ್ಬರ ಹೆಸರಿನ ಮುಂದೆ ಪೆನ್ನಿನಲ್ಲಿ ಗೆರೆ ಎಳೆಯಲಾಗಿದೆ. ಮರು ಮತ ಎಣಿಕೆ ಸಂದರ್ಭದಲ್ಲಿ ಚುನಾವಣಾಧಿಕಾರಿ ಅವುಗಳನ್ನು ಅಸಿಂಧು ಮಾಡಿದ್ದಾರೆ. ಆಶ್ಚರ್ಯ ಎಂದರೆ 170 ಅಂಚೆ ಮತಪತ್ರಗಳ ಒಂದು ಬಂಡಲ್‌ನಲ್ಲಿ ಇದ್ದ ಎಲ್ಲಾ ಮತಪತ್ರಗಳೂ ಅಮಾನ್ಯಗೊಂಡವು. ಇದರಿಂದ ಮತಪತ್ರಗಳನ್ನು ತಿದ್ದಿರುವುದರಲ್ಲಿ ಅನುಮಾನ ಇಲ್ಲ. ಈ ಕಾರಣದಿಂದ ರಾಜೇಗೌಡ ಅವರ ಮತಗಳು ಕಡಿಮೆಯಾಗಿವೆ. ಮತಪತ್ರ ತಿದ್ದಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಮುರೊಳ್ಳಿ ಮನವಿ ಮಾಡಿದ್ದರು.

ಯಾರಿಗೆ ಅನ್ಯಾಯ?

ಅಂಚೆ ಮತಗಳ ಮರು ಎಣಿಕೆ ವೇಳೆ 255 ಮತಗಳು ತಿರಸ್ಕಾರಗೊಂಡಿವೆ. ಈ ಮತಗಳಿಂದ ಯಾರಿಗೆ ಅನ್ಯಾಯವಾಗಿದೆ ಎಂಬ ಪ್ರಶ್ನೆ ಉದ್ಭವವಾಗಿದೆ.

ಪ್ರಮಾಣ ಪತ್ರ ಪಡೆದ ಡಿ.ಎನ್. ಜೀವರಾಜ್

ಶೃಂಗೇರಿ ವಿಧಾನಸಭಾ ಕ್ಷೇತ್ರಕ್ಕೆ ಡಿ.ಎನ್.ಜೀವರಾಜ್ ಶಾಸಕರಾಗಿ ಭಾನುವಾರ ರಾತ್ರಿ ಘೋಷಣೆಯಾಗಿದ್ದು, ಸೋಮವಾರ ಬೆಳಿಗ್ಗೆಯೇ ಚುನಾವಣಾಧಿಕಾರಿ ಗೌರವಕುಮಾರ್ ಶೆಟ್ಟಿ ಅವರಿದ್ದ ಸ್ಥಳಕ್ಕೆ ತೆರಳಿ ಪ್ರಮಾಣ ಪತ್ರ ಪಡೆದುಕೊಂಡರು.

2023ರಲ್ಲಿ ನಡೆದ ಚುನಾವಣೆಯಲ್ಲಿ 201 ಮತಗಳ ಅಂತರದಲ್ಲಿ ಟಿ.ಡಿ.ರಾಜೇಗೌಡ ಅವರು ಶಾಸಕರಾಗಿ ಆಯ್ಕೆಯಾಗಿದ್ದರು. ಅಂಚೆ ಮತಗಳ ಮರು ಎಣಿಕೆ ಕೋರಿ ಬಿಜೆಪಿಯ ಡಿ.ಎನ್. ಜೀವರಾಜ್ ಹೈಕೋರ್ಟ್ ಮೊರೆಹೋಗಿದ್ದರು. ಎಣಿಕೆಗೆ ನ್ಯಾಯಾಲಯ ಆದೇಶಿಸಿತ್ತು.

2023ರಲ್ಲಿ ಸಿಂಧುವಾಗಿದ್ದ 1540 ಮತಗಳಲ್ಲಿ ರಾಜೇಗೌಡ ಅವರ ಪರವಾಗಿದ್ದ 255 ಮತಗಳು ಮರು ಎಣಿಕೆ ವೇಳೆ ಅಸಿಂಧುಗೊಂಡವು. ಇದರಿಂದ 52 ಅಂತರದಲ್ಲಿ ಜೀವರಾಜ್ ಗೆಲುವು ಸಾಧಿಸಿದರು. ಚುನಾವಣಾ ಆಯೋಗದ ಅನುಮತಿ ಪಡೆದ ಬಳಿಕ ಭಾನುವಾರ ರಾತ್ರಿ ಫಲಿತಾಂಶವನ್ನು ಚುನಾವಣಾಧಿಕಾರಿ ಘೋಷಣೆ ಮಾಡಿದ್ದರು. ಸೋಮವಾರ ಪ್ರಮಾಣಪತ್ರ ಪಡೆದುಕೊಂಡರು.

ಜೀವರಾಜ್

ಬಳಿಕ ಮಾತನಾಡಿದ ಅವರು, '2023ರಲ್ಲಿ ಫಲಿತಾಂಶದ ದಿನವೇ ಮರು ಎಣಿಕೆ ಕೋರಲಾಗಿತ್ತು. ಆಗ ಎಣಿಕೆ ಮಾಡಿದ್ದರೆ ಈ ಗೊಂದಲ ಇರುತ್ತಿರಲಿಲ್ಲ. ಮತಪತ್ರ ತಿದ್ದಲಾಗಿದೆ ಎಂದು ಈಗ ಆರೋಪಿಸುತ್ತಿದ್ದಾರೆ. ಅಸಿಂಧುಗೊಂಡಿದ್ದ ಮತಗಳ ಬಂಡಲ್‌ಗಳನ್ನು ಎತ್ತಿ ರಾಜೇಗೌಡರ ಮತಗಳಿಗೆ ಸೇರಿಸಲಾಗಿದೆ ಎಂಬುದೇ ನಮ್ಮ ಆರೋಪವಾಗಿತ್ತು. ಅದನ್ನೇ ನ್ಯಾಯಾಲಯಕ್ಕೂ ತಿಳಿಸಲಾಗಿತ್ತು' ಎಂದು ಸ್ಪಷ್ಟಪಡಿಸಿದರು.

'ರಾಜೇಗೌಡ ಅವರಿಗೆ ಈ ವಿಷಯ ಗೊತ್ತಿದ್ದರಿಂದಲೇ ಹೈಕೋರ್ಟ್‌ನಲ್ಲಿ ವಿರೋಧ ಮಾಡಿದರು. ಸುಪ್ರೀಂ ಕೋರ್ಟ್ ತನಕ ಹೋಗಿ ತಡೆಯಾಜ್ಞೆ ತರುವ ಪ್ರಯತ್ನ ಮಾಡಿದರು. ಆದರೂ ಮರು ಮತ ಎಣಿಕೆ ನಡೆಯಿತು. ಸೋಲಿನ ಹತಾಶೆಯಿಂದ ಅವರು ಈಗ ಬೇರೆ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಅವರು ಗೆದ್ದರೆ ಸತ್ಯಮೇವ ಜಯತೆ, ನಾನು ಗೆದ್ದರೆ ಎಫ್‌ಐಆರ್ ದಾಖಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಒಳ್ಳೆಯದಲ್ಲ. ರಾಜೇಗೌಡ ಅವರು ಸೋಲನ್ನು ಒಪ್ಪಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಕೆಲಸ ಮಾಡಲು ಸಹಕಾರ ನೀಡಬೇಕು' ಎಂದರು.

2023ರ ಮೇ 13ರಂದು ಫಲಿತಾಂಶದ ದಿನ 1,540 ಮತಗಳು ಸಿಂಧುವಾಗಿದ್ದವು. 279 ಮತಗಳು ಅಸಿಂಧುವಾಗಿದ್ದವು. ಸಿಂಧುವಾಗಿದ್ದ ಮತಗಳಲ್ಲಿ ರಾಜೇಗೌಡ ಅವರಿಗೆ ಬಿದ್ದಿರುವ ಮತಗಳು 255 ಅಸಿಂಧುವಾಗಿದ್ದರೆ, ಜೀವರಾಜ್ ಅವರಿಗೆ ಬಿದ್ದಿದ್ದ 2 ಮತಗಳು ಅಸಿಂಧುವಾಗಿವೆ.

'ಅಸಿಂಧು ಮತಗಳ ಬಂಡಲ್‌ಗಳನ್ನೇ ರಾಜೇಗೌಡ ಅವರ ಮತಗಳ ಬುಟ್ಟಿಗೆ ಹಾಕಲಾಗಿತ್ತು. ಆದ್ದರಿಂದ ಈಗ ಅವೆಲ್ಲವೂ ತಿರಸ್ಕೃತಗೊಂಡಿವೆ' ಎಂಬುದು ಜೀವರಾಜ್ ಅವರ ಆರೋಪ. 'ಮತ ಎಣಿಕೆ ಬಳಿಕ ಸ್ಟ್ರಾಂಗ್ ರೂಮಿಗೆ ಕೊಂಡೊಯ್ಯುವ ವೇಳೆ ಅಥವಾ ಸ್ಟ್ರಾಂಗ್ ರೂಮಿನಲ್ಲಿ ಮತಪತ್ರಗಳನ್ನು ತಿದ್ದಲಾಗಿದೆ' ಎಂಬುದು ಟಿ.ಡಿ. ರಾಜೇಗೌಡ ಅವರ ಆರೋಪ.

ನಿದಾ ಖಾನ್‌ಗೆ ಸಿಗದ ನಿರೀಕ್ಷಣಾ ಜಾಮೀನು

ಮುಂಬೈ (ಪಿಟಿಐ): ನಾಸಿಕ್‌ನ ಟಿಸಿಎಸ್ ಕಂಪನಿಯಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಪ್ರಕರಣದ ಆರೋಪಿ ನಿದಾ ಖಾನ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನಾಸಿಕ್‌ನ ನ್ಯಾಯಾಲಯವು ತಿರಸ್ಕರಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಪೊಲೀಸ್ ವಿಚಾರಣೆಯು ಅವಶ್ಯವಾಗಿ ಇರುವುದರಿಂದ ಜಾಮೀನು ಅರ್ಜಿಯನ್ನು ವಜಾಗೊಳಿಸಲಾಗಿದೆ' ಎಂದು ನಾಸಿಕ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಕೆ.ಜಿ. ಜೋಶಿ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ವ್ಯವಸ್ಥಿತ ಯೋಜನೆಯ ಮೂಲಕ ಸಂತ್ರಸ್ತೆಯ ಅಭಿಪ್ರಾಯವನ್ನೇ ಬದಲಿಸಲು ನಡೆಸಿರುವ ಸಂಘಟಿತ ಪ್ರಯತ್ನ ಹಾಗೂ ಮಲೇಷ್ಯಾಕ್ಕೆ ಕಳುಹಿಸಿದ್ದನ್ನು ಗಮನಿಸಿದ ನ್ಯಾಯಾಲಯವು ನಿರೀಕ್ಷಣಾ ಜಾಮೀನು ನಿರಾಕರಿಸಿದೆ.

ಪಂಚಮಸಾಲಿ ಪೀಠ ಮೇ 31ರವರೆಗೆ ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ಟ್ರಸ್ಟಿಗಳು ಹಾಗೂ ವಚನಾನಂದ ಸ್ವಾಮೀಜಿ ಬೆಂಬಲಿಗರ ನಡುವಣ ಸಂಘರ್ಷದ ಕಾರಣ ಕಾನೂನು ಸುವ್ಯವಸ್ಥೆ ಕಾಪಾಡಲು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಶಾಂತಿ ಕಾಪಾಡುವ ಉದ್ದೇಶದಿಂದ ಮೇ 4ರಿಂದ ಮೇ 31ರವರೆಗೆ ಗುರುಪೀಠದ ಆವರಣದಲ್ಲಿ ಯಾವುದೇ ಸಭೆ- ಸಮಾರಂಭ ಹಾಗೂ ಪತ್ರಿಕಾಗೋಷ್ಠಿಗಳನ್ನು ನಡೆಸದಂತೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ– 163ರ ಅಡಿ ಸೋಮವಾರ ಆದೇಶ ಹೊರಡಿಸಿದ್ದಾರೆ.

'ಮಾ.10 ರಿಂದ ಏ.27ರವರೆಗೆ ಮಠದಲ್ಲಿ ಟ್ರಸ್ಟಿಗಳು ಮತ್ತು ವಚನಾನಂದ ಸ್ವಾಮೀಜಿ ಬೆಂಬಲಿಗರು ಸರಣಿ ಸಭೆ ಹಾಗೂ ಪತ್ರಿಕಾಗೋಷ್ಠಿಗಳನ್ನು ನಡೆಸಿದ್ದಾರೆ. ಉದ್ರಿಕ್ತ ಭಾಷಣ ಮಾಡಿ, ಹೇಳಿಕೆ ನೀಡಿ, ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಿದ್ದಾರೆ. ಇದರಿಂದ ಸಾರ್ವಜನಿಕ ಶಾಂತಿಗೆ ಧಕ್ಕೆಯಾಗಿದೆ. ಪ್ರಾಣ ಹಾನಿಯಾಗುವ, ಮಠದ ಆಸ್ತಿಗೆ ಧಕ್ಕೆಯಾಗುವ ಸಾಧ್ಯತೆಗಳು ಇರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರದಿ ನೀಡಿದ್ದಾರೆ. ಈ ಕಾರಣಕ್ಕೆ ನಿಷೇಧಾಜ್ಞೆ ಜಾರಿಗೊಳಿಸಲಾಗುತ್ತಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ನಿಷೇಧಾಜ್ಞೆಯು ಸಭೆ, ಸಮಾರಂಭ ಮತ್ತು ಪತ್ರಿಕಾಗೋಷ್ಠಿಗಳಿಗಷ್ಟೇ ಅನ್ವಯಿಸಲಿದ್ದು, ಗುರುಪೀಠದಲ್ಲಿ ನಡೆಯುವ ದೈನಂದಿನ ಧಾರ್ಮಿಕ ಪೂಜಾ ವಿಧಿ ವಿಧಾನಗಳಿಗೆ ಯಾವುದೇ ಅಡ್ಡಿಯಿರುವುದಿಲ್ಲ. ಮೇ 31ರವರೆಗೆ ಯಾವುದೇ ಬಣಗಳು ಶಕ್ತಿ ಪ್ರದರ್ಶನ ಮಾಡಲು ಆಸ್ಪದವಿಲ್ಲ' ಎಂದು ತಿಳಿಸಲಾಗಿದೆ.

ಆಟವಾಡಲು ನೀರಿಗೆ ಇಳಿದಿದ್ದ ನಾಲ್ಕು ಬಾಲಕರು ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಅರಳಗುಪ್ಪೆ ಗ್ರಾಮದ ಕಾರಂಜಿ ಕೆರೆಯಲ್ಲಿ ಆಟವಾಡಲು ಇಳಿದಿದ್ದ ಒಂದೇ ಕುಟುಂಬದ ನಾಲ್ವರು ಬಾಲಕರು ಮೃತಪಟ್ಟಿದ್ದು, ಮತ್ತೊಬ್ಬ ಬಾಲಕ ಅಸ್ವಸ್ಥಗೊಂಡಿದ್ದಾನೆ.

ಅಬ್ದುಲ್ ರೆಹಮಾನ್(13), ನಯಾಜ್ (12), ಆರುನ್ (8), ಮೆಹಾದಿಯಾ(7) ಮೃತಪಟ್ಟವರು. ಸ್ಥಳೀಯರು ಅರ್ಮಾನ್(4) ಎಂಬ ಮಗುವನ್ನು ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ.

ಅಬ್ದುಲ್ ರೆಹಮಾನ್ ಮತ್ತು ನಯಾಜ್ ಅರಳಗುಪ್ಪೆಯ ಮಹಮ್ಮದ್ ಎಂಬುವರ ಮಕ್ಕಳು. ಆರುನ್ ಮತ್ತು ಮೆಹಾದಿಯಾ ಶಿವಮೊಗ್ಗದ ಟ್ಯಾಂಕ್ ಮೊಹಲ್ಲಾದವರಾಗಿದ್ದು, ಶಾಲೆಗೆ ರಜೆಯಿದ್ದ ಕಾರಣ ಸಂಬಂಧಿಕರ ಮನೆಗೆ ಬಂದಿದ್ದರು. ಒಟ್ಟಿಗೆ ಇದ್ದ ಮಕ್ಕಳು ಕೆರೆಗೆ ಇಳಿದಿದ್ದು, ಈ ಅವಘಡ ಸಂಭವಿಸಿದೆ.

ನಾಲ್ವರು ಮಕ್ಕಳ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಜಿಲ್ಲಾಸ್ಪತ್ರೆಗೆ ತರಲಾಗಿತ್ತು. ಈ ವೇಳೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಸೋಲಿನ ನಿರೀಕ್ಷೆ ಇರಲಿಲ್ಲ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಗಲಕೋಟೆ ಉಪ ಚುನಾವಣೆಯಲ್ಲಿ ಸೋಲಿನ ನಿರೀಕ್ಷೆ ಇರಲಿಲ್ಲ. ದಾವಣಗೆರೆ ದಕ್ಷಿಣ ಸೇರಿ ಎರಡೂ ಕ್ಷೇತ್ರಗಳಲ್ಲಿ ಕಾರ್ಯಕರ್ತರು ಶ್ರಮ ಹಾಕಿದ್ದರು. ಆದರೂ ಹಿನ್ನಡೆ ಆಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಉಪ ಚುನಾವಣೆ ಫಲಿತಾಂಶದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸೋಲಿಗೆ ಕಾರಣಗಳ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳುತ್ತೇವೆ' ಎಂದರು.

'ಮುಖ್ಯಮಂತ್ರಿ ಮತ್ತು ಸಚಿವ ಸಂಪುಟದ ಸದಸ್ಯರು ಬಾಗಲಕೋಟೆಗೆ ಬಂದು 15 ದಿನ ಬೀಡು ಬಿಟ್ಟಿದ್ದರು. ಉಪ ಚುನಾವಣೆಯಲ್ಲಿ ಗೆದ್ದ ಮಾತ್ರಕ್ಕೆ ಜನರ ಒಲವು ಕಾಂಗ್ರೆಸ್ ಪಕ್ಷದ ಕಡೆ ಇದೆ ಎನ್ನಲು ಸಾಧ್ಯವಿಲ್ಲ. ಬಾಗಲಕೋಟೆಯಲ್ಲಿನ ಹಿನ್ನಡೆ ಕುರಿತು ಮುಖಂಡರ ಜೊತೆ ಕುಳಿತು ಚರ್ಚೆ ಮಾಡಬೇಕಾಗಿದೆ. ಆ ಬಳಿಕ ನಮ್ಮ ಸಂಘಟಿತ ಕಾರ್ಯದ ಕುರಿತು ಕಾರ್ಯತಂತ್ರ ರೂಪಿಸುತ್ತೇವೆ' ಎಂದರು.

ನಾಯಕತ್ವಕ್ಕೆ ದೊಡ್ಡ ಶಕ್ತಿ: 'ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೆರಿಯಲ್ಲಿ ಬಿಜೆಪಿಯ ಗೆಲುವಿನಿಂದ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವಕ್ಕೆ ದೊಡ್ಡ ಶಕ್ತಿ ತುಂಬಿದಂತಾಗಿದೆ. ಚುನಾವಣೆ ಗೆಲುವಿನಲ್ಲಿ ಅಮಿತ್ ಶಾ ಅವರ ತಂತ್ರಗಾರಿಕೆಯೂ ಇದೆ. ಪಶ್ಚಿಮ ಬಂಗಾಳದಲ್ಲಿ ಹಲವು ದಶಕಗಳಿಂದ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ನಿರಂತರ ದಬ್ಬಾಳಿಕೆ ನಡೆಯುತ್ತಿತ್ತು. ಇವೆಲ್ಲದಕ್ಕೂ ಇತಿಶ್ರೀ ಹಾಡುವ ಕೆಲಸವನ್ನು ಕಾರ್ಯಕರ್ತರು ಮಾಡಿದ್ದಾರೆ' ಎಂದು ವಿಜಯೇಂದ್ರ ಹೇಳಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಸಿ.ಎನ್.ಅಶ್ವತ್ಥನಾರಾಯಣ, ಹರೀಶ್ ಪೂಂಜ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ಪ್ರತಾಪ್ ಸಿಂಹ ನಾಯಕ್ ಸುದ್ದಿಗೋಷ್ಠಿಯಲ್ಲಿದ್ದರು.

ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೆರಿಯಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದಕ್ಕಾಗಿ ಬಿ.ವೈ. ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ, ಸಿ.ಟಿ. ರವಿ, ಆರ್ ಅಶೋಕ ನೇತೃತ್ವದಲ್ಲಿ ಲಡ್ಡು ಮತ್ತು ಚುರುಮುರಿ ವಿತರಿಸಿ ಸಂಭ್ರಮಿಸಲಾಯಿತು

ಪಂಚ ರಾಜ್ಯಗಳ ಗೆಲುವು: ಬಿಜೆಪಿಗೆ ಇನ್ನಷ್ಟು ಶಕ್ತಿ

ಪಂಚರಾಜ್ಯಗಳ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಬಿಜೆಪಿಗೆ ಇನ್ನಷ್ಟು ಶಕ್ತಿ ತುಂಬಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

'ಶೃಂಗೇರಿ ವಿಧಾನಸಭಾ ಕ್ಷೇತ್ರದ ಮತಗಳ ಮರು ಎಣಿಕೆಯಲ್ಲಿ ಪಕ್ಷದ ಅಭ್ಯರ್ಥಿ ಡಿ.ಎನ್.ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಪಕ್ಷ ಮತ ಕಳವು ಮಾಡಿತ್ತು. ಗೆಲ್ಲುವುದಕ್ಕಾಗಿ ಕಾಂಗ್ರೆಸ್ ಅಭ್ಯರ್ಥಿ ಒತ್ತಡ ಹಾಕಿದ್ದರು. ಮರು ಎಣಿಕೆಯಲ್ಲಿ ಸತ್ಯಕ್ಕೆ ಜಯ ಸಿಕ್ಕಿದೆ' ಎಂದರು.

'ಜೀವರಾಜ್ ಅವರು ಅಧಿಕೃತವಾಗಿ ಗೆದ್ದಿದ್ದರೂ ಘೋಷಣೆ ಮಾಡಿರಲಿಲ್ಲ. ಪ್ರಮಾಣ ಪತ್ರವನ್ನು ಚುನಾವಣಾಧಿಕಾರಿ ನೀಡಿದ್ದಾರೆ. ಪ್ರಮಾಣ ವಚನ ಸ್ವೀಕರಿಸಲು ಕೂಡಲೇ ಅವಕಾಶ ಕಲ್ಪಿಸಬೇಕು ಎಂದು ಸಭಾಧ್ಯಕ್ಷರಿಗೆ ಮನವಿ ಮಾಡುತ್ತೇನೆ' ಎಂದು ಹೇಳಿದರು.

ಲೇಕ್‌ವ್ಯೂಗೆ ಜಮೀನು: ಸಿಬಿಐ ತನಿಖೆಗೆ ಸುಪ್ರೀಂ ಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಉತ್ತರ ತಾಲ್ಲೂಕಿನ ಹೆಬ್ಬಾಳ ಮತ್ತು ಅಮಾನಿಕೆರೆ ಕಂದಾಯ ಗ್ರಾಮಗಳ ವ್ಯಾಪ್ತಿಯಲ್ಲಿನ ವಿವಿಧ ಸರ್ವೆ ಸಂಖ್ಯೆಗಳ ಕೆಲವು ಜಮೀನುಗಳನ್ನು ಕೆಐಎಡಿಬಿ ವತಿಯಿಂದ ಸ್ವಾಧೀನಪಡಿಸಿಕೊಂಡು ಅಸ್ತಿತ್ವದಲ್ಲೇ ಇಲ್ಲದ 'ಲೇಕ್ ವ್ಯೂ ಟೂರಿಸಂ ಕಾರ್ಪೊರೇಷನ್'ಗೆ ಪರಭಾರೆ ಮಾಡಿದ್ದ ಪ್ರಕರಣದ ಸಿಬಿಐ ತನಿಖೆಗೆ ನಿರ್ದೇಶಿಸಿದ್ದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಪರವಾಗಿ ವಕೀಲ ನಿಶಾಂತ್ ಪಾಟೀಲ ಅವರ ವಾದ ಆಲಿಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿನೋದ್ ಚಂದ್ರನ್ ಅವರ ಪೀಠವು ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿತು.

ಪ್ರಕರಣಕ್ಕೆ ಸಂಬಂಧಿಸಿದ ಭೂ ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಪಡಿಸುವಂತೆ ಕೋರಿ ದಿವಂಗತ ಕೃಷ್ಣಾರೆಡ್ಡಿ ಅವರ ವಾರಸುದಾರರು ಮತ್ತಿತರರು 2013ರಲ್ಲಿ ಮೂರು ಪ್ರತ್ಯೇಕ ರಿಟ್ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿಗಳನ್ನು ಪುರಸ್ಕರಿಸಿದ್ದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿತ್ತು.

'ಖಾಸಗಿ ವ್ಯಕ್ತಿಗಳ ಜೊತೆಗೆ ಕೈಜೋಡಿಸಿರುವ ರಾಜ್ಯ ಸರ್ಕಾರದ ಅಧಿಕಾರಿಗಳು ಸ್ವತಃ ಮಹತ್ವದ ವಂಚನೆಯಲ್ಲಿ ಭಾಗಿಯಾಗಿದ್ದಾರೆ. ಇದರ ನಿಷ್ಪಕ್ಷಪಾತ ಮತ್ತು ಸ್ವತಂತ್ರ ತನಿಖೆಯನ್ನು ರಾಜ್ಯದ ತನಿಖಾ ಸಂಸ್ಥೆಗಳಿಂದ ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಸಿಬಿಐ ತೆಕ್ಕೆಗೆ ವಹಿಸುವುದೇ ಸೂಕ್ತ' ಎಂದು ತೀರ್ಪಿನಲ್ಲಿ ಹೇಳಿತ್ತು.

'ಈ ಪ್ರಕರಣದ ಸ್ವಾಧೀನ ಪ್ರಕ್ರಿಯೆ ಅಸ್ತಿತ್ವದಲ್ಲಿಯೇ ಇಲ್ಲದ ಘಟಕವೊಂದರ ಆದೇಶದ ಮೇರೆಗೆ ನಡೆದಿದೆ. ಭೂ ಮಾಲೀಕರ ಅಮೂಲ್ಯ ಆಸ್ತಿಯನ್ನು ಅತ್ಯಲ್ಪ ಬೆಲೆಗೆ ಕಸಿದುಕೊಂಡು ಐತಿಹಾಸಿಕ ವಂಚನೆ ಎಸಗಲಾಗಿದೆ' ಎಂದು ಬಣ್ಣಿಸಿದ್ದ ನ್ಯಾಯಪೀಠ, ಸಂಪೂರ್ಣ ಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಿತ್ತು. ಅಂತೆಯೇ ಪ್ರತಿವಾದಿ, 'ಲೇಕ್ ವ್ಯೂ ಟೂರಿಸಂ ಕಾರ್ಪೊರೇಷನ್'ಗೆ ₹10 ಲಕ್ಷ ದಂಡ ವಿಧಿಸಿತ್ತು.

ಪಕ್ಷದ ಗೊಂದಲ ಮಾಧ್ಯಮದ ಮುಂದೆ ತರಬೇಡಿ: ಸಚಿವ ರೆಡ್ಡಿ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ): 'ಸಂಪುಟ ಪುನರ್‌ರಚನೆ ಕುರಿತ ಗೊಂದಲಗಳನ್ನು ಹೈಕಮಾಂಡ್ ಬಗೆಹರಿಸಬೇಕಿತ್ತು. ಈ ಕುರಿತು ಮಾಧ್ಯಮಗಳಿಗೆ ಹೇಳಿಕೆ ನೀಡುವುದು ಒಳ್ಳೆಯದಲ್ಲ. ಅದರಿಂದ ಗೊಂದಲವೇ ಹೆಚ್ಚಾಗುತ್ತದೆ. ಜತೆಗೆ ಸರ್ಕಾರಕ್ಕೂ ನಷ್ಟ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೋಮವಾರ ಇಲ್ಲಿ ಅಭಿಪ್ರಾಯಪಟ್ಟರು.


ರಾಮಲಿಂಗಾ ರೆಡ್ಡಿ

'ಸಂಪುಟ ಪುನರ್‌ರಚನೆ ವೇಳೆ ಯಾರೆಲ್ಲರೂ ರಾಜೀನಾಮೆ ಕೊಡಬೇಕೆಂದು ಮುಖ್ಯಮಂತ್ರಿ ಸೂಚಿಸುತ್ತಾರೆ. ಈವರೆಗೆ ಯಾರಿಗೂ ಸೂಚನೆ ಬಂದಿಲ್ಲ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಆಗುತ್ತಾರೆ ಎಂಬ ಚರ್ಚೆ ಪಕ್ಷದಲ್ಲಿ ನಡೆದಿದೆಯಲ್ಲ ಎಂಬ ಪ್ರಶ್ನೆಗೆ, 'ಮುಖ್ಯಮಂತ್ರಿ ಬದಲಾವಣೆ ವಿಚಾರ ಕೇಳಬೇಡಿರಪ್ಪ' ಎಂದರು.

ಡಿಸಿಇಟಿ: ಅರ್ಜಿ ತಿದ್ದುಪಡಿಗೆ ಮೇ 20ರವರೆಗೆ ಅವಕಾಶ

ಬೆಂಗಳೂರು: ಲ್ಯಾಟರಲ್ ಎಂಟ್ರಿ ಮೂಲಕ ಎಂಜಿನಿಯರಿಂಗ್ 2ನೇ ವರ್ಷ ಅಥವಾ 3ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಡಿಸಿಇಟಿಗೆ ಅರ್ಜಿ ಸಲ್ಲಿಸಿರುವ ಡಿಪ್ಲೊಮಾ ಅಭ್ಯರ್ಥಿಗಳು, ಮೀಸಲಾತಿ ಸೇರಿದಂತೆ ಸಣ್ಣ ಪುಟ್ಟ ತಪ್ಪುಗಳ ತಿದ್ದುಪಡಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೇ 20ರವರೆಗೆ ಅವಕಾಶ ಕಲ್ಪಿಸಿದೆ.

ಅಭ್ಯರ್ಥಿಗಳು ಮೇ 5ರಿಂದ 20ರವರೆಗೆ ಲಾಗಿನ್ ಆಗಿ ತಮ್ಮ ಅರ್ಜಿಯಲ್ಲಿ ಏನಾದರೂ ಬದಲಾವಣೆ ಇದ್ದರೆ ಮಾಡಿಕೊಳ್ಳಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಸೇನೆ, ಮಾಜಿ ಸೈನಿಕ, ಸಿಆರ್‌ಪಿಎಫ್ ಸೇರಿದಂತೆ ಇತರ ವಿಶೇಷ ಪ್ರವರ್ಗಗಳಲ್ಲಿ ಅರ್ಹತೆ ಇದ್ದು, ಕ್ಲೇಮ್ ಮಾಡಿರುವ ಬಗ್ಗೆ ಅಭ್ಯರ್ಥಿಗಳು ಖಚಿತಪಡಿಸಿಕೊಳ್ಳಬಹುದು. ಕ್ಲೇಮ್ ಮಾಡಿದ್ದಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸಬಹುದು. ಮೀಸಲಾತಿ ಸಂಬಂಧದ ಆರ್‌ಡಿ ಸಂಖ್ಯೆ ನಮೂದಿಸುವುದನ್ನು ಖಚಿತಪಡಿಸಿಕೊಳ್ಳಿ ಎಂದು ಸಲಹೆ ನೀಡಿದ್ದಾರೆ.

ಒಳಮೀಸಲಾತಿ ಆರ್‌ಡಿ ಸಂಖ್ಯೆ ನಮೂದಿಸಿ: ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಆರ್‌ಡಿ ಸಂಖ್ಯೆ ಇರುವ ಪ್ರವರ್ಗ-ಎ, ಪ್ರವರ್ಗ- ಬಿ ಮತ್ತು ಪ್ರವರ್ಗ-ಸಿ ಎಂದು ಮುದ್ರಿತವಾಗಿರುವ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ತಹಶೀಲ್ದಾರ್ ಅವರಿಂದ ಪಡೆದು, ಅದರ ಆರ್‌ಡಿ ಸಂಖ್ಯೆ ದಾಖಲಿಸುವುದಕ್ಕೆ ಅವಕಾಶ ನೀಡಲಾಗಿದೆ. ಅಭ್ಯರ್ಥಿಗಳ ಅನುಕೂಲಕ್ಕಾಗಿ ಮೇ 22ರವರೆಗೂ ಪೋರ್ಟಲ್ ತೆರೆಯಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಕೆಲವರು ಒಳ ಮೀಸಲಾತಿ ಪ್ರಕಾರ ಪ್ರಮಾಣ ಪತ್ರ ಸಲ್ಲಿಸದೆ, ಹಳೇ ಆರ್‌ಡಿ ಸಂಖ್ಯೆಯನ್ನೇ ಅರ್ಜಿಯಲ್ಲಿ ದಾಖಲಿಸುತ್ತಿದ್ದು, ಅಂತಹವರು ತಿದ್ದುಪಡಿ ಮೂಲಕ ಹೊಸದಾಗಿ ಆರ್‌ಡಿ ಸಂಖ್ಯೆ ನಮೂದಿಸಬೇಕು ಎಂದು ಮಾಹಿತಿ ನೀಡಿದ್ದಾರೆ.

ಸಮರ್ಪಕವಾಗಿ ನಡೆಯದ ತಪಾಸಣೆ • ಅಧಿಕಾರಿಗಳು, ಜನಪ್ರತಿನಿಧಿಗಳ ನಿರ್ಲಕ್ಷ್ಯ-ಆರೋಪ

ಫಲವತ್ತಾದ ಕೆರೆ ಮಣ್ಣು ಕೇರಳಕ್ಕೆ ಸಾಗಣೆ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನಿಂದ ಕೇರಳ ರಾಜ್ಯಕ್ಕೆ ಬಿಳಿಕಲ್ಲು, ಕರಿಕಲ್ಲು, ಎಂ ಸ್ಯಾಂಡ್, ಜೆಲ್ಲಿಯನ್ನು ಎಗ್ಗಿಲ್ಲದೆ ಸಾಗಿಸಲಾಗುತ್ತಿದ್ದು, ಈಗ ಆ ಸಾಲಿಗೆ ಕೆರೆಗಳ ಮಣ್ಣೂ ಸೇರಿಕೊಂಡಿದೆ.

ತಾಲ್ಲೂಕಿನಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಭಾನುವಾರ ಬೆಳಿಗ್ಗೆ ಲಾರಿ– ಕಾರು ನಡುವೆ ನಡೆದ ಅಪಘಾತವು ಇದಕ್ಕೆ ಪುಷ್ಟಿ ನೀಡಿದೆ.

ಮಣ್ಣು ಸಾಗಣೆ ಲಾರಿ ಮತ್ತು ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಕೇರಳದ ಕಣ್ಣೂರಿನ ಮೂವರು ಮೃತಪಟ್ಟಿದ್ದರು. ಅನುಮತಿ ಇಲ್ಲದಿದ್ದರೂ ಲಾರಿಯಲ್ಲಿ ಕೆರೆ ಮಣ್ಣು ಸಾಗಿಸಲಾಗುತ್ತಿತ್ತು ಎಂಬ ಸಂಗತಿಯು ಅನುಮಾನಗಳಿಗೆ ದಾರಿ ಮಾಡಿದೆ.

'ಜಿಲ್ಲೆಯ ಖನಿಜ ಹಾಗೂ ನೈಸರ್ಗಿಕ ಸಂಪತ್ತು ನಿಯಮ ಬಾಹಿರವಾಗಿ ನೆರೆ ರಾಜ್ಯಗಳ ಪಾಲಾಗುತ್ತಿದ್ದರೂ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಸುಮ್ಮನಿದ್ದಾರೆ' ಎಂಬ ಆರೋಪವೂ ಇದೇ ವೇಳೆ ಮೂಡಿದೆ.

ಬೇಡಿಕೆ ಹೆಚ್ಚು: ಕಡಿಮೆ ದರ ಹಾಗೂ ಗುಣಮಟ್ಟದ ಕಾರಣಕ್ಕೆ ಕೇರಳದ ವ್ಯಾಪಾರಿಗಳು ಗುಂಡ್ಲುಪೇಟೆ, ಚಾಮರಾಜನಗರ ತಾಲ್ಲೂಕಿನ ಕಲ್ಲುಕ್ವಾರಿಗಳಿಂದ ಹೆಚ್ಚಿನ ಪ್ರಮಾಣದ ಕರಿಕಲ್ಲು, ಬಿಳಿಕಲ್ಲು ತ್ಯಾಜ್ಯ ಹಾಗೂ ಎಂ ಸ್ಯಾಂಡ್, ಜೆಲ್ಲಿಯನ್ನು ಖರೀದಿಸಿ ಕೊಂಡೊಯ್ಯುತ್ತಾರೆ.

> **ಚೆಕ್‌ಪೋಸ್ಟ್‌ಗಳಲ್ಲಿ ವಾಹನಗಳ ಕಡ್ಡಾಯ ತಪಾಸಣೆ ಮಾಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲಾಗುವುದು**
> **ಎಸ್.ತನ್ಮಯ್**
> ತಹಶೀಲ್ದಾರ್, ಗುಂಡ್ಲುಪೇಟೆ

'ಲಾಭದಾಸೆಗೆ ದೈತ್ಯ ಟ್ರಕ್‌ಗಳಲ್ಲಿ ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾವಸ್ತು ಸಾಗಿಸಲಾಗುತ್ತಿದೆ. ಪೊಲೀಸರಾಗಲಿ, ಚೆಕ್‌ಪೋಸ್ಟ್‌ನಲ್ಲಿ ಕಾರ್ಯ ನಿರ್ವಹಿಸುವ ಕಂದಾಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳಾಗಲಿ ಸಮರ್ಪಕವಾಗಿ ತಪಾಸಣೆಗೆ ಒಳಪಡಿಸುತ್ತಿಲ್ಲ' ಎಂಬುದು ಸದ್ಯದ ಆರೋಪ.

'ಗುಂಡ್ಲುಪೇಟೆ-ಕೇರಳ ರಾಷ್ಟ್ರೀಯ ಹೆದ್ದಾರಿ-766ರಲ್ಲಿ ಮಣ್ಣು ಮತ್ತು ಖನಿಜ ಸಾಗಿಸುವ ಲಾರಿಗಳ ಅರ್ಭಟ ಹೆಚ್ಚಾಗಿದೆ. ಅತಿಯಾದ ವೇಗ, ಮಿತಿಗಿಂತ ಹೆಚ್ಚು ಭಾರ ಹೊತ್ತು ಸಾಗುವ ಟ್ರಕ್‌ಗಳು ಅಪಘಾತಕ್ಕೆ ಕಾರಣವಾಗುತ್ತಿದ್ದು ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ನಿಯಮ ಮೀರುವ ವಾಹನಗಳ ಚಾಲಕರ ವಿರುದ್ಧ ಕ್ರಮ ಜರುಗಿಸುತ್ತಿಲ್ಲ. ಮದ್ದೂರು ಮತ್ತು ಮೂಲೆಹೊಳೆ ಚೆಕ್ ಪೋಸ್ಟ್‌ನಲ್ಲಿರುವ ಅರಣ್ಯ ಇಲಾಖೆ ಸಿಬ್ಬಂದಿ ಸಮರ್ಪಕವಾಗಿ ತಪಾಸಣೆ ನಡೆಸುತ್ತಿಲ್ಲ' ಎಂದು ರೈತ ಮುಖಂಡ ಭೀಮನಬೀಡು ರಾಜು ದೂರಿದ್ದಾರೆ.

'ಮೂಲೆಹೊಳೆ ಚೆಕ್‌ಪೋಸ್ಟ್‌ಗೆ ವರ್ಷದಿಂದ ಡಿಆರ್‌ಎಫ್‌ಒ ನಿಯೋಜಿಸಲಾಗಿದ್ದು, ಅಕ್ರಮ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡಲಾಗುತ್ತಿದೆ' ಎಂದು ರೈತ ಮುಖಂಡ ಹೊನ್ನೂರು ಪ್ರಕಾಶ್ ದೂರಿದ್ದಾರೆ.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period **April to June - 2026**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH & PV Print waste & unsolds (Voucher & Office copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH, PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH, PV, Sudha & Mayura	8	1.8	0.6	1	2	1	1
DH, PV, Sudha & Mayura Reel wrappers / Miscellaneous sweep / Bale pattie waste	6	2	0.9	1.2	1.2	0.9	0.9
Sudha & Mayura Print waste & unsolds - Magazine	1	0.4	0.9	0.4	0.6	0.9	0.05
Miscellaneous Tissue/Mixed White waste / Carton boxs	2	0.2	0.3	0.4	0.2	0.5	0.2

For clarification, Contact the Procurement Head at **45557340/ Mobile No; 9900042650.** Sealed Quotes/Tenders/mail may be addressed to Procurement Head **babu.v@printersmysore.co.in, venu.tl@printersmysore.co.in** and sent to the above address within 7 days from the date of this advertisement.

ರಿಯಾನ್, ರೋಹಿತ್ ಆಟಕ್ಕೆ ಗೆಲುವು

ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಸತತ ಆರನೇ ಸೋಲು • ಪ್ಲೇ ಆಫ್ ಕನಸು ಭಗ್ನ

ಮುಂಬೈ (ಪಿಟಿಐ): ಆರಂಭಿಕ ಆಟಗಾರರಾದ ರಿಯಾನ್ ರಿಕೆಲ್ಟನ್ (83;32ಎ) ಮತ್ತು ರೋಹಿತ್ ಶರ್ಮಾ (84;44ಎ) ಅವರ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಸೋಮವಾರ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಆರು ವಿಕೆಟ್‌ಗಳ ನಿರಾಯಾಸ ಜಯ ದಾಖಲಿಸಿತು.

ಹ್ಯಾಟ್ರಿಕ್ ಸೋಲಿನ ಬಳಿಕ ಮುಂಬೈ ತಂಡವು ಗೆಲುವಿನ ಹಳಿಗೆ ಮರಳಿತು. ಈ ಮೂಲಕ ಪ್ಲೇ ಆಫ್ ಆಸೆಯನ್ನು ಜೀವಂತವಾಗಿರಿಸಿಕೊಂಡಿತು. ಲಖನೌ ತಂಡಕ್ಕೆ ಇದು ಸತತ ಆರನೇ ಸೋಲಾಗಿದೆ. ಅಂಕ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ರಿಷಭ್ ಪಂತ್ ಪಡೆಯ ಪ್ಲೇ ಆಫ್ ಕನಸು ಭಗ್ನಗೊಂಡಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ನಿಕೋಲಸ್ ಪೂರನ್ (63;20ಎ) ಅವರ ಸ್ಫೋಟಕ ಇನಿಂಗ್ಸ್‌ನಿಂದಾಗಿ ಲಖನೌ ತಂಡವು 5 ವಿಕೆಟ್‌ಗೆ 228 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಮುಂಬೈ ತಂಡಕ್ಕೆ ರಿಕೆಲ್ಟನ್ ಮತ್ತು ರೋಹಿತ್ ಭರ್ಜರಿ ಆರಂಭ ಒದಗಿಸಿದರು. ಲಖನೌ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಈ ಜೋಡಿ ಮೊದಲ ವಿಕೆಟ್‌ಗೆ ಬಿರುಸಿನ 143 (65ಎ) ರನ್ ಪೇರಿಸಿ ಗೆಲುವಿಗೆ ಮುನ್ನುಡಿ ಬರೆಯಿತು. ಅವರಿಬ್ಬರೂ ಪ್ರತಿ ಓವರ್‌ಗೆ 13 ಸರಾಸರಿಯಲ್ಲಿ ರನ್ ಸೂರೆ ಮಾಡಿದರು.

ದಕ್ಷಿಣ ಆಫ್ರಿಕಾದ ಎಡಗೈ ಬ್ಯಾಟರ್ ರಿಕೆಲ್ಟನ್ ಇನಿಂಗ್ಸ್‌ನಲ್ಲಿ ಆರು ಬೌಂಡರಿ ಮತ್ತು ಎಂಟು ಭರ್ಜರಿ ಸಿಕ್ಸರ್ ಗಳಿದ್ದವು. ಗಾಯದಿಂದಾಗಿ ಐದು ಪಂದ್ಯಗಳನ್ನು ಕಳೆದುಕೊಂಡಿದ್ದ ರೋಹಿತ್ ಅವರು ಏಳು ಸಿಕ್ಸರ್ ಮತ್ತು ಆರು ಬೌಂಡರಿ ಬಾರಿಸಿ, ತವರಿನ ಅಭಿಮಾನಿಗಳನ್ನು ರಂಜಿಸಿದರು. ರಿಕೆಲ್ಟನ್ ವಿಕೆಟ್ ಪಡೆಯುವ ಮೂಲಕ ಈ ಜೊತೆಯಾಟವನ್ನು ಮೊಹ್ಸಿನ್ ಖಾನ್ ಮುರಿದರು.

ನಂತರ ಬಂದ ತಿಲಕ್ ವರ್ಮಾ (11) ಮತ್ತು ಹಂಗಾಮಿ ನಾಯಕ ಸೂರ್ಯಕುಮಾರ್ ಯಾದವ್ (12) ಅವರ ವೈಫಲ್ಯ ಈ ಪಂದ್ಯದಲ್ಲೂ ಮುಂದುವರಿಯಿತು. ನಮನ್ ಧೀರ್ (ಔಟಾಗದೇ 23) ಮತ್ತು ವಿಲ್ ಜ್ಯಾಕ್ಸ್ (ಔಟಾಗದೇ 10) ತಂಡವನ್ನು ಗೆಲುವಿನ ದಡ ಸೇರಿಸಿದರು. ಮುಂಬೈ ತಂಡವು ಎಂಟು ಎಸೆತಗಳು ಬಾಕಿ ಇರುವಂತೆ 4 ವಿಕೆಟ್‌ಗೆ 229 ರನ್ ಗಳಿಸಿ ಸಂಭ್ರಮಿಸಿತು.

ಪೂರನ್ ಮಿಂಚು: ಇದಕ್ಕೂ ಮೊದಲು ಪೂರನ್ ಅವರು ಮಿಚೆಲ್ ಮಾರ್ಷ್ (44;25ಎ) ಜೊತೆ ಕೇವಲ 34 ಎಸೆತಗಳಲ್ಲಿ 94 ರನ್ ಜೊತೆಯಾಟವಾಡಿ ತಂಡಕ್ಕೆ ಮಿಂಚಿನ ಆರಂಭ ಒದಗಿಸಿದರು. ಪವರ್‌ಪ್ಲೇ ಮುಗಿದಾಗ ಲಖನೌ 1 ವಿಕೆಟ್‌ಗೆ 90 ರನ್ ಗಳಿಸಿತು.

ಈ ಪಂದ್ಯಕ್ಕೆ ಮೊದಲು ಪೂರನ್ ರನ್ ಬರ ಎದುರಿಸಿದ್ದರು. ಮುಂಬೈ ಬೌಲರ್‌ಗಳು ನೇರ ಮತ್ತು ಲೆಂಗ್ತ್‌ನಲ್ಲಿ ಎಡವಿದ್ದನ್ನು ಬಂಡವಾಳ ಮಾಡಿಕೊಂಡ ವೆಸ್ಟ್ ಇಂಡೀಸ್‌ನ ಆಟಗಾರ ಒಂದು ಬೌಂಡರಿ ಜೊತೆ ಎಂಟು ಸಿಕ್ಸರ್‌ಗಳನ್ನು ಎತ್ತಿದರು. ಪೂರನ್ ಅವರಿಗೆ ಈ ಹಿಂದಿನ 17 ಇನಿಂಗ್ಸ್‌ಗಳಲ್ಲಿ ಅರ್ಧಶತಕ ಬಾರಿಸಲಾಗಿರಲಿಲ್ಲ. ಈ ಬಾರಿ ಮುಂಬೈ ಕಳಪೆ ಬೌಲಿಂಗ್ ಅವರಿಗೆ ಅವಕಾಶ ನೀಡಿತು. ದೀಪಕ್ ಚಾಹರ್ ಬೌಲಿಂಗ್‌ನಲ್ಲಿ ಸಿಕ್ಸರ್‌ನೊಡನೆ 16 ಎಸೆತಗಳಲ್ಲೇ ಅರ್ಧ ಶತಕ ದಾಟಿದರು.

ಆದರೆ ಕಾರ್ಬಿನ್ ಬಾಷ್ ಅವರು ಪೂರನ್ ಮತ್ತು ಮಾರ್ಷ್ ಅವರ ವಿಕೆಟ್‌ಗಳನ್ನು ಪಡೆದು ಲಖನೌ ನಾಗಾಲೋಟಕ್ಕೆ ಕಡಿವಾಣ ಹಾಕಿದರು. ನಾಯಕ ರಿಷಭ್ ಪಂತ್ (15, 10 ಎಸೆತ) ಮತ್ತೊಮ್ಮೆ ವಿಫಲರಾದರು. ಒಂದು ಹಂತದಲ್ಲಿ 1 ವಿಕೆಟ್‌ಗೆ 123 ರನ್ ಗಳಿಸಿದ್ದ ಲಖನೌ 12 ಓವರುಗಳ ಬಳಿಕ 160 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು.

ಏಡನ್ ಮರ್ಕರಂ (ಅಜೇಯ 31) ಮತ್ತು ಹಿಮ್ಮತ್ ಸಿಂಗ್ (ಅಜೇಯ 40) ಅವರು ಕುಸಿತ ತಡೆಗಟ್ಟಿ ಮುರಿಯದ ಆರನೇ ವಿಕೆಟ್‌ಗೆ 68 ರನ್ ಸೇರಿಸಿದ್ದರಿಂದ ತಂಡ 225ರ ಗಡಿ ದಾಟಿತು.

ಅಲಭ್ಯರಾದ ಪಾಂಡ್ಯ: ಬೆನ್ನುನೋವಿನ ಕಾರಣ ನಾಯಕ ಹಾರ್ದಿಕ್ ಪಾಂಡ್ಯ ಈ ಪಂದ್ಯದಲ್ಲಿ ಆಡಲಿಲ್ಲ. ಹೀಗಾಗಿ ಸೂರ್ಯಕುಮಾರ್ ನೇತೃತ್ವ ವಹಿಸಿದರು.

ನಿಕೋಲಸ್ ಪೂರನ್

ರೋಹಿತ್ ಶರ್ಮಾ ಮತ್ತು ರಿಯಾನ್ ರಿಕೆಲ್ಟನ್ ಜೊತೆಯಾಟ —ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಲಖನೌ ಸೂಪರ್‌ಜೈಂಟ್ಸ್: 5 ವಿಕೆಟ್‌ಗೆ 228 (20 ಓವರುಗಳಲ್ಲಿ)

ಮಾರ್ಷ್ ಸಿ ನಮನ್ ಬಿ ಬಾಷ್ 44 (25ಎ, 4x4, 6x3)
ಇಂಗ್ಲಿಸ್ ಸಿ ಯಾದವ್ ಬಿ ಫಜನಫರ್ 13 (5ಎ, 4x3)
ಪೂರನ್ ಸಿ ರಿಕೆಲ್ಟನ್ ಬಿ ಬಾಷ್ 63 (21ಎ, 4x1, 6x8)
ಪಂತ್ ಸಿ ರಿಕೆಲ್ಟನ್ ಬಿ ಜ್ಯಾಕ್ಸ್ 15 (10ಎ, 4x1, 6x1)
ಮರ್ಕರಂ ಔಟಾಗದೇ 31 (25ಎ, 4x1, 6x1)
ಅಕ್ಷತ್ ಸಿ ಮತ್ತು ಬಿ ರಘು ಶರ್ಮಾ 11 (7ಎ, 6x1)
ಹಿಮ್ಮತ್ ಸಿಂಗ್ ಔಟಾಗದೇ 40 (31ಎ, 4x2, 6x2)
ಇತರೆ: 11 (ನೋಬಾಲ್ 4, ವೈಡ್ 7)
ವಿಕೆಟ್ ಪತನ: 1-29 (ಜೋಶ್ ಇಂಗ್ಲಿಸ್, 2.3), 2-123 (ನಿಕೋಲಸ್ ಪೂರನ್, 8.1), 3-125 (ಮಿಚೆಲ್ ಮಾರ್ಷ್, 8.5), 4-148 (ರಿಷಭ್ ಪಂತ್, 10.4), 5-160 (ಅಕ್ಷತ್ ರಘುವಂಶಿ, 12.1).
ಬೌಲಿಂಗ್: ದೀಪಕ್ ಚಾಹರ್ 4-0-43-0; ಜಸ್‌ಪ್ರೀತ್ ಬೂಮ್ರಾ 4-0-45-0; ಅಲ್ಲಾ ಘಜನಫರ್ 4-0-50-1; ವಿಲ್ ಜಾಕ್ಸ್ 2-0-34-1; ಕಾರ್ಬಿನ್ ಬಾಷ್ 2-0-20-2; ರಘು ಶರ್ಮಾ 4-0-36-1.

ಮುಂಬೈ ಇಂಡಿಯನ್ಸ್: 4 ವಿಕೆಟ್‌ಗೆ 229 (18.4 ಓವರ್‌ಗಳಲ್ಲಿ)

ರಿಕೆಲ್ಟನ್ ಸಿ ಇಂಗ್ಲಿಸ್ ಬಿ ಮೊಹ್ಸಿನ್ 83 (32ಎ, 4x6, 6x8)
ರೋಹಿತ್ ಸಿ ಶಮಿ ಬಿ ಸಿದ್ಧಾರ್ಥ್ 84 (44ಎ, 4x6, 6x7)
ತಿಲಕ್ ಸಿ ಮರ್ಕರಂ ಬಿ ಸಿದ್ಧಾರ್ಥ್ 11 (13ಎ)
ಸೂರ್ಯಕುಮಾರ್ ಸಿ ಪೂರನ್ ಬಿ ಶಮಿ 12 (7ಎ, 4x2)
ನಮದ್ ಧೀರ್ ಔಟಾಗದೇ 23 (12ಎ, 4x3, 6x1)
ವಿಲ್ ಜ್ಯಾಕ್ಸ್ ಔಟಾಗದೇ 10 (4ಎ, 6x1)
ಇತರೆ: 6 (ಲೆಗ್‌ಬೈ 2, ವೈಡ್ 4)
ವಿಕೆಟ್ ಪತನ: 1-143 (ರಿಯಾನ್ ರಿಕೆಲ್ಟನ್, 10.5), 2-177 (ರೋಹಿತ್ ಶರ್ಮಾ, 13.6), 3-189 (ತಿಲಕ್ ವರ್ಮಾ, 15.3), 4-213 (ಸೂರ್ಯಕುಮಾರ್ ಯಾದವ್, 17.4)
ಬೌಲಿಂಗ್: ಮೊಹಮ್ಮದ್ ಶಮಿ 4-0-53-1, ಮೊಹ್ಸಿನ್ ಖಾನ್ 4-0-47-1, ಪ್ರಿನ್ಸ್ ಯಾದವ್ 3-0-24-0, ಆವೇಶ್ ಖಾನ್ 3.4-0-56-0, ಮಣಿಮಾರನ್ ಸಿದ್ಧಾರ್ಥ್ 4-0-47-2
ಪಂದ್ಯದ ಆಟಗಾರ: ರಿಯಾನ್ ರಿಕೆಲ್ಟನ್

ಕರ್ನಾಟಕಕ್ಕೆ ಜಯ

ಬೆಂಗಳೂರು: ಕರ್ನಾಟಕ ಪುರುಷರ ತಂಡವು ಛತ್ತೀಸಗಢದ ನಾರಾಯಣಪುರದಲ್ಲಿ ಸೋಮವಾರ ನಡೆದ ಸ್ವಾಮಿ ವಿವೇಕಾನಂದ 20 ವರ್ಷದೊಳಗಿನ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4-2ರಿಂದ ಒಡಿಶಾ ತಂಡವನ್ನು ಮಣಿಸಿತು.

ಕರ್ನಾಟಕ ತಂಡದ ಪರ ಜಾನ್‌ಸ್ಟಾರ್ ಮಾರ್ಕ್, ಪ್ರೇಮೀಶ್ ಟಿ, ಮೈತ್ರಂ ಕೆ. ಮತ್ತು ನಿರುಪಮ್ ಗೌಡ ಗೋಲು ದಾಖಲಿಸಿದರು.

ಭಾರತೀಯ ಜನತಾ ಪಕ್ಷ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಅದ್ಭುತ ಜಯ ಸಾಧಿಸಿದೆ !

ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಹಣಾಹಣಿ ಇಂದು

ತವರಲ್ಲಿ ಡೆಲ್ಲಿಗೆ ನಿರ್ಣಾಯಕ ಪಂದ್ಯ

ನವದೆಹಲಿ (ಪಿಟಿಐ): ಈ ಬಾರಿಯ ಐಪಿಎಲ್‌ನಲ್ಲಿ ದೆಹಲಿ ಕ್ಯಾಪಿಟಲ್ಸ್ ತಂಡದ ಪ್ರದರ್ಶನ ಮಟ್ಟವು ಏರಿಳಿಕೆ ಕಂಡಿದೆ. ಕೆಲವು ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದು, ಗೆಲ್ಲಬಹುದಾಗಿದ್ದ ಕೆಲವು ಪಂದ್ಯಗಳನ್ನೂ ಸೋತಿದೆ. ಮಂಗಳವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆಡಲಿರುವ ಡೆಲ್ಲಿ ತಂಡ ಸ್ಥಿರ ಪ್ರದರ್ಶನ ನೀಡಬೇಕಾದ ಅನಿವಾರ್ಯತೆಯಲ್ಲಿದೆ.

ಚೆನ್ನೈ ಸೂಪರ್ ಕಿಂಗ್ಸ್‌ಗೂ ಗೆಲುವು ಅತ್ಯಗತ್ಯವಾಗಿದೆ. ಎರಡೂ ತಂಡಗಳು ತಲಾ 9 ಪಂದ್ಯಗಳನ್ನು ಆಡಿದ್ದು ಎಂಟು ಪಾಯಿಂಟ್ಸ್ ಸಂಗ್ರಹಿಸಿವೆ.

ಅಕ್ಷರ್ ಪಟೇಲ್ ಪಡೆ ತವರಿನಲ್ಲಿ ಆಡಿದ ಕೊನೆಯ ಮೂರು ಪಂದ್ಯಗಳನ್ನು ಸೋತಿದೆ. ಆದರೆ ಜೈಪುರದಲ್ಲಿ ಶುಕ್ರವಾರ ಆಡಿದ ತನ್ನ ಕೊನೆಯ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಸುಲಭವಾಗಿ ಗೆದ್ದುಕೊಂಡು ಆತ್ಮವಿಶ್ವಾಸದಲ್ಲಿದೆ.

ತವರಿನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 2 ವಿಕೆಟ್‌ಗೆ 264 ರನ್‌ಗಳ ಭಾರಿ ಮೊತ್ತ ಗಳಿಸಿದರೂ ಗೆಲುವು ಪಡೆಯಲಾಗಲಿಲ್ಲ. ನಂತರದ ಪಂದ್ಯದಲ್ಲಿ ಆರ್‌ಸಿಬಿಯ ಅಮೋಘ ವೇಗದ ದಾಳಿಗೆ ಅಗ್ರ ಬ್ಯಾಟರ್‌ಗಳು ತರಗೆಲೆಗಳಂತೆ ಉದುರಿದ್ದರು. ಗುಜರಾತ್ ಟೈಟನ್ಸ್ ಎದುರಿನ ಪಂದ್ಯದಲ್ಲಿ ಮೇಲುಗೈ ಸಾಧಿಸಿದ್ದರೂ, ಕೊನೆಯಲ್ಲಿ ಒಂದು ರನ್‌ನಿಂದ ಸೋತಿತ್ತು.

ಆರಂಭ ಆಟಗಾರ ಪಥುಮ್ ನಿಸಾಂಕ ಲಯಕ್ಕೆ ಮರಳಿರುವುದು ಡೆಲ್ಲಿ ತಂಡಕ್ಕೆ ಸಕಾರಾತ್ಮಕ ಅಂಶ. ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ವಾಪಸಾಗಿರುವುದು ಬೌಲಿಂಗ್ ವಿಭಾಗದ ಮೊನಚನ್ನು ಹೆಚ್ಚಿಸಿದೆ. ಅನುಭವಿ ಸ್ಪಿನ್ನರ್ ಕುಲದೀಪ್ ಯಾದವ್ ನಿರ್ವಹಣೆ ಸುಧಾರಿಸಬೇಕಾಗಿದೆ. ಅವರು ಓವರೊಂದಕ್ಕೆ ಹತ್ತಕ್ಕಿಂತಲೂ ಹೆಚ್ಚು ರನ್ ತೆತ್ತಿದ್ದಾರೆ. ಗಳಿಸಿದ್ದು ಏಳು ವಿಕೆಟ್‌ಗಳಷ್ಟೇ. ಟಿ. ನಟರಾಜನ್ ಕೂಡ ಯಶಸ್ಸು ಗಳಿಸುತ್ತಿಲ್ಲ.

ಧೋನಿ ಅಲಭ್ಯ: ಚೆನ್ನೈ ಸೂಪರ್ ಕಿಂಗ್ ತನ್ನ ಹತ್ತನೇ ಪಂದ್ಯದಲ್ಲೂ, ದಿಗ್ಗಜ ಆಟಗಾರ ಎಂ.ಎಸ್.ಧೋನಿ ಅವರಿಲ್ಲದೇ ಆಡಬೇಕಾಗಿದೆ. ಧೋನಿ ಇನ್ನೂ ಪೂರ್ಣವಾಗಿ ದೈಹಿಕ ಕ್ಷಮತೆ ಪಡೆದಿಲ್ಲ ಎಂದು ತಂಡದ ಸಿಇಒ ಕಾಶಿ ವಿಶ್ವನಾಥನ್ ಖಚಿತಪಡಿಸಿದ್ದಾರೆ.

ಚೆನ್ನೈ ತಂಡಕ್ಕೂ ಪ್ರತಿ ಪಂದ್ಯ ನಿರ್ಣಾಯಕ. ಒಂದು ಪಂದ್ಯ ಸೋತರೂ ಹೊರಬೀಳುವ ಅಪಾಯ ಇದ್ದೇ ಇದೆ. ಕಳೆದ ವರ್ಷ ಈ ತಂಡ ಕೊನೆಯ ಸ್ಥಾನ ಪಡೆದಿತ್ತು. ನಾಯಕ ಋತುರಾಜ್ ಗಾಯಕವಾಡ ಸೇರಿ ತಂಡದ ಹೆಚ್ಚಿನವರು ಸಣ್ಣ ವಯಸ್ಸಿನವರು. ಲೀಗ್‌ನ ಮೊದಲರ್ಧ ಭಾಗದಲ್ಲಿ ಸಂಜು ಸ್ಯಾಮ್ಸನ್ ಯಶಸ್ಸು ಗಳಿಸಿದ್ದರು. ಈಗ ಋತುರಾಜ್ ಲಯಕ್ಕೆ ಮರಳಿ, ಸತತ ಎರಡು ಅರ್ಧ ಶತಕಗಳನ್ನು ಬಾರಿಸಿರುವುದು ತಂಡದಲ್ಲಿ ಉತ್ಸಾಹ ಮೂಡಿಸಿದೆ.



ಡೆಲ್ಲಿ ತಂಡದ ಕೆ.ಎಲ್. ರಾಹುಲ್(ಎಡ) ಚೆನ್ನೈ ತಂಡದ ಋತುರಾಜ್ ಗಾಯಕವಾಡ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	9	6	2	1	13	0.855
ಆರ್‌ಸಿಬಿ	9	6	3	0	12	1.420
ಎಸ್‌ಆರ್‌ಎಚ್	10	6	4	0	12	0.644
ಆರ್ ಆರ್	10	6	4	0	12	0.510
ಜಿ ಟಿ	10	6	4	0	12	- 0.147
ಸಿಎಸ್‌ಕೆ	9	4	5	0	8	0.005
ಡಿ ಸಿ	9	4	5	0	8	- 0.895
ಕೆಕೆಆರ್	9	3	5	1	7	- 0.539
ಎಂ ಐ	10	3	7	0	6	- 0.649
ಎಲ್‌ಎಸ್‌ಜಿ	9	2	7	0	4	- 1.076

ಆರೆಂಜ್ ಕ್ಯಾಪ್: ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (440 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಬಲಾಬಲ ಒಟ್ಟು ಪಂದ್ಯ 32
ಚೆನ್ನೈ ಗೆಲುವು 20
ಡೆಲ್ಲಿ ಜಯ 12

ಇಂದಿನ ಪಂದ್ಯ
ಡೆಲ್ಲಿ ಕ್ಯಾಪಿಟಲ್ಸ್ V/s ಚೆನ್ನೈ ಸೂಪರ್ ಕಿಂಗ್ಸ್
ತಾಣ: ನವದೆಹಲಿ, ಪಂದ್ಯ ಆರಂಭ: ರಾತ್ರಿ 7.30
ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ತವರಿನಾಚೆ ಸುನಿಲ್ ಚೆಟ್ರಿ ಪಡೆಯ ಅಜೇಯ ಓಟ

ಡ್ರಾ ಪಂದ್ಯದಲ್ಲಿ ಬಿಎಫ್‌ಸಿ-ಒಡಿಶಾ

ಬೆಂಗಳೂರು: ಬ್ರಿಯಾನ್ ಸ್ಯಾಂಚೆಜ್ ಗಳಿಸಿದ ಗೋಲಿನಿಂದಾಗಿ ಬೆಂಗಳೂರು ಎಫ್‌ಸಿ ತಂಡವು ಸೋಮವಾರ ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ 1-1ರಿಂದ ಒಡಿಶಾ ಎಫ್‌ಸಿ ತಂಡದ ವಿರುದ್ಧ ಡ್ರಾ ಸಾಧಿಸುವಲ್ಲಿ ಯಶಸ್ವಿಯಾಯಿತು.

ಗೋವಾದ ಪಂಡಿತ್ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಉಭಯ ತಂಡಗಳು ತಲಾ 1 ಅಂಕ ಹಂಚಿಕೊಂಡವು. ಆತಿಥೇಯ ಒಡಿಶಾ ಪರ ರಹೀಂ ಅಲಿ ಗೋಲು ದಾಖಲಿಸಿದರೆ, ಬೆಂಗಳೂರು ತಂಡದ ಪರ ಬ್ರಿಯಾನ್ ಚೆಂಡನ್ನು ಗುರಿ ಸೇರಿಸಿದರು. ಈ ಪಂದ್ಯವೂ ಡ್ರಾ ಆಗುವುದರೊಂದಿಗೆ ಸುನಿಲ್ ಚೆಟ್ರಿ ಪಡೆಯ ತವರಿನಾಚೆ ಅಜೇಯ ಓಟ ಮುಂದುವರಿಯಿತು.

ಆರಂಭದಿಂದಲೇ ಉಭಯ ತಂಡಗಳ ಆಟಗಾರರು ತುರುಸಿನ ಪೈಪೋಟಿ ನಡೆಸಿದರು. ಎದುರಾಳಿ ತಂಡದ ರಕ್ಷಣಾ ಕೋಟೆಯನ್ನು ಭೇದಿಸಲು ಸಾಕಷ್ಟು ಪ್ರಯತ್ನ ನಡೆಸಿದರು. 34ನೇ ನಿಮಿಷದಲ್ಲಿ ರಹೀಂ ಅಮೋಘವಾಗಿ ಕಾಲ್ಚಳಕ ಮೆರೆದು, ಒಡಿಶಾ ತಂಡಕ್ಕೆ 1-0 ಮುನ್ನಡೆ ಒದಗಿಸಿದರು. ನಂತರ ಬಿಎಫ್‌ಸಿ ಆಟಗಾರರು ಸಮಬಲ ಸಾಧಿಸಲು ಹೋರಾಟ ಮುಂದುವರಿಸಿದರು.

ದ್ವಿತೀಯಾರ್ಧ ಆರಂಭಗೊಂಡ ಮೂರೇ ನಿಮಿಷದಲ್ಲಿ ಬಿಎಫ್‌ಸಿ ತಂಡಕ್ಕೆ ಪೆನಾಲ್ಟಿ ಅವಕಾಶ ದೊರಕಿತು. ಇದನ್ನು ಸಮರ್ಥವಾಗಿ ಬಳಸಿಕೊಂಡ ಬ್ರಿಯಾನ್ ಚೆಂಡನ್ನು ನಿಖರವಾಗಿ ಗುರಿ ಸೇರಿಸಿದರು. ಇದರಿಂದ ಸ್ಕೋರ್ ಸಮಬಲಗೊಂಡಿತು. ನಂತರ ಗೆಲುವಿನ ಗೋಲು ದಾಖಲಿಸಲು ಎರಡೂ ತಂಡಗಳು ಪೈಪೋಟಿ ನಡೆಸಿದವು. ಆದರೆ, ಯಾರಿಗೂ ಫಲ ಸಿಗಲಿಲ್ಲ.

11 ಪಂದ್ಯಗಳಿಂದ 17 ಅಂಕ (4 ಗೆಲುವು, 5 ಡ್ರಾ, 2 ಸೋಲು) ಗಳಿಸಿರುವ ಬಿಎಫ್‌ಸಿ ಲೀಗ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿ ಮುಂದುವರಿದಿದೆ. ಒಡಿಶಾ ತಂಡ 10 ಪಂದ್ಯಗಳಿಂದ 7 ಅಂಕಗಳೊಂದಿಗೆ (1 ಗೆಲುವು, 4 ಡ್ರಾ, 5 ಸೋಲು) 13ನೇ ಸ್ಥಾನದಲ್ಲಿದೆ.

ಗೋಲು ದಾಖಲಿಸುವ ಯತ್ನದಲ್ಲಿ ಬ್ರಿಯಾನ್ ಸ್ಯಾಂಚೆಜ್ ಎಕ್ಸ್ ಚಿತ್ರ

ತವರಿಗೆ ಮರಳಿದ ಫಿಲ್ ಸಾಲ್ಟ್

ನವದಹೆಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆರಂಭ ಆಟಗಾರ ಫಿಲ್ ಸಾಲ್ಟ್ ಇಂಗ್ಲೆಂಡ್‌ಗೆ ಮರಳಿದ್ದಾರೆ. ಬೆರಳಿನ ಗಾಯಕ್ಕೆ ಲಂಡನ್‌ನಲ್ಲಿ ಸ್ಕ್ಯಾನಿಂಗ್‌ಗೆ ಒಳಗಾಗಲಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಏಪ್ರಿಲ್ 18ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯದ ಸಂದರ್ಭದಲ್ಲಿ ಡೀಪ್ ಬ್ಯಾಕ್‌ವರ್ಡ್ ಸ್ಕ್ವೇರ್‌ಲೆಗ್‌ನಲ್ಲಿ ಬೌಂಡರಿ ತಡೆಯುವ ಯತ್ನದಲ್ಲಿ ಅವರ ಎಡಗೈ ಬೆರಳಿಗೆ ಗಾಯವಾಗಿತ್ತು. 29 ವರ್ಷ ವಯಸ್ಸಿನ ಬ್ಯಾಟರ್ ಕೊನೆಯ ಮೂರು ಪಂದ್ಯಗಳಲ್ಲಿ ಆಡಿರಲಿಲ್ಲ. ಅವರ ಬದಲು ಇಂಗ್ಲೆಂಡ್‌ನ ಇನ್ನೊಬ್ಬ ಆಟಗಾರ ಜೇಕಬ್ ಬೆಥೆಲ್ ಆಡಿದ್ದರು.

ಘೋಷ್ ಅಲಭ್ಯ: ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮತ್ತೊಬ್ಬರು ಗಾಯದ ಸಮಸ್ಯೆಯಿಂದ ಹೊರಬಿದ್ದಿದ್ದಾರೆ. ವೇಗದ ಬೌಲರ್ ರಾಮಕೃಷ್ಣ ಘೋಷ್ ಅವರು ಬಲಗಾಲಿನ ಮೂಳೆ ಮುರಿತದಿಂದ ಉಳಿದ ಪಂದ್ಯಗಳನ್ನು ಕಳೆದುಕೊಂಡಿದ್ದಾರೆ.

ಚೆಪಾಕ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಪಂದ್ಯದ ವೇಳೆ ಘೋಷ್ ಗಾಯಾಳಾಗಿದ್ದರು. ಅವರ ಅಲಭ್ಯತೆ ಸಿಎಸ್‌ಕೆ ತಂಡ ತನ್ನ ಎಕ್ಸ್ ಖಾತೆಯಲ್ಲಿ ಪ್ರಕಟಿಸಿದೆ. ಅವರ ಸ್ಥಾನಕ್ಕೆ ಬೇರೊಬ್ಬರ ಹೆಸರನ್ನು ತಂಡ ಪ್ರಕಟಿಸಿಲ್ಲ.

ಫಿಲ್ ಸಾಲ್ಟ್

ರಾಮಕೃಷ್ಣ

ಟೆನಿಸ್: ಇಂದಿನಿಂದ ಮುಖ್ಯ ಸುತ್ತು

ತುಮಕೂರು: ಕರ್ನಾಟಕದ ಆಟಗಾರ್ತಿ ಸ್ನಿಗ್ಧಾ ಕಾಂತಾ ಅವರು 'ತುಮಕೂರು ಓಪನ್ ಐಟಿಎಫ್ ಡಬ್ಲ್ಯು35' ಮಹಿಳಾ ವಿಶ್ವ ಟೆನಿಸ್ ಟೂರ್ನಿಯಲ್ಲಿ ಮುಖ್ಯ ಸುತ್ತಿಗೆ ಪ್ರವೇಶ ಪಡೆದಿದ್ದಾರೆ.

ನಗರದ ವಿಶ್ವವಿದ್ಯಾಲಯ ಆವರಣದ ಟೆನಿಸ್ ಕ್ರೀಡಾಂಗಣದಲ್ಲಿ ಸೋಮವಾರ ಅರ್ಹತಾ ಸುತ್ತಿನ ಪಂದ್ಯಗಳಿಗೆ ತೆರೆ ಬಿತ್ತು.

ಅರ್ಹತಾ ಸುತ್ತಿನಲ್ಲಿ ಸ್ನಿಗ್ಧಾ ಆರಂಭಿಕ ಸೆಟ್‌ನಲ್ಲಿ 6-2ರಿಂದ ವನ್ನಿತಾ ಪಠಾಣಿಯಾ ವಿರುದ್ಧ ಮೇಲುಗೈ ಸಾಧಿಸಿದರು. ನಂತರ ಗಾಯಾಳಾಗಿ ಪಠಾಣಿಯಾ ಅಂಕಣದಿಂದ ಹೊರ ನಡೆದರು.

ಅರ್ಹತಾ ಸುತ್ತಿನ ಪಂದ್ಯಗಳನ್ನು ಗೆದ್ದ ಎಂಟು ಮಂದಿ ಸೇರಿದಂತೆ ಒಟ್ಟು 32 ಟೆನಿಸ್ ಪಟುಗಳು ಮುಖ್ಯ ಸುತ್ತಿನಲ್ಲಿ ಕಣಕ್ಕಿಳಿಯಲಿದ್ದಾರೆ. ಮಂಗಳವಾರ ಮುಖ್ಯ ಸುತ್ತಿನ ಸ್ಪರ್ಧೆ ಆರಂಭವಾಗಲಿದೆ.

ಕಿರುಕುಳಕ್ಕೆ ನಾನೂ ಒಳಗಾಗಿದ್ದೆ: ವಿನೇಶ್

ಬೆಂಗಳೂರು: 'ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಿಂದ ಲೈಂಗಿಕ ಕಿರುಕುಳಕ್ಕೆ ಒಳಗಾದ ಆರು ಮಂದಿಯಲ್ಲಿ ನಾನೂ ಒಬ್ಬಳು' ಎಂದು ಒಲಿಂಪಿಯನ್ ಕುಸ್ತಿ ತಾರೆ ವಿನೇಶ್ ಫೋಗಟ್ ಹೇಳಿಕೊಂಡಿದ್ದಾರೆ.

ವಿಡಿಯೊ ಒಂದರಲ್ಲಿ ಭಾನುವಾರ ಈ ವಿಷಯ ಬಹಿರಂಗಪಡಿಸಿರುವ ಅವರು 'ಬ್ರಿಜ್‌ಭೂಷಣ್ ವಿರುದ್ಧ ಪ್ರಕರಣ ನ್ಯಾಯಾಲಯದಲ್ಲಿದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರ ಗುರುತನ್ನು ಬಹಿರಂಗಪಡಿಸಬಾರದು ಎಂದು ಸುಪ್ರೀಂ ಕೋರ್ಟ್ ಮಾರ್ಗದರ್ಶಿ ಸೂತ್ರಗಳಲ್ಲಿದೆ. ಆದರೆ ಸಂದರ್ಭವು ಬಹಿರಂಗವಾಗಿ ಮಾತನಾಡುವುದನ್ನು ಅನಿವಾರ್ಯಗೊಳಿಸಿತು' ಎಂದೂ ಹೇಳಿದ್ದಾರೆ.

ಮೇ 10 ರಿಂದ 12ರವರೆಗೆ ಉತ್ತರ ಪ್ರದೇಶದ ಗೊಂಡಾದಲ್ಲಿ ನಡೆಯಲಿರುವ ರಾಷ್ಟ್ರೀಯ ರ‍್ಯಾಂಕಿಂಗ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ವಿನೇಶ್ ಭಾಗವಹಿಸಲಿದ್ದಾರೆ. ಅವರು 2024ರ ಪ್ಯಾರಿಸ್ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿ ಅಖಾಡಕ್ಕಿಳಿಯಲು ಸಜ್ಜಾಗಿದ್ದಾರೆ.

ಟೂರ್ನಿಯ ತಾಣವಾದ ಗೊಂಡಾ ನಗರವು ಬ್ರಿಜ್‌ಭೂಷಣ್ ತವರು ಆಗಿದೆ.

'ದೂರು ಸಲ್ಲಿಸಿದ ಆರು ಮಂದಿ ಮಹಿಳಾ ಕುಸ್ತಿಪಟುಗಳಲ್ಲಿ ನಾನೂ ಒಬ್ಬಳು. ಈ ಪ್ರಕರಣ ನ್ಯಾಯಾಲಯದಲ್ಲಿದ್ದು, ಸಾಕ್ಷಿಗಳ ವಿಚಾರಣೆ ನಡೆಯುತ್ತಿದೆ. ಅವರಿಗೆ ಸಂಬಂಧಪಟ್ಟ ಸ್ಥಳದಲ್ಲಿ ಮತ್ತು ಅವರ ಕಡೆಯವರು ಬರುವ ಸಾಧ್ಯತೆಯಿರುವ ಸ್ಥಳದಲ್ಲಿ ಸ್ಪರ್ಧಿಸುವುದು ನನ್ನ ಮೇಲೆ ತೀವ್ರ ಮಾನಸಿಕ ಒತ್ತಡ ಬೀರುತ್ತಿದೆ' ಎಂದು ವಿನೇಶ್ ಹೇಳಿದ್ದಾರೆ.

ಶಾಟ್‌ಗನ್ ವಿಶ್ವಕಪ್: ಭಾರತದ ಶೂಟರ್‌ಗಳ ನೀರಸ ಪ್ರದರ್ಶನ

ಅಲ್ಮಾಟಿ (ಕಜಾಕಸ್ತಾನ), (ಎಎಫ್‌ಪಿ): ಭಾರತದ ಶೂಟರ್‌ಗಳು ಇಲ್ಲಿ ಸೋಮವಾರ ಆರಂಭಗೊಂಡ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್ ಟೂರ್ನಿಯಲ್ಲಿ ಮೊದಲ ದಿನ ನೀರಸ ಪ್ರದರ್ಶನ ನೀಡಿದರು.

ಚಂಡೀಗಢದ ಗನೀಮತ್ ಸೆಖೋನ್ ಮಹಿಳೆಯರ ಸ್ಕೀಟ್ ಅರ್ಹತಾ ಸುತ್ತಿನಲ್ಲಿ 75ರಲ್ಲಿ 70 ಅಂಕ ಗಳಿಸಿದ್ದಾರೆ. ಅಗ್ರ ಎಂಟರಲ್ಲಿ ಸ್ಥಾನ ಪಡೆಯಲು ಅವರಿಗೆ ಒಂದು ಅಂಕ ಕೊರತೆಯಾಯಿತು. ಆದರೆ, ಎರಡನೇ ಹಂತದ ಸ್ಪರ್ಧೆಯಲ್ಲಿರುವ ಅವರು ಫೈನಲ್ ಪ್ರವೇಶದ ಹಾದಿಯನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ.

ಸೆಖೋನ್ ಅವರು 2021ರಲ್ಲಿ ನವದೆಹಲಿಯಲ್ಲಿ ನಡೆದ ವಿಶ್ವಕಪ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳಾ ಸ್ಕೀಟ್ ಶೂಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಪುರುಷರ ವಿಭಾಗದಲ್ಲಿ ಅನುಭವಿ ಮೈರಾಜ್ ಅಹ್ಮದ್ ಖಾನ್ ಒಟ್ಟು 71 ಅಂಕಗಳೊಂದಿಗೆ 27ನೇ ಸ್ಥಾನ ಗಳಿಸಿದರು. 25 ಅಂಕಗಳೊಂದಿಗೆ ಉತ್ತಮ ಆರಂಭ ಮಾಡಿದ ಅವರು ನಂತರ 23 ಮತ್ತು 23 ಅಂಕ ಗಳಿಸಿದರು.

ಒಲಿಂಪಿಯನ್ ಅನಂತ್‌ಜೀತ್ ಸಿಂಗ್ ಅವರೂ 25 ಅಂಕಗಳೊಂದಿಗೆ ಅಭಿಯಾನ ಆರಂಭಿಸಿ ನಂತರ ಕ್ರಮವಾಗಿ 23, 21 ಅಂಕ ಗಳಿಸಿದರು. ಗುರ್ಜೋತ್ ಸಿಂಗ್ ಒಟ್ಟು 70 ಅಂಕಗಳೊಂದಿಗೆ 33ನೇ ಸ್ಥಾನ ಪಡೆದರು.

ಗನೀಮತ್ ಸೆಖೋನ್

ಭಾರತಕ್ಕೆ ಜಪಾನ್ ಸವಾಲು

ಸುಝೌ (ಚೀನಾ), (ಪಿಟಿಐ): ಭಾರತ ಮಹಿಳಾ ತಂಡವು ಮಂಗಳವಾರ ಎಎಫ್‌ಸಿ 17 ವರ್ಷದೊಳಗಿನವರ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬಲಿಷ್ಠ ಜಪಾನ್ ಎದುರು ಕಠಿಣ ಪರೀಕ್ಷೆ ಎದುರಿಸಲಿದೆ.

ಬಿ ಗುಂಪಿನಲ್ಲಿರುವ 'ಬ್ಲೂಸ್' ಪಡೆಯು ತಮ್ಮ ಆರಂಭಿಕ ಪಂದ್ಯದಲ್ಲಿ 0-2ರಿಂದ ಆಸ್ಟ್ರೇಲಿಯಾ ತಂಡಕ್ಕೆ ಮಣಿದಿತ್ತು. ನಾಕೌಟ್ ಕನಸನ್ನು ಜೀವಂತವಾಗಿ ಉಳಿಸಿಕೊಳ್ಳಲು ಜಪಾನ್ ವಿರುದ್ಧ ಗೆಲ್ಲಲೇಬೇಕಾದ ಒತ್ತಡದಲ್ಲಿದೆ.

ಜಪಾನ್ ತಂಡವು 13-0ಯಿಂದ ಲೆಬನಾನ್ ತಂಡವನ್ನು ಸೋಲಿಸಿ ಅಭಿಯಾನ ಆರಂಭಿಸಿತ್ತು. ಒಟ್ಟು ಒಂಬತ್ತು ಆವೃತ್ತಿಗಳಲ್ಲಿ ಏಳರಲ್ಲಿ ಫೈನಲ್ ತಲುಪಿರುವ ಜಪಾನ್ ತಂಡವು ಐದನೇ ಬಾರಿ ಪ್ರಶಸ್ತಿ ಜಯಿಸುವ ಛಲದಲ್ಲಿದೆ.

ಜಪಾನ್ ಮತ್ತು ಆಸ್ಟ್ರೇಲಿಯಾ ತಂಡಗಳು ತಲಾ 3 ಅಂಕಗಳೊಂದಿಗೆ ಗುಂಪಿನಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ. ಅಂಕ ಖಾತೆ ತೆರೆಯದ ಭಾರತ ಮತ್ತು ಲೆಬನಾನ್ ತಂಡಗಳು ನಂತರದ ಸ್ಥಾನದಲ್ಲಿವೆ.